ಕ್ಟೋಬರ್ ೨೦೦೬, ರೂ. ೨೦

ಸಂವಾದ



ನೆನಪು:
ಬಿಸ್ಮಿಲ್ಲಾ ಖಾನ್

ರಾಜಕೀಯದಲ್ಲಿ ನೈತಿಕತೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೧೨
ಅಕ್ಟೋಬರ್ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ–ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೩
- ❑ ಹೊಸ ಪುಸ್ತಕ ೪
- ❑ ಅಂತ ರಂಗ ೫
- ❑ ಮುಂಬೈ; ಮುಗಿಯದ ಕಥೆ ೬
  - ○ ನಾ. ದಿವಾಕರ
- ❑ ಹೊಸ ದಿಗಂತಕ್ಕೆ ಕನ್ನಡ ಕಾವ್ಯ ೯
  - ○ ಡಾ॥ ಮೂಡ್ನಾಕೂಡು ಚಿನ್ನಸ್ವಾಮಿ

- ❑ ರಾಜಕೀಯದಲ್ಲಿ ನೈತಿಕತೆ ೧೦
  - ○ ಬಿ.ಯು ಸುಮಾ
- ❑ ಕಾಡು ಜನರ ಕಗ್ಗತ್ತಲ ಬದುಕು ೧೪
  - ○ ನರಸಿಂಹ
- ❑ ಜಾತಿ ವಾಸ್ತವವೋ? ಮಿಥ್ಯೆಯೊ? ೧೮
  - ○ ಡಾ॥ ಸಿ.ಜಿ. ಲಕ್ಷ್ಮಪತಿ
- ❑ ಲೆಬನಾನ್ v/s ಇಸ್ರೇಲ್: ೨೨
  - ○ ಜಾನ್ ಚೆರಿಯನ್
- ❑ ಇಸ್ರೇಲ್ ದಾಳಿ ತತ್ತರಿಸಿ ಹೋದ ಮಕ್ಕಳು ೨೪
  - ○ ಗೇತ್ ಅಬ್ದುಲ್ ಮಹಮದ್
- ❑ ಸೀಮಾತೀತ ಸಂಗೀತ ೨೮
  - ○ ಮ. ಶ್ರೀ ಮುರುಳಿ ಕೃಷ್ಣ
- ❑ ಮೀಸಲಾತಿ ವಿವಾದದ ಹೊಸ ಆಯಾಮ ೩೦
  - ○ ನಾಡಿ ಬಂಗಾರ ಪೇಟೆ
- ❑ ಮಂಡಲ್ ಮಕ್ಕಳು, ಪ್ರತಿಭೆ ಮತ್ತು ಸಾಮಾಜಿಕ ಸೌಲಭ್ಯಗಳು ೩೨
  - ಎನ್.ಎಸ್. ರಘುನಾಥ್
- ❑ ಹೋರಾಟದ ಮಾರ್ದವ ಕಥನ ೩೪
  - ○ ಡಿ.ಎಸ್. ನಾಗಭೂಷಣ
- ❑ ದಲಿತ್ ಡೈರಿ ೩೮
  - ○ ಚಂದ್ರ ಭಾನ್ ಪ್ರಸಾದ್
- ❑ ಬುದ್ಧಾಯಣ ೪೨
  - ○ ಸಿ. ಎಚ್. ರಾಜಶೇಖರ್

ಕವನಗಳು : ❑ ಅಣ್ಣ ತಮ್ಮಂದಿರ ಆತ್ಮ ಕತೆ ೨೭

ಮುಖಪುಟ ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)



ತ್ರಗಳು

ಮ್ಮ ಹೆಮ್ಮೆ

ದಕರಿಗೆ ನಮಸ್ಕಾರಗಳು.
ಪತ್ರಿಕೆ ತಪ್ಪದೆ ಕೈಸೇರುತ್ತಿದೆ. ಅದನ್ನು
ವರು ತುಂಬಾ ಹೆಮ್ಮೆಯಿಂದ ಆ
ಮಾತನಾಡಿದ್ದನ್ನು ಕೇಳಿದ್ದೇನೆ. ನಾನು
ಟ್ಟಿದ್ದೇನೆ. ಸಾಮಾಜಿಕ ನ್ಯಾಯದ ಅರಿ
ಮೂಡಿಸುವುದು ಈ ತರಹದ ಪತ್ರಿಕೆಗ
' ಸಾಧ್ಯ. ಮೊದಲ ತಲೆಮಾರಿನ ಲೇಖ
ಬಿ. ಶ್ಯಾಮಸುಂದರ್, ದೇವರಾಯ
ಗೋವಿಂದ ದಾಸ್ ಮುಂತಾದವರನ್ನು
ಮೂಲಕ ಪರಿಚಯಿಸಿದ್ದು ಸಾಹಿತ್ಯದ
ಗಳಿಗೆ ತುಂಬಾ ಅನುಕೂಲವಾಗಿದೆ.
ಮೀಸಲಾತಿ' ಕುರಿತಂತೆ ಚಿಂತನಾರ್ಹ
ಷಯಗಳನ್ನು ಪತ್ರಿಕೆಯ ಮೂಲಕ
ಗೆ ತಲುಪಿಸುತ್ತಿರುವುದರಿಂದ ಅನೇಕ
ಟ್ಟ ತಪ್ಪು ತಿಳುವಳಿಕೆಗಳು ಶಮನ
ತಾಗಿದೆ.

॥ ಎಚ್.ಟಿ. ಪೋತೆ, ಗುಲ್ಬರ್ಗಾ

ಚಂದಾ ವಿವರ
ಬಿಡಿ ಪ್ರತಿ ರೂ.೨೦/-
ರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ
ದ್ಯಾರ್ಥಿಗಳು/ಕಾರ್ಯಕರ್ತರಿಗೆ
೦೦/- ರೂ.೩೦೦/- ರೂ.೫೦೦/-
ಕರರು ಮತ್ತು ವೃತ್ತಿಪರರಿಗೆ
೦೦/- ರೂ.೫೦೦/- ರೂ.೮೦೦/-
ಘ-ಸಂಸ್ಥೆಗಳು/ಉದ್ಯಮಿಗಳಿಗೆ
೪೦/- ರೂ.೬೦೦/- ರೂ.೧೦೦೦
ಶೇಷ ಹಿತೈಷಿ ಚಂದದಾರರಿಗೆ
೦/- ರೂ.೧೫೦೦/- ರೂ.೨೫೦೦/-
ೀವ ಚಂದಾ ರೂ.೫,೦೦೦/-
ಪಕ ಚಂದಾ ರೂ.೧೦,೦೦೦/-
ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ
ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.
.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಹೋರಾಟದ ಛಲ, ಆತ್ಮ ವಿಶ್ವಾಸ ಹೆಚ್ಚಿಸುತ್ತಿರುವ 'ಸಂವಾದ'

ಸನ್ಮಾನ್ಯ ಸಂಪಾದಕರಿಗೆ

'ಸಂವಾದ' ಬಳಗಕ್ಕೊಂದು ವಿಶೇಷ ಅಭಿನಂದನೆಗಳು. ಮೀಸಲಾತಿಯ ವಿಚಾರಕ್ಕೆ ಸಂಬಂಧಿಸಿದಂತೆ. ಸಿ.ಎನ್.ಎನ್-ಐಬಿಎನ್ ನಲ್ಲಿ ಬಂದ ಸಂದರ್ಶನವನ್ನ ಅನುವಾದ ಮಾಡಿ ಶೌರಿಯ "ಶೌರ್ಯ"ವನ್ನು ಬಯಲು ಮಾಡಿದ್ದೀರಿ. ಅಲ್ಲದೆ ಅಂತರರಾಷ್ಟ್ರೀಯ ಚಾನಲ್‌ಗಳೊಳಗಿನ ಜನ, ಅಲ್ಪ ಸ್ವಲ್ಪವಾದರೂ ದಲಿತ ಸಮಸ್ಯಗಳಿಗೆ ಸ್ಪಂದನೆಯನ್ನ ಇಟ್ಟು ಕೊಂಡಿರುವುದನ್ನ ತೋರಿಸಿದ್ದೀರಿ.

ತುಂಬಾ ದಿನಗಳಿಂದ ಸಂವಾದವನ್ನ ಬಹಳ ಸೂಕ್ಷ್ಮವಾಗಿ ಅಧ್ಯಯನ ನಡೆಸುತ್ತಿರುವೆ, ನಿಜಕ್ಕೂ ಅಲ್ಪಸ್ವಲ್ಪ ಕಾಳಜಿ ಇಟ್ಟುಕೊಂಡಿರುವ ದಲಿತ ಸಮುದಾಯದೊಳಗೆ ಪತ್ರಿಕೆ ಹೋರಾಟ ಛಲ, ಆತ್ಮವಿಶ್ವಾಸಗಳನ್ನು ಹೆಚ್ಚಿಸುವಂತಹ ಕೆಲಸಮಾಡುತ್ತಿದೆ. ಹಾಗಾಗಿ ನನ್ನ ಅಬಿ ವಂದನೆಗಳು. ಪತ್ರಿಕೆ ಹೀಗೆ ತನ್ನ ನಿರಂತ ರತೆಯನ್ನ ಕಾಯ್ದುಕೊಳ್ಳಲಿ.

ಮೊದಲನೆ ಪುಟದಿಂದ ಕೊನೆಯ ಪುಟದವರೆಗೂ ನಿಮ್ಮ ಶ್ರಮ ಎದ್ದು ಕಾಣುತ್ತದೆ. ನಿಮ್ಮಗಳ ಶ್ರಮದಲ್ಲಿ ನಮ್ಮ ಪಾಲೂ ಇರಬೇಕಾ ಗುತ್ತದೆ. ಆದರೆ ಕಾರಣಾಂತರಗಳಿಂದ ನಾನು ನಿಮ್ಮೊಂದಿಗಿರಲು ಸಾಧ್ಯವಾಗುತ್ತಿಲ್ಲ. ಇನ್ನು ಮುಂದೆ ತಪ್ಪದೆ ನಿಮ್ಮೊಂದಿಗಿರುವೆ.

ಪತ್ರಿಕೆಯಲ್ಲಿ ಬರುವ ಲೇಖನ ಬರಹ ಗಳು ನನ್ನನ್ನ ಹೊಸ ಬರವಣಿಗೆಗೆ ಹಚ್ಚುತ್ತಿವೆ. ರಾಜ್ಯ ಮತ್ತು ದೇಶಾದ್ಯಂತ ನಡೆಯುವ, ನಡ ಯುತ್ತಿರುವ ದೌರ್ಜನ್ಯಗಳ "ಮೇರಾ ಭಾರತ್ ಮಹಾನ್' ಅಂಕಣವೇಕೋ ಕಾಣುತ್ತಿಲ್ಲ. ಹಿಂಸೆಯ ಕ್ರೌರ್ಯ ತಿಳಿಯದೆ ಹೊದರೆ ದಮನಿತ ಸಮುದಾಯ ಹೋರಾಟಕ್ಕೆ ನಿಲ್ಲುವು ದಿಲ್ಲ. ಶೌರಿಯಂತೆ "ಜಾತೀಯತೆ. ದೌರ್ಜನ್ಯ, ಎಲ್ಲಾ ನಿಮ್ಮ ಕಲ್ಪನೆ" ಎಂದು ಜಾರಿಕೆ ಮಾತುಗಳಿಗೇನು ಕಡಿಮೆ ಇಲ್ಲ.

ರಾಜ್ಯದ ಘನತೆವೇತ್ತ ಮುಖ್ಯ ಮಂತ್ರಿಯ "ಸಾಧನೆ"ಯನ್ನ ವಿಶೇಷವಾಗಿ ಬಣ್ಣಿಸಿದ್ದಿರಾ. ಅದರ ಅಗತ್ಯ ಬಹಳ ಇತ್ತು. ದಲಿತರೊಳಗೆ ಒಂದು ವರ್ಗ ಈ ಕುಮಾರ ಕಂಠೀರವ, ಮಣ್ಣಿನ ಮೊಮ್ಮಗನ ತುತ್ತೂರಿ ಯಾಗಿ ಕೆಲಸ ಮಾಡುತ್ತಿದೆ. ಗಣಿ, ಖೇಣಿ; ಪಾಣಿ, ಹಗರಣಗಳು ನಿಲ್ಲಲು ಸಾರ್ವಜನಿಕರೆ ಒಂದು ನಿರ್ಧಾರಕ್ಕೆ ಬರಬೇಕು, ಅದು ಶೀಘ್ರವೆ ಆಗುತ್ತದೆ ಎಂಬ ಅಶಾಭಾವನೆಯಲ್ಲಿ...

ಸಣ್ಣಂಗಿರಾಜ
ರಾಮಜೋಗಿಹಳ್ಳಿ(ಚಿತ್ರದುರ್ಗ)

ನನ್ನ ಸಂಭ್ರಮ, ಸ್ಫೂರ್ತಿ

ಸನ್ಮಾನ್ಯ ಸಂಪಾದಕರಿಗೆ

ಪ್ರತಿತಿಂಗಳ 'ಸಂವಾದ' ಬಂದೊಡನೆ ಒಳಪುಟಗಳಲ್ಲಿ... ಯಿಂದ 'ಬುದ್ಧಾಯಣ' ದವರೆಗೆ ಬಿಡದೇ ಓದುವ ಸಂಭ್ರಮ ನನ್ನದು. ಓದಿನೊಂದಿಗೆ ಬರಹವನ್ನೂ ಸ್ಫೂರ್ತಿಸುವ 'ಸಂವಾದ' ಕುಂದಿಹೋಗಿರುವ ಜನಪರ ಒಲವುಗಳ ಕೊರತೆಯನ್ನು ನೀಗಿಸುತ್ತಿದೆ. ಬಹುಶಃ ನಾಡಿನ ಎಲ್ಲ ಪತ್ರಿಕೆಗಳು ಯಾವದೇ 'ಉದ್ದೇಶ'ಕ್ಕೆ ಬಿದ್ದು ಒದ್ದಾಡುತ್ತಿರುವಾಗ 'ಜನರಧ್ವನಿ'ಯಾಗಿ ಸಂವಾದ ಸುದ್ದಿ ಯಾಗುತ್ತಿರುವದು ನನಗೆ ವಿಶಿಷ್ಟ ಎನಿಸುತ್ತಿದೆ.

ಓದುಗರಿಗೆ ಬರಹದ ಸ್ಫೂರ್ತಿ ನೀಡುತ್ತಿರುವ ಪತ್ರಿಕೆಯ ಬೆಂಬಲದಿಂದಲೇ ನನಗೆ ಬರವಣಿಗೆ ದಾರಿ ಕಾಣುತ್ತಿದೆ.

ವಂದನೆಗಳು

ಡಿ.ಎಂ. ನದಾಫ್, ಅಫಜಲಪುರ

ತೀವ್ರ ನಿರಾಶೆ

ಪ್ರೀತಿಯ ಇಂದೂಧರ,

ಡಿ.ಎಸ್. ನಾಗಭೂಷಣ ಅವರ 'ಸ್ಥಿತ್ಯಂತರ ರಾಜಕಾರಣದ ಸುತ್ತ' ಲೇಖನ ಅದ್ಭುತವಾಗಿ ಮೂಡಿ ಬಂದಿದೆ. ಸಿದ್ಧರಾ ಮಯ್ಯನವರು ಹೇಡಿಯಂತೆ ಕಾಂಗ್ರೆಸ್ ತೆಕ್ಕೆಗೆ ಸೇರಿಕೊಂಡಿದ್ದು ಎಲ್ಲ ಜನಪರ ಹೋರಾಟಗಾರರಿಗೆ ತೀವ್ರ ನಿರಾಶೆಯಾ ಗಿದೆ.

ಚಂದ್ರ ಶೇಖರ್ ಎಂ.ವಿ, ಬೆಂಗಳೂರು.

ಮೀಸಲಾತಿಗೆ ಬೇರೆ ಮಾರ್ಗವೂ ಇದೆ

ಸನ್ಮಾನ್ಯ ಹೊನ್ನಾಪುರ ಅವರಲ್ಲಿ,

'ಪ್ರಸ್ತುತ ಪರಿಸ್ಥಿತಿಯಲ್ಲಿ ಮೀಸಲಾತಿಗಿಂತ ಬೇರೆ ಮಾರ್ಗ ಕಾಣಿಸುತ್ತಿಲ್ಲ' ಎಂಬ ಹಿರಿಯ ಕವಿ ಜಿ.ಎಸ್. ಶಿವರುದ್ರಪ್ಪನವರ ಮಾತು ನಿಜ, ಆದರೆ, ಮೀಸಲಾತಿಯನ್ನು ಎಷ್ಟು ಕಾಲ ಮುಂದುವರೆಸಬೇಕು ಎಂಬ ಪ್ರಶ್ನೆಗೆ ನಾವು ಉತ್ತರವನ್ನು ಕಂಡುಕೊಳ್ಳದಿದ್ದರೆ, ಈ 'ಪ್ರಸ್ತುತ ಪರಿಸ್ಥಿತಿ' ನಿರಂತರವಾಗುವ ಸಾಧ್ಯತೆಗಳೇ ಹೆಚ್ಚು. ಆದುದರಿಂದ ಮೀಸಲಾತಿಯೇ ಇಲ್ಲದ ಪರಿಸ್ಥಿತಿಯ ನಿರ್ಮಾಣಕ್ಕೆ ನಾವುಗಳು ಪ್ರಯತ್ನಿಸಬೇಕಾಗಿದೆ.

ಅದಕ್ಕೆ ಒಂದು ಅತ್ಯತ್ತಮ ಮಾರ್ಗ ಎಂದರೆ ೧. ಸಂಪೂರ್ಣ ಸಮಾನ ಶಿಕ್ಷಣ ನೀತಿಯನ್ನು ಜಾರಿಗೆ ತರುವುದು. ೨. ಎಲ್ಲ ಶಾಲೆಗಳನ್ನು ಎಕರೂಪದಲ್ಲಿ ಪುನರ್ ರೂಪಿಸುವುದು. ಅಲ್ಲದೆ ೩. ಕಡ್ಡಾಯವಾಗಿ ಬಡಾವಣೆ ಶಾಲಾ ಪದ್ಧತಿಯನ್ನು ಜಾರಿಗೆ ತರುವುದು. ೪. ಹಾಗೂ ಎಲ್ಲ ವಿದ್ಯಾರ್ಥಿಗಳ ಶಿಕ್ಷಣ ಶುಲ್ಕವನ್ನು ಸರ್ಕಾರವೇ ಭರಿಸುವುದು. ಈ ನಾಲ್ಕು ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತಂದರೆ ಸುಮಾರು ೧೫ರಿಂದ ೨೦ ವರ್ಷಗಳ ಅವಧಿಯಲ್ಲಿ ಮೀಸಲಾತಿಯ ಅಗತ್ಯವೇ ಇಲ್ಲದಂತ ಪರಿಸ್ಥಿತಿಯನ್ನು ನಿರ್ಮಿಸಬಹುದಾಗಿದೆ.

ಹೀಗೆ ಮಾಡದೆ ಈಗಿರುವ ಸ್ಥಿತಿಯಲ್ಲೇ ಅಸಮಾನ ಶಿಕ್ಷಣ ವ್ಯವಸ್ಥೆ ಮುಂದುವರೆದರೆ ಮೀಸಲಾತಿಯನ್ನು ನಿರಂತರವಾಗಿ ವಿಸ್ತರಿಸುತ್ತಲೇ ಇರಬೇಕಾಗುತ್ತದೆ. ಮೀಸಲಾತಿ ಇದ್ದಷ್ಟೂ ದಿನ ಈಗಿನ ಕಠಿಣ ಸ್ಪರ್ಧಾ ಪ್ರಪಂಚದಲ್ಲಿ ಕೆಳಸ್ತರದ ಜನ ಸ್ಪರ್ಧಿಸಲಾಗದೆ ಎರಡನೇ ದರ್ಜೆ ಪ್ರಜೆಗಳಾಗಿಯೇ ಉಳಿಯಬೇಕಾಗುತ್ತದೆ. ಇದು ಎಷ್ಟರ ಮಟ್ಟಿಗೆ ಸರಿ?

ಮೀಸಲಾತಿ ವಿರೋಧಿಗಳು ಈ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗಿದೆ.

ಬಿ.ವಿ. ಉಮಾದೇವಿ
ಬೆಂಗಳೂರು.

ದರವೇಶಿ ಕತೆಗಳು. (ಇದ್ರಿಸ್ ಶಾ)
ಅನು: ಗೌರಿಲಂಕೇಶ್
ಬೆಲೆ: ರೂ. ೯೦/-

ಆಧ್ಯಾತ್ಮ ಮತ್ತು ಲೌಕಿಕ ನೆಲೆಗಳ ಸೂಕ್ಷ್ಮಗಳನ್ನು ಅತ್ಯಂತ ಸಮರ್ಥವಾಗಿ ನಿರೂಪಿಸುವ ಅನುಭವಿ ಕಥೆಗಳ ಅದ್ಭುತ ಸಂಗ್ರಹ ಇದು. ಝೆನ್ ಮತ್ತು ಮುಲ್ಲಾ ನಸ್ರುದ್ದೀನನ ಕಥೆಗಳು ನೀಡುವ ಉಲ್ಲಾಸ ಮತ್ತು ಪಂಚ್ ದರವೇಶಿ ಕತೆಗಳಲ್ಲೂ ಹೇರಳವಾಗಿದೆ. ತಾತ್ವಿಕ ಅರ್ಥದ ಜತೆ ಇರುವ ತಾರ್ಕಿಕ ಅರ್ಥದ ಕಾರಣಕ್ಕಾಗಿ ಕಾಲ-ದೇಶವನ್ನು ಮೀರಿ ಸಮಕಾಲೀನ ಗೊಳ್ಳುವ ಕಾರಣಕ್ಕಾಗಿ ಈ ಕತೆಗಳು ಎಲ್ಲ ಕಾಲ, ಎಲ್ಲಾ ಸಮಾಜದಲ್ಲೂ ಪ್ರಸ್ತುತ ವಾಗಿವೆ. ಶತಮಾನಗಳ ಕಾಲಾಂತರದ ಈ ಕಥೆಗಳನ್ನೆಲ್ಲ ೨೦ ನೇ ಶತಮಾನ ಖ್ಯಾತ ಸೂಫಿ ವಿದ್ವಾಂಸ ಇದ್ರೀಸ್ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಪ್ರಕಾಶಕರು: ಸಿವಿಜಿ ಪಬ್ಲಿಕೇಷನ್ಸ್
ವೈಯಾಲಿ ಕಾವಲ್, ಬೆಂಗಳೂರು-೩





ಅರಳವ್ವ (ಕಾದಂಬರಿ)
ಲೇ: ಡಾ॥ ಹೆಬ್ಬಾಲೆ ಕೆ.ನಾಗೇಶ್
ಬೆಲೆ: ರೂ. ೯೦/-

ಅರಳವ್ವ ಲೇಖಕರ ಮೊದಲ ಕಾದಂಬರಿ, ಮೊದಲ ಕಾದಂಬರಿ ಯಾದರೂ ಕೃತಿ ಅದ್ಭುತವಾಗಿ ಮೂಡಿ ಬಂದಿದೆ. ಈ ಕೃತಿಯ ಮೂಲಕ ಕನ್ನಡ ಕಥನ ಲೋಕಕ್ಕೆ ಸತ್ವಯತ ಲೇಖಕನೊಬ್ಬ ಪ್ರವೇಶ ಮಾಡಿದಂತಾಗಿದೆ. ದಲಿತ ಸಮುದಾಯದ ವೈಶಿಷ್ಟ್ಯವನ್ನು ಈ ಕಾದಂಬರಿ ಸಮರ್ಥವಾಗಿ ಬಿಂಬಿಸುತ್ತದೆ. ಉತ್ತರ ಕೊಡಗು ಹಾಗೂ ಮೈಸೂರು ಸೀಮೆಯ ಅಂಚಿನ ಆಡು ಭಾಷೆ ಕೃತಿಯ ಹೆಗ್ಗಳಿಕೆ. ಅರಳವ್ವನ ಪಾತ್ರದ ಮೂಲಕ, ಕನ್ನಡ ಸಾಹಿತ್ಯ ಲೋಕಕ್ಕೆ ಇನ್ನೂ ಅಪರಿಚಿತವಾಗೇ ಉಳಿದಿರುವ ದಲಿತ ಬದುಕಿನ ಸಾಂಸ್ಕೃತಿಕ ಅನನ್ಯತೆ, ಕಾದಂಬರಿಯಲ್ಲಿ ಆವಿಷ್ಕಾರಗೊಂಡಿದೆ.

ಪ್ರಕಾಶಕರು: ರುಚಿರ ಪ್ರಕಾಶನ
ಎಂ.ಸಿ. ಪ್ರಕಾಶ್ ನಗರ, ಹೊಸಪೇಟೆ

ಪುರಾಣದ ಸಿದ್ಧಲಿಂಗೇಶ ವಿರಚಿತ
ಸುಜ್ಞಾನ ಬೋಧೆ
ಸಂ: ಪ್ರೊ॥ ಜಿ.ವಿ. ಶಿವಲಿಂಗಯ್ಯ
ಡಾ॥ ಬಿ. ನಂಜುಂಡಸ್ವಾಮಿ
ಬೆಲೆ: ರೂ. ೧೫೦/-

ಸುಜ್ಞಾನ ಬೋಧೆಯ ವಸ್ತು ಚಿತ್ತಾರಾಧ್ಯರ ಜೀವನ ಮತ್ತು ಸಾಧನೆ. ಇದನ್ನು ರಚಿಸಿದವನು ಸಿದ್ಧಲಿಂಗ ದೇಶಿಕ. ವೀರಶೈವ ಪುರಾಣಗಳನ್ನು ಭಕ್ತರಿಗೆ ಗಮಕದ ಮೂಲಕ ಹೇಳುತ್ತಿದ್ದುದರಿಂದ ಈತನಿಗೆ ಪುರಾಣದ ಸಿದ್ಧಲಿಂಗ ಎಂಬ ಹೆಸರು ಬಂದಿತು.

ಪ್ರಕಾಶಕರು: ಶ್ರೀ ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ





ಹೊಸ ಪುಸ್ತಕ

ಶ್ರೀ ಶೈಲ ಶಾಸನ ಸಮೀಕ್ಷೆ
ಸಂ: ಡಾ॥ ಜಾಜಿ ದೇವೇಂದ್ರಪ್ಪ
ಬೆಲೆ: ರೂ. ೩೦/-

ಆಂಧ್ರ ಪ್ರದೇಶದಲ್ಲಿ ಲಿಂಗಾಯತ ಧರ್ಮದ ಅಧ್ಯಯನ ಕುರಿತ ಕೃತಿ ಇದು. ಆಂಧ್ರದ ಶ್ರೀ ಶೈಲ ಪರಿಸರ ಒಂದು ಕಾಲದಲ್ಲಿ ಕನ್ನಡದ ಪ್ರದೇಶವೇ ಆಗಿತ್ತು. ಇಲ್ಲಿ ಶೈವದ ಪಾಶುಪತ, ಕಾಳಮುಖ ಪಂಥಗಳು ಗಟ್ಟಿಯಾಗಿ ನೆಲೆಯೂರಿದ್ದವು. ಇಂಥ ರೋಚಕ ಕಥನವನ್ನು ಶಾಸನಗಳ ಆಧಾರದಿಂದ ಶ್ರೀ ಪಿ.ವಿ. ಪರಬ್ರಹ್ಮ ಶಾಸ್ತ್ರಿ ಯವರು ತೆಲುಗಿನಲ್ಲಿ ಮೊದಲು ರಚಿಸಿದರು. ಅವುಗಳ ಅನುವಾದ ಸಂಗ್ರಹ ರೂಪವೇ ಈ ಕೃತಿ.

ಪ್ರಕಾಶಕರು: ಶ್ರೀ ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

ಕಾಡು ಪ್ರತಿಭೆ ಮಾರಪ್ಪ
ಲೇ: ಹೆಚ್.ಎ.ಪುರುಷೋತ್ತಮ
ಬೆಲೆ: ರೂ. ೧೦೦/-

ನಿವೃತ್ತ ಅರಣ್ಯಾಧಿಕಾರಿ ಮಾರಪ್ಪ ಅವರು ಕೋಲಾರ ಜಿಲ್ಲ ಅರಣ್ಯ ಬೆಳೆಸಲು ನಡೆಸಿದ ಪ್ರಯತ್ನ ಓದುಗರಿಗೆ ಸಮಾರ್ಥವಾಗಿ ಮು ಕೃತಿ ಇದು. ಇಡೀ ಜೀವನವನ್ನು ಗಳ ಏಳಿಗೆಗಾಗಿ ಮೀಸಲಿರಿಸಿದ ವ ನವರು, ಅರಣ್ಯದ ಕಿರು ಉತ್ಪನ್ನ ಪರಿಗಣಿಸಲಾದ ಹುಣಸೆ ಮ ಬರಡು ಜಿಲ್ಲೆಯೊಂದರ ಜನ ಸ ಯದ ಆರ್ಥಿಕ ಉನ್ನತಿಯನ್ನು ಸಾ ಪ್ರಯತ್ನ ಮಾಡಿದರು. ಅಧಿಕಾರದ ವೆಯೂ, ಅರಣ್ಯ, ಪರಿಸರ ರಕ್ಷ ನಿರಂತರ. ಶ್ರಮಿಸದ ಮಾರಪ್ಪನವರ ಕನ್ನು ಪರಿಚಯಿಸುವುದು ಈ ಕ ಮುಖ್ಯ ಉದ್ದೇಶ.

ಪ್ರಕಾಶಕರು: ಸಿ.ವಿ.ಜಿ ಪಬ್ಲಿಕೇ
ವೈಯಲಿಕಾಲ್, ಬೆಂಗಳೂರು-



ಸಿದ್ಧಮಂಕ ಚರಿತೆ
ಸಂ: ಡಾ॥ ಎಂ.ಎಂ. ಕಲಬುರ್ಗಿ
ಡಾ॥ ವೈ.ಸಿ. ಭಾನುಮತಿ
ಬೆಲೆ: ರೂ. ೨೫/-

ಲಿಂಗಾಯತ ಸಮಾಜ ಕುರುಬ ಸಮಾಜಗಳ ಏಕೀಕರಣ ಧ್ವನಿಸುವ ಪುರಾಣೀಕೃತ ಇತಿಹಾಸ ಇದು. ಲಿಂಗಾಯಿತರಲ್ಲಿ ಸೇರಿ ಹ ಹಲವಾರು ಸಮಾಜಗಳಲ್ಲಿ ಕ ಸಮಾಜ ದೊಡ್ಡದು. ಈ ಸೇರುವ ಸಂಕ್ರಮಣ ಸಂದರ್ಭದ ಘಟನೆ ಈ ಕೃತಿ ಆಧರಿಸಿದೆ.

ಪ್ರಕಾಶಕರು: ಲಿಂಗಾಯಿತ ಅಧ ಸಂಸ್ಥೆ ಶ್ರೀ. ಜಗದ್ಗುರು ತೋಂಟದಾ ಸಂಸ್ಥಾನ ಮಠ, ಗದಗ.

ಂಪಾದಕೀಯ



ಅಂತರಂಗ



'ಯುಗ ಪುರುಷ' ಹಾವನೂರ್

ಹಾವನೂರು ನಿಧನರಾಗಿದ್ದಾರೆ.

ಹೌದು. ಲಕ್ಷ್ಮಣ ಗೂಳಪ್ಪ ಹಾವನೂರು ಎಂಬ ನಮ್ಮ ನಡುವಿನ 'ಇತಿಹಾಸ ಪುರುಷ' ಸದ್ದು ಗದ್ದಲವಿಲ್ಲದೆ ನಮ್ಮನ್ನು ಅಗಲಿದ್ದಾರೆ.

ಹಾವನೂರು ೭೦ರ ದಶಕದ ಬಹುದೊಡ್ಡ ಹೆಸರು. ಇಡೀ ಸಮಾಜ ತನ್ನೆಲ್ಲಾ ಶ್ರಮ-ಶಕ್ತಿ ಬಳಸಿ ಹೋರಾಡಿದ್ದರೂ, ಪಡೆಲಾಗದಿದ್ದ ಪರಿವರ್ತನೆಯ ಬಹುದೊಡ್ಡ ಕೊಡುಗೆ ಹಾವನೂರು ಒಬ್ಬ ರಿಂದ ಸಾಧ್ಯವಾಯಿತು. ಅವರು ನೀಡಿದ ಹಿಂದುಳಿದ ವರ್ಗಗಳ ಆಯೋಗದ ವರದಿ ಇವತ್ತಿಗೂ ದೇಶ ಕಂಡ ಅಪರೂಪದ ಸಾಮಾಜಿಕ ಪರಿವರ್ತನೆಯ ಕೈಪಿಡಿ.



ಹಾವನೂರರನ್ನು ನೆನಪಿಸಿಕೊಳ್ಳುವಾಗ ಕಣ್ಣ ಮುಂದೆ ದೇವರಾಜ ಅರಸರು ಬಂದು ನಿಲ್ಲುತ್ತಾರೆ. ಯಾರಿಗೂ ಕಾಣದ, ಸಮಾಜ ಗುರುತಿಸದ ತಳಸಮುದಾಯದ ವಕೀಲರೊಬ್ಬರನ್ನು ಗುರುತಿಸಿ ಅವರ ಮೂಲಕ ಸಾಮಾಜಿಕ ಪರಿವರ್ತನೆಯ ನಕ್ಷೆ ರೂಪಿಸಿದವರು ಅರಸು.

ಅರಸು ಮುಖ್ಯಮಂತ್ರಿಯಾಗಿದ್ದಾಗ ನಡೆದ ಒಂದು ಘಟನೆ ಹಾವನೂರು-ಅರಸು ಅವರನ್ನು ಬೆಸೆಯುತ್ತದೆ. ಆಗಿನ ಹೈಕೋರ್ಟ್ ನ್ಯಾಯಮೂರ್ತಿ ಕೆ. ಸದಾನಂದ ಹೆಗ್ಡೆ ಅವರು ತಮ್ಮ ತೀರ್ಪೊಂದರಲ್ಲಿ ವಕೀಲ ಹಾವನೂರುರನ್ನು ಪ್ರಶಂಸಿರುತ್ತಾರೆ. ಈ ವಿಚಾರ ಅರಸು ಅವರ ಗಮನಕ್ಕೆ ಬರುತ್ತದೆ. ಅರಸು ಕುತೂಹಲದಿಂದ ಆ ಅನಾಮಿಕ ವಕೀಲ ಹಾವನೂರು ಅವರನ್ನು ಕರೆಸುತ್ತಾರೆ. ಹಿಂದುಳಿದ ಬೇಡ ಜನಾಂಗಕ್ಕೆ ಸೇರಿದ ವಕೀಲನೊಬ್ಬ ಹೈಕೋರ್ಟ್ ನ್ಯಾಯಾಧೀಶರಿಂದ ಪ್ರಶಂಸೆಗೊಳಗಾಗಿದ್ದು ಅವರನ್ನು ರೋಮಾಂಚನಗೊಳಿಸುತ್ತದೆ. ತನ್ನ ಉದ್ದೇಶಿತ 'ಪರಿವರ್ತನೆ'ಯ ಕೈಂಕರ್ಯಕ್ಕೆ ಉತ್ತಮ ಸೇನಾನಿ ಇವರೇ ಎಂದು ತೀರ್ಮಾನಿಸಿ ಅವರನ್ನು ಪ್ರಥಮ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸುತ್ತಾರೆ.

ದೇವರಾಜ ಅರಸರ ಸ್ನೇಹ ಸಂಪಾದಿಸಿದ ಹಾವನೂರ್, ಸಮರ್ಥ ವಕೀಲರಾಗಿ, ಸಂವಿಧಾನ ತಜ್ಞರಾಗಿ, ಸಾಮಾಜಿಕ ಕಳಕಳಿಯ ವ್ಯಕ್ತಿಯಾಗಿ ಬೆಳೆಯುತ್ತಲೆ ಹೋದರು. ದೇವರಾಜ ಅರಸರ ರಾಜಕೀಯ ಇಚ್ಛಾಶಕ್ತಿ, ಅಧಿಕಾರ ಮತ್ತು ಬದ್ಧತೆ, ಹಾವನೂರರ ಪಾಂಡಿತ್ಯ, ಕಳಕಳಿ ಇಡೀ ನಾಡಿನಲ್ಲಿ ಬಹುದೊಡ್ಡ ಸಾಮಾಜಿಕ ಪರಿವರ್ತನೆಗೆ ನಾಂದಿಯಾದದ್ದು ಹೀಗೆ. ೧೯೭೨ ರಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಹಾವನೂರು, ಸತತ ಮೂರು ವರ್ಷಗಳ ಪರಿಶ್ರಮದಿಂದ ಇಡೀ ದೇಶಕ್ಕೆ ಮಾದರಿಯಾಗುವ ವರದಿಯನ್ನು ನೀಡಿದರು. ಕೇಂದ್ರ ಸರ್ಕಾರ ನಂತರ ರಚಿಸಿದ ಮಂಡಲ್ ಆಯೋಗಕ್ಕೆ ಹಾವನೂರ್ ವರದಿಯೇ ಪ್ರೇರಕಶಕ್ತಿ ಎಂದರೆ ಹಾವನೂರರ ಪ್ರತಿಭೆ ಪಾಂಡಿತ್ಯ ಮತ್ತು ಬದ್ಧತೆ ಎಷ್ಟಿತ್ತು ಎನ್ನುವುದು ಗೊತ್ತಾಗುತ್ತದೆ.

ತಾವೇ ಸಿದ್ಧಪಡಿಸಿದ ವರದಿಯನ್ನು ಜಾರಿಗೆ ತರುವ ಅವಕಾಶ ಕೂಡ ಹಾವನೂರ್ ಪಾಲಿಗೆ ಬರುತ್ತದೆ. ದೇವರಾಜ ಅರಸು ಮಂತ್ರಿಮಂಡಲದಲ್ಲಿ ಹಾವನೂರ್ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ವರದಿಯನ್ನು ಸಮರ್ಥವಾಗಿ ಜಾರಿಗೆ ತಂದರು. ಇಡೀ ದೇಶದಲ್ಲಿ ಹಿಂದುಳಿದ ವರ್ಗಗಳಿಗೆ ಸಂವಿಧಾನ ಬದ್ಧ ಸವಲತ್ತುಗಳನ್ನು ವ್ಯವಸ್ಥಿತವಾಗಿ ಜಾರಿಗೆ ತಂದ ಕೀರ್ತಿ ಆ ಮೂಲಕ ಕರ್ನಾಟಕದ್ದಾಯಿತು. ಬಹುಸಂಖ್ಯಾತರಾಗಿದ್ದು ಕೊಂಡು, ಮೂಲೆ ಗುಂಪಾಗಿದ್ದ ಹಿಂದುಳಿದ ವರ್ಗಗಳಿಗೆ ಅರಸು-ಹಾವನೂರು ಜೋಡಿ, ರಾಜಕೀಯ ಸಾಮಾಜಿಕ ಅಸ್ತಿತ್ವವನ್ನು ತಂದು ಕೊಟ್ಟಿತು. ಸಮಾಜದ ಮುಖ್ಯ ವಾಹಿನಿಯಲ್ಲಿ ಹಿಂದುಳಿದ ವರ್ಗಗಳು ಸೇರಲು ಇದೊಂದು ಐತಿಹಾಸಿಕ ಮುನ್ನುಡಿಯಾಯಿತು.

'ಸಾಮಾಜಿಕ ಪರಿವರ್ತನೆಯ ಹರೀಕಾರ' ಎಂಬ ಅರಸು ಅವರ ವಿಶೇಷಣದ ಹಿಂದೆ ಹಾವನೂರರ ಶ್ರಮ, ಬುದ್ಧಿ ಮತ್ತೆ, ಪಾಂಡಿತ್ಯ, ಕಳಕಳಿ ಕೆಲಸ ಮಾಡಿದ್ದವು. ಬಲಿಷ್ಠ ಕೋಮುಗಳ ತೀವ್ರ ವಿರೋಧದ ನಡುವೆ ಕೂಡ ಇಂಥ ಬಹುದೊಡ್ಡ ಸಾಮಾಜಿಕ ಪರಿವರ್ತನೆ ಸಾಧ್ಯವಾಗಿದ್ದರ ಹಿಂದೆ ಅರಸು ಮತ್ತು ಹಾವನೂರರ ರಾಜಕೀಯ ಮುತ್ಸದ್ದಿತನ ಎಷ್ಟು ಸಮರ್ಥವಾಗಿ ಕಾರ್ಯ ನಿರ್ವಹಿಸಿತ್ತು ಎನ್ನುವುದು ಗೊತ್ತಾಗುತ್ತದೆ.

ಆದರೆ ಈ ಪರಿವರ್ತನೆಯನ್ನು ನಿರಂತರ ರಾಜಕೀಯ ಹೋರಾಟವಾಗಿ ಮಾರ್ಪಡಿಸುವತ್ತ ಇತರೆ ಹಿಂದುಳಿದವರ್ಗಗಳ ನಾಯಕರು ಪ್ರಯತ್ನಿಸಲಿಲ್ಲ ಅನ್ನುವುದೇ ನೋವಿನ ಸಂಗತಿ. ಅರಸು-ಹಾವನೂರರಿಂದ ಲಾಭ ಪಡೆದ ರಾಜಕೀಯ ನಾಯಕರೆಲ್ಲ ಕ್ರಮೇಣ ಅವರಿಂದ ದೂರ ಸರಿಯತೊಡಗಿದರು. ಅರಸು ಅವರ ನಿಧನಾನಂತರ ಹಾವನೂರು ನಿಜಕ್ಕೂ ತಬ್ಬಲಿಯಾದರು.

ಸಾಮಾಜಿಕ ಪರಿವರ್ತನೆಯ ಲಾಭ ಪಡೆದ ಕಾಂಗ್ರೆಸ್ ಈ ಇಬ್ಬರು ನಾಯಕರನ್ನು ಕಡೆಗಣಿಸಿತು. ಹಾವನೂರು ಕಾಂಗ್ರೆಸ್‌ನಿಂದ ಭ್ರಮನಿರಶನಗೊಂಡು ಬಿಜೆಪಿಯಂಥ ಜನವಿರೋಧಿ ಪಕ್ಷದ ತೆಕ್ಕೆಗೂ ಬಿದ್ದರು. ಚಿತ್ರದುರ್ಗ ಲೋಕ ಸಭಾಕ್ಷೇತ್ರದಿಂದ ಎರಡು ಬಾರಿ ಲೋಕ ಸಭೆಗೆ ಬಿಜೆಪಿ ಟಿಕೆಟ್ ಪಡೆದು ನಿಂತು ದಯನೀಯ ಸೋಲು ಕಂಡರು, ಠೇವಣಿ ಕಳೆದುಕೊಂಡರು. ತತ್ವ-ಸಿದ್ಧಾಂತಗಳು ರಾಜಕೀಯ ಅವಕಾಶಗಳ ಮುಂದೆ ಹೇಗೆ ಗೌಣವಾಗುತ್ತದೆಂಬುದಕ್ಕೆ ಹಾವನೂರು ಅಂಥವರೂ ಉದಾಹರಣೆಯಾದದ್ದು ನಮ್ಮ ನಡುವಿನ ಘೋರ ದುರಂತ!

ತಮ್ಮ ಜೀವನದ ಅಂತಿಮ ಘಟ್ಟದಲ್ಲಿ ಹಾವನೂರು ಎಡಬಿಡಂಗಿಯಾದರು. ದೇವೇಗೌಡ-ಸಿದ್ಧರಾಮಯ್ಯ ನಡುವಿನ ಜಗಳ ವಿಕೋಪಕ್ಕೆ ಹೋದಾಗ ಹಾವನೂರ್ ದೇವೇಗೌಡರ ಬೆಂಬಲಕ್ಕೆ ನಿಂತು ಮತ್ತೊಂದು ಆಘಾತ ನೀಡಿದರು. ರಾಜಕೀಯ ಅಸ್ತಿತ್ವಕ್ಕಾಗಿ ಅವರು ಮಾಡಿದ ಮತ್ತೊಂದು ಆತ್ಮ ಘಾತುಕತನ ಇದಾಗಿತ್ತು.

ಅದೇನೇ ಇದ್ದರೂ ಹಾವನೂರು ಅವರು ನಾಡಿನ ಹಿಂದುಳಿದ ವರ್ಗಕ್ಕೆ ನೀಡಿದ 'ಮಹಾ ಚೈತನ್ಯ' ಹೊಸ ಇತಿಹಾಸವನ್ನು ಸೃಷ್ಟಿಸಿತು. ಹಿಂದುಳಿದವರ ಪಾಲಿಗಂತೂ ಅವರು ಅಸಾಧ್ಯವಾದುದನ್ನು ಸಾಧಿಸಿದ 'ಯುಗ ಪುರುಷ'ರಾದರು.

ಅವರ ಸಾವಿಗೆ 'ಸಂವಾದ' ಕಂಬನಿ ಮಿಡಿಯುತ್ತದೆ.

○ ಇಂದೂಧರ ಹೊನ್ನಾಪುರ

ಮುಂಬೈ ಜನತೆಗೆ ಬಾಂಬ್ ಸ್ಫೋಟವೆನ್ನುವುದು ದೀಪಾವಳಿ ಹಬ್ಬದಷ್ಟೆ ಸಾಮಾನ್ಯವಾಗಿ ಬಿಟ್ಟಿದೆ. ೧೯೯೨ರಲ್ಲಿ ಕಲ್ಯಾಣ್ ರೈಲು ನಿಲ್ದಾಣದಲ್ಲಿ ಬಾಂಬ್ ಸ್ಫೋಟದಿಂದ ೧೫ ಸ್ಥಳಗಳಲ್ಲಿ ನಡೆದ ಸರಣಿ ಸ್ಫೋಟದಲ್ಲಿ ೨೫೭ ಜನ ಸತ್ತು ೭೧೩ ಮಂದಿ ಗಾಯಗೊಂಡಿದ್ದರು. ೧೯೯೮ರಲ್ಲಿ ನಾಲ್ಕು ಸ್ಫೋಟಗಳಲ್ಲಿ ೪ ಜನ ಸತ್ತು ೩೦ ಜನ ಗಾಯಗೊಂಡಿದ್ದರು. ೨೦೦೨ರಲ್ಲಿ ಬಸ್‌ನಲ್ಲಿ ಉಂಟಾದ ಸ್ಫೋಟದಿಂದ ಇಬ್ಬರು ಸತ್ತು, ಕೇಂದ್ರ ರೈಲು ನಿಲ್ದಾಣದಲ್ಲಿ ನಡೆದ ಸ್ಫೋಟದಲ್ಲಿ ೪೯ ಮಂದಿ ಗಾಯಗೊಂಡಿದ್ದರು. ನಂತರ ೨೦೦೩ರಲ್ಲಿ ಗೇಟ್‌ವೇ ಆಫ್ ಇಂಡಿಯಾ ಹಾಗೂ ಜವೇರಿ ಬಜಾರ್‌ನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ೬೮ ಮಂದಿ ಸತ್ತು ೨೨೦ ಮಂದಿ ಗಾಯಗೊಂಡಿದ್ದರು. ಕಳೆದ ಹದಿನೈದು ವರ್ಷಗಳಲ್ಲಿ ಬೇರಾವುದೇ ನಗರಗಳಲ್ಲೂ ಈ ಪ್ರಮಾಣದ ದುರಂತಗಳು ಸಂಭವಿಸಿಲ್ಲವೆಂದೇ ಹೇಳಬಹುದು.

ನಾ. ದಿವಾಕರ

ರೀಡರ್ಸ್ ಡೈಜೆಸ್ಟ್ ಪತ್ರಿಕೆಯವರು ನಡೆಸಿದ ಇತ್ತೀಚಿನ ಒಂದು ಸಮೀಕ್ಷೆಯಲ್ಲಿ ಮುಂಬೈ ನಗರವನ್ನು ಒರಟು ನಗರ (Rude city) ಎಂದು ಗುರುತಿಸಲಾಗಿತ್ತು. ಇದೇ ವೇಳೆಯಲ್ಲಿ ಖ್ಯಾತ ಲೇಖಕ ಸುಕೇತು ಮೆಹ್ತಾ ಮುಂಬೈ ನಗರವನ್ನು ಒಂದು ಗರಿಷ್ಠ ನಗರಿ (Maximum city) ಎಂದು ಬಣ್ಣಿಸಿದ್ದರು. ಜುಲೈ ೧೧ ರಂದು ಮುಂಬೈ ನಗರದಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದ ನಂತರ ಈ ಎರಡೂ ಹೇಳಿಕೆಗಳೂ ಒಂದು ರೀತಿಯಲ್ಲಿ ಅರ್ಥಪೂರ್ಣವಾಗಿವೆ. ೩೦ ನಿಮಿಷಗಳ ಅವಧಿಯಲ್ಲಿ ಏಳು ಬಾಂಬ್ ಸ್ಫೋಟಗಳು ಸಂಭವಿಸಿ, ೨೦೦ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ ನಂತರವೂ ಮುಂಬೈನ ಜನತೆ, ಸತ್ತವರ ನೊಂದವರ ಸೇವೆ ಮಾಡುತ್ತಾ, ಒಂದು ದಿನದೊಳಗಾಗಿ ನಗರವನ್ನು ಯಥಾಸ್ಥಿತಿಗೆ ಮರಳಿಸಿದ್ದಾರೆಂದರೆ, ಅವರಲ್ಲಿರುವ ಒರಟುತನ ಮತ್ತು ಗರಿಷ್ಠತೆಯ ಗುಣ ಎದ್ದು ಕಾಣುತ್ತದೆ.

ಇಲ್ಲಿ ಒರಟು ಎಂದರೆ ಮತ್ತೊಬ್ಬರ ಮನ ನೋಯಿಸುವುದೆಂದರ್ಥವಲ್ಲ. ಬದಲಾಗಿ ಎಂತಹ ಕ್ಲಿಷ್ಟಕರ ಪರಿಸ್ಥಿತಿ ಎದುರಾದರೂ ಧೈರ್ಯದಿಂದ ಎದುರಿಸಿ, ಹೋರಾಡಿ ಜೀವನವನ್ನು ಎಂದಿನಂತೆ ಸಾಗಿಸಿಕೊಂಡು ಹೋಗುವ ಸ್ತಿತಪ್ರಜ್ಞತೆ ಮುಂಬೈ ಜನತೆಯಲ್ಲಿದೆ ಎಂದರ್ಥ. ಸೆಪ್ಟೆಂಬರ್ ೧೧ರ ದಾಳಿಯ ನಂತರ ನ್ಯೂಯಾರ್ಕ್ ನಗರ ತತ್ತರಿಸಿದ್ದನ್ನು ನೋಡಿದರೆ, ಮುಂಬೈ ನಗರದ ಜನರನ್ನು ಧೈರ್ಯಶಾಲಿಗಳೆಂದೇ ಹೇಳಬೇಕಾಗುತ್ತದೆ. ಯಾವ ನಗರ ತಾನೇ ಈ ಪ್ರಮಾಣದ ಆಘಾತಗಳನ್ನು ಅರಗಿಸಿಕೊಳ್ಳಲು ಸಾಧ್ಯ. ಹಾಗೆ ನೋಡಿದರೆ ಭಾರತೀಯ ಸಮಾಜವೇ ಒರಟು ಎಂದು ಹೇಳಬಹುದು. ಸ್ವಾತಂತ್ರ್ಯಗಳಿಸಿ ಆರು ದಶಕಗಳಾದರೂ ಇಂದಿಗೂ ಬಡತನ ಕಿತ್ತು ತಿನ್ನುತ್ತಿದೆ. ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಸಾಮಾನ್ಯ ಜನರ ಮಾರಣ ಹೋಮ ಸದ್ದು ಗದ್ದಲವಿಲ್ಲದೆ ನಡೆಯುತ್ತಿದೆ. ಭಯೋತ್ಪಾದಕರ ಬಾಂಬುಗಳಿಂದ ಆಗಾಗ್ಗೆ ಹಲವು ಜನ ಸಾವನ್ನಪ್ಪುತ್ತಿದ್ದರೆ, ಸರ್ಕಾರ ಗಳ ನೀತಿಗಳಿಂದ ದಿನನಿತ್ಯ ಜನರು ಸಾಯುತ್ತಿದ್ದಾರೆ. ಆದರೂ ನಾವು ಅದೇ ಪಕ್ಷಗಳನ್ನು, ಅದೇ ಸವಕಲು ಸರ್ಕಾರಗಳನ್ನು ಕಾಲ ಕಾಲಕ್ಕೆ ಚುನಾಯಿಸು ತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಮುಂಬೈ ನಗರ ವನ್ನು ಮಾತ್ರ ಒರಟು ನಗರ ಎಂದು ಅರ್ಥೈಸುವುದು ಇತರ ಭಾರತೀಯರಿಗೆ ಅವಮಾನ ಮಾಡಿದಂತಲ್ಲವೇ.

ಮುಂಬೈನ ಜನತೆಗೆ ಬಾಂಬ್ ಸ್ಫೋಟವೆನ್ನುವುದು ದೀಪಾವಳಿ ಹಬ್ಬದಷ್ಟೆ ಸಾಮಾನ್ಯವಾಗಿಬಿಟ್ಟಿದೆ. ೧೯೯೨ರಲ್ಲಿ ಕಲ್ಯಾಣ್ ರೈಲು ನಿಲ್ದಾಣದಲ್ಲಿ ಬಾಂಬ್ ಸ್ಫೋಟದಿಂದ ೧೫ ಸ್ಥಳಗಳಲ್ಲಿ ನಡೆದ ಸರಣಿ ಸ್ಫೋಟದಲ್ಲಿ ೨೫೭ ಜನ ಸತ್ತು ೭೧೩ ಮಂದಿ ಗಾಯಗೊಂಡಿದ್ದರು. ೧೯೯೮ರಲ್ಲಿ ನಾಲ್ಕು ಸ್ಫೋಟಗಳಲ್ಲಿ ೪ ಜನ ಸತ್ತು ೩೦ ಜನ ಗಾಯಗೊಂಡಿದ್ದರು. ೨೦೦೨ರಲ್ಲಿ ಬಸ್‌ನಲ್ಲಿ ಉಂಟಾದ ಸ್ಫೋಟದಿಂದ ಇಬ್ಬರು ಸತ್ತು [right edge cut off] ರೈಲು ನಿಲ್ದಾಣದಲ್ಲಿ ನಡೆದ ಸ್ಫೋಟದಲ್ಲಿ ೪೯ ಮಂದಿ [cut off] ಗೊಂಡಿದ್ದರು. ನಂತರ ೨೦೦೩ರಲ್ಲಿ ಗೇಟ್‌ವೇ ಆಫ್ ಇ[cut off] ಹಾಗೂ ಜವೇರಿ ಬಜಾರ್‌ನಲ್ಲಿ ನಡೆದ ಬಾಂಬ್ ಸ್ಫೋಟ[cut off] ಮಂದಿ ಸತ್ತು ೨೨೦ ಮಂದಿ ಗಾಯಗೊಂಡಿದ್ದರು. ಕಳೆದ [cut off] ವರ್ಷಗಳಲ್ಲಿ ಬೇರಾವುದೇ ನಗರಗಳಲ್ಲೂ ಈ ಪ್ರಮಾಣದ [cut off]ಗಳು ಸಂಭವಿಸಿಲ್ಲವೆಂದೇ ಹೇಳಬಹುದು. ಬಹುಶಃ ಭಯೋ[cut off]ಕರು ಭಾರತದ ವಾಣಿಜ್ಯ ನಗರಿಯಾದ ಮುಂಬೈಯನ್[cut off] ಕೇಂದ್ರ ಬಿಂದುವನ್ನಾಗಿ ಪರಿಗಣಿಸಿರಬೇಕು.

ಸದಾ ಜನದಟ್ಟಣೆಯಿಂದ ತುಂಬಿರುವ ಮುಂಬೈ[cut off] ಸಂಚಾರ ವ್ಯವಸ್ಥೆ, ಜನರಲ್ಲಿ ಭೀತಿ ಉಂಟುಮಾಡಲು ಭಯೋ[cut off]ಕರಿಗೆ ಸುಲಭವಾದ ಗುರಿಯಾಗಿದೆ. ೩೦೩ ಕಿಲೋ ಮೀಟ[cut off]ರದ ಮುಂಬೈನ ನಗರ ರೈಲು ಸಂಚಾರ ವ್ಯವಸ್ಥೆಯ[cut off] ೨೨೨೯ ರೈಲುಗಳು ಸಂಚರಿಸುತ್ತವೆ. ಈ ರೈಲುಗಳಲ್ಲಿ ದಿ[cut off] ಲಕ್ಷ ಜನ ಓಡಾಡುತ್ತಾರೆ. ಅದರಲ್ಲಿ ಪಶ್ಚಿಮ ರೈಲ್ವೆಯಲ್ಲಿ [cut off] ಜನ ಓಡಾಡುತ್ತಾರೆ. ಪ್ರತಿ ಮರು ಅಥವಾ ನಾಲ್ಕು ನಿಮಿ[cut off] ರೈಲುಗಳು ಬರುತ್ತಿರುತ್ತವೆ. ಒಂಬತ್ತು ಭೋಗಿಗಳಿರುವ ಒಂ[cut off] ೧೭೦೦ ಜನರನ್ನು ಕರೆದೊಯ್ಯುವ ಸಾಮರ್ಥ್ಯ ಹೊಂ[cut off] ೫೦೦೦ ಜನರನ್ನು ಕರೆದೊಯ್ಯುತ್ತದೆ. ಮುಂಬೈನಲ್ಲಿ ಬ[cut off] ಉದ್ಯೋಗಿಗಳು ರೈಲು ಪ್ರಯಾಣವನ್ನೇ ಬಯಸುತ್ತಾರೆ. ಆ[cut off]ಣದ ಅನುಭವಗಳನ್ನು ಸವಿದವರೇ ಬಲ್ಲರು ಎಂದಷ್ಟೆ[cut off] ಬಹುದು.

ಮುಂಬೈನ ಈ ಜೀವನ ಶೈಲಿಯೇ ಭಯೋತ್ಪಾದಕ[cut off]ವಾಗಿ ಪರಿಣಮಿಸಿದ್ದು, ಮುಂಬೈ ನಗರವನ್ನು ತಮ್ಮ ಕಾ[cut off]ಣೆಯ ಮುಖ್ಯ ಗುರಿಯಾಗಿಸಿಕೊಳ್ಳುವುದಕ್ಕೆ ಇತರ ಕಾ[cut off] ಸಾಕಷ್ಟಿವೆ. ಮುಖ್ಯವಾಗಿ ಮುಂಬೈ ಭಾರತದ ಆರ್ಥಿಕ ರ[cut off] ಜಾಗತೀಕರಣದ ಯುಗದಲ್ಲಿ ಭಾರತದ ಆರ್ಥಿಕತೆಯ ಆಧಾ[cut off]

1993ರ ಮಾ.12
ಮುಂಬೈ ಸ್ಫೋಟದ ದಿನ

ಮುಂಬೈ: ಮುಗಿಯದ ಕ

ಸುವ ಮುಂಬೈನ ಶೇರು ಪೇಟೆ ಮತ್ತು ಸೆನ್ಸೆಕ್ಸ್, ಆಧು ಭಾರತದ ದೇವಾಲಯದಂತೆ. ಶೇರು ಪೇಟೆ ಂಕ ಕೊಂಚ ಏರುಪೇರಾದರೂ ಭಾರತೀಯ ಉದ್ಯ ಅಲ್ಲಿ, ರಾಜಕೀಯ ವಲಯಗಳಲ್ಲಿ ಸುನಾಮಿ ಅಲೆ ಏಳುತ್ತವೆ. ಜೊತೆಗೆ ಕಳೆದ ಹಲವು ವರ್ಷಗಳ ಘಟ ಗಳ ಹಿನ್ನೆಲೆಯಲ್ಲಿ, ದೇಶದಲ್ಲಿ ಕೋಮು ಗಲಭೆ ಸೃಷ್ಟಿಸಲು ಅತ್ಯಂತ ಸೂಕ್ತ ಮತ್ತು ಸುಲಭ ಪ್ರದೇ ಎಂದರೆ ಗುಜರಾತ್ ಮತ್ತು ಮುಂಬೈ. ಏಕೆಂದರೆ ಈ ಗಳಲ್ಲಿ ಕೋಮುಗಲಭೆಗಳನ್ನು ಸೃಷ್ಟಿಸಲೆಂದೇ ಹುಟ್ಟಿ ರುವ ಪಟ್ಟಭದ್ರ ಶಕ್ತಿಗಳು ಬೇರುರಿವೆ. ಹಾಗಾ ಭಯೋತ್ಪಾದಕರು ಮುಂಬೈ ನಗರದ ರೈಲು ಗುರಿಯಾಗಿಸಿಕೊಂಡಿದ್ದಾರೆ. peak hour ಎಂದು ರಾಗುವ ಕಛೇರಿ ಬಿಡುವ ನಂತರದ ವೇಳೆಯಲ್ಲಿ ಗಳಲ್ಲಿನ ಜನಸಂದಣಿ ನಿಯಂತ್ರಿಸಲು ಸಾಧ್ಯವಾಗಿ ಭಯೋತ್ಪಾದಕರ ಈ ಬಾರಿಯ ದಾಳಿಗೆ ದಿನನಿತ್ಯ ಗೆ ಹೋಗುವವರು, ದಿನಗೂಲಿಗಳು, ಸಣ್ಣ ವ್ಯಾಪಾ ಇತರ ಮಧ್ಯಮ ವರ್ಗದವರೇ ಹೆಚ್ಚಾಗಿ ಬಲಿ ದ್ದಾರೆ.

ಆದರೆ ತಮ್ಮ ಈ ಪಾಶವೀ ಕೃತ್ಯದಿಂದ ಜನತೆಯ ಸೌಹಾರ್ದತೆಯನ್ನು ಹಾಳುಮಾಡಿ, ದೇಶದ ಐಕ್ಯತೆಗೆ ತರುವ ಉಗ್ರರ ದುರುದ್ದೇಶವನ್ನು ಮುಂಬೈನ ಹುಸಿಗೊಳಿಸಿದ್ದಾರೆ. ಜುಲೈ ೧೧ರಂದು ನಡೆದ ತದ ನಂತರ ಮುಂಬೈನ ಜನತೆ ಭೇದ ಭಾವ ಮರೆತು, ಪರಸ್ಪರ ಸಹಾಯಹಸ್ತ ನೀಡಿ, ಮಾನ ತೆಯನ್ನು ಮೆರೆದು ಭಾರತೀಯ ಸಂಸ್ಕೃತಿಯನ್ನು ಹಿಡಿದಿದ್ದಾರೆ. ಹೊರಗಿನ ಯಾವುದೇ ಶಕ್ತಿಗಳೂ ಭಾವೈಕ್ಯತೆಯನ್ನು ನಾಶಮಾಡಲಾಗುವುದಿಲ್ಲ, ತ್ಪಾದಕರ ಅಟ್ಟಹಾಸಗಳಿಗೆ ಮಣೆ ಹಾಕುವುದಿಲ್ಲ ಅಂಶವನ್ನು ಪಾತಕಿಗಳಿಗೆ ಮನವರಿಕೆ ಮಾಡಿಕೊಟ್ಟಿ **"ನಾವು ರೈಲು ಹಳಿಗಳ ಮೇಲೆ ಬಿದ್ದಿದ್ದ ಶವ ಗಾಯಗೊಂಡವರನ್ನು ನೋಡಿದಾಗ ಆ ದೇಹ ವಿನದೋ ಅಥವಾ ಮುಸಲ್ಮಾನನದೋ ಎಂಬ ನೆಯೇ ಬರಲಿಲ್ಲ, ನಮ್ಮ ಪ್ರಥಮ ಗುರಿ ಅವರನ್ನು ವುದಾಗಿತ್ತು"** ಎನ್ನುತ್ತಾರೆ. ಬಾಂದ್ರಾ ರೈಲು ನಿಲ್ದಾ ಳಿ ರಸ್ತೆ ವ್ಯಾಪಾರ ನಡೆಸುವ ಖುರೇಶಿ. **"ಭಯೋ ಗೆ ಯಾವುದೇ ಧರ್ಮವಿರುವುದಿಲ್ಲ, ಅಮಾಯಕ ರುವ ವರ್ಗಗಳ ಮಾರಣ ಹೋಮ ಮಾಡುವ ಇವ ಗಲ್ಲಿಗೇರಿಸಬೇಕು"** ಎಂದು ಆಕ್ರೋಶದಿಂದ ಖುರೇಶಿ ಮತ್ತವರ ಸಂಗಡಿಗರು ಕನಿಷ್ಠ ೩೦ ನ್ನಾದರೂ ತೆಗೆದು ಹಾಕುವುದರಲ್ಲಿ ಸಫಲರಾಗಿ "ನಮ್ಮಂತಹ ಸಾಮಾನ್ಯ ಜನತೆಯ ಮೇಲೆ ಪದೇ ಪ್ರಹಾರ ಮಾಡುತ್ತಿರುವ ಉಗ್ರರಿಗೆ ಬುದ್ಧಿ ಕಲಿಸಲು ದೇ ಮಾರ್ಗ" ಎನ್ನುತ್ತಾರೆ ಮೊಹಮ್ಮದ್ ಫ್. **"ಸಾಂತಾ ಕ್ರೂಝ್ ನಿಲ್ದಾಣದ ಬಳಿ ಇರುವ ಸಗಳು, ಇನ್ನೂರಕ್ಕೂ ಹೆಚ್ಚು ಮುಸ್ಲಿಂ ಹುಡುಗರು ಸ್ಫೋಟವಾದ ಕೂಡಲೇ ನೊಂದವರಿಗೆ ಸಹಾಯ ಮುಂದಾಗಿದ್ದರು. ರಾಜಕಾರಣಿಗಳು, ಪೋಲೀ ರುವಷ್ಟರಲ್ಲಿ ನಾವು ಬಹುತೇಕ ಗಾಯಾಳುಗಳಿಗೆ ವಸ್ತುಗಳನ್ನು ಪೂರೈಸಿದ್ದಾಗಿತ್ತು"** ಎನ್ನುತ್ತಾರೆ ಗಾಮ್ರ, ಮುಂಬೈನ ಸಾಮಾನ್ಯ ಜನತೆ, ಜುಲೈ ದರ ಬಾಂಬ್ ಸ್ಫೋಟಕ್ಕೆ ಸ್ಪಂದಿಸಿದ ಪರಿಗೆ ಇವು ದರ್ಶನಗಳಷ್ಟೆ.



ಆದಾಗ್ಯೂ ವ್ಯವಸ್ಥಿತವಾಗಿ ಅಮಾಯಕ ಜನತೆಯನ್ನು ಗುರಿಮಾಡುತ್ತಿರುವ ಭಯೋತ್ಪಾದಕರ ತಂತ್ರವನ್ನು ಮಟ್ಟ ಹಾಕುವುದು ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. ಸರ್ಕಾರದ ಸಾಫಲ್ಯ ವೈಫಲ್ಯಗಳೇನೇ ಇರಲಿ, ದೇಶದೆಲ್ಲೆಡೆ ಭಯೋತ್ಪಾದಕರ ದಾಳಿ ದಿನೇ ದಿನೇ ಹೆಚ್ಚಾಗುತ್ತಲೇ ಇರುವ ಸತ್ಯವನ್ನು ಅಲ್ಲಗೆಳೆಯಲಾಗುವುದಿಲ್ಲ. ಸಂಸತ್ ಭವನ, ವಾರಾಣಾಸಿ, ಬೆಂಗಳೂರಿನ ಐ.ಐ.ಟಿ, ಅಯೋಧ್ಯ, ಈಗ ಮುಂಬೈ, ಹೀಗೆ ಹಲವೆಡೆಗಳಲ್ಲಿ ಭಯೋತ್ಪಾದಕರು ದಾಳಿ ನಡೆಸುತ್ತಲೇ ಇದ್ದಾರೆ. ಜನತೆಯ ಮಾರಣಹೋಮ ಅವ್ಯಾಹತವಾಗಿ ಮುಂದುವರೆಯುತ್ತಲೇ ಇದೆ. ಪ್ರತಿ ಘಟನೆ ನಡೆದಾಗಲೂ ಭಾರತೀಯ ಜನತಾ ಪಕ್ಷ, ಯು.ಪಿ.ಎ ಸರ್ಕಾರದ ಮೃದು ಧೋರಣೆಗಳನ್ನು ಖಂಡಿಸಿದರೆ, ಕಾಂಗ್ರೆಸ್ ಪಕ್ಷ ಪಾಕಿಸ್ತಾನದ ಕಡೆ ಬೆರಳು ತೋರಿಸಿ ನುಣುಚಿಕೊಂಡುಬಿಡುತ್ತದೆ. ಆದರೆ ನಮ್ಮ ನಾಗರೀಕ ಸಮಾಜ ಮತ್ತು ರಾಜಕೀಯ ವ್ಯವಸ್ಥೆಗಳೇ ಈ ಬೆಳವಣಿಗೆಗಳಿಗೆ ಪೂರಕವಾಗಿ ನಡೆದುಕೊಳ್ಳುತ್ತಿವೆ ಎಂಬ ಅಂಶವನ್ನು ಮರೆಯುತ್ತಿದ್ದೇವೆ. ಭಾರತೀಯ ಬೇಹುಗಾರಿಕೆಯನ್ನು ದೂಷಿಸುವುದರಲ್ಲಿ ಅರ್ಥವಿರುವುದಿಲ್ಲ. ಬೇಹುಗಾರಿಕೆ ತಂತ್ರದಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ತರುವ ಅಗತ್ಯವಿದ್ದರೂ, ನಮ್ಮ ಭ್ರಷ್ಟ ರಾಜಕೀಯ ವ್ಯವಸ್ಥೆಯಲ್ಲಿ ಬೇಹುಗಾರಿಕಾ ಸಿಬ್ಬಂದಿಗಳ ದನಿ ಎಲ್ಲೋ ಅಡಿಗಿಹೋಗಿರುತ್ತದೆ. ಇನ್ನೊಂದೆಡೆ, ಈ ಕೃತ್ಯಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲ ನೀಡುತ್ತಿರುವ ಪಾಕಿಸ್ತಾನ ಸರ್ಕಾರದೊಡಗಿನ ಸಂಬಂಧಗಳನ್ನು ಗಂಭೀರವಾಗಿ ಪರಿಶೀಲಿಸುವ ಅವಶ್ಯಕತೆ ಇದೆಯಾದರೂ, ಪಾಕಿಸ್ತಾನವನ್ನು ದೂಷಿಸುವುದರಿಂದಲೇ ಈ ಸಮಸ್ಯೆ ಬಗೆ ಹರಿಯುವುದಿಲ್ಲ. ಉಗ್ರರು ಉಪಯೋಗಿಸುತ್ತಿರುವ ಭಯೋತ್ಪಾದಕತೆಯ ಆಧುನಿಕ ತಂತ್ರಗಳನ್ನು ಎದುರಿಸಲು ಭಾರತವೂ ಸಹ ತನ್ನ ಬೇಹುಗಾರಿಕೆ ಮತ್ತು ಸಂಪರ್ಕ ಸಾಧನಗಳನ್ನು ಉತ್ತಮವಾಗಿ ನಿರ್ವಹಿಸಬೇಕಾಗಿದೆ.

ಇತ್ತೀಚಿನ ಹಲವಾರು ಬಾಂಬ್ ಸ್ಫೋಟಗಳಲ್ಲಿ ಸಕ್ರಿಯವಾಗಿರುವ ಲಷ್ಕರ್ ಎ ತೊಯ್ಬಾ ಸಂಘಟನೆಯ ಮುಖ್ಯ ಉದ್ದೇಶ ಭಾರತದಲ್ಲಿ ಅಶಾಂತಿ, ಅಭದ್ರತೆಯನ್ನು ಹರಡುವುದೇ ಆಗಿದೆ. ಹಾಗಾಗಿ ಒಂದೆಡೆ ಹಿಂದೂ ದೇವಾಲಯಗಳ ಮೇಲೆ ದಾಳಿ ನಡೆಸುವ ಮೂಲಕ ಧಾರ್ಮಿಕ ಭಾವೈಕ್ಯತೆಗೆ ಭಂಗ ತರಲು ಯತ್ನಿಸಿದರೆ, ಇನ್ನೊಂದೆಡೆ ದೇಶದ ವಾಣಿಜ್ಯ ನಗರಿಯಾದ ಮುಂಬೈ ಮೇಲೆ ದಾಳಿ ನಡೆಸಿ, ದೇಶದ ಆರ್ಥಿಕತೆಯನ್ನು ನಿಷ್ಕ್ರಿಯಗೊಳಿಸುವುದು ಉಗ್ರರ ಉದ್ದೇಶವಾಗಿದೆ. ಆದರೆ ೧೯೯೩ರ ಸರಣಿ ಬಾಂಬ್ ಸ್ಫೋಟದ ನಂತರದಲ್ಲಿ ಮುಂಬೈನ ಜನತೆ ಈ ರೀತಿಯ ಉದ್ರೇಕಕಾರಿ ಘಟನೆಗಳಿಗೆ ಭಾವನಾತ್ಮಕವಾಗಿ ಸ್ಪಂದಿಸುತ್ತಿಲ್ಲ ಎಂಬ ಅಂಶ ಭಯೋತ್ಪಾದಕರನ್ನು ಕಂಗೆಡಿಸಿದೆ. ಶಿವಸೇನಾ ಆಗಲೀ, ಭಜರಂಗ ದಳವಾಗಲೀ, ಮುಂಬೈನ ಜನತೆಯ ಧಾರ್ಮಿಕ ಕೋಮು ಭಾವನೆಗಳನ್ನು ಕೆರಳಿಸುವಲ್ಲಿ ಸತತವಾಗಿ ವಿಫಲರಾಗುತ್ತಿದ್ದಾರೆ. ಇತ್ತೀಚಿನ ಘಟನೆಯ ನಂತರವೂ, ಭಾ.ಜ.ಪ., ತನ್ನ ಬತ್ತಳಿಕೆಯಲ್ಲಿ ಬೇರಾವ ನಾಯಕರೂ ಇಲ್ಲವೇನೋ ಎನ್ನುವಂತೆ, ಗುಜರಾತ್ ಹತ್ಯಾಕಾಂಡದ ರೂವಾರಿ ನರೇಂದ್ರ ಮೋದಿಯನ್ನು ಮುಂಬೈಗೆ ಆಹ್ವಾನಿಸಿತ್ತು. ಆದರೆ ಮೋದಿಯವರ ಉದ್ರೇಕಕಾರಿ ಭಾಷಣಗಳಿಗೆ ಕಿವಿಗೊಡುವ ಜನರಿರಲಿಲ್ಲ. **"ನಾವು ಭಾರತೀಯರು ಎಂಬ ಅಂಶವನ್ನು, ಮುಸಲ್ಮಾನರಾದ ನಾವು ಇಂದು ನಿರೂಪಿಸಬೇಕಿರುವುದು ದುರದೃಷ್ಟಕರವೇ. ಆದರೂ ಮುಸಲ್ಮಾನರೆಲ್ಲಾ ಭಯೋತ್ಪಾದಕರು ಅಥವಾ ಉಗ್ರವಾದಿಗಳ ಬೆಂಬಲಿಗರು ಎಂಬ ಆಪಾದನೆಯನ್ನು ನಾವಿಂದು/ ತೊಡೆದು ಹಾಕಬೇಕಿದೆ"** ಎನ್ನುತ್ತಾರೆ ಖುರೇಶಿ.

ವಾರಣಾಸಿಯ ಸಂಕಟ್ ಮೋಚನ್ ದೇವಾಲಯದಲ್ಲಿ ಬಾಂಬ್ ದಾಳಿಯಾದಾಗಲೂ ಭಾರತೀಯ ಜನತೆ ಇದೇ ಸಂಯಮ ತೋರಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಸಕಾರಾತ್ಮಕ ಬೆಳವಣಿಗೆಯೇ ಸಮಾಜಘಾತುಕ ಶಕ್ತಿಗಳಿಗೆ ತಲೆಬೇನೆಯಾಗಿ ಪರಿಣಮಿಸಿದೆ. ರಾಜಕಾರಣಿಗಳ ಮತ್ತು ಹಿಂದಿ ಚಲನ ಚಿತ್ರ ಪ್ರಪಂಚ ಬಾಲಿವುಡ್‌ನ ಕೃಪಾ ಕಟಾಕ್ಷದಿಂದ ಭದ್ರ ನೆಲೆಯೂರಿರುವ ಮುಂಬೈನ ಭೂಗತ ದೊರೆಗಳು, ಮಾಫಿಯಾಗಳು, ಲಷ್ಕರ್ ಮುಂತಾದ

ತಮ್ಮ ಈ ಪಾಶವೀ ಕೃತ್ಯದಿಂದ ಜನತೆಯಲ್ಲಿನ ಸೌಹಾರ್ದತೆಯನ್ನು ಹಾಳುಮಾಡಿ, ದೇಶದ ಐಕ್ಯತೆಗೆ ಭಂಗ ತರುವ ಉಗ್ರರ ದುರುದ್ದೇಶವನ್ನು ಮುಂಬೈನ ಜನತೆ ಹುಸಿಗೊಳಿಸಿದ್ದಾರೆ. ಜುಲೈ ೧೧ರಂದು ನಡೆದ ದುರಂತದ ನಂತರ ಮುಂಬೈನ ಜನತೆ ಭೇದ ಭಾವಗಳನ್ನು ಮರೆತು, ಪರಸ್ಪರ ಸಹಾಯಹಸ್ತ ನೀಡಿ, ಮಾನವೀಯತೆಯನ್ನು ಮೆರೆದು ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದಾರೆ. ಹೊರಗಿನ ಯಾವುದೇ ಶಕ್ತಿಗಳೂ ನಮ್ಮ ಭಾವೈಕ್ಯತೆಯನ್ನು ನಾಶ ಮಾಡಲಾಗುವುದಿಲ್ಲ, ಭಯೋತ್ಪಾದಕರ ಅಟ್ಟಹಾಸಗಳಿಗೆ ಮಣೆ ಹಾಕುವುದಿಲ್ಲ ಎಂಬ ಅಂಶವನ್ನು ಪಾತಕಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಭಯೋತ್ಪಾದಕ ಸಂಘಟನೆಗಳಿಗೆ ಹಣಕಾಸಿನ ಮತ್ತು ತಾತ್ವಿಕ ನೆರವು ನೀಡುತ್ತಿರುವ ವಿಷಯ ಗುಟ್ಟಾಗೇನೂ ಉಳಿದಿಲ್ಲ. ಆದರೆ ಅವರನ್ನು ನಿಯಂತ್ರಿಸುವ ನೈತಿಕತೆಯನ್ನು ನಮ್ಮ ಆಳುವ ವರ್ಗಗಳು ಕಳೆದುಕೊಂಡಿವೆಯಷ್ಟೆ.

ಪಾಕಿಸ್ತಾನವನ್ನು ತಮ್ಮ ಮುಖ್ಯ ಶಿಬಿರವನ್ನಾಗಿ ಮಾಡಿಕೊಂಡಿರುವ ಲಷ್ಕರ್ ಸಂಘಟನೆ, ತನ್ನ ಜಿಹಾದ್ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಸಾವಿರಾರು ಯುವಕರಿಗೆ ತರಬೇತಿ ನೀಡುತ್ತಿದೆ. ತನ್ನ ಸಾಮ್ರಾಜ್ಯಶಾಹಿ ದಾಹವನ್ನು ಇಂಗಿಸಿಕೊಳ್ಳಲು ಅಮೆರಿಕಾ ಸೃಷ್ಟಿಸಿದ ಈ ಸಂಘಟನೆಗಳು, ಇಂದು ಇಡೀ ಮಾನವಕುಲಕ್ಕೇ ಸಂಚಕಾರ ತರುತ್ತಿವೆ. ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸತತವಾಗಿ ಕ್ಷೋಭೆ ಹರಡುತ್ತಿರುವ ಜೈಶ್ ಎ ಮೊಹಮ್ಮದ್, ಲಷ್ಕರ್ ಎ ತೊಯ್ಬಾ, ಮತ್ತು ಹರ್ಕತ್ ಉಲ್ ಜಿಹಾದ್ ಇಸ್ಲಾಮಿ ಮುಂತಾದ ಸಂಘಟನೆಗಳು, ಭಾರತವನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ ಅಂಶ ಅಮೆರಿಕಾ ಅಥವಾ ಪಾಕಿಸ್ತಾನಕ್ಕೆ ತಿಳಿದಿಲ್ಲವೆಂದೇನಿಲ್ಲ. ಆದರೂ ಸಾಮ್ರಾಜ್ಯ ಶಾಹಿಗಳಿಗೆ ಈ ಸಂಘಟನೆಗಳ ಅವಶ್ಯಕತೆ ಇದ್ದೇ ಇರುತ್ತದೆ. ಭಾರತದೊಂದಿಗೆ ಸ್ನೇಹಹಸ್ತ ಚಾಚುತ್ತಲೇ ಪಾಕಿಸ್ತಾನವು ಈ ಉಗ್ರರಿಗೆ ತನ್ನ ನೆಲದಲ್ಲಿ ತರಬೇತಿ ನೀಡುತ್ತಿದೆ. ಈ ಅಂಶ ಬಹಿರಂಗವಾಗಿದ್ದರೂ, ಅಮೆರಿಕಾ ಪಾಕಿಸ್ತಾನವನ್ನು ತನ್ನ ಮಿತ್ರ ರಾಷ್ಟ್ರವೆಂದೇ ಪರಿಗಣಿಸುತ್ತದೆ. ಈ ಕುತಂತ್ರಕ್ಕೆ ಬಲಿಯಾಗಿರುವುದು ಅಮಾಯಕ ಭಾರತೀಯ ಪ್ರಜೆಗಳಷ್ಟೆ. ದೇಶದಲ್ಲಿ ಬಲವಾಗಿ ಬೇರೂರಿರುವ ದಾವೂದ್ ಇಬ್ರಾಹಿಂ ಮುಂತಾದ ಭೂಗತ ದೊರೆಗಳು ಈ ಭಯೋತ್ಪಾದಕರಿಗೆ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜುಲೈ ೧೧ರ ಸರಣಿ ಸ್ಫೋಟವನ್ನು ನೋಡಿದರೆ, ಉಗ್ರರು ಈ ಕೃತ್ಯ ಎಸಗಲು ಸಾಕಷ್ಟು ಸಿದ್ಧತೆ ನಡೆಸಿದ್ದರೆಂದು ಸಾಬೀತಾಗುತ್ತದೆ. ಭೂಗತ ದೊರೆಗಳ ಸಹಾಯವಿಲ್ಲದೆ ಈ ಪಾಶವೀ ಕೃತ್ಯ ಸುಲಭ ಸಾಧ್ಯವಲ್ಲ. ದಾವೂದ್‌ನ ಮಾಫಿಯಾ ಗುಂಪು ಇಸ್ಲಾಮೀ ಭಯೋತ್ಪಾದಕರೊಡನೆ ನೇರವಾದ ಸಂಬಂಧ ಹೊಂದಿರುವುದು ಗುಟ್ಟಾದ ವಿಷಯವೇನೂ ಅಲ್ಲ. ಈ ಸಂಘಟನೆಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದರಲ್ಲೂ ಸಹ ಈ ಮಾಫಿಯಾ ಸಕ್ರಿಯವಾಗಿದೆ.

ಭಯೋತ್ಪಾದನೆಯ ಬೆಳವಣಿಗೆಗೆ ಜಾಗತೀಕರಣ ಪ್ರಕ್ರಿಯೆಯೂ ತನ್ನದೇ ಆದ ಕೊಡುಗೆ ನೀಡಿದೆ ಎಂದು ಹೇಳಬಹುದು. ಸಾಮ್ರಾಜ್ಯಶಾಹಿಯನ್ನು ಲೆನಿನ್ **"ಬಂಡವಾಳ ಶಾಹಿಯ ಅತ್ಯುನ್ನತ ಹಂತ"** ಎಂದು ಬಣ್ಣಿಸಿದ್ದರು. ಈ ತನ್ನ ಅತ್ಯುನ್ನತ ಹಂತದಲ್ಲಿರುವ ಬಂಡವಾಳಶಾಹಿಗೆ, ಜಾಗತೀಕರಣ ಪ್ರಕ್ರಿಯೆ ಪೂರಕವಾಗಿದ್ದು, ೭೦ರ ದಶಕದಲ್ಲಿ ಪ್ರಚಲಿತವಾಗಿದ್ದ ಸಮಾಜವಾದಿ ಚಿಂತನೆಗಳು ಇಂದು ಮರೆಯಾಗುತ್ತಿವೆ. ಪ್ರಸ್ತುತ ಜಾರಿಯಲ್ಲಿರುವ ಜಾಗತೀಕರಣದ ಮೂರನೆಯ ಹಂತದಲ್ಲಿ, ಹೆಚ್ಚು ಜನರು ದಾರಿದ್ರ್ಯತೆಗೆ ತಳ್ಳಲ್ಪಡುತ್ತಿದ್ದಾರೆ. ಒಂದು ವರದಿಯ ಪ್ರಕಾರ ಅಮೆರಿಕಾದಲ್ಲಿರುವ ಕರಿಯ ಜನಾಂಗದಲ್ಲಿ ಶೇ ೨೫ ರಷ್ಟು ಜನ ದಾರಿದ್ರ್ಯತೆ ಎದುರಿಸುತ್ತಿದ್ದಾರೆ. ಭಾರತದಲ್ಲಿನ ಪರಿಸ್ಥಿತಿ ಇನ್ನೂ ಹೀನಾಯವಾಗಿದೆ. ಸರ್ಕಾರದ ಅಂಕಿ ಅಂಶಗಳೇನೇ ಇದ್ದರೂ, ಬಡತನದ ರೇಖೆಯ ಕೆಳಗಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. ದೇಶವು ಎದುರಿಸುತ್ತಿರುವ ಕೃಷಿ ಬಿಕ್ಕಟ್ಟಿನಿಂದ ರೈತರ ಆತ್ಮಹತ್ಯೆ ಪ್ರಕರಣಗಳು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಗ್ರಾಮೀಣ ಪ್ರದೇಶಗಳಿಂದ ನಗರ, ಪಟ್ಟಣಗಳಿಗೆ ವಲಸೆ ಬರುವವರ ಸಂಖ್ಯೆ ತಾರಕಕ್ಕೇರುತ್ತಿದೆ. ಇತ್ತ ನಗರಗಳಲ್ಲಿ ಕೈಗಾರಿಕೆಗಳ ಹಿನ್ನಡೆಯಿಂದ ಉದ್ಯೋಗಾವಕಾಶಗಳು ಇಲ್ಲವಾಗುತ್ತಿವೆ. ನಿರುದ್ಯೋಗದ ಬವಣೆ ಅನೇಕ ಯುವಕರನ್ನು ಸಮಾಜಘಾತಕ ಶಕ್ತಿಗಳ ಕೈಗೊಂಬೆಗಳನ್ನಾಗಿಸಿದೆ. ಪರಿಣಾಮವಾಗಿ ನಗರ ಪ್ರದೇಶಗಳಲ್ಲಿನ ಜನ ಸಾಂದ್ರತೆ ನಿಯಂತ್ರಿಸಲು ಸಾಧ್ಯವಾಗುತ್ತಿದೆ. ಮುಂಬೈ ನಗರದ ಒಂದೂವರೆ ಕೋಟಿ ಜನರಲ್ಲಿ ಒಂದು ಕೋಟಿ ಜನ ಸ್ಲಂಗಳಲ್ಲೇ ವಾಸಿಸುತ್ತಿದ್ದಾರೆ. ಐದು ಲಕ್ಷಕ್ಕೂ ಹೆಚ್ಚು ಜನ ರಾತ್ರಿ ಫುಟ್‌ಪಾತ್ ಮೇಲೆ ಮಲಗುತ್ತಾರೆ. ಹಣಕಾಸು ಬಂಡವಾಳ ಮತ್ತು ಶೇರು ಮಾರುಕಟ್ಟೆಗಳನ್ನೇ ಅವಲಂಬಿಸುವ ಬಂಡವಾಳಶಾಹಿ ಅಭಿವೃದ್ಧಿ ಪಥವು, ಸಾಮಾನ್ಯ ಜನತೆಗೆ ದಿನಕ್ಕೆರಡು ಊಟ ಒದಗಿಸುವುದರಲ್ಲೂ ವಿಫಲವಾಗಿದೆ.

ಈ ನೊಂದ ಜನಗಳ ಆಕ್ರೋಶ, ಜಿಗುಪ್ಸೆ ಮತ್ತು ಅಸಹಾಯಕತೆಗಳೇ ಜಿಹಾದೀ ಗುಂಪುಗಳಿಗೆ, ಹಿಂದುತ್ವವಾದಿಗಳಿಗೆ, ಕೆಲವೊಮ್ಮೆ ನಕ್ಸಲ್ ವಾದಿಗಳಿಗೂ ಬಂಡವಾಳವಾಗುತ್ತಿದೆ. ಕಾಶ್ಮೀರದ ಕಣಿವೆಗಳಲ್ಲಿ ಈ ರೀತಿಯ ಅಮಾಯಕ ಯುವಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುತ್ತಿರುವ ಭಯೋತ್ಪಾದಕರು, ಈಗ ದೇಶದೆಲ್ಲೆಡೆ ಇದೇ ತಂತ್ರವನ್ನು ಉಪಯೋಗಿಸುತ್ತಿದ್ದಾರೆ. ಹಾಗಾಗಿಯೇ ಭಯೋತ್ಪಾದಕ ಚಟುವಟಿಕೆಗಳಿಗೆ ಸ್ಥಳೀಯರ ಬೆಂಬಲವೂ ಹೆಚ್ಚಾಗಿ ವ್ಯಕ್ತವಾಗುತ್ತಿದೆ. ಈ ಸತ್ಯಾಂಶವನ್ನು ನಾವು ಒಪ್ಪಿಕೊಳ್ಳದಿದ್ದಲ್ಲಿ ಸಮಸ್ಯೆಯಿಂದ ನುಣುಚಿಕೊಂಡಂತಾಗುತ್ತದೆಯಷ್ಟೆ.

ದೇಶದಲ್ಲಿ ಇಸ್ಲಾಂ ಸಂಘಟನೆಗಳ ಭಯೋತ್ಪಾದ[illegible] ಹೆಚ್ಚಾಗಲು ಮತ್ತೊಂದು ಕಾರಣ ಹಿಂದುತ್ವ ರಾಜಕೀ[illegible] ಎಂದು ಹೇಳಬಹುದು. ಜಾಗತೀಕರಣ ಪ್ರಕ್ರಿಯೆಯೊ[illegible] ಆರಂಭವಾದ ಹಿಂದುತ್ವ ಮತ್ತು ಸಂಘ ಪರಿವಾರದ [illegible] ಸಂಖ್ಯಾತವಿರೋಧಿ ರಾಜಕೀಯ ದೇಶದಲ್ಲಿನ ಅಲ್ಪಸಂ[illegible]ತರಲ್ಲಿ ಸೃಷ್ಟಿಸಿರುವ ಅಭದ್ರತಾ ಮನೋಭಾವವೂ [illegible] ಬೆಳವಣಿಗೆಗೆ ಪ್ರತ್ಯಕ್ಷ ಕಾರಣವಾಗಿವೆ. ಹಾಗೆ ನೋಡಿ[illegible] ಭಾರತಕ್ಕೆ ಭಯೋತ್ಪಾದನೆ ಹೊಸದಾದ ಸಮಸ್ಯೆಯೇನ[illegible] ಅಲ್ಲ. ಸ್ವಾತಂತ್ರ್ಯಗಳಿಸಿದ ದಿನದಿಂದಲೂ ಅಸ್ಸಾಂ, ನಾ[illegible]ಲ್ಯಾಂಡ್, ಮಿಝೋರಾಂ, ಪಂಜಾಬ್ ಮತ್ತು ಕಾಶ್ಮೀರದ[illegible] ಭಯೋತ್ಪಾದನೆ ಮತ್ತು ಹಿಂಸಾಕೃತ್ಯಗಳು ತಾಂಡವಾ[illegible]ತ್ತಿವೆ. ಆದರೆ ಈ ಎಲ್ಲಾ ಚಳುವಳಿಗಳು ಜನಪರವಾಗಿ[illegible] ಸರ್ಕಾರದ ನಿರ್ಲಕ್ಷ್ಯದಿಂದ ಉಗ್ರರೂಪ ತಳೆದವ[illegible] ಕಾಶ್ಮೀರ ಹೋರಾಟವೂ ಸಹ ಇತ್ತೀಚಿನವರೆಗೆ ಕಾಶ್ಮೀ[illegible] ಕಣಿವೆಗಳಿಗೆ ಮೀಸಲಾಗಿತ್ತು. ಆದರೆ ೧೯೯೨ ರ ಬಾ[illegible] ಮಸೀದಿಯ ಧ್ವಂಸದ ನಂತರದಲ್ಲಿ ನಡೆದ ಬೆಳವಣಿಗೆಗ[illegible] ಗುಜರಾತ್‌ನ ಹತ್ಯಾಕಾಂಡ, ಜೊತೆಗೆ ಭಾ.ಜ.ಪ ಮ[illegible] ಕಾಂಗ್ರೆಸ್ ಪಕ್ಷಗಳ ಕೋಮುವಾದಿ ರಾಜಕಾರಣ, ಇಸ[illegible] ಮೂಲಭೂತವಾದಕ್ಕೆ ಪುಷ್ಟಿ ನೀಡುವಲ್ಲಿ ಮಹತ್ತರ ಪ[illegible] ವಹಿಸಿವೆ.

ಭಯೋತ್ಪಾದಕ ಸಂಘಟನೆಗಳು ಯಾವ ರೀ[illegible] ಕಾರ್ಯ ನಿರ್ವಹಿಸುತ್ತಿವೆ, ಈ ರೀತಿಯ ಸರಣಿ ಸ್ಫೋ[illegible]ಗಳನ್ನು ಹೇಗೆ ಯೋಜಿಸಲಾಗುತ್ತದೆ, ಈ ಕೃತ್ಯಗ[illegible] ಯಾರು ಮಾನಸಿಕ, ದೈಹಿಕ ಹಾಗೂ ಹಣಕಾ[illegible] ಸಹಾಯ ನೀಡುತ್ತಿದ್ದಾರೆ. ಎಂಬ ಅಂಶಗಳನ್ನು ಬಯ[illegible]ಗೆಳೆಯುವುದು ಸರ್ಕಾರದ ಕರ್ತವ್ಯವಾಗಬೇಕಾಗಿದೆ. ಗ[illegible]ಭೆಗೆ ಅವಕಾಶ ಮಾಡಿಕೊಡದಿರಿ, ಧೈರ್ಯವಾಗಿ ಪರಿ[illegible] ಎದುರಿಸಿ, ಎಂದು ಮುಂಬೈನ ಜನತೆಗೆ ಉಪದೇ[illegible] ಮಾಡುವುದರಿಂದ ಅಥವಾ ಮುಂಬೈ ಜನತೆಯ[illegible] ಹೊಗಳೀ ಹೊನ್ನ ಶೂಲಕ್ಕೇರಿಸುವುದರಿಂದ, ಈ ಸಮ[illegible] ಬಗೆಹರಿಯಲಾರದು. ಈಗ ನಡೆದಿರುವುದು, ನಡೆಯ[illegible]ರುವುದು ಯುದ್ಧದ ಆರಂಭವಷ್ಟೇ. ನಮ್ಮ ಆಳುವ ವ[illegible]ಗಳು ಈ ಸೂಕ್ಷ್ಮವನ್ನು ಗ್ರಹಿಸಬೇಕಾಗಿದೆ. ತಮ್ಮ ರಾ[illegible]ಕೀಯ ಸ್ವಾರ್ಥಕ್ಕಾಗಿ, ಅಧಿಕಾರ ಉಳಿಸಿಕೊಳ್ಳಲು ಭೂ[illegible] ದೊರೆಗಳನ್ನು ಪೋಷಿಸಿ ಬೆಳೆಸುವ ನಮ್ಮ ರಾಜಕೀ[illegible] ಪಕ್ಷಗಳಿಗೆ, ತಮ್ಮ ತಪ್ಪುಗಳನ್ನು ಅರಿಯಲು ಇದು ಸಕಾ[illegible]ವಾಗಿದೆ. ಭಯೋತ್ಪಾದನೆಗೆ, ಕೋಮು ಗಲಭೆಗಳಿಗೆ ಬ[illegible] ಯಾಗುವ ಪ್ರತಿಯೊಂದು ಜೀವವನ್ನೂ ತಮ್ಮ ವೋ[illegible] ಬ್ಯಾಂಕಿನ ಠೇವಣಿಗಳೆಂದು ಪರಿಗಣಿಸುವ ರಾಜಕೀ[illegible] ಪಕ್ಷಗಳು, ಪರಸ್ಪರ ದೋಷಾರೋಪ ಮಾಡುವುದ[illegible] ತೊರೆದು, ಒಟ್ಟಾಗಿ ಕಾರ್ಯ ನಿರ್ವಹಿಸಿದಲ್ಲಿ ಭಯೋ[illegible]ದನೆಯನ್ನು ಹತ್ತಿಕ್ಕುವುದು ಸುಲಭವಾಗುತ್ತದೆ. ಕರ[illegible] ಶಾಸನಗಳಿಂದಾಗಲೀ, ಮಿಲಿಟರಿ ಕಾರ್ಯಾಚರಣೆಯಿ[illegible]ಗಲೀ ಅಥವಾ ಯಾವುದೇ ಒಂದು ಪಂಗಡದ ಜನರ[illegible] ದೂಷಿಸುವುದರಿಂದಾಲೀ ಈ ಸಮಸ್ಯೆ ಬಗೆಹರಿಯ[illegible]ದಿಲ್ಲ. ಸಾಮಾನ್ಯ ಜನರ ದೈನಂದಿನ ಸಮಸ್ಯೆಗಳ[illegible] ಬಗೆಹರಿಸುವುದರೊಂದಿಗೆ ಜಾಗತೀಕರಣ, ಮೂಲಭ[illegible]ವಾದ, ಫ್ಯಾಸಿಸಂ ಮತ್ತು ಹಿಂಸಾತ್ಮಕ ರಾಜಕಾರಣದಿ[illegible] ಹೆಚ್ಚಾಗುತ್ತಿರುವ ಅಭದ್ರತಾ ಮನೋಭಾವವನ್ನು ಹೊ[illegible]ಲಾಡಿಸುವುದು ಆಳುವ ವರ್ಗಗಳ ಆದ್ಯತೆಯಾಗಬೇಕಾ[illegible] ಈ ಸೂಕ್ಷ್ಮವನ್ನು ಗ್ರಹಿಸದಿದ್ದರೆ ಈ ಯುದ್ಧ ನಿರಂ[illegible]ವಾಗು ತ್ತದೆ.

ಭಯೋತ್ಪಾದಕ ಸಂಘಟನೆಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತಿವೆ, ಈ ರೀತಿಯ ಸರಣಿ ಸ್ಫೋಟಗಳನ್ನು ಹೇಗೆ ಯೋಜಿಸಲಾಗುತ್ತದೆ, ಈ ಕೃತ್ಯಗಳಿಗೆ ಯಾರು ಮಾನಸಿಕ, ದೈಹಿಕ ಹಾಗೂ ಹಣಕಾಸಿನ ಸಹಾಯ ನೀಡುತ್ತಿದ್ದಾರೆ. ಎಂಬ ಅಂಶಗಳನ್ನು ಬಯಲಿಗೆಳೆಯುವುದು ಸರ್ಕಾರದ ಕರ್ತವ್ಯವಾಗಬೇಕಾಗಿದೆ. ಗಲಭೆಗೆ ಅವಕಾಶ ಮಾಡಿ ಕೊಡದಿರಿ, ಧೈರ್ಯವಾಗಿ ಪರಿಸ್ಥಿತಿ ಎದುರಿಸಿ, ಎಂದು ಮುಂಬೈನ ಜನತೆಗೆ ಉಪದೇಶ ಮಾಡುವುದರಿಂದ ಅಥವಾ ಮುಂಬೈ ಜನತೆಯನ್ನು ಹೊಗಳೀ ಹೊನ್ನ ಶೂಲಕ್ಕೇರಿಸುವುದರಿಂದ, ಈ ಸಮಸ್ಯೆ ಬಗೆ ಹರಿಯಲಾರದು. ಈಗ ನಡೆದಿರುವುದು, ನಡೆಯುತ್ತಿರುವುದು ಯುದ್ಧದ ಆರಂಭ ವಷ್ಟೇ. ನಮ್ಮ ಆಳುವ ವರ್ಗಗಳು ಈ ಸೂಕ್ಷ್ಮವನ್ನು ಗ್ರಹಿಸಬೇಕಾಗಿದೆ. ನಮ್ಮ ಆಳುವ ವರ್ಗಗಳು ಈ ಸೂಕ್ಷ್ಮವನ್ನು ಗ್ರಹಿಸಬೇಕಾಗಿದೆ. ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ, ಅಧಿಕಾರ ಉಳಿಸಿಕೊಳ್ಳಲು ಭೂಗತ ದೊರೆಗಳನ್ನು ಪೋಷಿಸಿ ಬೆಳೆಸುವ ನಮ್ಮ ರಾಜಕೀಯ ಪಕ್ಷಗಳಿಗೆ, ತಮ್ಮ ತಪ್ಪುಗಳನ್ನು ಅರಿಯಲು ಇದು ಸಕಾಲವಾಗಿದೆ.

ಹೊಸ ದಿಗಂತಕ್ಕೆ ಕನ್ನಡ ಕಾವ್ಯವನ್ನು ಕೊಂಡೊಯ್ದ ಸ್ಪ್ಯಾನಿಷ್ ಕವಿ ರೊವೀನಾ ಹಿಲ್

ಯುರೋಪಿಯನ್ನರು ನಾಲ್ಕು, ಐದು ಶತಮಾ ಳ ಹಿಂದೆಯೆ ವಸಾಹತುಗಳನ್ನು ಹುಡುಕಿ ಕೊಂಡು ರನೇ ಜಗತ್ತಿನತ್ತ ಹೊರಟರು. ಇವರು ಕೇವಲ ಪಾರಕ್ಕಾಗಿ ಹೊರಟವರಲ್ಲ. ತಮ್ಮ ಧರ್ಮ, ಭಾಷೆ ತ್ತು ಸಂಸ್ಕೃತಿಗಳನ್ನು ಜೊತೆಗೆ ಕೊಂಡೊಯ್ದರು. ಇವು ಲ್ಲಿ ಇಂಗ್ಲೀಷ್, ಸ್ಪ್ಯಾನಿಷ್ ಮತ್ತು ಫ್ರೆಂಚ್ ಭಾಷೆ ಗಳು ಂಚದ ಬಹು ಭಾಗವನ್ನು ಆಕ್ರಮಿಸಿಕೊಂಡವು. ಗ್ಲೀಷ್ ಏಷ್ಯಾ ಮತ್ತು ಆಸ್ಟ್ರೇಲಿಯಾ ಖಂಡಗಳನ್ನು ಮಿಸಿಕೊಂಡರೆ, ಫ್ರೆಂಚ್ ದಕ್ಷಿಣ ಆಫ್ರಿಕಾವನ್ನು, ಸ್ಪ್ಯಾನಿಷ್ ಣ ಅಮೆರಿಕಾವನ್ನು ಆಕ್ರಮಿಸಿಕೊಂಡವು. ಮ್ಯಾಂಡರಿನ್ ಷೆ ಜಗತ್ತಿನ ಅತಿ ಹೆಚ್ಚು ಜನರು ಮಾತನಾಡುವ ಭಾಷೆ. ು ಚೈನಾ ಮತ್ತು ತೈವಾನ್ ದೇಶಗಳಲ್ಲಿ ಬಳಸಲ್ಪಡು ಚೈನಾ ದೇಶದ ಜನಸಂಖ್ಯೆಯ ದೃಷ್ಟಿಯಿಂದ ಅದು ಹೆಚ್ಚು ಜನ ಬಳಸುವ ಭಾಷೆ ಎಂದು ಕರೆಸಿ ಡಿದೆ. ಇದನ್ನು ಬಿಟ್ಟರೆ ಇಂಗ್ಲೀಷ್‌ಗಿಂತಲೂ ಹೆಚ್ಚಾಗಿ ಸಲ್ಪಡುವ ಭಾಷೆ. ಸ್ಪ್ಯಾನಿಷ್. ದಕ್ಷಿಣ ಅಮೆರಿಕಾದ ಕ ದೇಶಗಳಲ್ಲಿ ಇದು ರಾಷ್ಟ್ರ ಭಾಷೆ. ಇಂತಹ ಭಾಷೆಗೆ ಕನ್ನಡ ಕಾವ್ಯವು ಪ್ರವೇಶಿಸಿದೆ ಎನ್ನುವುದು ಸಾವಿರ ಗಳಷ್ಟು ಹಳೆಯದಾದ ಕನ್ನಡ ಸಾಹಿತ್ಯಕ್ಕೆ ಸಂದ ವವಾಗಿದೆ.

ಪ್ರೊ॥ ರೊವೀನಾ ಹಿಲ್ ಅವರಿಗೆ ಭಾರತವೆಂದರೆ . ಅದರಲ್ಲೂ ಮೈಸೂರು ಅಚ್ಚು ಮೆಚ್ಚು. ಅವರು ದ್ದು ಇಂಗ್ಲೆಂಡಿನ ವೇಲ್ಸ್ ನಗರದಲ್ಲಿ ೧೯೩೮ರಲ್ಲಿ. ೆ ಮದುವೆಯಾದದ್ದು ವೆನಿಜುಯೇಲಾ ದೇಶದ ರಿಕನೊಂದಿಗೆ. ಅಲ್ಲಿನ ಮೆರಿಡಾ ನಗರದಲ್ಲಿರುವ ಡಿಸ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ೧೯೮೨ ರಲ್ಲಿ .ಯು.ಆರ್.ಅನಂತಮೂರ್ತಿ, ಸಿ.ಡಿ.ಎನ್, ಲಂಕಿ ರಾಮಮೂರ್ತಿ ಇಂಥವರ ವಿದ್ಯಾರ್ಥಿಯಾಗಿ ು ಮತ್ತೊಂದು ಇಂಗ್ಲೀಷ್ ಎಂ.ಎ., ಪದವಿ ಪಡೆ ಮೈಸೂರಿನಲ್ಲಿ. ಆಗಿನಿಂದಲೂ ಆಗೀಗ ಮೈಸೂರಿಗೆ ು ಹಲವಾರು ತಿಂಗಳುಗಳು ಇದ್ದು ಹೋಗುವ ಪರಿ ವನ್ನು ಬೆಳೆಸಿಕೊಂಡಿದ್ದಾರೆ. ಕನ್ನಡದಿಂದ ಕೊಡು ವ ಕಾರ್ಯವನ್ನು ಮುಂದುವರೆಸಿದ್ದಾರೆ.

ಸ್ವತ: ಸ್ಪ್ಯಾನಿಷ್ ಕವಿಯಾದ ಇವರು ತಮ್ಮ ಮಾತೃ ಯಾದ ಇಂಗ್ಲೀಷಿನಲ್ಲಿಯೂ ಬರೆಯುತ್ತಾರೆ. ಇವೆ ಭಾಷೆಗೆ ಆದಾನ ಪ್ರದಾನ ಮಾಡುವ ಕಾಯಕವನ್ನು ಕುತ್ತಲೇ ಬಂದಿದ್ದಾರೆ. ಇಂಡಿಯಾ ಭೇಟಿಗಳಲ್ಲಿ ು ಬರೆದ ಇಂಗ್ಲೀಷ್ ಕವಿತೆಗಳನ್ನು (Womb of ves) ಪ್ರೊ.ಸಿ.ನಾಗಣ್ಣ 'ನನ್ನ ಕಣ್ಣಿನ ಬಸಿರು' ಎಂಬ ಕೆಯಲ್ಲಿ ಕನ್ನಡಕ್ಕೆ ತಂದಿದ್ದಾರೆ. ಮೈಸೂರಿಗೆ ಬಂದ ಕನ್ನಡ ಕಾವ್ಯಕ್ಕೆ ಆಕರ್ಷಿತರಾದ ರೊವೀನಾ ಹಿಲ್ ದ ಅನೇಕ ಗಣ್ಯ ಕವಿಗಳನ್ನು ಸ್ಪ್ಯಾನಿಷ್‌ಗೆ ಅನುವಾದಿ ಅಪರೂಪದ ಕೆಲಸವನ್ನು ಮಾಡಿದ್ದಾರೆ. ಇಂಗ್ಲೀಷ್ ಮಿತ್ರರ ಸಹಾಯ ಪಡೆದು ಮಾಡಿದ್ದಾರೆ ಎಂಬು

ದನ್ನು ಹೇಳಬೇಕಾಗಿಲ್ಲವಷ್ಟೆ. ಕುಮಾರವ್ಯಾಸನ 'ಕರ್ನಾಟಕ ಭಾರತ'ದ ಕೆಲಭಾಗಗಳನ್ನು ನಮ್ಮ ಕಾಲದ ಖ್ಯಾತ ವಿಮರ್ಶಕ ಡಾ.ಕೀರ್ತಿನಾಥ ಕುರ್ತುಕೋಟಿಯವರ ಜೊತೆಗೆ ಕುಳಿತು ಮಾಡಿದ್ದಾರೆ ಎಂದ ಮೇಲೆ ಅನುವಾದ ಕುರಿತು ಸಂಶಯಪಡುವ ಅವಕಾಶವಿಲ್ಲ. ಹಾಗೆಯೇ ಮೈಸೂರಿನ ವಿಮರ್ಶಕ ಕೆ.ಪಿ.ವಾಸುದೇವನ್ ಅವರ ಸಹಾಯ ಪಡೆದು ಕುವೆಂಪು, ಬೇಂದ್ರೆ, ಅಡಿಗ, ಚಿತ್ತಾಲ, ಕೆ.ಎಸ್.ನ, ಲಂಕೇಶ್, ಕಂಬಾರ, ಚಂಪಾ ಇಂತಹ ಖ್ಯಾತ ನಾಮರನ್ನು ಸ್ಪ್ಯಾನಿಷ್‌ಗೆ ಪರಿಚಯಸಿದ್ದಾರೆ. ಅದು ಪೊಯೆಸಿಯಾ ಕನ್ನಡ ಸಂಕಲನವಾಗಿ ಹೊರಬಂದಿದೆ. ಈಗಾಗಲೇ ಮತ್ತೊಬ್ಬ ಹಿರಿಯ ಮುತ್ಸದ್ದಿ ಲೇಖಕ ಡಾ॥

ಪ್ರೊ॥ ರೊವೀನಾ ಹಿಲ್ ಅವರಿಗೆ ಭಾರತವೆಂದರೆ ಪ್ರಾಣ. ಅದರಲ್ಲೂ ಮೈಸೂರು ಅಚ್ಚು ಮೆಚ್ಚು. ಅವರು ಹುಟ್ಟಿದ್ದು ಇಂಗ್ಲೆಂಡಿನ ವೇಲ್ಸ್ ನಗರದಲ್ಲಿ ೧೯೩೮ ರಲ್ಲಿ. ಆದರೆ ಮದುವೆಯಾದದ್ದು ವೆನಿಜುಯೇಲಾ ದೇಶದ ನಾಗರಿಕನೊಂದಿಗೆ. ಅಲ್ಲಿನ ಮೆರಿಡಾ ನಗರದಲ್ಲಿರುವ ಆ್ಯಂಡಿಸ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ೧೯೮೨ ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ಎಂ.ಎ. ಪದವಿ ಪಡೆದರು.

ಪ್ರಭುಶಂಕರ ಅವರೊಡನೆ ಜತೆಯಾಗಿ ೧೦೧ ವಚನಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ.

ರೊವೀನಾ ಹಿಲ್ ಭಾರತೀಯ ಸಂಸ್ಕೃತಿಯ ಸಂಕೀರ್ಣತೆಯನ್ನು ಚೆನ್ನಾಗಿ ಬಲ್ಲವರು. ಇಲ್ಲಿನ ಪಾರಂಪರಿಕ ಕಲೆ, ಸಂಸ್ಕೃತಿಯನ್ನು ಎಲ್ಲಾ ಪಾಶ್ಚಾತ್ಯರಂತೆ ಹಾಡಿ ಹೋಗುಳುತ್ತಾರಾದರೂ ಜನರ ಜೀವನ ಮೌಲ್ಯಗಳ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಬಲ್ಲರು. ಜಾತಿ ಪದ್ಧತಿಯನ್ನು ಕುರಿತ ಅವರ ಅಸಹನೆ ತೀವ್ರತರವಾದದ್ದು. ಆದ್ದರಿಂದಲೇ ಅವರು ತಮ್ಮ ಇತ್ತೀಚಿನ ಭೇಟಿಯಲ್ಲಿ Subaltern ಸಂಸ್ಕೃತಿಯತ್ತ ಹೆಚ್ಚು ಗಮನ ನೀಡುತ್ತಿದ್ದಾರೆ. ೨೦೦೨ನೇ ಇಸ್ವಿಯಲ್ಲಿ ಕೊಲಂಬಿಯಾ ದೇಶದ ಆರ್‌ಕ್ವಿಟ್ರೇವ್ ಎಂಬ ಸಾಹಿತ್ಯಿಕ ಪತ್ರಿಕೆ ಇವರನ್ನು ಭಾರತದ ವಿಶಿಷ್ಟ ಸಂವೇದನೆಯುಳ್ಳ ಕವಿತೆಗಳನ್ನು ಅನುವಾದಿಸಿ ಕೊಡಬೇಕೆಂದು ಕೇಳಿಕೊಂಡಾಗ ಇವರು ಆರಿಸಿ ಕೊಳ್ಳಬಯಸಿದ್ದು ದಲಿತ ಕವಿಯೊಬ್ಬನನ್ನು. ಅದು ಹೇಗೋ ಅವರ ಹುಡುಕಾಟದಲ್ಲಿ ನಾನೇ ಸಿಕ್ಕಿ ಬಿದ್ದೆ. ಪತ್ರಿಕೆಗಾಗಿ ಕೇವಲ ಹತ್ತು ಕವಿತೆಗಳನ್ನು ಅನುವಾದ ಮಾಡಹೊರಟ ಅವರು, ಓದುತ್ತಾ ಹೋದಂತೆ ೨೬ ಪದ್ಯಗಳನ್ನು ಮಾಡಿದ್ದರು. ಪ್ರತಿ ಪದ್ಯದ ಅನುವಾದ ಮುಗಿದಾಗಲು ಮುಖ ಕಿವುಚಿಕೊಂಡು, ಹೊಟ್ಟೆ ಹಿಡಿದುಕೊಂಡು ಖಿನ್ನರಾಗಿ ಸ್ವಲ್ಪ ಹೊತ್ತು ಕುಳಿತು ಬಿಡುತ್ತಿದ್ದರು. ಮನುಷ್ಯರಾದವರು ಹೀಗೂ ಬದುಕಲು ಸಾಧ್ಯವೆ ಎಂದು ಅವರದೇ ಶೈಲಿಯಲ್ಲಿ ಉದ್ಗರಿಸುತ್ತಿದ್ದರು. ನನ್ನ ಅನುಭವಗಳು ಅವರನ್ನು ಆಳವಾಗಿ ಕಲಕುತ್ತಿದ್ದವು. ಈಗ ಅದು ೪೦ ಕವಿತೆಗಳುಳ್ಳ 'ಪೊಯಮಾಸ್ ಮೂಡ್ನಾ ಕೂಡು ಚಿನ್ನಸ್ವಾಮಿ' ಎಂಬ ಸಂಕಲನವಾಗಿ ಹೊರ ಬಂದಿದೆ.

ರೊವೀನಾ ಹಿಲ್ ಮತ್ತೆ ಮೈಸೂರಿನಲ್ಲಿದ್ದಾರೆ. ೨೦೦೫ ರಲ್ಲಿ ಜಾಗತಿಕ ಕವಿಗಳ ಮಾಲಿಕೆ (World Poetry series) ಅಡಿಯಲ್ಲಿ ವೇನಿಜುಯೇಲಾ ಸರ್ಕಾರ "ಪೊಯೆಸಿಯಾ ಕನ್ನಡ" ಮತ್ತು "ಪೊಯೆಮಾಸ್ ಮೂಡ್ನಾಕೂಡು ಚಿನ್ನಸ್ವಾಮಿ" ಕವಿತಾ ಸಂಕಲನಗಳನ್ನು ಪ್ರಕಟಿಸಿತು. ಈಗ ರೊವೀನಾ ಹಿಲ್ ರವರ ಉಪಸ್ಥಿತಿಯಲ್ಲಿ ಅವುಗಳನ್ನು ಸಾಂಕೇತಿಕವಾಗಿ ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದ ಕನ್ನಡ ಪುಸ್ತಕ ಪ್ರಾಧಿಕಾರ ಅಭಿನಂದನಾರ್ಹವಾಗಿದೆ. ಹುಟ್ಟಿನಿಂದ ಕೆಥೊಲಿಕರಾದ ರೊವೀನಾ ಸದ್ಯ ಬೌದ್ಧ ತತ್ತ್ವದ ಪರಿಪಾಲಕರು ಎಂದರೆ ಅಚ್ಚರಿಯಾಗುತ್ತದೆ. ಅವರು ಇಂಡಿಯಾದತ್ತ ಪಯಣ ಬೆಳೆಸುವಾಗಲೆಲ್ಲಾ ಒಂದಲ್ಲ ಒಂದು ಬೌದ್ಧ ರಾಷ್ಟ್ರವನ್ನು ಭೇಟಿ ಮಾಡಿಯೇ ಬರುತ್ತಾರೆ. ಈ ಬಾರಿ ಟಿಬೆಟ್ ಅವರ ಆಸಕ್ತಿಯ ಕೇಂದ್ರವಾಗಿತ್ತು. ಇಲ್ಲಿಂದ ಹಿಂದಿರುಗುವಾಗ ವಿಯೆಟ್ನಾಮಿಗೆ ತೆರಳಿ ಅಲ್ಲಿನ ಒಬ್ಬ ಶ್ರೇಷ್ಠ ಕವಿಯನ್ನು ಅನುವಾದಿಸಿ ಜಗತ್ತಿಗೆ ಪರಿಚಯಿಸಲಿದ್ದಾರೆ.

ಡಾ. ಮೂಡ್ನಾಕೂಡು ಚಿನ್ನಸ್ವಾಮಿ

ತಳಸ್ತರದ ರಾಜಕಾರಣ, ಅಂಬೇಡ್ಕರ್‌ರ ಆಧ್ಯಾತ್ಮಿಕ ತತ್ವ ಮತ್ತು ರಾಜಕೀಯದಲ್ಲಿ ನೈತಿಕತೆ

ಜಿ. ಯು. ಸುಮಾ

೨೦ನೇ ಶತಮಾನದಲ್ಲಿ ಡಾ॥ ಅಂಬೇಡ್ಕರ್ ಬೌದ್ಧತ್ವದತ್ತ ನಿಧಾನವಾಗಿ ಸರಿಯುತ್ತಾ, ಆಧುನಿಕ ಧರ್ಮೀಯ ರಾಜಕಾರಣ, ಅಧಿಕಾರ ರಾಜಕಾರಣ ಮತ್ತು ಬಂಡವಾಳಶಾಹಿ ಮನೋಭಾವನೆ ಉಂಟು ಮಾಡುವ ವಿಕ್ಷಿಪ್ತತೆಗಳಿಗೆ ಅತ್ಯಂತ ಪ್ರಬಲವಾಗಿ, ಬೌದ್ಧ ತಾತ್ವಿಕತೆಯನ್ನು ಮಂಡಿಸಿದ್ದು, ಅದನ್ನು ಸ್ಥಾಪಿಸಲೇಬೇಕೆಂಬ ಹಠದಿಂದ, ಅದನ್ನು ಧರ್ಮದ ರೂಪದಲ್ಲಿ ಆಚರಣೆಗೆ ತಂದು ಆಲಿಂಗಿಸಿಕೊಂಡಿದ್ದು ಕೇವಲ ಆಕಸ್ಮಿಕವಾದ ಸಂಗತಿಯಾಗಿರಲಿಲ್ಲ ಎಂದು ಹೇಳುವುದಕ್ಕೆ ಅಂಬೇಡ್ಕರ್, ಕಬೀರನ ಅಭಂಗಗಳ ಜೊತೆಯಲ್ಲಿ ಬೆಳೆದವರು. ಅನುಭಾವಿ ಪಂಥದ ಕಬೀರ ಅದರ ಸತ್ವವನ್ನು ಮೈಗೂಡಿಸಿಕೊಂಡಿದ್ದ, ಕಾಲದ ಪದರುಗಳಲ್ಲಿ ಪದೇ ಪದೇ ಪುನರ್ರಚನೆಯಾಗುತ್ತಿದ್ದ ಬುದ್ಧ ಪ್ರತಿಪಾದಿಸಿದ ಬದುಕಿನ ಕ್ರಮವೊಂದನ್ನು, ಅಂಬೇಡ್ಕರ್ ಹೊಸ ಭಾಷ್ಯದೊಂದಿಗೆ ಪುನರ್ ಸ್ಥಾಪಿಸಿದರು.

ಕನ್ನಡದ ಎರಡು ಮೌಖಿಕ ಕಥನಗಳು ತಳಸ್ತರದ ಹೋರಾಟಕ್ಕೆ ಸಂಬಂಧಪಟ್ಟವು. ಇವು ಯಾಜಮಾನ್ಯ ವರ್ಗದ ಅಧಿಕಾರದ ಸಂರಚನೆಗಳಿಗೆ ಉಗ್ರವಾಗಿ ಪ್ರತಿಕ್ರಿಯಿಸುತ್ತಾ, ಅಸ್ಖಲಿತ ಪ್ರಯತ್ನ ಮತ್ತು ಅಪಾರವಾದ ತಾದಾತ್ಮ್ಯತೆಯಿಂದ ಅದರ ಎದುರಿಗೆ ಪರ್ಯಾಯವನ್ನು ಕಟ್ಟುತ್ತಾ ಹೋಗುತ್ತವೆ. ಪರ್ಯಾಯವನ್ನು ಕಟ್ಟುವ ಈ ಪ್ರಕ್ರಿಯೆಯಲ್ಲಿ ಉಜ್ವಲವಾದ ಒಂದು ಆಧ್ಯಾತ್ಮಿಕ ತತ್ವ ರೂಪುಗೊಳ್ಳುತ್ತಾ ಹೋಗುತ್ತದೆ. ಖಚಿತವಾದ ಸಮಾಜೊ-ರಾಜಕೀಯ ಉದ್ದೇಶಗಳನ್ನು ಹೊಂದಿದ್ದ ಈ ಸಂಘರ್ಷ ಆಧ್ಯಾತ್ಮಿಕ ದ್ರವ್ಯದ ಮೂಲಕ ಅದಕ್ಕೆ ಹೊಸ ರೀತಿಯ ಸತ್ವ ಮತ್ತು ತೇಜಸ್ಸನ್ನು ತುಂಬುತ್ತದೆ. ಬಹುಮುಖಿ ಆಯಾಮವನ್ನು ಹೊಂದಿರುವ, ಮೇಲುವರ್ಗ ಮತ್ತು ಯಾಜಮಾನ್ಯ ವರ್ಗದ ಸಹಯೋಗದಿಂದ ಸಂರಚನೆಗೊಂಡಿದ್ದ ಎಲ್ಲಾ ರೀತಿಯ ಸಾಮಾಜಿಕ-ರಾಜಕೀಯ ದಿಗ್ಬಂಧನಗಳ ಅಹಂಕಾರದ ಗೋಣನ್ನು ಮುರಿಯಬಲ್ಲ ಈ ತತ್ವದ ಮೂಲ ದ್ರವ್ಯ ಬೌದ್ಧ ಧರ್ಮದ ಕಾಣ್ಕೆಗಳ ರೂಪಾಂತರವಾಗಿವೆ.

ಇದನ್ನು ಇನ್ನಷ್ಟು ವಿವರವಾಗಿ ಹೇಳುವುದಾದರೆ, ಈ ಎರಡೂ ಮೌಖಿಕ ಕಥನಗಳು, ಸ್ಥಾಪಿತವಾದ, ಸಾಂಸ್ಥೀಕರಣಗೊಂಡ, ಹೆಚ್ಚು ಕಡಿಮೆ ಪುರೋಹಿತಶಾಹಿಯ ಇನ್ನೊಂದು ಮುಖವೇ ಆಗಿಬಿಟ್ಟಿದ್ದ ಬಸವ ತತ್ವನ್ನು ಅತ್ಯಂತ ನಿಷ್ಠುರವಾಗಿ ವಿಮರ್ಶಿಸುತ್ತಾ, ಅದರ ಚರಿತ್ರೆಯ ಎದುರಿಗೆ ಅಲ್ಲಮತ್ವವನ್ನು ಇಡುತ್ತವೆ. ಅಲ್ಲಮತ್ವ ಎನ್ನುವುದು ಭಾರತದ ಮಧ್ಯಕಾಲೀನ ಪೂರ್ವದ ಬೌದ್ಧತ್ವವೇ. ಕ್ರಿ.ಶ. ೩ನೇ ಶತಮಾನದಲ್ಲಿ ಬದುಕಿದ್ದ ಬೌದ್ಧ ಧರ್ಮದ ಪ್ರಮುಖ ತತ್ವಜ್ಞ, ಚಿಂತಕ ನಾಗಾರ್ಜುನ್‌ನ 'ಮಾಧ್ಯಮಿಕಕಾರಿಕ'ದ ತಾತ್ವಿಕತೆಗಳು ಅಲ್ಲಮನ ವಚನಗಳಲ್ಲಿ ಪ್ರತಿಮಾವಳಿಗಳಾಗಿ ವ್ಯಕ್ತವಾಗುತ್ತವೆ. ಅಲ್ಲಮ ಕೂಡ ತಳಸ್ತರದ ವಚನಕಾರ ಎಂಬ ಮಾತಿದೆ. ತನ್ನ ಕಾಲಘಟ್ಟದಲ್ಲಿ ಅತ್ಯಂತ ಪ್ರತಿಷ್ಠಿತವಾಗಿ ಪ್ರತಿಷ್ಠಾಪಿತವಾಗಿದ್ದ ಬಸವಣ್ಣನೊಂದಿಗೆ ವಿಭಿನ್ನವಾದ ಸೈದ್ಧಾಂತಿಕ ನೆಲೆಯಿಂದ ಅಲ್ಲಮ ಮುಖಾಮುಖಿಯಾಗುತ್ತಾನೆ. ಹಾಗೆಂದ ಮಾತ್ರಕ್ಕೆ ಬಸವಣ್ಣ ಬೌದ್ಧ ಚಿಂತನೆಗಳಿಂದ ದೂರ ಸರಿದಿದ್ದ ಎಂದು ಅರ್ಥವಲ್ಲ. ಬದಲಿಗೆ, ತನ್ನ ಕಾಲಘಟ್ಟದಲ್ಲೇ ಸಾಂಸ್ಥೀಕರಣಗೊಳ್ಳಲಾರಂಭಿಸಿದ್ದ ಬಸವತ್ವವನ್ನು ಅಲ್ಲಮ ಪ್ರಶ್ನಿಸಿ, ವಿರೋಧಿಸುತ್ತಾನೆ.

ಅಲ್ಲಮನಲ್ಲದೆ ಇತರ ವಚನಕಾರರ ಮೂಲಕ ಹರಿದು ಬಂದ ಬೌದ್ಧತ್ವದ ಈ ಧಾರೆ, ಮುಂದೆ ವಸಾಹತುಶಾಹಿ ಕಾಲಘಟ್ಟದಲ್ಲಿ ಮತ್ತಷ್ಟು ಮಾನವೀಯವಾಗಿ, ಸರಳವಾಗಿ, ಜೀವನ್ಮುಖಿಯಾಗಿ ವಿಸ್ತರಿಸತೊಡಗಿದೆ. ತತ್ವಪದಕಾರರೂ ಬಸವತ್ವಕ್ಕಿಂತ ಹೆಚ್ಚಾಗಿ ಅಲ್ಲಮತ್ವವನ್ನು ಆಶ್ರಯಿಸುತ್ತಾರೆ. ಇದೇ ಕಾಲಘಟ್ಟದ ಸೂಫಿ ಸಂತರ ರಚನೆಗಳಲ್ಲೂ ಅಲಂಪ್ರಭುವಿಗೆ ಪ್ರಭುತ್ವ ಪ್ರಾಪ್ತವಾಗುತ್ತದೆ. ತತ್ವಪದಕಾರರದಲ್ಲಿ ಕೂಡ, ಹೆಚ್ಚಿನವರು ಕೆಳವರ್ಗದವರೇ ಆಗಿದ್ದರು ಎನ್ನುವುದು ಬಹುಮುಖ್ಯವಾದ ಸಂಗತಿಯಾಗಿದೆ. ವಾಸ್ತವವಾಗಿ ಬೌದ್ಧ ತತ್ವದ ಧಾರೆಗಳನ್ನು ಧರಿಸಿಕೊಂಡಿದ್ದ ತತ್ವಪದಕಾರರನ್ನು ಹಿಂದೂ-ಮುಸ್ಲಿಮರೆಂದು ವಿಭಜಿಸಿ ನೋಡುವುದಕ್ಕೆ ಸಾಧ್ಯವಿಲ್ಲ. ಇದು ನಿರ್ಲಕ್ಷಿಸಲು ಸಾಧ್ಯವೇ ಆಗದಿರುವಂಥ ಸಂಗತಿ. ಈ ಲೇಖನದ ಕೊನೆಯ ಭಾಗಕ್ಕೆ ಬಂದಾಗ, ಇದು ಮಹತ್ವಪೂರ್ಣವಾದ ಸಮಾಜೊ-ರಾಜಕೀಯ ವಿಷಯವಾಗುವುದರಿಂದ, ಮೊದಲೇ ಈ ವಿಚಾರವನ್ನು ಸೂಚಿಸಬೇಕಾಯಿತು.

* *

ಭಾರತೀಯ ಸಂಸ್ಕೃತಿಯ ಆಳದಲ್ಲಿ ಬೌದ್ಧತ್ವ ಅಂತರ್ಜಲ ರೂಪದಲ್ಲಿ ಹರಿಯುತ್ತಲೇ ಬಂದಿರುವುದರ ಬಗ್ಗೆ ಒಂದಿಷ್ಟು ವಿವ ವಾಗಿ ಹೇಳುವ ಅಗತ್ಯ ಏಕೆ ಉಂಟಾಯಿತೆಂದರೆ, ೨೦ನೇ ಶತಮಾ ದಲ್ಲಿ ಡಾ॥ ಅಂಬೇಡ್ಕರ್ ಬೌದ್ಧತ್ವದತ್ತ ನಿಧಾನವಾಗಿ ಸರಿಯುತ ಆಧುನಿಕ ಧರ್ಮೀಯ ರಾಜಕಾರಣ, ಅಧಿಕಾರ ರಾಜಕಾರಣ ಮ ಬಂಡವಾಳಶಾಹಿ ಮನೋಭಾವನೆ ಉಂಟು ಮಾಡುವ ವಿಕ್ಷಿಪ್ತತೆಗಳ ಅತ್ಯಂತ ಪ್ರಬಲವಾಗಿ, ಬೌದ್ಧ ತಾತ್ವಿಕತೆಯನ್ನು ಮಂಡಿಸಿದ್ದು, ಅದನ ಸ್ಥಾಪಿಸಲೇಬೇಕೆಂಬ ಹಠದಿಂದ, ಅದನ್ನು ಧರ್ಮದ ರೂಪದಲ್ಲಿ ಆ ರಣೆಗೆ ತಂದು ಆಲಿಂಗಿಸಿಕೊಂಡಿದ್ದು ಕೇವಲ ಆಕಸ್ಮಿಕವಾದ ಸಂಗ ಯಾಗಿರಲಿಲ್ಲ ಎಂದು ಹೇಳುವುದಕ್ಕೆ ಅಂಬೇಡ್ಕರ್, ಕಬೀರನ ಅಭಂ ಗಳ ಜೊತೆಯಲ್ಲಿ ಬೆಳೆದವರು. ಅನುಭಾವಿ ಪಂಥದ ಕಬೀರ ಅದ ಸತ್ವವನ್ನು ಮೈಗೂಡಿಸಿಕೊಂಡಿದ್ದ, ಕಾಲದ ಪದರುಗಳಲ್ಲಿ ಪದೇ ಪದ ಪುನರ್ರಚನೆಯಾಗುತ್ತಿದ್ದ ಬುದ್ಧ ಪ್ರತಿಪಾದಿಸಿದ ಬದುಕಿನ ಕ್ರಮ ವೊಂದನ್ನು, ಅಂಬೇಡ್ಕರ್ ಹೊಸ ಭಾಷ್ಯದೊಂದಿಗೆ ಪುನರ್‌ಸ್ಥಾಪಿ ದರು. ಇದು ಆಕಸ್ಮಿಕವಾದ, ಅನಿವಾರ್ಯವಾದ ಆಯ್ಕೆಗಿಂತ ಹೆಚ್ಚಾ ತಳಸ್ತರದ ದಾರ್ಶನಿಕ ಪ್ರಜ್ಞೆಯುಳ್ಳ ನೇತಾರನ ಅಧಿಕೃತವಾದ ಹಕ್ಕುದ ರಿಕೆಯನ್ನು ತನ್ನದಾಗಿಸಿಕೊಂಡ ಅತ್ಯಂತ ಸಹಜವಾದ ಕ್ರಿಯೆಯ ಗಿತ್ತು. ಆದ್ದರಿಂದ, ಇದು ಕಳ್ಳುಬಳ್ಳಿಯ ಸಂಬಂಧವನ್ನು ಅಂತಃಕರ ದಿಂದ ಅಪ್ಪಿಕೊಂಡ ಆಪ್ಯಾಯತೆಯಷ್ಟೆ ಅರ್ಥಪೂರ್ಣವಾದುದು.

* *

ತಳಸ್ತರದ ಚಳುವಳಿಗಳು ಮತ್ತು ರಾಜಕಾರಣ ರೂಪ ಗೊಂಡಿದ್ದೇ ಅಂಬೇಡ್ಕರ್‌ರ ಸಮಾಜೊ-ರಾಜಕೀಯ ಐಡಿಯ ಲಜಿಯ ಆಧಾರದ ಮೇಲೆ ಶ್ರೇಣೀಕೃತ ಸಮಾಜದ ವಿರೋ ಸಾಮಾಜಿಕ ನ್ಯಾಯ, ಹಿಂದುತ್ವದ ಅಮಾನವೀಯತೆ, ಆರ್ಥಿಕ ಸಮ ನತೆಯ ಉಗ್ರ ಹಕ್ಕೊತ್ತಾಯದ ಸಂಘರ್ಷದಲ್ಲಾಗಲಿ ಮತ್ತು ಸಂವಿಧ ನವನ್ನು ರೂಪಿಸುವಲ್ಲಿ ಮಂಡಿಸಿದ ಸ್ವಾತಂತ್ರ್ಯ, ಸಮಾನತೆ ಮ ಸೋದರೆ ಮೇಲ್ನೋಟಕ್ಕೆ ಪಾಶ್ಚಾತ್ಯ ಆಧುನಿಕ ಜ್ಞಾನ ಪ್ರಣೀತ ಪ ಕಲ್ಪನೆಗಳೆಂದು ಕಂಡರೂ, ಇವುಗಳ ರೂಪಣೆಯ ಹಿಂದೆಯೂ ಬೌ ತತ್ವದ ಪ್ರೇರಣೆಗಳೇ ಕಂಡುಬರುತ್ತವೆ. "ಆಧುನಿಕ ಯುಗದಲ್ಲಿನ ಸಂ ತ್ತುಗಳು ಯಾವ ವಿಧಿವಿಧಾನಗಳನ್ನು ಅನುಸರಿಸಿ ರಚನೆಯಾ ತ್ತದೆಯೋ, ಬೌದ್ಧ ಭಿಕ್ಷು ಸಂಘಗಳು ಕೂಡ ಅದೇ ಬಗೆಯ ವಿಧಿ ಧಾನಗಳನ್ನು ಆಧರಿಸಿ ಕಾರ್ಯ ನಿರ್ವಹಿಸುತ್ತಿದ್ದವು." ಪ್ರಜಾಪ್ರಭುತ್ವ ವ್ಯವಸ್ಥೆ ಎನ್ನವುದು ಅತ್ಯಂತ ಅರ್ಥಪೂರ್ಣವಾಗಿ ಬೌದ್ಧ ಭಿಕ್ಷುಗ ಸಂಘದಲ್ಲಿ ಅಸ್ತಿತ್ವದಲ್ಲಿದ್ದುದ್ದನ್ನು ಅಂಬೇಡ್ಕರ್ ಗುರುತಿಸುತ್ತಾರ ಭಾರತ ಸರ್ಕಾರಕ್ಕೆ ಸಂವಿಧಾನವನ್ನು ಅರ್ಪಿಸುವಾಗ, ಅತ್ಯಂತ ಪ್ರಾಚ ನವಾದ, ಜೀವಂತವಾದ ಬದುಕಿನ ಸೆಲೆಗಳನ್ನು ಆಧುನಿಕ ಯುಗ ಆಶಯದ ಜೊತೆಗೆ ಬೆಸೆದ ಬಗ್ಗೆ ಅಂಬೇಡ್ಕರ್ ಸ್ಪಷ್ಟವಾಗಿ ಹೇ ತ್ತಾರೆ.[೩] ಆದ್ದರಿಂದ, ಅಂಬೇಡ್ಕರ್ ಸಾಮಾಜಿಕ ರಾಜಕೀಯ, ಆರ್ಥಿ ಚಿಂತನೆಗಳನ್ನು ಬೌದ್ಧ ತತ್ವ ಪ್ರೇರಿತ ಆಧ್ಯಾತ್ಮಿಕ ಆಯಾಮಗಳು ಸ್ಪ ವಾದ ರೂಪವನ್ನು ಪಡೆದುಕೊಳ್ಳಲಿಲ್ಲ. ಇದನ್ನು ಸ್ಪಷ್ಟಪಡಿಸುವುದ ದಲಿತ ಚಳುವಳಿಯ ಹೋರಾಟಗಳು ಮತ್ತು ಅಧಿಕಾರ ರಾಜಕ ರಣದ ಮುಖ್ಯ ಮಾದರಿಗಳನ್ನು ಸಾರಾಂಶ ರೂಪದಲ್ಲಿ ಗ್ರಹಿಸುತ ಅದನ್ನು ವಿಶ್ಲೇಷಿಸುವುದು ಅಗತ್ಯವಾಗುತ್ತದೆ.

೭೦ ರ ದಶಕದಲ್ಲಿ ರಾಷ್ಟ್ರಾದ್ಯಂತ, ಅದರಲ್ಲೂ
ಖ್ಯವಾಗಿ ಕರ್ನಾಟಕ, ಉತ್ತರಪ್ರದೇಶ, ಮಹಾರಾಷ್ಟ್ರ,
ಧ್ರಪ್ರದೇಶ, ಮಧ್ಯಪ್ರದೇಶ, ತಮಿಳುನಾಡು, ಅಪಾರ
ಬದ್ಧತೆ ಮತ್ತು ಮಹತ್ವಾಕಾಂಕ್ಷೆಯಿಂದ ಕಾರ್ಯ
ಹಿಸಲಾರಂಭಿಸಿದವು. ಹಲವಾರು ಕಡೆ, ಹಲವಾರು
ಣಕ್ಕೆ ನಡೆದ ಹೋರಾಟದ ವ್ಯಕ್ತ ಸ್ವರೂಪದಲ್ಲಿ
ಮಾಜಿಕ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ರಾಜ
ಯ-ಹೀಗೆ ಎಲ್ಲಾ ಆಯಾಮಗಳ ಬಗ್ಗೆ ಕಾಳಜಿ
ವಾಗುತ್ತಿತ್ತು. ಇವುಗಳನ್ನು ಸಂಗ್ರಹವಾಗಿ ಹೇಳುವು
ರೆ-

ಬ್ರಾಹ್ಮಣೀಯ ಹಿಂದುತ್ವದ ಯಾಜಮಾನ್ಯವನ್ನು ಪ್ರಶ್ನಿ
ದು.

ತಮ್ಮ ಹೋರಾಟವನ್ನು ಕೇವಲ ದಲಿತ ಸಮುದಾ
ಗೆ ಸೀಮಿತಗೊಳಿಸದೆ, ಶೋಷಣೆಗೊಳ ಗಾಗುವ
ೇತರ ಸಮುದಾಯಗಳು, ಮಹಿಳೆಯರು, ರೈತರು,
ಉಳಿದ ಜಾತಿಗಳು ಮತ್ತು ಆದಿವಾಸಿ ಜನಾಂಗಕ್ಕೂ
ಸುವುದು.

ಮ್ಮ ಆಶಯದ ಹೊಸ ಆರ್ಥಿಕ ಮತ್ತು ರಾಜಕೀಯ
ವನ್ನು ರೂಪಿಸುವುದರ ಮೂಲಕ ಸಮಕಾಲೀನ
ಕೃತಿಕ ಸವಾಲನ್ನೆದುರಿಸುವುದಕ್ಕೆ ಸಿದ್ಧವಾಗುವುದು.

ಜಾತಿ ವಿನಾಶವನ್ನು ಮುಖ್ಯ ಗುರಿಯಾಗಿಸಿ ಕೊಳ್ಳು

ಈ ಉದ್ದೇಶಗಳನ್ನು ಸಾಧಿಸಿಕೊಳ್ಳುವುದರ
ಲಕ ಅಂಬೇಡ್ಕರ್ ಕನಸಿನ ಸಮಾಜವಾದವನ್ನು ನಿಜ
ಸುವುದು. ದಲಿತ ಚಳುವಳಿಗಳಿಗಿದ್ದ ಈ ನೈತಿಕ
ಬೌದ್ಧ ತತ್ವದ ಸಾಮಾಜಿಕ-ಆರ್ಥಿಕ ರೂಪು
ಗಳ ಸುತ್ತಲೇ ಕೆಲಸ ಮಾಡುತ್ತಿತ್ತು. ಆದ್ದರಿಂದ,
ಡ್ಕರಿಸಂನ ಆಧ್ಯಾತ್ಮಿಕ ಆಯಾಮಗಳು ಹಾಗೆ
ರ್ಣವಾಗಿ ಕಳೆದು ಹೋಗಲಿಲ್ಲ. ವಾಸ್ತವವಾಗಿ
ಉದ್ದೇಶ ಗಮನಾರ್ಹವಾಗಿ ಈಡೇರಿದ್ದು ಸುಳ್ಳಲ್ಲ.
ರು ಸಂಖ್ಯೆಯಲ್ಲಿ ಅಂತರ್ ಜಾತಿಯ ವಿವಾಹಗಳಾ
ಸಾಮಾಜಿಕ ನ್ಯಾಯದ ಕನಸು ನನಸಾಗಲಾರಂಭಿ
ಆದರೆ, ಆಶಯದ ತತ್ವ ಆಚರಣೆಯಲ್ಲಿ (ritual
ಅರ್ಥದಲ್ಲಲ್ಲ; Practice ಎನ್ನುವ ಅರ್ಥದಲ್ಲಿ)
ವಾಗುವುದಕ್ಕೆ ಎರಡು ಮುಖ್ಯವಾದ ತೊಡಕುಗಳು
ಾದವು. ದಲಿತ ಚಳುವಳಿಗಳಲ್ಲಿ ಅಂಬೇಡ್ಕರ್‌ರ
ಕ್ರಾಂತಿಕಾರಕ ಆಯಾಮವನ್ನು ಪಡೆದುಕೊಳ್ಳುತ್ತದೆ.
ರೆ ಅಂಬೇಡ್ಕರ್‌ರ ಸಮಾಜೊ-ರಾಜಕೀಯ ತತ್ವ
ಜೊತೆಯಲ್ಲಿ ಮಾರ್ಕ್ಸ್‌ವಾದಿ, ಲೋಹಿಯಾವಾದ'
ೇವಾದ ಜೊತೆಗೆ ಆಫ್ರಿಕಾದ ಜನಾಂಗೀಯ
ವಿರುದ್ಧ ಬಂಡೆದ್ದ ನೆಲ್ಸನ್ ಮಂಡೇಲ ಮತ್ತು
ಜನ್ ಮೊಲಾಯಿಸ್‌ರ ನಿಲುವುಗಳಿಂದಾಗಿ ಆವೇಶ
ರೋಷ ಪ್ರಾಧಾನ್ಯತೆಯನ್ನು ಪಡೆದುಕೊಂಡಿತು.
ಈ ಎರಡೂ ಭಾವನೆಗಳು ಬುದ್ಧನ ಸಹನೆ,
ಮತ್ತು ಯುದ್ಧ ವಿರೋಧಿ ನಿಲುವುಗಳ ಜೊತೆಗೆ
ುವುದಿಲ್ಲ. ಎರಡನೆಯದಾಗಿ, ದಿನಗಳು ಕಳೆದಂತೆ,
ಚಳುವಳಿಗಳಲ್ಲೂ ಬಿರುಕುಗಳು ಕಾಣಿಸಿಕೊಂಡು
ವಾಗಲಾರಂಭಿಸಿತು. ಇಲ್ಲಿಯೂ ಸ್ವಾರ್ಥ,
ನಾಯಕತ್ವಕ್ಕಾಗಿ ಪೈಪೋಟಿ, ಅಧಿಕಾರದ ಆಸೆ
ಆಶಯಗಳನ್ನು ಗಾಳಿಗೆ ತೂರಿದ್ದು, ಉದಾತ್ತವಾದ
ಧ್ಯೇಯವನ್ನು ದಿಕ್ಕೆಡಿಸಿದವು. ತ್ಯಾಗವನ್ನು ಪ್ರತಿ
ವ ಮತ್ತು ಅಧಿಕಾರವನ್ನು ದೂರವಿಡುವ ಬೌದ್ಧತ್ವ

ಇಲ್ಲಿ ಕಂಗೆಟ್ಟಿತು. ಈ ಬೆಳವಣಿಗೆಗಳು, ದಲಿತ ಚಳುವಳಿಗಳ ತಾತ್ವಿಕ ನೇಯ್ಗೆಯಲ್ಲಿದ್ದ ಆಧ್ಯಾತ್ಮಿಕತೆಯನ್ನು ಅತಂತ್ರವಾಗಿಸಿಬಿಟ್ಟಿತು.

ದಲಿತ ಚಳುವಳಿಗಳಲ್ಲಿ ಬೌದ್ಧತ್ವ ಈ ರೀತಿ ಹಿನ್ನೆಲೆಗೆ ಸರಿದರೆ, ದಲಿತರ ಅಧಿಕಾರ ರಾಜಕಾರಣದಲ್ಲಿ ಆಧ್ಯಾತ್ಮಕತೆ ಅಕ್ಷರಶಃ ಮಣ್ಣು ಮುಕ್ಕುತ್ತದೆ.

ದಲಿತರು ರಾಜಕೀಯವಾಗಿ ಸಬಲರಾಗಬೇಕೆಂಬ ಅಂಬೇಡ್ಕರ್ ಕನಸು ನಿಜವಾಗಿದ್ದು, ಬಹುಜನ ಸಮಾಜವಾದಿ ಪಕ್ಷದಿಂದ. ಅಂಬೇಡ್ಕರ್‌ರ ಮಗ ಪ್ರಕಾಶ ಅಂಬೇಡ್ಕರ್‌ರ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಮತ್ತು ದಲಿತ ಪ್ಯಾಂಥರ್ಸ್‌ಗಳ ಪ್ರಭಾವದಲ್ಲಿ ಬೆಳೆದ ಪಂಜಾಬ್‌ನ ಕಾನ್ಷೀರಾಂ, ೧೯೮೪ರ ರಲ್ಲಿ ಬಿ.ಎಸ್.ಪಿ.ಯನ್ನು ಸ್ಥಾಪಿಸಿದರು. ಪ್ರಬಲವಾದ ರಾಜಕೀಯ ಪಕ್ಷವಾಗಿ ಬೆಳೆದ ಬಿ.ಎಸ್.ಪಿ. ಅಂತಿಮವಾಗಿ, ಒಂದು ರಾಜ್ಯದ ಅಧಿಕಾರದ ಸೂತ್ರಗಳನ್ನು ಹಿಡಿಯುವುದರೊಂದಿಗೆ, ಕೇಂದ್ರದ ಮೇಲೂ ಪ್ರಭಾವವನ್ನು ಬೀರುವಷ್ಟು ಶಕ್ತವಾಗಿ ಬೆಳೆಯಿತು. ಬಿ.ಎಸ್.ಪಿ. ಸಾರ್ವಜನಿಕವಾಗಿ ಅಂಬೇಡ್ಕರ್‌ರನ್ನು ವಿರೋಧಿಸದ್ದಿದ್ದರೂ, ರಾಜಕೀಯವಾಗಿ ಅವರು ಇಡುತ್ತಿದ್ದ ಹೆಜ್ಜೆಗಳು ಅಂಬೇಡ್ಕರ್‌ರ ಯಾವ ತತ್ವದ ಜೊತೆಗೂ ತಾಳೆಯಾಗುವುದಿಲ್ಲ. ಅಂಬೇಡ್ಕರ್ ಚಿಂತನೆ ಮತ್ತು ಬಿ.ಎಸ್.ಪಿ.ಯ ರಾಜಕೀಯ-ಸಾಮಾಜಿಕ ನೀತಿಯ ಒಂದು ಸಣ್ಣ ತೌಲನಿಕ ಸಮೀಕ್ಷೆ ಇದನ್ನು ಸ್ಪಷ್ಟಪಡಿಸುತ್ತದೆ:

೧. ಅಂಬೇಡ್ಕರ್ ಸಂಕಷ್ಟದಲ್ಲಿರುವ ಅಥವಾ ದುರ್ಬಲವಾದ ಸರ್ಕಾರಗಳ ವಿರೋಧಿಯಾಗಿದ್ದರು. ಏಕೆಂದರೆ, ಅವರ ದೃಷ್ಟಿಯಲ್ಲಿ ಅದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ದುರ್ಬಲಗೊಳಿಸುತ್ತಿತ್ತು. ಆದರೆ, ದುರ್ಬಲ ಸರ್ಕಾರಗಳಿಂದಲೇ, ತನ್ನ ಸಾಧ್ಯತೆಗಳು ವಿಸ್ತರಿಸುವುದರಿಂದ ಬಿ.ಎಸ್.ಪಿ. ಅವುಗಳ ಪರವಾಗಿದೆ.

೨. ಅಂಬೇಡ್ಕರ್ ಪ್ರಕಾರ, ಸಾಮಾಜಿಕ ಅಭಿವೃದ್ಧಿಗೆ ರಾಜ್ಯಾಧಿಕಾರ (State Power) ಒಂದು ಕೀಲಿಕೈ. ಆದರೆ ಅಂಬೇಡ್ಕರ್‌ಗೆ ರಾಜಕೀಯವಾಗಿ ಸ್ಥಾಪಿತವಾಗುವುದು ಎಂದರೆ, ಪದವಿ ಅಥವಾ ಅಧಿಕಾರದ ಸಮಾನಾರ್ಥಕ ಪರಿಕಲ್ಪನೆಗಳಾಗಿರಲಿಲ್ಲ. ಬಿ.ಎಸ್.ಪಿ. ಇದರ ವಿರುದ್ಧ ದಿಕ್ಕಿನಲ್ಲಿ ಸಾಗಿತು.

೩. ಅಂಬೇಡ್ಕರ್, ಶಿಕ್ಷಣ, ಸಂಘಟನೆ ಮತ್ತು ಹೋರಾಟದಿಂದ ದಲಿತರು ಸ್ವತಂತ್ರವಾದ ರಾಜಕೀಯ ಪಕ್ಷವನ್ನು ಸ್ಥಾಪಿಸಬೇಕೆಂದು ಹೇಳಿದವರು; ಬಿ.ಎಸ್.ಪಿ. ದಲಿತರನ್ನು ಶೈಕ್ಷಣಿಕ ಅಭಿವೃದ್ಧಿ ಹೊಂದುವಂತೆ ಮಾಡುವಲ್ಲಿ ಹೆಚ್ಚಿನ ಕಾಳಜಿಯನ್ನು ವಹಿಸಲಿಲ್ಲ.

೪. ಅಂಬೇಡ್ಕರ್‌ರ ವೈಚಾರಿಕ ಕಾಳಜಿ ಒಂದು ನಾಗರಿಕ ಸಮಾಜವನ್ನು ಸೃಷ್ಟಿಸುವುದಾಗಿತ್ತು. ಆದರೆ ಬಿ.ಎಸ್.ಪಿ.ಗೆ manipulative politics ಮುಖ್ಯವಾಗುತ್ತದೆ. ಡಾ॥ ಅಂಬೇಡ್ಕರ್, ಮಿಶ್ರ ಆರ್ಥಿಕ ವ್ಯವಸ್ಥೆ ಮತ್ತು ಭೂ ಸುಧಾರಣೆಗಳು, ಜಾತ್ಯತೀತವಾದ ನಾಗರಿಕ ಸಮಾಜವೊಂದನ್ನು ನಿರ್ಮಿಸುತ್ತವೆ ಎಂದು ನಂಬಿದ್ದರು. ಬಿ.ಎಸ್.ಪಿ. ಆರ್ಥಿಕ ನೀತಿಯಲ್ಲಿ ಸ್ಪಷ್ಟ ನಿಲುವು ವ್ಯಕ್ತವಾಗುವುದಿಲ್ಲ. ಎಲ್.ಪಿ.ಜಿ.ಯಿಂದ ಉದ್ಭವಿಸಿರುವ ಬಹಳ ಮುಖ್ಯವಾದ ದಲಿತರ ರಾಜಕೀಯ-ಆರ್ಥಿಕ ಪ್ರಶ್ನೆಗಳಿಗೆ ಇಲ್ಲಿ ಉತ್ತರವೂ ಇಲ್ಲ.

ಅಂಬೇಡ್ಕರ್ ತಾತ್ವಿಕತೆಯನ್ನಾಧರಿಸಿ ಬೆಳೆದ ತಳಸ್ತರದ ರಾಜಕೀಯ ಪಕ್ಷಕ್ಕೆ ರಾಜ್ಯಾಧಿಕಾರ ದೊರೆತಾಗ, ಸ್ವತಃ ಅಂಬೇಡ್ಕರಿಸಮ್ಮೇ ಕರುಣಾಜನಕವಾಗಿ ಕುಸಿದು ಬಿದ್ದಿರುವಾಗ, ಇನ್ನು ಬೌದ್ಧತ್ವವನ್ನು ಹುಡುಕುವುದಾದರೂ ಎಲ್ಲಿ? ಮೇಲೆ ಉಲ್ಲೇಖಿಸಿದ ಐದು ವಿಷಯಗಳ ಹಿನ್ನೆಲೆಯಲ್ಲಿ ಬುದ್ಧನ ಚಿಂತನೆಗಳನ್ನು ಇಟ್ಟು ನೋಡಿದಾಗ ಎಲ್ಲವೂ ತಿರುಗು ಮರುಗಾಗಿರುವುದು ತಿಳಿಯುತ್ತದೆ.

೧. ಬುದ್ಧನಿಗೆ ವ್ಯಕ್ತಿಯಿಂದ ಹಿಡಿದು ವ್ಯವಸ್ಥೆಯವರೆಗೆ ಸಮಾನವಾದ ಅವಕಾಶ ಮತ್ತು ಸಮಗ್ರವಾದ ಬೆಳವಣಿಗೆ ಮುಖ್ಯವಾಗುತ್ತದೆ.

೨. ಅಧಿಕಾರ ಕೂಡ ವ್ಯಕ್ತಿಯ ಹಿತಕ್ಕಾಗಿ ಕಾರ್ಯನಿರ್ವಹಿಸಬೇಕೆನ್ನುವ ಅಂಶವನ್ನು ಬುದ್ಧ ಬಿಂಬಸಾರನಿಗೆ ಬೋಧಿಸುವಾಗ, ಅಲ್ಲಿ ವ್ಯಕ್ತವಾಗುವುದು ಸ್ವಾರ್ಥ ಮತ್ತು ಅಹಂಕಾರದ ಅಮಲುಗಳನ್ನು ಕಳಚಿಕೊಂಡ ಅಧಿಕಾರದ ಪರಿಕಲ್ಪನೆ.

೩. ಬುದ್ಧನ ದೃಷ್ಟಿಯಲ್ಲಿ ವಿದ್ಯೆಯನ್ನು ಎಲ್ಲರಿಗೂ ತೆರೆದಿಟ್ಟಾಗ ಮಾತ್ರ ಧರ್ಮ ಸದ್ಧರ್ಮವಾಗುತ್ತದೆ.

೪. ಬುದ್ಧನಿಗೆ ರಾಜಕೀಯ ನೀತಿಯಲ್ಲಿ ಮೌಲ್ಯ ಮತ್ತು ನೈತಿಕತೆಯ ಅಳವಡಿಕೆ ಅತ್ಯವಶ್ಯವಾಗಿತ್ತು.

೫. ಸಾಮಾಜಿಕ ಒಳಿತಿಗಾಗಿ ಖಾಸಗಿ ಆಸ್ತಿಯನ್ನು ತೊಡೆದು ಹಾಕುವುದು ಬುದ್ಧನಿಗೆ ಮುಖ್ಯವಾಗುತ್ತದೆ.

ಹೀಗೆ, ಅಮಾನವೀಯವಾದ ಅಧಿಕಾರ ರಾಜಕಾರಣ ಎಲ್ಲಾ ರೀತಿಯ ಸದುದ್ದೇಶಗಳನ್ನೂ ಸರ್ವನಾಶ ಮಾಡಿಬಿಡುತ್ತದೆ.

ಇನ್ನು, ಕರ್ನಾಟಕದಲ್ಲಿ ಕಳೆದ ವರ್ಷ ಜಾಗತೀಕರಣದ ಸವಾಲನ್ನೆದುರಿಸುವುದಕ್ಕೆ ಹೊಸ ಆಶೋತ್ತರಗಳನ್ನಿಟ್ಟುಕೊಂಡು, ರಾಜ್ಯ ರೈತ ಸಂಘ ಮತ್ತು ದಲಿತ ಚಳುವಳಿಯ ನಾಯಕರ ಸಹಯೋಗತ್ವದಲ್ಲಿ ಹುಟ್ಟಿದ ಸರ್ವೋದಯ ಕರ್ನಾಟಕ (ಸ.ಕ) ಆರಂಭದಲ್ಲೇ ಅನೇಕ ರೀತಿಯ ಅನುಮಾನ ಮತ್ತು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ವಾಸ್ತವಾಗಿ, ಸ.ಕ. ಧರ್ಮೀಯ ಸಮಾನತೆ, ಲಿಂಗೀಯ ಸಮಾನತೆಯ ಮೂಲಕ, ಒಂದು ಸಮಗ್ರವಾದ ಐಕ್ಯತೆಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆ. ಪಿತೃಪ್ರಧಾನ ಮೌಲ್ಯಗಳ ಕ್ರೌರ್ಯಗಳನ್ನು

ಕೊನೆಗಾಣಿಸುವ, ಸ್ಥಳೀಯ ಸಂಸ್ಕೃತಿಯ ಸತ್ವವನ್ನು ಸ್ಥಾಪಿಸುವ, ಗ್ರಾಮ-ನಗರಗಳ ಅಂತರವನ್ನು ಇಲ್ಲವಾಗಿಸುವ, ಮನಷ್ಯನ ಉಳಿವಿಗಾಗಿ ಪರಿಸರವನ್ನು ಪೋಷಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ.

ಈ ಅಜೆಂಡಾದ ಹಿಂದಿರುವ ಬೌದ್ಧತ್ವ ಮತ್ತು ಆಧ್ಯಾತ್ಮಿಕತೆಯನ್ನು ಮೆಚ್ಚದೆ ಇರಲು ಸಾಧ್ಯವಿಲ್ಲ. ಇಲ್ಲಿ ಅಂಬೇಡ್ಕರ್ ತತ್ವದ ಜೊತೆಗೆ, ಇತರ ಸಮಾಜವಾದಿ ಚಿಂತಕರಾದ ರಾಮಮನೋಹರ ಲೋಹಿಯಾ, ಕಿಶನ್ ಪಟ್ನಾಯಕ್, ಕರ್ನಾಟಕದ ಮಧ್ಯಕಾಲೀನ ಸಾಂಸ್ಕೃತಿಕ ನಕಾಶೆಯಲ್ಲಿ ನೈತಿಕತೆ ಮತ್ತು ಮೌಲ್ಯಾಧರಿತ ತತ್ವವನ್ನು ಮಂಡಿಸಿದ ಬಸವಣ್ಣ, ಆಧುನಿಕ ವಿಜ್ಞಾನ ಯುಗದಲ್ಲಿ ವಿಶ್ವ ಮಾನವನ ಕಲ್ಪನೆಯನ್ನು ಕಟ್ಟಿಕೊಟ್ಟ ಕುವೆಂಪು-ಹೀಗೆ ಸ.ಕ.ವನ್ನು ಸಶಕ್ತಗೊಳಿಸುವುದಕ್ಕೆ ಒಂದು ದೊಡ್ಡ ದಂಡೇ ಇದೆ.

ಆದರೆ, ಇದರ ಆಶಯದ ಬಗ್ಗೆ ಪ್ರಶ್ನೆಗಳು ಏಕೆ ಹುಟ್ಟುತ್ತವೆ ಎಂದರೆ:

೧. ಪ್ರಾಥಮಿಕವಾದ ಹಾಗೂ ಬಹಳ ಮುಖ್ಯವಾದ ಸಂಗತಿ ಏನೆಂದರೆ, ಚದುರಿ ಹೋಗಿರುವ ಕರ್ನಾಟಕದಲ್ಲಿನ ದಲಿತ ಚಳುವಳಿಗಳ ಘಟಕಗಳನ್ನು ಒಂದುಗೂಡಿಸುವ ಕೆಲಸಕ್ಕೆ, ಸ.ಕ. ಆದ್ಯತೆಯನ್ನೇಕೆ ನೀಡಲಿಲ್ಲ ಎಂದು. ಇದೇ ಸಾಧ್ಯವಾಗದಿದ್ದಾಗ, ಇನ್ನು ಯಾವ ರೀತಿಯ ಐಕ್ಯತೆಯನ್ನು ಇವರು ಕಲ್ಪಿಸಿಕೊಳ್ಳುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗಿಲ್ಲ.

೨. ಗ್ರಾಮಗಳ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುವ ಸ.ಕ.ದ ಪರಿಕಲ್ಪನೆಯಲ್ಲಿ ಗ್ರಾಮ ಎಂದರೇನು? ಈ ಹೊತ್ತು ಭೌತಿಕ ಚಹರೆಯಲ್ಲಿ ಮತ್ತು ಆರ್ಥಿಕ ಮತ್ತು ವಿನ್ಯಾಸದಲ್ಲಿ ಸಾಮಾಜಿಕ ಕ್ರಮದಲ್ಲಿ ಮಾತ್ರ ಗ್ರಾಮತ್ವ ಉಳಿದಿರಬಹುದೇ ಹೊರತು, ಮಾಧ್ಯಮಗಳಿಂದಾಗಿ, ಗ್ರಾಮೀಣ ಮನಃಸ್ಥಿತಿ ನಗರೀಕೃತ ಮನಸ್ಥಿತಿಯಾಗಿದೆ. ಆದರೆ ಬೆಂಗಳೂರಿನಂಥ ನಗರದೊಳಗೇ ಇರುವ ಗ್ರಾಮಗಳನ್ನು ಏನು ಮಾಡುವುದು ? ಇವುಗಳನ್ನು ವ್ಯಾಖ್ಯಾನಿಸುವುದು ಹೇಗೆ ಹಾಗೂ ಇವುಗಳ Space ಅನ್ನು ಪರಿಕಲ್ಪಿಸುವ ರೀತಿ ಯಾವುದು?

೩. ಮಹಿಳಾ ಸಬಲೀಕರಣಕ್ಕೆ ಮತ್ತು ಇತರ ಆಶೋತ್ತರಗಳು ವಾಸ್ತವವಾಗುವುದಕ್ಕೆ ಸ.ಕ. ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

೪. ಆರಂಭದಲ್ಲೆ ಅಸ್ತಿತ್ವದ ಗೊಂದಲವನ್ನು ಅನುಭವಿಸುತ್ತಾ, ಒಂದು ಸಲ ಅಧಿಕಾರ ದಾಹಿ ಸಿದ್ಧರಾಮಯ್ಯನ ಕಲ್ಪನೆಯ 'ಅಹಿಂದ', ಮತ್ತೊಂದು ಸಲ ಕಾಂಗ್ರೆಸ್‌ನತ್ತ ಒಲವು ತೋರುತ್ತಾ, ತಾನೂ ಅಧಿಕಾರ ರಾಜಕಾರಣದ ವರ್ತುಲದೊಳಗೆ ಸಿಲುಕಿಕೊಳ್ಳುವ ಸೂಚನೆಗಳನ್ನು ನೀಡುತ್ತಿದೆ.

ಹೀಗಿರುವಾಗ, ಇಲ್ಲಿ ಎಲ್ಲಿ ಬುದ್ಧತ್ವವನ್ನು ಹುಡುಕುವುದು? ವಾಸ್ತವವಾಗಿ, ಭಾರತೀಯ ಸಂಸ್ಕೃತಿಯ ಉದ್ದಕ್ಕೂ, ಯಾಜಮಾನ್ಯದ ವರ್ಗದ ಎದುರಿಗೆ ಕಟ್ಟಿದ ಪರ್ಯಾಯ (ಇದನ್ನು ಪರ್ಯಾಯ ಎಂದು ಕರೆಯುವುದು ಅಷ್ಟೇನು ಸರಿ ಅಲ್ಲ) ಚಿಂತನೆಗಳ ಮುಖ್ಯ ಧಾರೆಯಾಗಿ ಮೂಡಿ ಬಂದ ಬುದ್ಧತ್ವ ನಂತರ ಕರ್ನಾಟಕದಲ್ಲಿ ಅಲ್ಲಮತ್ವವಾಗಿ ರೂಪಾಂತರವಾಯಿತು. ಇಲ್ಲಿ ಅಲ್ಲಮತ್ವದ ಬದಲಾಗಿ ಬಸವತ್ವ ಪ್ರತ್ಯಕ್ಷವಾಗುತ್ತಿದೆ. ಬಸವಣ್ಣನ ಜೀವಪರವಾದ ನಿಲುವುಗಳನ್ನು ನಾನಿಲ್ಲಿ ಪ್ರಶ್ನಿಸುತ್ತಿಲ್ಲ. ಆದರೆ, ಸಾಂಸ್ಥೀಕರಣಗೊಂಡ ಬಸವತ್ವವನ್ನು ಸ.ಕ. ಯಾವ ರೀತಿ

ಬುದ್ಧ, ತಾನು ಅಧಿಕೃತವಾಗಿ ವಾರಸುದಾರನಾಗಿದ್ದ ಅಧಿಕಾರಕ್ಕೆ ವಿಮುಖವಾಗಿ ನಡೆದು, ರಾಜಕಾರಣದಲ್ಲಿ ನೈತಿಕತೆಯ ಅಗತ್ಯವನ್ನು ಸಾರಿದವನು. ಬುದ್ಧನ ದೃಷ್ಟಿಯಲ್ಲಿ ಅಧಿಕಾರ ಎನ್ನುವುದು ಮತ್ತೇರಿಸುವ ಭೋಗ. ಸುಖದ ಜೊತೆಗೆ ಅಪಾರವಾದ ಅತೃಪ್ತಿಯನ್ನು ಲೋಭವನ್ನು, ಸ್ವಾರ್ಥವನ್ನು ತರುವಂಥದ್ದು. ಈ ಭೋಗ ಮತ್ತು ಸುಖವನ್ನು, ತ್ಯಜಿಸಲಾರದ ವ್ಯಕ್ತಿ, ಮತ್ತೆ ಮತ್ತೆ ಅಧಿಕಾರಕ್ಕಂಟಿಕೊಳ್ಳುವುದಕ್ಕೆ ಹಿಂಸೆ ಮತ್ತು ಕ್ರೌರ್ಯವನ್ನು ಎಸಗುತ್ತಾ ಹೋಗುತ್ತಾರೆ. ಅದರಿಂದ, ಅವನ ಸುತ್ತಲಿನ ವಾತಾವರಣವೂ ಕಲುಷಿತವಾಗಿ, ಅಶಾಂತಿ, ಅರಾಜಕತೆ, ಅನೈತಿಕತೆ, ಅಮಾನವೀಯತೆಗಳು ಸೃಷ್ಟಿಯಾಗತೊಡಗುತ್ತವೆ.

ಸಂಸ್ಕರಿಸುತ್ತದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಅಥವಾ ಈ ಸಹಯೋಗದ ಹಿಂದೆಯೂ ಬೇರೆ ರೀತಿಯ ಸಾಂಸ್ಕೃತಿಕ ರಾಜಕಾರಣಗಳಿರಬಹುದೇ?

ಈ ಎಲ್ಲಾ ವಿಚಾರಗಳ ಮೂಲಕ, ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೇನೆಂದರೆ, ಆಶಯದ ತತ್ವ ಮತ್ತು ಆಚರಣೆಯ ತತ್ವದ ನಡುವೆ ದೊಡ್ಡ ಕಂದರವೊಂದು ಸೃಷ್ಟಿಯಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ರಾಜಕಾರಣ ಮತ್ತು ಆಧ್ಯಾತ್ಮಿಕತೆಯನ್ನು ಸಮನ್ವಯಗೊಳಿಸುವುದು ಅತ್ಯಂತ ಕಠಿಣವಾದ ಸಮಸ್ಯೆಯಾಗಿರುವುದು. ಸಮಸ್ಯೆ ಬಹಳ ಮುಖ್ಯವಾದ ಒಂದು ಪ್ರಶ್ನೆಯತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಅದು, ತಳಸ್ತರದ ರಾಜಕಾರಣವನ್ನೂ ಒಳಗೊಂಡಂತೆ, **ಇಡೀ ರಾಜಕೀಯ ವ್ಯವಸ್ಥೆಯನ್ನು ಮೌಲ್ಯಯುತವಾಗಿಸುವುದು, ನೈತಿಕವಾಗಿಸುವುದು ಹೇಗೆ?** ಎಂದು.

ವರ್ತಮಾನದ (ಅಥವಾ ಎಲ್ಲಾ ಕಾಲದ) ಅರಾಜಕ, ವಿಕೃತ ರಾಜಕೀಯ ಸಂದರ್ಭದಲ್ಲಿ, ರಾಜಕಾರಣಕ್ಕೆ ಮೌಲ್ಯ ಮತ್ತು ನೈತಿಕತೆಯ ಪೋಷಣೆಯನ್ನು ನೀಡಿ ಮಾನವೀಯ ಮತ್ತು ಜೀವಪರವಾಗಿಸುವ ಮಾತನ್ನು ಯಾರಾದರೂ ಆಡಿದರೆ, ಅದು ಕೇವಲ ಹುಚ್ಚುತನ ಮಾತ್ರವಲ್ಲ, ಅದರಾಚೆಗೆ ಇನ್ನೊಂದು ಅತಿರೇಕದ, ಅಸಹಜ ಸ್ಥಿತಿ ಏನಾದರೂ ಇದ್ದರೆ, ಆ ಅರ್ಥದಲ್ಲಿ ಅಂಥ ವ್ಯಕ್ತಿಯನ್ನು ಗ್ರಹಿಸಲಾಗುತ್ತದೆ. ಈಗ, ರಾಜಕೀಯ ಮತ್ತು ರಾಜಕಾರಣಿಗಳ ಬಗ್ಗೆ ನಮ್ಮಲ್ಲಿರುವ ಧೋರಣೆ ಯಾವ ರೀತಿಯದು ಎಂದರೆ, ಅವರ ಪಾಡಿಗೆ ಅವರು ನಮ್ಮ ಪಾಡಿಗೆ ನಾವು; ಅವರು ನಮ್ಮ ಬಗ್ಗೆ ನಾವು ಅವರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಥವಾ ಪರಸ್ಪರರ ಅಸ್ತಿತ್ವದ ಬಗ್ಗೆ ಪರಸ್ಪರರಿಗೆ ಆಸಕ್ತಿಯೂ ಇಲ್ಲ. ಇದು, ಮನಷ್ಯನ ಕಲ್ಪನೆಯ ಎಲ್ಲಾ ಸಾಧ್ಯತೆಗಳನ್ನು ಮೀರಿ ವ್ಯವಸ್ಥೆ ವಿಕಾರವಾಗಿರುವುದ ರಿಂದ ಬಂದಿರುವ ರೋಷ, ನಿರ್ಲಕ್ಷ್ಯ, ಅಸಹ್ಯವನ್ನೂ ಮೀರಿದ ಒಂದು ಸ್ಥಿತಿ.

ವರ್ತಮಾನದ ಇಂಥ ರಾಜಕೀಯ ವ್ಯವಸ್ಥೆ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುವುದರ ಹಿಂದಿನ ಒಂದು ಮುಖ್ಯ ಉದ್ದೇಶದತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಇಲ್ಲಿನ ತನಕ ಅಂಬೇಡ್ಕರ್ ಮತಾಂತರದ ಕ್ರಿಯೆಯನ್ನು,

೧. ಅಸ್ಪೃಶ್ಯತೆಯ ಅವಮಾನದ ಬದುಕಿನಿಂದ ಮಾನವೀಯತೆಯ ಮಡಿಲಿಗೆ ಜಾರುವ ತವಕ.

೨. ಹಿಂದೂತ್ವದ ವಿರುದ್ಧದ ತಮ್ಮ ಹೋರಾಟವನ್ನು ಭಾರತೀಯ ನಾಗರೀಕತೆಯ ಮೂಲಕ್ಕೆ ಒಯ್ಯುವ ಹಠ.

೩. ಅಸ್ಪೃಶ್ಯ ಸಮುದಾಯಕ್ಕೆ ಘನತೆಯನ್ನು ತಂದು ಕೊಡುವ ಚರಿತ್ರೆಯನ್ನು ಕಟ್ಟುವ ಯತ್ನ

ಎಂದು ಸಾಮಾಜಿಕ, ಸಾಂಸ್ಕೃತಿಕ ಧಾರ್ಮಿಕ ಆಯಾಮ ಗಳ ಹಿನ್ನೆಲೆಯಲ್ಲಿಯೇ ಗ್ರಹಿಸಲಾಗುತ್ತಿತ್ತು.

ಆದರೆ ವಾಸ್ತವವಾಗಿ, ಅಂಬೇಡ್ಕರ್ ಮತಾಂತ ಹೊಂದುವುದರ ಮೂಲಕ ರೋಗಗ್ರಸ್ಥ ರಾಜಕೀಯ ವ್ಯವಸ್ಥೆಗೆ ಹೊಸ ರಕ್ತವನ್ನು ತುಂಬುವ ಇನ್ನೊಂದು ಮಹತ್ತರವಾದ ಉದ್ದೇಶವೂ ಇತ್ತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಕೂಡಲೇ ಅಧಿಕಾರ ರಾಜಕಾರಣದ ಕರಾ ಮುಖಗಳನ್ನು ಕಂಡ ಅಂಬೇಡ್ಕರ್‌ಗೆ, ಭವಿಷ್ಯದ ಭಾರತ ರಾಜಕೀಯ ವ್ಯವಸ್ಥೆ ಯಾವ ಮಟ್ಟಕ್ಕೆ ಕುಸದು, ಕೊ ಯಬಲ್ಲದು ಎಂಬ ಬಗ್ಗೆ ಅತ್ಯಂತ ಸ್ಪಷ್ಟವಾದ ಅರಿ ಇತ್ತು. ಸಂವಿಧಾನವನ್ನು ಭಾರತಕ್ಕೆ ಒಪ್ಪಿಸುವಾಗ, ಅವರು ಮಾಡಿದ ಚರಿತ್ರಾರ್ಹವಾದ ಭಾಷಣದಲ್ಲಿ ಈ ಎ ಆತಂಕಗಳನ್ನೂ ವ್ಯಕ್ತಪಡಿಸುತ್ತಾರೆ.[೧೦] ಸಂವಿಧಾನ ರಚನೆಯ ನಂತರ, ಅವರ ಚಿಂತನೆಗಳು ಬೇರೆ ರೀ ಯಲ್ಲಿ ವಿಸ್ತರಿಸಲಾರಂಭಿಸಿದವು. ಅಲ್ಲಿಯತನಕ ಅವ ಕೇಂದ್ರ ಕಾಳಜಿ ಅಸ್ಪೃಶ್ಯರ ಹಿತಾಸಕ್ತಿಗೆ ಸಂಬಂಧಿಸಿದ್ದ ತದನಂತರ, ಅಸ್ಪೃಶ್ಯರನ್ನೂ ಒಳಗೊಂಡಂತೆ ಇಡೀ ರಾ ಕೀಯ ವ್ಯವಸ್ಥೆ ಮತ್ತು ಅಧಿಕಾರದ ಸ್ವರೂಪವನ್ನು ಗುಣಾ ತ್ಮಕವಾಗಿಸುವುದರ ಬಗ್ಗೆ ಗಾಢವಾಗಿ ಆಲೋಚಿಸಲಾ ರಂಭಿಸಿದರು. ಅದು ಯಾವುದೇ ಕಾಲದ, ರಾಷ್ಟ್ರ ಶೋಷಿತ ವರ್ಗ ಮತ್ತು ಅಧಿಕಾರ ರಾಜಕಾರಣ ಸಂಬಂಧವಾಗಿ, ಒಂದು ವಿಶ್ವಸ್ಥ ಸಮಸ್ಯೆಯಾಗಿ ಈ ವಿ ಯವನ್ನು ಗ್ರಹಿಸತೊಡಗಿದರು. ಈ ಶೋಧ ಅವರನ್ನು ಮತ್ತೊಮ್ಮೆ ಬುದ್ಧನ ತತ್ವದತ್ತಲೇ ಕೊಂಡೊಯ್ಯಿತು.

ಬುದ್ಧ, ತಾನು ಅಧಿಕೃತವಾಗಿ ವಾರಸುದಾರನಾಗಿ ಅಧಿಕಾರಕ್ಕೆ ವಿಮುಖವಾಗಿ ನಡೆದು, ರಾಜಕಾರಣದಲ್ಲಿ ನೈ ಕತೆಯ ಅಗತ್ಯವನ್ನು ಸಾರಿದವನು. ಬುದ್ಧನ ದೃಷ್ಟಿಯ ಅಧಿಕಾರ ಎನ್ನುವುದು ಮತ್ತೇರಿಸುವ ಭೋಗ. ಸುಖ ಜೊತೆಗೆ ಅಪಾರವಾದ ಅತೃಪ್ತಿಯನ್ನು ಲೋಭವನ್ನು ಸ್ವಾರ್ಥವನ್ನು ತರುವಂಥದ್ದು. ಈ ಭೋಗ ಮತ್ತು ಸುಖವನ್ನು, ತ್ಯಜಿಸಲಾರದ ವ್ಯಕ್ತಿ, ಮತ್ತೆ ಮತ್ತೆ ಅಧಿಕಾ ಕ್ಕಂಟಿಕೊಳ್ಳುವುದಕ್ಕೆ ಹಿಂಸೆ ಮತ್ತು ಕ್ರೌರ್ಯವನ್ನು ಎಸಗುತ್ತಾ ಹೋಗುತ್ತಾರೆ. ಅದರಿಂದ, ಅವನ ಸುತ್ತಲಿನ ವಾತಾವ ಣವೂ ಕಲುಷಿತವಾಗಿ, ಅಶಾಂತಿ, ಅರಾಜಕತೆ, ಅನೈತಿಕ ಅಮಾನವೀಯತೆಗಳು ಸೃಷ್ಟಿಯಾಗತೊಡಗುತ್ತವೆ. ಆ ರಿಂದ, ಅಧಿಕಾರ ಉಳ್ಳವನು ಅತ್ಯಂತ ಸರಳವಾಗಿ, ತ ದೈನಂದಿನ ಅಗತ್ಯಗಳನ್ನು ಪೂರೈಸುವುದಕ್ಕೆ ಅವಶ್ಯವಾ ರುವ ವಸ್ತುಗಳಲ್ಲೇ ತೃಪ್ತನಾದಾಗ ಮಾತ್ರ ಅಧಿಕಾರಕ್ಕಂಟಿ ಅಪಮೌಲ್ಯಗಳು ನಾಶವಾಗುವಾಗುತ್ತವೆ.[೧೧] ಇದರಿಂ ಆಸ್ತಿಯ ಶೇಖರಣೆ ಕೂಡ ಸಾಧ್ಯವಾಗುವುದಿಲ್ಲ. ಆ ಸಮಾಜದಲ್ಲಿ ಅಸಮತೋಲನವೂ ಉಂಟಾಗುವುದಿ

ಧಿಕಾರ, ಯಾರೋ ಒಬ್ಬರ ಸ್ವತ್ತಾಗದೇ ನಿರ್ದಿಷ್ಟ ಅವಧಿ ವರೆಗೆ ಮಾತ್ರ ಲಭ್ಯವಾದಾಗ, ಅದರ ಗುಣಾತ್ಮಕತೆ ನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.[೮] ಇದೆಲ್ಲ ತ ಮುಖ್ಯವಾಗಿ, ವ್ಯಕ್ತಿಗಾಗಿ ವ್ಯವಸ್ಥೆ ರೂಪುಗೊಳ್ಳ ದು. ಆದ್ದರಿಂದ ಪಂಚಶೀಲದಿಂದ ಪ್ರತಿಯೊಂದು ತ್ವ ರೂಪುಗೊಂಡಾಗ, ವ್ಯವಸ್ಥೆಯಲ್ಲಿ ನೈತಿಕತೆ ಪ್ರಾಪ್ತ ಗುತ್ತದೆ-ಎಂದು ಬುದ್ಧ ಹೇಳುತ್ತಾನೆ. ಶೂನ್ಯವಾದದ ೂಲಕ ಹುಟ್ಟುವ ಪ್ರತಿತ್ಯ ಸಮುತ್ಪಾದ (ಎಂದರೆ ಒಂದ ಂದು ಅವಲಂಬಿಸಿರುವುದು) ಸಮಾಜದ ಬದುಕು ಗೊಳ್ಳುತ್ತದೆ. ಅಂಬೇಡ್ಕರ್ ಬೌದ್ಧ ಮೀಮಾಂಸೆಯನ್ನು ವು ರೀತಿಯ ರಾಜಕೀಯ ಉದ್ದೇಶಗಳಿಗಾಗಿ ಪುನರ್ ಖ್ಯಾನಿಸಿದರು. ಏಕೆಂದರೆ, ತತ್ವಜ್ಞಾನದ ಕೆಲಸವೇ ಂಚವನ್ನು ಪುನರ್ರಚಿಸುವುದು. ಅಂಬೇಡ್ಕರ್‌ಗೆ ತ್ತಿತ್ತು, ಬೌದ್ಧತ್ವ ಮೂಲತಃ ಒಂದು ಬದುಕಿನ ಕ್ರಮವೇ ರತು ಧರ್ಮವಲ್ಲ ಎಂದು. ಆದರೆ, ಬೌದ್ಧತ್ವದ ಮೌಲ್ಯ ನ್ನು ಸಾಮಾಜಿಕ ವ್ಯವಸ್ಥೆಯೊಳಗೆ ಅಡಕಗೊಳಿಸುವ ರ ಹಠ, ಅದಕ್ಕೆ ಹೊಸ ವ್ಯಾಖ್ಯಾನ ನೀಡಿ, ಧರ್ಮ ಗಿ ರೂಪಿಸುವಂತೆ ಪ್ರೇರೇಪಿಸಿತು. ಈ ಹೊಸ ರೂಪ ು ಹಿಂಸೆ ಮೂಲತತ್ವ ಕಳೆದು ಹೋಗಲಿಲ್ಲ. ಬದ , ಆಧುನಿಕ ತಾರ್ಕಿಕತೆಯನ್ನು ನೈತಿಕತೆಯ ನಿಯಂತ ಒಳಪಡಿಸುವ ಉದ್ದೇಶ ಮಾತ್ರ ಕೆಲಸ ಮಾಡುತ್ತಿತ್ತು. ರ್ಮ ಎಂದರೆ ಆಚರಣೆ. ಆಚರಣೆಯ ಮೂಲಕ ವರೂ ಈ ಬದುಕು ಮತ್ತು ವ್ಯವಸ್ಥೆಯಲ್ಲಿ ಕಿಂಚಿತ್ ಲಾವಣೆ ತರಬಹುದೆಂಬ ಆಸೆ ಅವರನ್ನು ಈ ರೀತಿ ಡುವಂತೆ ಪ್ರೇರೇಪಿಸಿತು.

* *

ತತ್ವ ಏನೇ ಇದ್ದರೂ, ರಾಜಕಾರಣ ನಿಜವಾ ೂ ಆಧ್ಯಾತ್ಮಿಕವಾಗಲು ಸಾಧ್ಯವೇ ಎಂಬ ಅನುಮಾನ ುತ್ತದೆ. ಅದಕ್ಕೆ ನಮ್ಮವರೇ ಆದ ಗಾಂಧೀಜಿ ಒಂದು ಮ ಉದಾಹರಣೆ. ಅಶೋಕ ಆಳುವ ಅರಸನಾ ು ಆಧ್ಯಾತ್ಮಿಕತೆಯನ್ನು ಆಶ್ರಯಿಸಿ, ಅದನ್ನು ಜಗತ್ತಿನಾ ತ ಹರಡಲಿಲ್ಲವೇ? ರಾಜ ಹರ್ಷವರ್ಧನ ಪ್ರತಿವರ್ಷ ದ್ದ ಸಂಪತ್ತನ್ನೆಲ್ಲಾ ದಾನ ಮಾಡಿ, ಅಧಿಕಾರದ ಕಾರವನ್ನು ಕಳೆದುಕೊಳ್ಳುತ್ತಿರಲಿಲ್ಲವೇ? ಅಧಿಕಾರ ು ಆಧ್ಯಾತ್ಮಿಕತೆ ಒಂದಾದ ಉದಾಹರಣೆಗಳು ನಮ್ಮ ತಿಯಲ್ಲೇ ಇವೆ.

ಇಷ್ಟಾದರೂ ಇನ್ನೂ ಎರಡು ಪ್ರಶ್ನೆಗಳು ಉಳಿದು ತ್ತವೆ. ಈ ಆಶಯವನ್ನು ವಾಸ್ತವವಾಗಿಸಿಕೊಳ್ಳುವ ಹೇಗೆ ಇದನ್ನು ಸಾಧಿಸುವವರು ಯಾರು? ಎಂದು ಶ್ನೆಗೆ ಉತ್ತರ ನಮ್ಮನ್ನು ಮತ್ತೊಮ್ಮೆ ಈ ಲೇಖನದ ಭದಲ್ಲಿ ಉಲ್ಲೇಖಿಸಿದ ಮೌಖಿಕ ಕಥನಗಳು ಮತ್ತು ದಕಾರರ ಬಳಿ ಕರೆದೊಯ್ಯುತ್ತವೆ.

ಮಲೆಮಾದೇಶ್ವರ (ಬುದ್ಧ ಕೂಡ) ಬದುಕುವುದು ಬೇಡಿ ಭಿಕ್ಷೆ ಎನ್ನುವ ಈ ಕ್ಷುದ್ರವಾದ ಕ್ರಿಯೆಗೆ ly political ಆದ ಮತ್ತು ಆಧ್ಯಾತ್ಮಿಕವಾದ ಮಗಳಿವೆ. ಮಾದೇಶ್ವರನ ಮೂಲಭೂತ ಉದ್ದೇಶವೆ ಕಟ್ಟುವುದು. ಆದ್ದರಿಂದ, ಆತ ಬಿಕ್ಷೆಯ ಮೂಲಕ ಕ್ಕಲುಗಳನ್ನು ಹೆಚ್ಚಿಸಿಕೊಳ್ಳುತ್ತಾನೆ. ಭಿಕ್ಷೆ ಎನ್ನುವುದು logy ಯಾದರೆ, ಒಕ್ಕಲು ಎನ್ನುವುದನ್ನು ಇಲ್ಲಿ ಅನು ುಗಳಾಗಿ ಅನುವಾದಿಸಿಕೊಳ್ಳಬಹುದು. ಇಲ್ಲಿ, ರಾಜ್ಯ ನೇತಾರ, ಸಮುದಾಯದೊಂದಿಗೆ ತನ್ನನ್ನು ತಾನೇ ಕೊಳ್ಳುತ್ತಿದ್ದಾನೆ. ಆದ್ದರಿಂದ ಇದು ಆಧ್ಯಾತ್ಮಿಕವಾದ ಕ್ರಿಯೆಯೂ ಹೌದು. ಬೌದ್ಧರ ಮೀಮಾಂಸೆಯಲ್ಲಿ ಕೂಡ ಭಿಕ್ಷೆ ಎನ್ನುವುದು ವೃದ್ಧಿ ಮತ್ತು ಚಲನಶೀಲತೆಗೆ ಸಂಕೇತ ವಾಗುತ್ತದೆ. ಚಳುವಳಿಯ ನಾಯಕರು ಸಮಾಜದೊಂದಿಗೆ ಸ್ಥಾಪಿಸಿಕೊಳ್ಳಬೇಕಾದ ಅರ್ಥಪೂರ್ಣ ಸಂಬಂಧವನ್ನು ಈ ಮೌಖಿಕ ಕಥನ ಹೇಳುತ್ತದೆ.

ಇನ್ನು ಎರಡನೆಯ ಪ್ರಶ್ನೆ, ಇದನ್ನು ಸಾಧಿಸುವವರು ಯಾರು ಎಂಬುದು ವೈದಿಕಶಾಹಿಯನ್ನು ವಿರೋಧಿಸುವ ಎಲ್ಲರೂ ಈ ಕೆಲಸಕ್ಕೆ ಒಂದಾಗುವ ಅಗತ್ಯವಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಸಾವಿರಾರು ಜನ ತತ್ವಪದಕಾರರಿದ್ದಾರೆ. ತತ್ವಪದಕಾರರು ಎನ್ನುವ ಶಿಕ್ಷೆಯ ಒಳಗೆ ಸೂಫಿ ಸಂತರೂ ಸೇರಿ ಬಿಡುತ್ತಾರೆ. ಅನೇಕ ಜನ ಹೆಣ್ಣು ಮಕ್ಕಳೂ ಇಲ್ಲಿ ಅನುಭಾವವನ್ನು ಹಾಡುತ್ತಾರೆ. ಇಲ್ಲಿ ಜಾತೀಯ, ಧರ್ಮೀಯ, ಲಿಂಗೀಯ ಐಡೆಂಟಿಟಿಗಳೆಲ್ಲಾ ಕರಗಿ ಹೋಗಿಬಿಡುತ್ತವೆ. ತತ್ವಪದಕಾರರಲ್ಲಿ ಅನ್ಯ ಭಾಷೆಯ ಅನುಭಾವಿಗಳೂ ಇದ್ದಾರೆ. ಇವರೆಲ್ಲಾ ಮುಂದಿಡುತ್ತಿರುವುದು ಅಲ್ಲಮತ್ವವನ್ನು. ಎಂದರೆ, ತಮ್ಮ ಕಾಲಕ್ಕೆ ಅಗತ್ಯವಾಗಿದ್ದ ಬೌದ್ಧತ್ವವನ್ನು.

ಈ ಉದಾಹರಣೆಯನ್ನು ಅನುಸರಿಸಿ, ಕೆಳವರ್ಗದವರು, ಮುಸ್ಲಿಂರು, ಬೌದ್ಧ ತತ್ವವನ್ನು ಹೋಲುವ, ಯೋಸುವಿನ ತತ್ವಗಳನ್ನು ಪಾಲಿಸುವ ಕ್ರೈಸ್ತರು, ಬೌದ್ಧತ್ವವನ್ನು ಆಪ್ತವಾಗಿಸಿಕೊಂಡ ಎಲ್ಲಾ ವರ್ಗದ, ಜಾತಿಯ ಜನರು, ಈ ಆಧ್ಯಾತ್ಮಿಕ ಐಡೆಂಟಿಟಿಯ ಆಶ್ರಯದಲ್ಲಿ ಒಂದಾಗುವುದು ಸಾಧ್ಯವಿದೆ. RSS ನಂತೆ ವರ್ಷನುಗಟ್ಟಲೆ ಬೌದ್ಧ ತತ್ವವನ್ನು ಅನುಸರಿಸಿ ಜನಕ್ಕೆ ತರಬೇತಿ ನೀಡಿ, ಆಶಯದ ಈ ಹೊಸ ವಾತಾವರಣವನ್ನು ನಿಧಾನವಾಗಿ ರೂಪುಗೊಳಿಸಬೇಕಿದೆ. ಆದರೆ, ಇದಕ್ಕಾಗಿ ಬೌದ್ಧ ಧರ್ಮಕ್ಕೆ ಮತಾಂತರದ ಅಭೂತಪೂರ್ವ ಘಟನೆಯ ಹಿಂದಿದ್ದ ಸಾಂಸ್ಕೃತಿಕ, ಸಾಮಾಜಿಕ ರಾಜಕೀಯ ಮಹತ್ವಾಕಾಂಕ್ಷೆಗಳನ್ನು ಅಲ್ಲಗಳೆಯುವದೂ ಅಲ್ಲ. ಅದು ಅಂದು ಅನಿವಾರ್ಯವಾಗಿದ್ದ ಚಾರಿತ್ರಿಕ ಒತ್ತಡ.

ಧರ್ಮ ಮತ್ತು ಆಧ್ಯಾತ್ಮ ಎರಡು ಭಿನ್ನ ವಾದ ಸಂಗತಿಗಳು. ಧರ್ಮ ಎಂದರೆ, ಯಾಜಮಾನ್ಯದ ನೆಲೆಯ, ಅಧಿಕಾರದ ನೆಲೆಯಲ್ಲಿರುವ ವರ್ಗಗಳು ದೈವದ ಮತ್ತು ಪಾವಿತ್ರ್ಯತೆಯ ಹೆಸರಿನಲ್ಲಿ ಸೃಷ್ಟಿಸುವ ಕಳ್ಳಭಟ್ಟಿ ಸಾರಾಯಿ. ಇದು ಅಮಲೇರಿಸುತ್ತದೆ; ಆದರೆ ಆರೋಗ್ಯಕ್ಕೆ ಒಳ್ಳೆಯದಲ್ಲ. ಸ್ವಲ್ಪ ಹೆಚ್ಚಾದರೂ, ಇದರಿಂದ ಸಾವು ನಿಶ್ಚಿತವಾದುದೇ. ಆದರೆ, ಆಧ್ಯಾತ್ಮಿಕತೆ ಒಂದು ಮನಃಸ್ಥಿತಿ. ದೈವದ ಮತ್ತು ಪಾವಿತ್ರ್ಯತೆಯ ಆಚೆಗಿನ ಜೇನು ತುಪ್ಪ. ಇದು ಆರೋಗ್ಯಕ್ಕೆ ಒಳ್ಳೆಯದಷ್ಟೇ ಅಲ್ಲ, ಸಾವಿರಾರು ವರ್ಷ ಕಳೆದರೂ ಇದು ಕೆಡುವುದೂ ಇಲ್ಲ. ಬೌದ್ಧ ತತ್ವ ಎಂದೋ ಒಂದು ದಿನ ಅಧಿಕಾರದ ನೆಲೆಗೆ ಸೇರಿದರೆ, ಇತರ ಧರ್ಮದಂತೆಯೇ ಆಗಿಬಿಡುವ ಆತಂಕವನ್ನು ಅಲ್ಲಗಳೆಯಲಾಗುವುದಿಲ್ಲ. ತತ್ವಪದಕಾರರು, ಸೂಫಿ ಸಂತರು ಯಾರೂ ಮತಾಂತರ ಹೊಂದಿರಲಿಲ್ಲ.

ಆದರೆ, ಧರ್ಮ ಮತ್ತು ಆಧ್ಯಾತ್ಮ ಎರಡು ಭಿನ್ನವಾದ ಸಂಗತಿಗಳು. ಧರ್ಮ ಎಂದರೆ, ಯಾಜಮಾನ್ಯದ ನೆಲೆಯ, ಅಧಿಕಾರದ ನೆಲೆಯಲ್ಲಿರುವ ವರ್ಗಗಳು ದೈವದ ಮತ್ತು ಪಾವಿತ್ರ್ಯತೆಯ ಹೆಸರಿನಲ್ಲಿ ಸೃಷ್ಟಿಸುವ ಕಳ್ಳಭಟ್ಟಿ ಸಾರಾಯಿ. ಇದು ಅಮಲೇರಿಸುತ್ತದೆ; ಆದರೆ ಆರೋಗ್ಯಕ್ಕೆ ಒಳ್ಳೆಯದಲ್ಲ. ಸ್ವಲ್ಪ ಹೆಚ್ಚಾದರೂ, ಇದರಿಂದ ಸಾವು ನಿಶ್ಚಿತವಾದುದೇ. ಆದರೆ, ಆಧ್ಯಾತ್ಮಿಕತೆ ಒಂದು ಮನಃಸ್ಥಿತಿ. ದೈವದ ಮತ್ತು ಪಾವಿತ್ರ್ಯತೆಯ ಆಚೆಗಿನ ಜೇನು ತುಪ್ಪ. ಇದು ಆರೋಗ್ಯಕ್ಕೆ ಒಳ್ಳೆಯದಷ್ಟೇ ಅಲ್ಲ, ಸಾವಿರಾರು ವರ್ಷ ಕಳೆದರೂ ಇದು ಕೆಡುವುದೂ ಇಲ್ಲ.

ಬೌದ್ಧ ತತ್ವ ಎಂದೋ ಒಂದು ದಿನ ಅಧಿಕಾರದ ನೆಲೆಗೆ ಸೇರಿದರೆ, ಇತರ ಧರ್ಮದಂತೆಯೇ ಆಗಿಬಿಡುವ ಆತಂಕವನ್ನು ಅಲ್ಲಗಳೆಯಲಾಗುವುದಿಲ್ಲ. ಮೇಲೆ ಹೇಳಿದ ತತ್ವಪದಕಾರರು, ಸೂಫಿ ಸಂತರು ಯಾರೂ ಮತಾಂತರ ಹೊಂದಿರಲಿಲ್ಲ.

ಬೌದ್ಧತ್ವ ಎನ್ನುವುದು ಈ ಸಂಸ್ಕೃತಿಯಲ್ಲಿ ಎಂದೆಂದಿಗೂ ಬತ್ತದಿರುವ ಅಂತರ್ಜಲ. ಆದ್ದರಿಂದ ನಮ್ಮ ಸಮಕಾಲೀನ ಕವಿಗಳಾದ ಎಚ್.ಎಸ್. ಶಿವಪ್ರಕಾಶ, ಲಕ್ಷ್ಮೀಪತಿ ಕೋಲಾರ, ಆರ್.ಜಿ ಹಳ್ಳಿ ನಾಗರಾಜ, ಎಚ್.ಎಲ್. ಪುಷ್ಪ ಮತ್ತೆ ಮತ್ತೆ ಬುದ್ಧನ ಮೊರೆ ಹೋಗುತ್ತಾರೆ. ಇದು ಜನಸಮುದಾಯಕ್ಕೆ ಈ ತತ್ವದ ಬಗ್ಗೆ ಇರುವ ನಂಬಿಕೆಯನ್ನು ಸಾಬೀತು ಪಡಿಸುತ್ತದೆ. "My philosophy has roots in religion and not in political science.. all that is necessary is to give political From to Buddhist teachings" ಎಂದು ಅಂಬೇಡ್ಕರ್ ಹೇಳುತ್ತಾರೆ. ಈ ಹೊತ್ತು ಅಂಬೇಡ್ಕರ್ ಚಿಂತನೆಗಳ ವಿಸ್ತರಣೆಯಾಗಬೇಕಾಗಿರುವುದು ಕೂಡ ಈ ದಿಕ್ಕಿನಲ್ಲಿಯೇ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಆಕರ.ಗ್ರಂಥಗಳು

೧. ಡಾ॥ ಬಾಬಾ ಸಾಹೆಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂಪುಟ ೩, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೯೪

೨. ಅದೇ, ಸಂಪುಟ ೧೧, ಭಾಗ ೧, ೧೯೯೯

೩. ಅದೇ, ಸಂಪುಟ ೧೩, ಭಾಗ ೨, ೨೦೦೧

4. Damodar Balwant, 'Dr. B.R. Ambedkar and Revolutionary Thoughts' Essence of Buddhishi Books publications, Bangalore, 1990

5. Gail omvedt, 'Dalit Visions,' Orient longman, 1995

6. Prakash louis, 'political sociology of Dalit Assertion, gyan publishing House, New Delhi 2003

೭. ಅಗ್ರಹಾರ ಕೃಷ್ಣಮೂರ್ತಿ, 'ಡಾ॥ ಡಿ.ಆರ್. ನಾಗರಾಜ್ 'ಸಂಸ್ಕೃತಿ ಕಥನ' ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೨

□

ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ೧೭೯೯ರಲ್ಲಿ ಮೈಸೂರಿನ ಹುಲಿ ಟಿಪ್ಪು ಸುಲ್ತಾನ ಹತ್ಯೆಯಾದ ನಂತರ ಬ್ರಿಟೀಷರು ಮಲೆನಾಡಿಗೆ ನುಗ್ಗಿ ಮನಸ್ಸಿಗೆ ಬಂದ ಹಾಗೇ ಕಾಡು ನಾಶ ಮಾಡಲು ಪ್ರಾರಂಭಿಸಿದರು. ಈ ಭೂಮಿಯಲ್ಲಿ ಕಾಡು ಸೃಷ್ಟಿಯಾದ ನಂತರ ಬ್ರಿಟೀಷರು ಭಾರತಕ್ಕೆ ಬರುವವರೆಗೂ ಎಷ್ಟು ಕಾಡುನಾಶವಾಗಿತ್ತೋ ಅಷ್ಟು ಕಾಡನ್ನು ಬ್ರಿಟೀಷರು ಭಾರತಕ್ಕೆ ಬಂದ ನಂತರ ೨೦೦ ವರ್ಷಗಳಲ್ಲಿ ನಾಶ ಮಾಡಿದ್ದಾರೆ. ಸ್ವಾತಂತ್ರ್ಯ ನಂತರ ಕೇವಲ ೫೦ ವರ್ಷಗಳಲ್ಲಿ ಭಾರತ ಸರಕಾರವು ವಿವಿಧ ಅಭಿವೃದ್ಧಿ ಯೋಜನೆಗಳಿಗಾಗಿ ಬ್ರಿಟಿಷರು ಎಷ್ಟು ಕಾಡು ನಾಶ ಮಾಡಿದ್ದರೋ ಅದರಷ್ಟು ಕಾಡನ್ನು ನಾಶ ಮಾಡಿದೆ. ಬ್ರಿಟಿಷರು ಭಾರತಕ್ಕೆ ಬರುವುದಕ್ಕೆ ಮುಂಚೆ ಭಾರತದ ಭೂಭಾಗದ ಕಾಡು ಶೇ ೯೨ ರಷ್ಟಿತ್ತು. ಈಗ ಕೇವಲ ಶೇ ೧೯.೩೯ ಕಾಡು ಇದೆ. ಇಷ್ಟು ಕಾಡನ್ನು ನಾಶ ಮಾಡಿದ್ದು ಪ್ರಭುತ್ವವೇ ಹೊರತು ಜನರಲ್ಲಾ.

ನರಸಿಂಹ

ಮಲೆನಾಡು ಎಂದರೆ ನಮಗೆ ನಿತ್ಯಾಹರಿದ್ವರ್ಣ ಕಾಡು ನೆನಪಾಗುತ್ತದೆ. ಈ ದಟ್ಟವಾದ ಕಾಡಿನಲ್ಲಿ ಅಲ್ಲಲ್ಲಿ ಮನೆಗಳು. ಪ್ರಕೃತಿಯ ಮಡಿಲಲ್ಲಿ ಶಾಂತಿಯುತ ಬದುಕು ಇದೆಲ್ಲಾ ಮಲೆನಾಡಿನ ಮೇಲ್ನೋಟದ ಚಿತ್ರಣ. ಈಗ ಮಲೆನಾಡಿನ ಜನತೆಯ ಬದುಕು. ಅತಂತ್ರ ಸ್ಥಿತಿಗೆ ಬಂದಿದೆ. ಕಾಡು ನಮ್ಮದು ಎಂದು ನಂಬಿಕೊಂಡ ಜನರನ್ನು ಹುಟ್ಟಿದ ನೆಲದಲ್ಲಿಯೇ ಕಳ್ಳರನ್ನಾಗಿಸುವ ಕಾನೂನುಗಳನ್ನು ಸರಕಾರ ಜಾರಿಗೆ ತಂದಿದೆ. ಜಾಗತೀಕರಣದ ಪರಿಣಾಮ ಆದಿವಾಸಿಗಳನ್ನು ತಟ್ಟಿದೆ. ಕಾಡಿನ ನಡುವೆ ಅನುಕೂಲಕರವಾದ ಸ್ವಲ್ಪ ಭೂಮಿಯನ್ನು ಕೃಷಿಮಾಡಿಕೊಂಡು ನೆಮ್ಮದಿಯಿಂದ ಬದುಕುತ್ತಿದ್ದ ಜನರನ್ನು ಹಲವಾರು ಸಮಸ್ಯೆಗಳು ಕಾಡುತ್ತಲಿವೆ. ಕುದುರೆಮುಖ ಗಣಿಗಾರಿಕೆ, ಕುದುರೆಮುಖ ರಾಷ್ಟ್ರೀಯ ಉದ್ಯಾನ, ಅಡಿಕೆ ಕಾಫಿ ಮತ್ತಿತರ ಬೆಲೆಗಳ ಕುಸಿತ ಹಲವು ಸಮಸ್ಯೆಗಳಿಂದ ಮಲೆನಾಡಿನ ಜನರು ಬಳಲುತ್ತಿದ್ದಾರೆ.

ಅರಣ್ಯ ಪ್ರದೇಶದಲ್ಲಿ ಜನರು ಒತ್ತುವರಿ ಮಾಡಿಕೊಂಡು ಸಾವಿರಾರು ಎಕರೆ ಕಾಡನ್ನು ನಾಶಮಾಡಿದ್ದಾರೆ. ಅದುದರಿಂದ ಒತ್ತುವರಿಯನ್ನು "ತೆರವುಗೊಳಿಸುವಂತೆ ಸರ್ವೋಚ್ಚ ನ್ಯಾಯಲಯ ೨೦೦೨ ರಲ್ಲಿ ಆದೇಶ ನೀಡಿದೆ. ನಾವು ಹುಟ್ಟಿ ಬೆಳೆದ ಜಾಗದಲ್ಲೆ ನಮ್ಮನ್ನು ಕಳ್ಳರನ್ನಾಗಿಸುವ ನ್ಯಾಯಾಲಯದ ಆದೇಶವಿದೆ ಎಂದು ಅರಣ್ಯವಾಸಿಗಳನ್ನು ಬೆಚ್ಚಿಬೀಳಿಸಿದೆ. ಈ ಆದೇಶ ದೇಶದ್ಯಾಂತ ಸಂಬಂಧಿಸಿರುವುದರಿಂದ ದೇಶಾದ್ಯಾಂತ ಒಂದು ಕೋಟಿ ಆದಿವಾಸಿಗಳ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಒತ್ತುವರಿಯನ್ನು ತೆರವುಗೊಳಿಸುವ ಮುಖಾಂತರ ಆದಿವಾಸಿಗಳಿಂದ ಕಾಡನ್ನು ಕಸಿದುಕೊಳ್ಳುವುದು ಮತ್ತು ಅರಣ್ಯದ ಮೇಲಿನ ಹಕ್ಕನ್ನು ಮೂಲ ನಿವಾಸಿಗಳಿಂದ ಕಿತ್ತುಕೊಳ್ಳುವ ಉದ್ದೇಶವಿದೆ.

ನಾಲ್ಕನೆಯ ಆಂಗ್ಲೋ-ಮೈಸೂರು ಯುದ್ಧದಲ್ಲಿ ೧೭೯೯ ರಲ್ಲಿ ಮೈಸೂರಿನ ಹುಲಿ ಟಿಪ್ಪು ಸುಲ್ತಾನ ಹತ್ಯೆಯಾದ ನಂತರ ಬ್ರಿಟೀಷರು ಮಲೆನಾಡಿಗೆ ನುಗ್ಗಿ ಮನಸ್ಸಿಗೆ ಬಂದ ಹಾಗೇ ಕಾಡು ನಾಶ ಮಾಡಲು ಪ್ರಾರಂಭಿಸಿದರು. ಈ ಭೂಮಿಯಲ್ಲಿ ಕಾಡು ಸೃಷ್ಟಿಯಾದ ನಂತರ ಬ್ರಿಟೀಷರು ಭಾರತಕ್ಕೆ ಬರುವವರೆಗೂ ಎಷ್ಟು ಕಾಡುನಾಶ ವಾಗಿತ್ತೋ ಅಷ್ಟು ಕಾಡನ್ನು ಬ್ರಿಟೀಷರು ಭಾರತಕ್ಕೆ ಬಂದ ನಂತರ ೨೦೦ ವರ್ಷಗಳಲ್ಲಿ ನಾಶ ಮಾಡಿದ್ದಾರೆ. ಸ್ವಾತಂತ್ರ್ಯ ನಂತರ ಕೇವಲ ೫೦ ವರ್ಷಗಳಲ್ಲಿ ಭಾರತ ಸರಕಾರವು ವಿವಿಧ ಅಭಿವೃದ್ಧಿ ಯೋಜ ನೆಗಳಿಗಾಗಿ ಬ್ರಿಟೀಷರು ಎಷ್ಟು ಕಾಡು ನಾಶ ಮಾಡಿದ್ದರೋ ಅದರಷ್ಟು ಕಾಡನ್ನು ನಾಶ ಮಾಡಿದೆ. ಬ್ರಿಟಿಷರು ಭಾರತಕ್ಕೆ ಬರುವುದಕ್ಕೆ ಮುಂಚೆ ಭಾರತದ ಭೂಭಾಗದ ಕಾಡು ಶೇ ೯೨ ರಷ್ಟಿತ್ತು. ಈಗ ಕೇವಲ ಶೇ ೧೯.೩೯ ಕಾಡು ಇದೆ. ಇಷ್ಟು ಕಾಡನ್ನು ನಾಶ ಮಾಡಿದ್ದು ಪ್ರಭು ತ್ವವೇ ಹೊರತು ಜನರಲ್ಲಾ.

ದ್ವಿತೀಯ ಜಾಗತೀಕ ಯುದ್ಧದ ಸಮಯದಲ್ಲಿ ಯುದ್ಧದ ಉಪಯೋಗಕ್ಕೆ ಬ್ರಿಟಿಷ್ ಸರಕಾರದವರು ಸೈನಿಕ ತರಬೇತಿ ಕೇಂದ್ರಗಳನ್ನು ಕಟ್ಟಲು ಮತ್ತು ರೈಲ್ವೆ ಲೈನುಗಳನ್ನು ಮಾಡಲು, ಸ್ಲಿಪರ್‌ಗಳಿಗಾಗಿ ಮರಗಳನ್ನು ಕಡಿಯಲು ಕಾಡಿಗೆ ನುಗ್ಗಿದರು. ಹಾಗೂ ರೈಲ್ವೆ ಇಂಜಿನು ಓಡಿಸಲು ಬೇಕಾಗುವ ಇದ್ದಿಲನ್ನು ಕಾಡು ಸುಟ್ಟು ತಯಾರಿಸುತ್ತಿದ್ದರು ಮತ್ತು ವಿದೇಶಕ್ಕೆ ಮರಗಳನ್ನು ಸಾಗಿಸುತ್ತಿದ್ದರು. ಬ್ರಿಟಿಷರು ಮಲೆನಾಡಿನ ಭಾಗಕ್ಕೆ ರೈಲ್ವೆ ಸೌಲಭ್ಯ ಒದಗಿಸಿದ್ದು ಮರ ಸಾಗಿಸುವದಕ್ಕೆ. ಇದರಿಂದ ಬಹಳ ಕಾಡು ನಾಶವಾಯಿತು. ಆಗ ಮಲೆನಾಡಿನಲ್ಲಿ ಹರಡುತ್ತಿದ್ದ ಮಲೇರಿಯಕ್ಕೆ ಕಾಫಿಯೇ ಔಷದಿ ಎಂದು ನಂಬಿಸಿ ಕಷಾಯ ಕುಡಿಯುತ್ತಿದ್ದ ಮಲೆನಾಡು ಜನರಿಗೆ ಬಲವಂತವಾಗಿ ಕಾ… ಯನ್ನು ಕುಡಿಸಿದರು. ಕಾಫಿ ಎಸ್ಟೇಟ್‌ಗಾಗಿ ಬ್ರಿಟೀಷರು ಕಾಡು ನಾ… ಮಾಡಿ ಕಾಫೀ ಸಂಸ್ಕೃತಿ ಕಲಿಸಿದರು. ಆಲೆಮನೆಯಲ್ಲಿ ಬೆಲ್ಲ ತಯಾರಿ… ಸಲು ಜನರು ಹೇರಳವಾಗಿ ಕಟ್ಟಿಗೆ ಸುಡುತ್ತಿದ್ದರು. ಕಾಫಿ ಸಂಸ್… ಪ್ರಭಾವ ಹೆಚ್ಚಾದಂತೆ ಬೆಲ್ಲವನ್ನು ತಯಾರಿಸುವುದು ಹೆಚ್ಚಾಯಿ… ಹಾಗೇ ಕಾಡು ನಾಶವು ಜಾಸ್ತಿಯಾಯಿತು.

ಈಗ ಕಾಡು ರಕ್ಷಣೆಗೆಂದು ಇರುವ ಇಲಾಖೆ ಎಂದು ಹೇ… ಕೊಳ್ಳುತ್ತಿರುವ "ಅರಣ್ಯ ಇಲಾಖೆ" ಬ್ರಿಟೀಷರ ಕಾಲದಿಂದಲೂ ಕಾ… ಕಡಿಯಲು ಇದ್ದ ಇಲಾಖೆಯೇ ಆಗಿತ್ತು. ಈ ಇಲಾಖೆಯನ್ನು ಬ್ರಿ… ಷರು ೧೮೬೫ರಲ್ಲಿ ಪ್ರಾರಂಭಿಸಿದರು. ಬ್ರಿಟೀಷರು ತಮ್ಮ ಮೋಜಿಗ… ಮೇಜಿವಾನಿಗಾಗಿ ಪ್ರಾಣಿಗಳನ್ನು ಬೇಟೆಯಾಡಲು ಕಾಫೀ ರಬ್ಬರು… ತೋಟಗಳಿಗಾಗಿ ಬೇಕಾದ ಕಾಡನ್ನು ಈ ಇಲಾಖೆ ಮೂಲಕ ಗುರು… ಮಾಡುತ್ತಿದ್ದರು. ಹೀಗೆ ಗುರುತು ಮಾಡಿದ ಕಾಡುಗಳೇ ಈಗಿರ… ಸಂರಕ್ಷಿತ ಅರಣ್ಯಗಳಾಗಿವೆ. ೧೯೬೦ರಿಂದ ಕಾಡಿನ ಮಹತ್ವ ಪ್ರಪಂ… ಗೊತ್ತಾಯಿತು. ಮತ್ತು ಅಂತಾರಾಷ್ಟೀಯ ಒತ್ತಡ ಹೆಚ್ಚಿದ್ದರಿಂದ ೧೯೭೨ರಲ್ಲಿ "ವನ್ಯ ಜೀವಿ ಸಂರಕ್ಷಣ" ಕಾಯಿದೆ ಬಂದ ನಂ… ಕಾಡು ಕಡಿಯಲು ಇದ್ದ ಅರಣ್ಯ ಇಲಾಖೆಯನ್ನು ಕಾಡು ರ… ಇಲಾಖೆಯನ್ನಾಗಿ ನಮ್ಮ ಸರಕಾರ ಮಾರ್ಪಡಿಸಿತು.

ಕಾಡು ಹಾಗೂ ಜನರ ನಡುವೆ ಯಾವ ರೀತಿ ಸಂಬಂಧ… ಎಂದು ಪರಿಸರ ಹೋರಾಟಗಾರ ಕಲ್ಲುಳ್ಳಿ ವಿಠಲ ಹೆಗಡೆ ಅ… "ಕಾಡು ಕಿರುಕುಳ" ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ. "ಜನ… ಎಂದೂ ಕಾಡು ನಾಶ ಮಾಡಿಲ್ಲ ಜನರು ರೂಪಿಸಿಕೊಂಡ ವ್ಯ… ಸ್ಥೆಯೇ ಬಹಳಷ್ಟು ಕಾಡನ್ನು ನಾಶ ಮಾಡಿದೆ. ಇದನ್ನು ಅಪಾ… ಮಾಡಿಕೊಂಡು ಜನರೇ ಕಾಡು ನಾಶ ಮಾಡಿದ್ದಾರೆ, ಎಂದು ಹೇ… ತ್ತಿದ್ದಾರೆ. ಯಾವ ಸಂಸ್ಕೃತಿಯನ್ನು ನೋಡಿದರು ಜನರು ಮ… ಪ್ರಾಕೃತಿಕ 'ಸಂಪತ್ತಿನೊಂದಿಗೆ ರಕ್ತ ಸಂಬಂಧ ವಿದ್ದಂತೆ ಇರುತ್ತ… ಆದರೆ ಪ್ರಭುತ್ವಕ್ಕೆ ಪ್ರಕೃತಿಯು ಸಂಪನ್ಮೂಲದ ಕೇಂದ್ರವಾಗಿ ನೋ… ತ್ತಿದೆ. ಅದಕ್ಕೆ ಕಾಡನ್ನು ಬೋಗಿಸುತ್ತಾಬಂದಿದೆ. ಕಲ್ಲುಳ್ಳ ವಿಠಲ ಹೆ… ಹೇಳಿರುವ ಮಾತು ಅಕ್ಷರಶಃ ಸತ್ಯವಾಗಿದೆ.

೧೯೫೨ರಲ್ಲಿ ಭದ್ರ ಅಣೆಕಟ್ಟು ನಿರ್ಮಾಣದಿಂದ ಸಾವಿರಾ… ಕುಟುಂಬಗಳು ಬೀದಿಪಾಲಾದವು. ನಂತರ ಇವರು ಬದುಕಿಗಾಗಿ… ಗಾಗಿ ಅರಣ್ಯವನ್ನು ಒತ್ತುವರಿ ಮಾಡಿಕೊಂಡರು. ಶಿವಮೊಗ್ಗ… ಯಲ್ಲಿ ನಿರ್ಮಿಸಿರುವ ಅಣೆಕಟ್ಟುಗಳಿಂದ ಸಾವಿರಾರು ಜನರನ್ನು ನಿ… ತಿಕರನ್ನಾಗಿ ಮಾಡಿದ ಸರಕಾರ ಅವರಿಗೆ ಸರಿಯಾಗಿ ಪುನರ್ವ… ಕಲ್ಪಿಸದೇ ತಾವೇ ಅರಣ್ಯವನ್ನು ಒತ್ತುವರಿ ಮಾಡಿಕೊಳ್ಳುವ… ಮಾಡಿತು. ಹಾಗೆಯೇ ಚಿಕ್ಕಮಗಳೂರಿನಲ್ಲಿ ಕಾಫೀ ಎಸ್ಟೇಟ್‌ಗಾ… ಅರಣ್ಯ ಒತ್ತುವರಿಯಾಯಿತು. ಭೂಹೀನ ರೈತರು ಭೂಮಿಯ… ತೆಗೆದುಕೊಂಡು ಕೃಷಿ ಮಾಡುವುದು ಅಪರಾದವಲ್ಲ. ಈ ರೀತಿ ಹ… ವಾರು ಕಾರಣಗಳಿಂದ ಜನರು ಅರಣ್ಯ ಪ್ರದೇಶದ ಜಾಗವನ್ನು ಒ… ವರಿ ಮಾಡಿಕೊಂಡಿದ್ದಾರೆ. ನಮ್ಮ ದೇಶದಲ್ಲಿ ೧೨.೫೦ ಲಕ್ಷ… ರಗೂ ಹೆಚ್ಚು ಅರಣ್ಯ ಪ್ರದೇಶ ಒತ್ತುವರಿಯಾಗಿದೆ. ಕರ್ನಾಟಕ… ೯೧೦೦೦ ಹೆಕ್ಟರು ಒತ್ತುವರಿಯಾಗಿದೆ. ಈ ಒತ್ತುವರಿಯನ್ನು ನಿ… ಮಾಡಿರುವ ಸಮಯದಲ್ಲಿ ತೆರವುಗೊಳಿಸಲು ಒಂದು ವೇಳೆ ರಾ… ಸರಕಾರವು ವಿಫಲವಾದಲ್ಲಿ ಒಂದು ಹೆಕ್ಟರು ಒತ್ತುವರಿ ಜಾಗಕ್ಕೆ ಒಂ… ಸಾವಿರ ರೂಪಾಯಗಳಂತೆ ಒಂದು ತಿಂಗಳಿಗೆ ೯.೧೦ ಕೋ… ರೂ.ಗಳು ದಂಡ ಕಟ್ಟಬೇಕಾಗುತ್ತದೆ.

ಕಾಡು ಜನರ ಕಗ್ಗತ್ತಲ ಬದುಕ…

ಪ್ರಪಂಚದಲ್ಲಿಯೇ ಅತ್ಯಂತ ಸೂಕ್ಷ್ಮ ಪ್ರದೇಶವೆಂದು ತಿಸಲಾಗಿರುವ ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ನಡೆಸು ನ ಕುದುರೆ ಮುಖ ಸಂಸ್ಥೆಯು ಭದ್ರ ನದಿಯ ಪಕ್ಕದ ವ ಲಕ್ಕ ಹೊಳೆಗೆ ಹೂಳು ತುಂಬಲೆಂದು ಕಟ್ಟಿರುವ ಕಟ್ಟನ್ನು ಕಾನೂನು ಬಾಹಿರವಾಗಿ ೬೦ ಅಡಿಯಿಂದ ೦ ಅಡಿಗಳಿಗೆ ಎರಿಸಿತು. ಇದರಿಂದ ದಟ್ಟವಾದ ದ್ದ ಜಾಗ ಸುಮಾರು ೫೫೦ ಹೆಕ್ಟರುನಷ್ಟು ಮುಳಿ ಈ ಕಾಡು ಮುಳುಗಿಸಲು ಕಂಪನಿಯವರು ರದಿಂದ ಒಪ್ಪಿಗೆಯನ್ನು ಪಡೆಯಲಿಲ್ಲ ಕೋಟ್ಯಂತರ ಾಯಿ ಮೌಲ್ಯದ ಕಾಡು ಮುಳಿಗಿಸಿದ ಕಂಪನಿಗೆ ು ಪೈಸೆ ದಂಡವನ್ನು ವಿಧಿಸದೇ ಆ ಜಾಗವನ್ನು ೀಟಿಫೈ ಮಾಡಿ ಒಂದು ಕೆಜಿಗೆ ೪೦ ಪೈಸೆಯಂತೆ ವನ್ನು ವಿದೇಶಕ್ಕೆ ಕಳಿಯಿಸುವ ಕುದುರೆ ಮುಖ ಗೆ ಉಚಿತವಾಗಿ ಒಪ್ಪಿಸಿತು. ಇದೇ ಸಂದರ್ಭದಲ್ಲಿ ಜಾಗದಲ್ಲಿ ಸಂಸ್ಥೆ ಸಮೀಪ ಕೆಂಗನಗೊಂಡನದ ೀನ ರೈತ ಬದುಕಿಗಾಗಿ ೭ ೧/೨ ಎಕರೆ ಜಾಗವನ್ನು ವರಿ ಮಾಡಿಕೊಂಡಿದ್ದರು. ಈ ಭೂಹೀನ ರೈತನಿಗೆ ೦ನೇ ಆರಣ್ಯ ಕಾಯಿದೆ [ಅರಣ್ಯ ಪ್ರದೇಶದಲ್ಲಿ ಅರ ರ ಚಟುವಟಿಕೆಗಳಿಗೆ ಅವಕಾಶ ನೀಡಬಾರದೆಂದ ೧೨-೧೯೯೬ ರಲ್ಲಿ ಸುಪ್ರೀಂಕೋರ್ಟ್ ಆದೇಶಿ ಉಲ್ಲಂಘಿಸಿದ್ದಕ್ಕಾಗಿ ೨೫೮೪೦೦೦ ರೂ.ದಂಡ ಲಾಗಿದೆ. ಅರಣ್ಯ ಇಲಾಖೆ ರೈತರ ಮೇಲೆ ಮಾತ್ರ ನು ಕ್ರಮ ತೆಗೆದುಕೊಳ್ಳುತ್ತದೆ. ಹೊರತು ಕುದುರೆ ಸಂಸ್ಥೆಯ ಮೇಲೆ ಯಾವ ಕ್ರಮ ತೆಗೆದುಕೊಳ್ಳು

ಮಲೆನಾಡು ಪ್ರದೇಶವು ಸರ್ವನಾಶವಾಗಿದೆ ಎಂದು ರದವರು ಈ ಕೊರತೆ ತುಂಬುತ್ತೆವೆಂದು ಕರ್ನಾಟಕ ್‌ಮಿಲ್‌ಗೆ ಒದಗಿಸಲು ಒಂದು ಕಡೆ ೩೦ ಸಾವಿರ . ಮತ್ತೊಂದು ಕಡೆ ೫೫ ಸಾವಿರ ಹೆಕ್ಟರು ನಲ್ಲಿ ಕೈಗಾರಿಕೋದ್ಯಮಿಗಳಿಗೆ ಉಪಯುಕ್ತವಾದ, ಗೆ ಅಹಿತವಾದ ಅಕೇಶಿಯ ಮತ್ತು ನೀಲಗಿರಿ ಲಾಯಿತು. ಕುದುರೆಮುಖ ರಾಷ್ಟ್ರೀಯ ಉದ್ಯಾನ ಶದಲ್ಲಿಯೇ ೧೫ ಸಾವಿರ ಹೆಕ್ಟರು ಜಾಗದಲ್ಲಿ

ಪಶ್ಚಿಮಘಟ್ಟದ ಪ್ರದೇಶವನ್ನು ಪ್ರಪಂಚದ ೨೫ ಜೀವ ವೈವಿಧ್ಯತೆ ರಕ್ಷಿತ ತಾಣಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಈ ದಟ್ಟ ಅರಣ್ಯ ಪ್ರದೇಶದಲ್ಲಿ ಸುಮಾರು ೨೦ ಸಾವಿರ ಜನರು ವಾಸ ಮಾಡುತ್ತಿದ್ದಾರೆ. ಇವರಲ್ಲಿ ಶೇ. ೯೦ರಷ್ಟು ಗಿರಿಜನರು. ಇವರೆಲ್ಲರು ಸಾವಿರಾರು ವರ್ಷಗಳಿಂದ ಕಾಡನ್ನು ಅವಲಂಬಿಸಿಕೊಂಡು ಇಲ್ಲಿನ ಪ್ರಕೃತಿಗೆ ಭಾವನಾತ್ಮಕವಾಗಿ ಹೊಂದಿ ಕೊಂಡು ಪ್ರಕೃತಿಯೊಂದಿಗೆ ಒಂದಾಗಿ ಬದುಕಿ ಜೀವನ ಸಾಗಿಸಿದ್ದಾರೆ. ಇಂತಹ ಆದಿವಾಸಿಗಳನ್ನು ಕಾಡು ನಾಶ ಮಾಡು ತ್ತಿದ್ದಾರೆಂದು ಹೇಳಿ ಆದಿವಾಸಿಗಳನ್ನು ಕಾಡಿನಿಂದ ಒಕ್ಕಲೆಬ್ಬಿಸಿ ಈ ಕಾಡನ್ನು ಬಹುರಾಷ್ಟ್ರಿಯ ಕಂಪನಿಗಳಿಗೆ ಒಪ್ಪಿಸುವ ಸಂಚು ನಡೆದಿದೆ.

ಕಾಡನ್ನು ಕಡಿದು ಅಕೇಶಿಯ ಗಿಡಗಳನ್ನು ನೆಡಲಾಯಿತು. ಮನೆಯಲ್ಲಿ ಜನಸಂಖ್ಯೆ ಜಾಸ್ತಿಯಾದಾಗ ರೈತರು ಕೃಷಿ ಮಾಡಲು ಕಾಡನ್ನು ಬಳಸಿಕೊಂಡರೆ ಅದನ್ನು ಒತ್ತುವರಿ ಎಂದು ಹೇಳುವ ವ್ಯವಸ್ಥೆ, ಅರಣ್ಯ ಇಲಾಖೆಯವರೇ ಕೈಗಾರಿಕೋದ್ಯಮಿಗಳಿಗೆ ಅನುಕೂಲಕರವಾದಂತಹ ಗಿಡ ಗಳನ್ನು ಬೆಳೆಸಿ ಕಾಡನ್ನು ನಾಶ ಮಾಡುತ್ತಿದ್ದಾರೆ. ಇದು ಅತಿಕ್ರಮವಲ್ಲವೇ?

ಟಿಪ್ಪು ಸುಲ್ತಾನ್ ನಂತರ ಮೈಸೂರು ಸಂಸ್ಥಾನವು ಬ್ರಿಟೀಷರ ಪಾಲಾಯಿತು. ರಾಜ್ಯದಲ್ಲಿ ಕೃಷಿ ಇತರ ಮೂಲ ಗಳಿಂದ ೩೨ ಲಕ್ಷ ಕಂದಾಯ ವಸೂಲಿಯಾಗುತಿತ್ತು. ಇದರಲ್ಲಿ ೨೭ ಲಕ್ಷ ಮೈಸೂರು ಒಡೆಯರು ಬ್ರಿಟೀಷರಿಗೆ ಒಪ್ಪಿಸಬೇಕಾಗಿತ್ತು. ಉಳಿದ ೫ ಲಕ್ಷಗಳಲ್ಲಿ ರಾಜರ,

ಮೋಜು, ಮೇಜವಾನಿಗಾಗಿ ಹಾಗೂ ಅರಮನೆಯ ಖರ್ಚು ಎಲ್ಲಾದ್ದಕ್ಕು ಸಾಕಾಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ಗುಲಾಮಿ ರಾಜರಿಗೆ ಮೋಜಿನ ಬಳಕೆಗೆ ಕಂಡಿದ್ದು ಪಶ್ಚಿಮ ಘಟ್ಟದ ದಟ್ಟವಾದ ಅರಣ್ಯ ಪ್ರದೇಶ ಸಮೃದ್ಧವಾಗಿದ್ದ ನರಸಿಂಹ ಪರ್ವತ, ಭದ್ರ, ಭಗವತಿ ಅರಣ್ಯ ಪ್ರದೇಶಗಳನ್ನು ರಕ್ಷಿತ ಅರಣ್ಯ ಪ್ರದೇಶಗಳು ಎಂದು ಘೋಷಿಸಿದರು.

ಅಂದು ಮೋಜು, ಮೋಜು ಮೇಜವಾನಿಗಾಗಿ ಕಾಡುಪ್ರಾಣಿಗಳ ಲೂಟಿಗಾಗಿ ಜನರಿಂದು ಕಿತ್ತುಕೊಂಡು ಜಾರಿಗೆ ತಂದಿರುವ ರಕ್ಷಿತ ಅರಣ್ಯಗಳನ್ನು ಮತ್ತು ಅಭಯ ಅರಣ್ಯಗಳನ್ನು ಸೇರಿಸಿ ೧೫೫ ಸಾವಿರ ಎಕರೆ ಅರಣ್ಯ ಪ್ರದೇಶದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ ಜಾರಿಗೆ ತರಲಾಗುತ್ತಿದೆ. ಈ ಉದ್ಯಾನದ ಉದ್ದೇಶದ ಮೋಜು ಮಾಡುವುದು ಮಾತ್ರವಲ್ಲ ಪಶ್ಚಿಮ ಘಟ್ಟದಲ್ಲಿರುವ ಜೈವಿಕ ಸಂಪನ್ಮೂಲಗಳನ್ನು ಲೂಟಿ ಮಾಡುವುದು ಕೂಡ ಆಗಿದೆ.

ಪಶ್ಚಿಮಘಟ್ಟ ಪ್ರದೇಶವನ್ನು ಪ್ರಪಂಚದ ೨೫ ಜೀವ ವೈವಿಧ್ಯತೆ ರಕ್ಷಿತ ತಾಣಗಳಲ್ಲಿ ಒಂದೆಂದು ಗುರುತಿಸ ಲಾಗಿದೆ. ಈ ದಟ್ಟ ಅರಣ್ಯ ಪ್ರದೇಶದಲ್ಲಿ ಸುಮಾರು ೨೦ ಸಾವಿರ ಜನರು ವಾಸ ಮಾಡುತ್ತಿದ್ದಾರೆ. ಇವರಲ್ಲಿ ಶೇ. ೯೦ರಷ್ಟು ಗಿರಿಜನರು. ಇವರೆಲ್ಲರು ಸಾವಿರಾರು ವರ್ಷಗ ಳಿಂದ ಕಾಡನ್ನು ಅವಲಂಬಿಸಿಕೊಂಡು ಇಲ್ಲಿನ ಪ್ರಕೃತಿಗೆ ಭಾವನಾತ್ಮಕವಾಗಿ ಹೊಂದಿಕೊಂಡು ಪ್ರಕೃತಿಯೊಂದಿಗೆ ಒಂದಾಗಿ ಬದುಕಿ ಜೀವನ ಸಾಗಿಸಿದ್ದಾರೆ. ಇಂತಹ ಆದಿ ವಾಸಿಗಳನ್ನು ಕಾಡು ನಾಶ ಮಾಡುತ್ತಿದ್ದಾರೆಂದು ಹೇಳಿ ಆದಿವಾಸಿಗಳನ್ನು ಕಾಡಿನಿಂದ ಒಕ್ಕಲೆಬ್ಬಿಸಿ ಈ ಕಾಡನ್ನು ಬಹುರಾಷ್ಟ್ರಿಯ ಕಂಪನಿಗಳಿಗೆ ಒಪ್ಪಿಸುವ ಸಂಚು ನಡೆದಿದೆ.

ಕಾಡಿನೊಂದಿಗೆ ಬದುಕುತ್ತಿರುವ ಬುಡಕಟ್ಟು ಜನರು ಕಾಡನ್ನು ದೇವರು ಎಂದು ಪೂಜಿಸಿಕೊಂಡು ಬಂದಿ ದ್ದಾರೆ. ಮನೆಯಲ್ಲಿ ಶುಭಾಕಾರ್ಯಗಳು ನಡೆದರೆ ಮೊದಲು ಕಾಡನ್ನು ಪೂಜಿಸುತ್ತಾರೆ. ಆದಿವಾಸಿಗಳು ಕಾಡನ್ನು ಬದುಕಾಗಿಸಿಕೊಂಡು ತಮ್ಮ ಬದುಕಿನ ಅಸ್ತಿತ್ವವ ನ್ನಾಗಿ ಕಾಡನ್ನು ಉಳಿಸಿಕೊಂಡಿದ್ದಾರೆ. ಶತೃಗಳ ಕಾಟ ದಿಂದ ತಪ್ಪಿಸಿಕೊಂಡು ಬಂದ ಕಾಡು ಪ್ರಾಣಿಗಳಿಗೆ ಈ ಬುಡಕಟ್ಟು ಜನರು ಆಶ್ರಯ ನೀಡಿದ್ದಾರೆ. ಹೀಗೆ ಹೆದರಿ ಬಂದ ಪ್ರಾಣಿಗಳನ್ನು ಕೊಲ್ಲುವುದು ಅಪರಾಧವೆಂದು ಆದಿ ವಾಸಿಗಳು ನಂಬಿದ್ದಾರೆ. ಗಿರಿಜನರ ಬದುಕು ಸಂಪೂರ್ಣ ವಾಗಿ ಕಿರು ಉತ್ಪನ್ನಗಳನ್ನು ಅವಲಂಬಿಸಿವೆ. ಆದಿವಾಸಿಗಳು ಕಾಡಿನಿಂದ ಹಳ್ಳಿಯ ಸಂತೆಗೆ ಬಂದು ತಮ್ಮಲ್ಲಿದ್ದ ಜೇನು ತುಪ್ಪ ಸೊಪ್ಪು ಗೆಡ್ಡೆಗೆಣಸು, ಹೂ ಮೊದಲಾದವುಗಳನ್ನು ಇಡುತ್ತಿದ್ದರು. ಅಷ್ಟೆ ಮೌನವಾಗಿ ತಮಗೆ ಅವಶ್ಯವಾದ ಅಕ್ಕಿ ಎಣ್ಣೆ ಸಾಂಬರು ಪದಾರ್ಥ ಮೊದಲಾದವುಗಳನ್ನು ಖರೀದಿಸುತ್ತಿದ್ದರು. ಅವರಿಗೆ ವಿದ್ಯೆಗೊತ್ತಿಲ್ಲ. ಇತ್ತೀಚಿಗೆ ಹಣದ ವಾತ್ಸಲ್ಯ ಗೊತ್ತಾಗಿದೆ. ಈ ಆಧುನಿಕ ಜಗತ್ತಿನೊಂದಿಗೆ ಸೆಣೆಸಾಡುವ ಕಪಟತೆಯಾಗಲಿ ಚಾಕ ಚಕ್ಯತೆಯಾಗಲಿ ಈ ಅಮಾಯಕ ಆದಿವಾಸಿಗಳಿಲ್ಲ, ಕಾಡುನಾಶ ಮಾಡಿದರೆ ಕಿರು ಉತ್ಪನ್ನಗಳು ನಮಗೆ ದೊರೆ ಯುವುದು ಕಷ್ಟ ಎಂದು ತಿಳಿದುಕೊಂಡು ಆದಿವಾಸಿಗಳು ಕಾಡನ್ನು ಕಾಪಾಡಿಕೊಂಡು ಬಂದಿದ್ದಾರೆ. ಕಾಡನ್ನು ನಾಶ ಮಾಡುತ್ತಿದ್ದ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದಾರೆ. ಕುದುರೆಮುಖ ಉದ್ಯಾನ ಪ್ರದೇಶದಲ್ಲಿ ಏನೂ ಅರಿಯದ ಆದಿವಾಸಿಗಳನ್ನು ಅರಣ್ಯ ಇಲಾಖೆ ಹಿಂಸಿಸುತ್ತಿದೆ. ಅವರಿಗೆ

ಕಾಡಿಗೆ ಹೋಗಲು ದನ ಮೇಯಿಸಲು ಕಟ್ಟಿಗೆ ತರಲು ನಿರ್ಬಂಧ ವಿಧಿಸಿದೆ. ಅಭಿವೃದ್ಧಿ ನೆಪದಲ್ಲಿ ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಿ IMF, ವಿಶ್ವಬ್ಯಾಂಕ್‌ಗಳಿಂದ ನೆರವು ಪಡೆದುಕೊಂಡು ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಪರಿಸರ ವಿರೋಧಿ ಮತ್ತು ಜನ ವಿರೋಧಿಯಾದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ್ನು ಪ್ರಭುತ್ವ ನಿರ್ಮಿಸುತ್ತಿದೆ. ಬ್ರಿಟೀಷರ ಕಾಲದಿಂದಲು ಅರಣ್ಯದ ಮೇಲಿನ ಹಕ್ಕನ್ನು ಜನರಿಂದ ಕಿತ್ತುಕೊಳ್ಳಲು ಹಲವಾರು ಯೋಜನೆಗಳು ಜಾರಿಗೆ ಬರುತ್ತಲಿವೆ. ಪ್ರಭುತ್ವತನ್ನು ಲಾಭಕ್ಕಾಗಿ ಕಾಡನ್ನು ನಾಶ ಮಾಡಿದೆ ಮತ್ತು ಜನರಿಂದಲೂ ಪ್ರಭುತ್ವ ಕಾಡು ನಾಶ ಮಾಡಿಸಿದೆ.

ಆದಿವಾಸಿ ಜನರು ಆಸ್ಪತ್ರೆಗೆ ಹೋಗಲು ಪ್ರಾರಂಭಿಸಿದ್ದು ತೀರಾ ಇತ್ತೀಚಿಗೆ. ಹೆರಿಗೆ ಮತ್ತು ಕಾಯಿಲೆಗಳಿಗೆ ಅವರ ಗಿಡಮೂಲಿಕೆಗಳೇ ಔಷದಿಗಳು, ಅಲ್ಲಿನ ಕೆಲವು ಹಿರಿಯರೇ ಅವರ ಡಾಕ್ಟರು. ೯೦ ವರ್ಷ -೧೦೦ ವರ್ಷ ಮುದುಕರು ಕಾಡಿನಲ್ಲಿ ಓಡಾಡುತ್ತಿರುತ್ತಾರೆ. ಅವರನ್ನು ಒಕ್ಕಲೆಬ್ಬಿಸಿದರೆ ಸಾಮಾಜಿಕ ಜೀವನ ಬದುಕು ಕಿತ್ತುಕೊಂಡು ಹೋಗುತ್ತದೆ. "ನಾಗರಹೊಳೆ ರಾಷ್ಟ್ರೀಯ ಉದ್ಯಾನದಿಂದ ಒಕ್ಕಲೆಬ್ಬಿಸಿದ ಆದಿವಾಸಿಗಳಲ್ಲಿ ನಡೆದ ಒಂದು ದುರಂತ ಕಥೆ. ಒಂದು ಮನೆಯಲ್ಲಿ ಗಂಡ-ಹೆಂಡತಿ ಇಬ್ಬರು. ಐದು ಎಕರೆ ಹೊಲಕೊಟ್ಟಿದೆ ಪ್ರಭುತ್ವ ಆದರೆ ಅದು ಬರುಡು ಭೂಮಿ ಪ್ರಯೋಜನವಿಲ್ಲ. ಇಬ್ಬರು ೧೫ ಕಿ.ಮಿ ದೂರದ ಕಾಫಿ ತೋಟಕ್ಕೆ ೨೦-೨೫ ರೂಪಾಯಿ ಕೂಲಿಗೆ ದಿನ ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗಬೇಕು. ಹೆಂಡತಿ ಗರ್ಭಿಣಿಯಾಗಿದ್ದರಿಂದ ಗಂಡ ಮಾತ್ರ ಹೋದರು. ಹೆಂಡತಿ ಮನೆಯಲ್ಲಿ ಒಬ್ಬಳೆ, ಎಲ್ಲರು ಕೂಲಿಗೆ ಹೋಗಿದ್ದಾರೆ. ಆಕೆಗೆ ಹೆರಿಗೆ ನೋವು ಪ್ರಾರಂಭವಾಗಿ ನೋಡಿಕೊಳ್ಳುವವರಿಲ್ಲದೆ ರಕ್ತಸ್ರಾವವಾಗಿ ಮೂರ್ಛೆ ಹೋಯಿತು. ಆ ಒದ್ದಾಟದಲ್ಲಿ ಹೊಸ್ತಿಲು ಬಳಿ ಬಂದು ಆ ತಾಯಿ ಬಿದ್ದಳು. ಅಲ್ಲಿಯೇ ಹೆರಿಗೆಯಾಯಿತು. ಅಲ್ಲಿ ಯಾರೂ ಇರಲಿಲ್ಲ. ಎಲ್ಲರದ್ದೂ ಅವರವರ ಹೊಟ್ಟೆ ಪಾಡು, ಕೂಲಿಗಾಗಿ ಹೋಗಿದ್ದಾರೆ. ಮಗುವನ್ನು ನೋಡಿದ ಬೀದಿನಾಯಿಯೊಂದು ಮಗುವನ್ನು ಕಚ್ಚಿಕೊಂಡು ಹೋಗಿ ಅರ್ಧ ತಿಂದು ಎಸೆಯಿತು. ಸಂಜೆ ಕೆಲಸ ಮುಗಿಸಿಕೊಂಡು ಗಂಡ ಮನೆಗೆ ಬಂದು ನೋಡುತ್ತಾನೆ....ಮುಂದಿನದನ್ನು ನೀವೆ ಊಹಿಸಿ ಆತನ ಸ್ಥಿತಿ ಹೇಗಿರಬಹುದು ಎಂದು. ಇದು ಯಾಕೆ ಹೀಗಾಯಿತು? ಕಾಡಿನಿಂದ ಆದಿವಾಸಿಗಳನ್ನು ಒಕ್ಕಲೆಬ್ಬಿಸಿದ ನಂತರ ಅವರಿಗೆ ಬೇರೆ ಉದ್ಯೋಗ ಗೊತ್ತಿಲ್ಲ. ನಾಗರಿಕ ಪ್ರಪಂಚದಿಂದ ದೂರವಿದ್ದಾರೆ. ಆದಿವಾಸಿಗಳನ್ನು ಒಕ್ಕಲೆಬ್ಬಿಸಿದರೆ ನೀರಿನಿಂದ ಮೀನು ಹೊರಗೆ ಹಾಕಿದಂತೆ.

ಥಾಯ್ಲೆಂಡ್‌ನಂತಹ ಚಿಕ್ಕ ದೇಶದಲ್ಲಿ ಸುಮಾರು ೩೦ ರಾಷ್ಟ್ರೀಯ ಉದ್ಯಾನಗಳಿವೆ. ಇಲ್ಲಿಗೆ ಬರುವ ಪ್ರವಾಸಿಗರಿಂದ ರೆಸಾರ್ಟ್, ಅಶ್ಲೀಲ ಸಂಸ್ಕೃತಿ ಸೃಷ್ಟಿಯಾಗಿದೆ. ಶೇ ೬೦ ರಷ್ಟು ಥಾಯ್ಲೆಂಡ್‌ನಲ್ಲಿ ಮಹಿಳೆಯರು ವೇಶ್ಯಾವಾಟಿಕೆಯಲ್ಲಿ ತೊಡಗಿದ್ದಾರೆ. ಇದೇ ರೀತಿ ರಾಷ್ಟ್ರೀಯ ಉದ್ಯಾನವಾದರೂ ಇಲ್ಲಿನ ಆದಿವಾಸಿ ಮಹಿಳೆಯರು ಬರುವ ಪ್ರವಾಸಿಗರಿಗೆ ದೇಹ ಮತ್ತು ಆತ್ಮ ಮಾರಿಕೊಳ್ಳುವ ಪರಿಸ್ಥಿತಿ ಉದ್ಭವವಾಗುತ್ತದೆ. ವೇಶ್ಯಾವಾಟಿಕೆಯನ್ನು ತಿರಸ್ಕರಿಸಿದವರು ಬಲಿಷ್ಠರಿಂದ ಶೋಷಣೆಗೆ ಒಳಗಾಗಿ ದುಡಿದು ಜೀವನ ಸಾಗಿಸಬೇಕಾಗುತ್ತದೆ. ಒಂದು ಸಮೀಕ್ಷೆಯ ಪ್ರಕಾರ ಭಾರತದ ವೇಶ್ಯಾಯರಲ್ಲಿ ಶೇ ೫೬ ರಷ್ಟು ದಲಿತರು

ಮತ್ತು ಆದಿವಾಸಿಗಳಿದ್ದಾರೆ.

ಆದಿವಾಸಿಗಳದ್ದು ಸೌಹರ್ದ ಮತ್ತು ಸ್ವಾಭಿಮಾನಿ ಸಂಸ್ಕೃತಿ. ಅವರು ಈ ದಿನದ ನೀರನ್ನು ನಾಳೆ ಬಳಸುವುದಿಲ್ಲ. ಅದು ಹಳಸುತ್ತದೆಂದು ಚೆಲ್ಲುತ್ತಾರೆ. ಆದರೆ ನಾವು ವರ್ಷಗಟ್ಟಲೆ ಬಾಟಲಿಯಲ್ಲಿ ತುಂಬಿಟ್ಟ ನೀರನ್ನು ಹಣ ಕೊಟ್ಟು ಕುಡಿಯುತ್ತೇವೆ. ವರದಕ್ಷಿಣೆ ತೆಗೆದುಕೊಳ್ಳದೆ ಮದುವೆಯಾಗುತ್ತಾರೆ. ಮೊದಲಿನಿಂದಲು ವಿಧವೆಯರಿಗೆ ಮದುವೆಯಾಗಲು ಅವಕಾಶವಿದೆ. ಹಾಡಿಗಳಲ್ಲಿ ಒಬ್ಬರಿಗೆ ಕಾಯಿಲೆ ಬಂದರೆ ಊರೇ ಚಿಂತಿಸುತ್ತದೆ, ಒಬ್ಬರು ಸತ್ತರೆ ಊರೇ ದುಃಖ ಪಡುತ್ತದೆ. ಇಂತಹ ಒಳ್ಳೆಯ ಸಂಸ್ಕೃತಿಯೊಂದಿಗೆ ಬದುಕುತ್ತಿರುವ ಆದಿವಾಸಿಗಳನ್ನು ಒಕ್ಕಲೆಬ್ಬಿಸಿದರೆ ಅವರದು ಸಂಸ್ಕೃತಿ ರಹಿತ ಬದುಕಾಗುತ್ತದೆ. ಏಕೆಂದರೆ ಕಾಡಿನ ಸಂಸ್ಕೃತಿ ರೀತಿ-ನೀತಿಗಳಿಗೂ, ನಾಡಿನ ಸಂಸ್ಕೃತಿ ರೀತಿ-ನೀತಿಗಳಿಗೂ ಅನೇಕ ವೈರುಧ್ಯಗಳಿವೆ. ಆದಿವಾಸಿಗಳನ್ನು ಕಾಡಿನಿಂದ ಪ್ರತ್ಯೇಕಿಸಿ ನಾಗರಿಕ ಪ್ರಪಂಚಕ್ಕೆ ತರುವ ಯೋಜನೆಯನ್ನು ಕುರಿತು "ಮೊಗಳ್ಳಿ ಗಣೇಶ್"ರವರು ತಮ್ಮ "ದಲಿತರು ಮತ್ತು ಜಾಗತಿಕರಣ" ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ. ಯಾವುದೇ ಜನಾಂಗದ ಉದ್ಧಾರದ ಬದಲಾವಣೆಗಳು ಅವರ ಸಾಂಸ್ಕೃತಿಕ ಲೋಕದ ವಿವೇಕವನ್ನೇ ಕಿತ್ತು 'ತನ್ನ ನಂಬಿಕೆಯನ್ನು ಅ[illegible] ಮಣಶೀಲವಾಗಿ ಹೇರಿದರೆ ಅಂತಹ ಯಾವುದೇ ಯೋಜನೆಗಳು ಯಶಸ್ವಿಯಾಗಲಾರವು.

ತಲತಲಾಂತರದಿಂದ ದಟ್ಟವಾದ ಕಾಡುಗಳಲ್ಲಿ ವಾಸಿಸುತ್ತಿದ್ದ ಬುಡಕಟ್ಟು ಜನರು ಬೆಳಿಗ್ಗೆಯಿಂದ ಹೊಟ್ಟೆಗೆ ಏನನ್ನು ತಿನ್ನದೇ ಸೂರ್ಯನು ನಡುನೆತ್ತಿಯವರೆಗೂ ಬರುವವರೆಗೆ ದುಡಿಯುತ್ತಿದ್ದಾರೆ. ಸೂಟ್-ಬೂಟ್ ಧರಿಸಿದ ಪುರುಷರು ರೇಷ್ಮೆ ಇಲಕಲ್ ಸೀರೆಗಳು ಉಡುವ ಹೆಂಗಸರು ಒಂದುಕಡೆಗೆಯಿದ್ದರೆ. ಕೇವಲ ಲಂಗೋಟಿಗಳನ್ನು ಧರಿಸಿದ ಆದಿವಾಸಿ ಪುರುಷರು ಮತ್ತು ಮಾರ್ಯದೆ ಮುಚ್ಚಲು ತುಂಡು ಬಟ್ಟೆ ಉಟ್ಟು ಅರೆ ಬೆತ್ತಲೆ ಆದಿವಾಸಿ ಹೆಂಗಸರು ಇನ್ನೊಂದು ಕಡೆಗೆ ಇದ್ದಾರೆ.

ಮದ್ಯ ಕುಡಿದು ಹರಟೆ ಹೊಡೆಯುವ ಕಾಫಿ ತೋಟದ ಭೂಮಾಲೀಕರ ಗುಂಪು ಒಂದು ಕಡೆಯಿದ್ದರೆ ೧೦ km. ರಿಂದ ೧೫ km. ವರಗೂ ತಲೆಯ ಮೇಲೆ ಭಾರ ಹೊತ್ತುಕೊಂಡು ಕ್ಷಣಗಾಲವು ವಿಶ್ರಮಿಸದೇ ದುಡಿಯುವ ಬಡವರು ಇನ್ನೊಂದು ಕಡೆಗೆ, ಡೈನಿಂಗ್ ಟೇಬಲ್ ಮೇಲೆ ಕುಳಿತುಕೊಂಡು ಮೃಷ್ಟಾನ್ನ ಭೋಜನ ಮಾಡುವ ಗುಂಪು ಒಂದು ಕಡೆಯಿದ್ದರೆ, ಮಡಿಕೆಯಲ್ಲಿ ಬೆಯಿಸಿದ ಗಂಜಿಯಲ್ಲಿ ಅಗಳುಗಳನ್ನು ಆರಿಸಿ ತಿನ್ನುವ ಆದಿವಾಸಿ ರೈತರು ಇನ್ನೊಂದು ಕಡೆಗೆ.

ಇಂದು ಮಲೆನಾಡಿನಲ್ಲಿ ಹಳ್ಳಿಗೆ ಸರಿಯಾಗಿ ರಸ್ತೆಯಿಲ್ಲ, ವಿದ್ಯುತ್, ದೂರವಾಣಿ ಸೌಲಭ್ಯವಿಲ್ಲ, ಸಾರಿಗೆ ವ್ಯವಸ್ಥೆಯಿಲ್ಲ. ಹಳ್ಳಕೊಳ್ಳಗಳು ಇದ್ದಲ್ಲಿ ಸೇತುವೆಯಿಲ್ಲ ಮಕ್ಕಳು ಶಾಲೆಗೆ ಹೋಗಬೇಕಾದರೆ ೧೨,km. ಆಸ್ಪತ್ರೆಗೆ ಹೋಗಬೇಕಾದರೆ ೧೦,km. ಹೋದರೂ ವೈದ್ಯರಿಲ್ಲ, ಕಾಲೇಜ್‌ಗೆ ಹೋಗಬೇಕಾದರೆ ೧೫,km ಅಂಗಡಿಗೆ ಹೋಗಿ ಬೆಂಕಿಪೊಟ್ಟಣ ತೆಗೆದು ಬರಬೇಕಾದರೆ ೩,km ಹೋಗಬೇಕು ಇಂತಹ ಕಗ್ಗತ್ತಲೆ ಪ್ರದೇಶದಲ್ಲಿ ಆದಿವಾಸಿಗಳು ಕೃಷಿ ಮಾಡಿ ಅರಣ್ಯ ಉತ್ಪನ್ನಗಳನ್ನು ಬಳಸಿಕೊಂಡು ನಾಗರಿಕ ಪ್ರಪಂಚದಿಂದ ದೂರವಾಗಿ ಬದುಕುತ್ತಿದ್ದವರು ಎಂದಿಗೂ ತಮ್ಮ ಸಮಸ್ಯೆಗಳ ಬಗ್ಗೆ ಚಿಂತಿಸಿದವರೇ ಅಲ್ಲ ಹಾಗೂ ಭೂಮಾಲೀಕರು ಎಷ್ಟು ಶೋಷಣೆ ಮಾಡಿದರೂ ಅವರಿಗೆ ಶೋಷಣೆ ಎಂದರೆ ಏನೆಂದು ಅರ್ಥ ಮಾಡಿಕೊಂಡೇ ಇಲ್ಲ. ಅವರಿಗೆ ಬದುಕೇ ಮುಖ್ಯವಾಗಿತ್ತು. ಆದಿವಾಸಿಗಳು ಯಾವುದೇ ರೀತಿಯ ಲಾಭ ಬರುವ ವೃತ್ತಿಯನ್ನಾಗಲಿ ಉದ್ಯೋಗವನ್ನಾಗಲಿ ಅವರು ಅನುಸರಿಸುವುದಿಲ್ಲ. ಹೀಗಾಗಿ ಕಡಿಮೆ ಆದಾಯದ

ಇಂದು ಮಲೆನಾಡಿನಲ್ಲಿ ಹಳ್ಳಿಗೆ ಸರಿಯಾಗಿ ರಸ್ತೆಯಿಲ್ಲ, ವಿದ್ಯುತ್, ದೂರವಾಣಿ ಸೌಲಭ್ಯ ವಿಲ್ಲ, ಸಾರಿಗೆ ವ್ಯವಸ್ಥೆಯಿಲ್ಲ. ಹಳ್ಳಕೊಳ್ಳಗಳು ಇದ್ದಲ್ಲಿ ಸೇತುವೆಯಿಲ್ಲ ಮಕ್ಕಳು ಶಾಲೆಗೆ ಹೋಗಬೇಕಾದರೆ ಆಸ್ಪತ್ರೆಗೆ ಹೋಗಬೇಕಾದರೆ ಹತ್ತಾರು ಕಿ. ಮೀ ಹೋಗಬೇಕು. ಹೋದರೂ ವೈದ್ಯರು ಇಲ್ಲ. ಅಂಗಡಿಗೆ ಹೋಗಿ ಬೆಂಕಿಪೊಟ್ಟಣ ತೆಗೆದುಕೊಂಡು ಬರಬೇಕಾದರೂ ನಾಲ್ಕಾರು ಕಿ.ಮೀ ಹೋಗಬೇಕು. ಇಂತಹ ಕಗ್ಗತ್ತಲೆ ಪ್ರದೇಶದಲ್ಲಿ ಆದಿವಾಸಿಗಳು ಕೃಷಿಮಾಡಿ. ಅರಣ್ಯ ಉತ್ಪನ್ನಗಳನ್ನು ಬಳಸಿಕೊಂಡು ನಾಗರಿಕ ಪ್ರಪಂಚದಿಂದ ದೂರವಾಗಿ ಬದುಕುತ್ತಿದ್ದವರು ಎಂದಿಗೂ ತಮ್ಮ ಸಮಸ್ಯೆಗಳ ಬಗ್ಗೆ ಚಿಂತಿಸದವರೇ ಅಲ್ಲ. ಹಾಗೂ ಭೂಮಾಲೀಕರು ಎಷ್ಟು ಶೋಷಣೆ ಮಾಡಿದರೂ ಅವರಿಗೆ ಶೋಷಣೆಯೆಂದು ಅರ್ಥ ಮಾಡಿಕೊಂಡೇ ಇಲ್ಲ. ಅವರಿಗೆ ಬದುಕೇ ಮುಖ್ಯವಾಗಿತ್ತು. ಆದಿವಾಸಿ ಗಳು ಯಾವುದೇ ರೀತಿಯ ಲಾಭ ಬರುವ ವೃತ್ತಿಯನ್ನಾಗಲಿ ಉದ್ಯೋಗವನ್ನಾಗಲಿ ಅವರು ಅನುಸರಿಸುವುದಿಲ್ಲ. ಹೀಗಾಗಿ ಕಡಿಮೆ ಆದಾಯದ ಹೆಚ್ಚಿನ ಖರ್ಚು ಪರಿಣಾಮಗಳಿಗೆ ಸಾಲದ ಬಾಧೆ ಬಡತನದಿಂದ ಬಳಲುವ ಆದಿವಾಸಿಗಳಿಗೆ ಲಾಭ ಬಡುಕ ಗುತ್ತಿಗೆದಾರರು ಹಣದ ಆಸೆಯನ್ನು ತೋರಿ ಅವರನ್ನು ದುಡಿಯಲು ಬಳಸಿಕೊಳ್ಳುವುದು ಹಾಗೂ ಅವರ ಆಸ್ತಿ-ಪಾಸ್ತಿಯನ್ನು ಕದಿಯುವುದು ಇಂಥಾ ದಲ್ಲಾಳಿಗಳ ಮೋಸಕ್ಕೆ ಬಲಿಯಾಗಿ ಹೊಲ-ಮನೆಗಳನ್ನು ಕಳೆದು ಕೊಂಡು ಉಪಜೀವನಕ್ಕಾಗಿ ಹಲವಾರು ಮಾರ್ಗಹಿಡಿದಿದ್ದಾರೆ.

ನ ಖರ್ಚು ಪರಿಣಾಮಗಳಿಗೆ ಸಾಲದ ಬಾಧೆ ತನದಿಂದ ಬಳಲುವ ಆದಿವಾಸಿಗಳಿಗೆ ಲಾಭ ಬಡುಕ ಗೆದಾರರು ಹಣದ ಆಸೆಯನ್ನು ತೋರಿ ಅವರನ್ನು ಯಲು ಬಳಸಿಕೊಳ್ಳವುದು ಹಾಗೂ ಅವರ ಆಸ್ತಿ-ಯನ್ನು ಕದಿಯುವುದು ಇಂಥಾ ದಲ್ಲಾಳಿಗಳ ಸಕ್ಕೆ ಬಲಿಯಾಗಿ ಹೊಲ-ಮನೆ ಕಳೆದುಕೊಂಡು ಜೀವನಕ್ಕಾಗಿ ಹಲವಾರು ಮಾರ್ಗಗಳು ಹಿಡಿದಿದ್ದಾರೆ. ರ ಮಹಿಳೆಯರಿಗೆ ಉದ್ಯೋಗ ಕೊಡಿಸುವ ನೆಪದಲ್ಲಿ ವಾಟಿಕೆಗೆ ಮಾರಾಟ ಮಾಡಲಾಗುವುದು. ಇಂತಹ ಕ ರೀತಿಯ ತೊಂದರೆಗಳನ್ನು ಆದಿವಾಸಿಗಳು ರಿಸುತ್ತಿದ್ದಾರೆ. ಬ್ರಿಟಿಷ ಸರಕಾರ ಕೂಡ ಕುಡಿಯುವ ಗೋಮಾಳ ವ್ಯವಸ್ಥೆ ಮಾಡಿತ್ತು. ಈಗಿನ ಸರಕಾರ ವ ಸೌಲಭ್ಯಗಳು ಕೊಟ್ಟಿದೆ ಎಂದು ಅವರ ಆಕ್ರೋಶ ಲು ಮುಟ್ಟಿದೆ. ಇದ್ದಕಿದ್ದ ಹಾಗೇ ಕೃಷಿ ಬಿಟ್ಟು ದ ತೊಲಗಿ ಎಂದು ಕಿರುಕುಳ ನೀಡಿದರೆ ಯಿಲ್ಲದ, ಬದುಕಲು ನೆಲೆಯಿಲ್ಲದ ಅವರು ಎಲ್ಲಿಗೆ ಗಬೇಕೆಂಬ ಪ್ರಶ್ನೆಯಿಂದ ತತ್ತರಿ ಸಿದ್ದಾರೆ.

೧೯೮೦ಕ್ಕಿಂತ ಮುಂಚೆ ಜೈವಿಕ ವೈವಿದ್ಯತೆಯ ಬಗ್ಗೆ ರು ಅಷ್ಟೊಂದು ಆಲೋಚನೆ ಮಾಡುತ್ತಿರಲಿಲ್ಲ. ತಂತ್ರಜ್ಞಾನ ಬೆಳೆಯುತ್ತಿದ್ದಂತೆ ಮುಂದುವರೆದ ಗಳಿಗೆ ಜೈವಿಕ ವೈವಿಧ್ಯತೆ ಕೇಂದ್ರಗಳೆಲ್ಲ ಸಂಪನ್ಮೂಲ ಗಳಾಗಿ ಕಂಡವು ಶ್ರೀಮಂತ ದೇಶಗಳು ಜೈವಿಕ ನ್ಮೂಲದ ಮೇಲೆ ಕಣ್ಣಿಟ್ಟು ಉದ್ಯಾನ ಒತ್ತುವರಿ ತೆರು ಹೆಸರಲ್ಲಿ ಕಾಡುಗಳನ್ನು ಜನರಿಂದ ಕಿತ್ತುಕೊಳ್ಳುವ ನಡೆಸಿದೆ.

ಪಶ್ಚಿಮ ಘಟ್ಟವು ಪ್ರಪಂಚದ ೨೫ ಜೀವ ವೈವಿಧ್ಯದ ಹೆಸರಾದ ಸೂಕ್ಷ್ಮ ಪ್ರದೇಶಗಳಲ್ಲಿ ಅಂದರೆ "ಹಾಟ್ ಗಳಲ್ಲಿ ಒಂದು. ಭಾರತವು ಪ್ರಪಂಚದ ವೈವಿಧ್ಯ ಬೆಳೆ ಹೊಂದಿರುವ ದೇಶಗಳಲ್ಲಿ ೧೨ನೇ ಸ್ಥಾನದಲ್ಲಿದೆ. ಸಂಸ್ಥೆ-ಪರಿಸರ ವಿಭಾಗವು ಪಶ್ಚಿಮ ಘಟ್ಟಗಳನ್ನು ಭಾರತದಲ್ಲೆ ಪ್ರಮುಖವಾಗಿ ಮತ್ತು ಪತ್ಯೇಕವಾಗಿ ಾಗಿ ಮುಚ್ಚಿಟ್ಟು ಸಂರಕ್ಷಿಸಬೇಕಾಗಿರುವ ಪ್ರದೇಶ ಅಂಗೀಕರಿಸಿದೆ. ಕೃಷಿ ಸಂಬಂಧಿತ ಜೈವಿಕ ಜ್ಞಾನದಲ್ಲಿ ೭ನೆ ಸ್ಥಾನದಲ್ಲಿದೆ. ೧೯೯೦ ರಲ್ಲಿ ವನ್ನು ಹೆಚ್ಚು ಜೈವಿಕ ವೈವಿಧ್ಯತೆಯ ಹೊಂದಿರುವ ಎಂದು ಗುರುತು ತಿಳಿಸಲಾಗಿದೆ. ಪ್ರಪಂಚದಲ್ಲಿರುವ ಳಿಗಳಲ್ಲಿ ಶೇ. ೧೧ ರಷ್ಟು ಸಸ್ಯ ತಳಿಗಳು ಅಂದರೆ ರು ೪೫೫೦೦ ಭಾರತದಲ್ಲಿವೆ. ೧೭೫೦೦ ಕ್ಕೂ ರೀತಿಯ ಹೂವು ಬಿಡುವ ಗಿಡಗಳು ನಮ್ಮ ಲ್ಲಿವೆ. ಹಾಗೂ ೮೬೮೭೪ ಕ್ಕೂ ಹೆಚ್ಚು ಜಾತಿಯ ಳಿವೆ. ಪ್ರಪಂಚದ ಜೀವ ಪ್ರಬೇಧಗಳಲ್ಲಿ ಶೇ ೬೦ ಜೀವ ಪ್ರಬೇಧಗಳು ಭಾರತದಲ್ಲಿವೆ. ೪೮೪ ವನ್ಯ ವಿಭಾಗಗಳಿವೆ. ಪಶ್ಚಿಮ ಘಟ್ಟದಲ್ಲಿ ೭೦೦೦mm ಬಿಳುತ್ತದೆ. ಪಶ್ಚಿಮಘಟ್ಟದ ಕಾಡುಗಳು ದಲ್ಲಿಯೇ ಉತ್ತಮವಾದ ಕಾಡುಗಳು. ಇಷ್ಟೊಂದು ಸಂಪನ್ಮೂಲವನ್ನು ಹೊಂದಿರುವ ಜಾಗಗಳಲ್ಲಿ ಕ್ಕೆ ಇದರ ಬಗ್ಗೆ ಅರಿವುಯಿಲ್ಲದೆ ರಾಷ್ಟ್ರೀಯ ನಗಳನ್ನು ನಿರ್ಮಿಸಿ ಜೈವಿಕ ಸಂಪನ್ಮೂ ಗಳನ್ನು ಮಾಡಲು ವಿದೇಶಿ ಸಂಸ್ಥೆಗಳಿಗೆ ಅವಕಾಶ ೂಡುತ್ತಿವೆ. ವಿದೇಶಿ ಸಂಸ್ಥೆಗಳೂ ಕೊಟ್ಟ ಎಂಜಲು ಗಿ ಹೊಸ ಹೊಸ ಯೋಜನೆಗಳ ಹೆಸರಲ್ಲಿ ಜೈವಿಕ ವೈವಿಧ್ಯತೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸರಕಾರೇತರ ಸಂಸ್ಥೆ (NGO) ಗಳು ವಿದೇಶಕ್ಕೆ ಮಾರುತ್ತವೆ. ೧೯೮೦ರಲ್ಲಿ ಭಾರತದಲ್ಲಿ ೨೫ ಉದ್ಯಾನಗಳಿದ್ದರೆ ಇಂದು ೮೭ ರಾಷ್ಟ್ರೀಯ ಉದ್ಯಾನಗಳಿವೆ. ಈ ಪಾರ್ಕ್‌ಗಳಲ್ಲಿ ಜೈವಿಕ ತಂತ್ರಜ್ಞಾನ ಬಳಸಿ ಔಷದಿ ಕ್ರಿಮಿನಾಶಕ ಇತ್ಯಾದಿಗಳನ್ನು ತಯಾರು ಮಾಡಿ ಬಹುರಾಷ್ಟ್ರೀಯ ಕಂಪನಿಗಳು ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡುತ್ತಿವೆ.

ರಾಷ್ಟ್ರೀಯ ಉದ್ಯಾನಗಾಗಿ, ನೌಕನೆಲೆಗಳಿಗಾಗಿ, ಅಣುಶಕ್ತಿ ಸ್ಥಾವರಗಳಿಗಾಗಿ, ಅಣೆಕಟ್ಟು ನಿರ್ಮಾಣಕ್ಕಾಗಿ, ಗಣಿಗಾರಿಕೆಗಾಗಿ, ರಾಷ್ಟ್ರೀಯ ಹೆದ್ದಾರಿಗಳಿಗಾಗಿ, ಹೇಗೆ ಬೃಹತ್ ಯೋಜನೆಗಳಿಗಾಗಿ ಆದಿವಾಸಿ ಮನೆಗಳ ಮೇಲೆ ಪ್ರಭುತ್ವ ದಾಳಿ ಮಾಡುತ್ತಲೆ ಇದೆ. "ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯು" ೨೦೦೫ರಲ್ಲಿ ಸಿದ್ಧಪಡಿಸಿದ ವಿಶ್ಲೇಷಣಾ ವರದಿಯ ಪ್ರಕಾರ ಆಂಧ್ರದಲ್ಲಿ ೨.೭೯ ಲಕ್ಷ ಎಕರೆ ಮಧ್ಯ ಪ್ರದೇಶದಲ್ಲಿ ೧.೫೮ ಲಕ್ಷ ಎಕರೆ. ಕರ್ನಾಟಕದಲ್ಲಿ ೧.೩ ಲಕ್ಷ ಎಕರೆ, ಗುಜರಾತ್‌ನಲ್ಲಿ ೧.೧೬ ಲಕ್ಷ ಎಕರೆ ಭೂಮಿಯನ್ನು ಬುಡಕಟ್ಟುಗಳಿಂದ ಕಸಿದುಕೊಳ್ಳಲಾಗಿದೆ. ಅಂದರೆ ಕೋಟ್ಯಾಂತರ ಬುಡಕಟ್ಟು ಜನ ನಿರ್ಗತಿಕರಾಗಿದ್ದಾರೆ. ಸ್ವತಂತ್ರ್ಯ ಭಾರತದಲ್ಲಿ ಆದಿವಾಸಿಗಳ ಜನಸಂಖ್ಯೆ ಒಟ್ಟಾರೆ ಜನಸಂಖ್ಯೆಯ ಶೇ ೮ ರಷ್ಟಿದ್ದು ಅಭಿವೃದ್ಧಿ ಯೋಜನೆಗಳಿಂದ ಕಳೆದ ೫೮ ವರ್ಷಗಳಲ್ಲಿ ಎತ್ತಂಗಡಿಯಾದ ೩.೫ ಕೋಟಿ ಜನರಲ್ಲಿ ಶೇ ೪೦ ರಷ್ಟು ಜನರು ಆದಿವಾಸಿಗಳೇ. ಇದರಲ್ಲಿ ಇದುವರಿಗೂ ಶೇ ೧೦ ರಷ್ಟು ಜನರಿಗೆ ಸರಿಯಾದ ಪುನರ್ವಸತಿ ಅಥವಾ ಪರಿಹಾರ ಸಿಕ್ಕಿಲ್ಲ. ನಿರ್ಗತಿಕರಾದ ಆದಿವಾಸಿಗಳನ್ನು ಕೋಮುವಾದಿಗಳು ಕೋಮುಗಲಭೆಗಳಿಗೆ ಉಪ ಯೋಗಿಸಿಕೊಳ್ಳುತ್ತಿದ್ದಾರೆ.

ಆಳುವವರು ಆದಿವಾಸಿಗಳ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ. ಆದಿವಾಸಿಗಳ ಸಮಸ್ಯೆಗಳ ಪರವಾಗಿ ದನಿಯೆತ್ತಿದರೆ ಶಿಕ್ಷೆ ವಿಧಿಸುತ್ತದೆ ಪ್ರಭುತ್ವ. ಅಭಿವೃದ್ಧಿ ಹೆಸರಲ್ಲಿ ಆದಿವಾಸಿಗಳನ್ನು ಈ ದೇಶದ ಜನತೆಯನ್ನು ಈ ದೇಶದ ಸಂಪನ್ಮೂಲಗಳನ್ನು ದೇಶಿಯ ಹಾಗೂ ವಿದೇಶಿಯರಿಗೆ ಒತ್ತೆ ಇಡುವ ಸಂಚಿನ ವಿರುದ್ಧ, ಆದಿವಾಸಿಗಳ ನಿಜವಾದ ಸ್ವತಂತ್ರಕ್ಕಾಗಿ ದನಿಯೆತ್ತಿದ ನರ್ಮದ ನದಿ ಬಚಾವೋ ಅಂದೋಲನದ [NBA] ನಾಯಕಿ ಪರಿಸರ ಪ್ರೇಮಿ ಮೇಧಪಾಟ್ಕರು ಮತ್ತು ಆದಿವಾಸಿಗಳ ಸಮಸ್ಯೆಗಳನ್ನು ತೆಗೆದುಕೊಂಡು ಛತ್ತೀಸಗಢದಲ್ಲಿ ಹೋರಾಟ ಮಾಡಿದ ಆರ್ಥಿಕ ಸಲಹಾ ಮಂಡಳಿಯ ಸದಸ್ಯೆ [ಇದರ ಅಧ್ಯಕ್ಷೆ ಸೋನಿಯ ಗಾಂಧಿ ಲಾಭದಾಯಕ ಹುದ್ದೆ ವಿವಾದದಿಂದ ರಾಜಿನಾಮೆ ಕೊಟ್ಟಿದ್ದಾರೆ] ರಾದ ಬೆಲ್ಜಿಯಂನ ಅರ್ಥಶಾಸ್ತ್ರಜ್ಞ ಡ್ರೀಮ್ ಬ್ರೇಜ್‌ರನ್ನು ಬಂಧಿಸಿ ಮಾನಸಿಕವಾಗಿ ದೈಹಿಕವಾಗಿ ವ್ಯವಸ್ಥೆ ಚಿತ್ರ ಹಿಂಸೆ ನೀಡಿದೆ.

ದಕ್ಷಿಣ ಭಾರತದ ಜೀವ ವಾಹಿನಿಗಳೆನಿಸಿಕೊಂಡ ನಾಲ್ಕು ನದಿಗಳಾದ ಕೃಷ್ಣ, ಕಾಳಿ, ತುಂಗಭದ್ರ ಮತ್ತು ಕಾವೇರಿ ನದಿಗಳು ಪಶ್ಚಿಮ ಘಟ್ಟದಲ್ಲಿ ಉಗಮವಾಗುತ್ತವೆ. ಈ ನದಿಗಳಿಂದ ದಕ್ಷಿಣ ಭಾರತದ ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಬಹುತೇಕ ಪ್ರದೇಶಗಳಿಗೆ ಕುಡಿಯುವ ನೀರು, ಕೃಷಿಗೆ ನೀರವರಿ ವ್ಯವಸ್ಥೆ ಮತ್ತು ವಿದ್ಯುಚ್ಛಕ್ತಿಯನ್ನು ಕೊಡುತ್ತಿದೆ. ಇಂತಹ ಪ್ರದೇಶದಲ್ಲಿ ನಿರ್ಮಿಸುತ್ತಿರುವ ಪರಿಸರ ವಿರೋಧಿ ಜನ ವಿರೋಧಿ, ಯೋಜನೆಗಳನ್ನು ವಿರೋಧಿಸಿ ನಮ್ಮ ಜೀವ ವೈವಿಧ್ಯತೆಯ ಮೇಲಿನ ಹಕ್ಕನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಲ್ಲವೇ? □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ - ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

೧೯೮೦ರ ದಶಕ ದಿಂದೀಚೆಗೆ ಜಾತಿಯ ಹುಟ್ಟು ಮತ್ತು ಬೆಳವಣಿಗೆ ಯನ್ನು ಕುರಿತಂತೆ, ಶಕ್ತಿಶಾಲಿಯಾದ ತನ್ನ ತರ್ಕದ ನೇಯ್ಗೆಯಲ್ಲಿಯೇ ಸಮಗ್ರತೆಯನ್ನು ಪಡೆ ದಿರುವ, ಒಂದೇ ಏಟಿಗೆ ಜಾತಿ ಕುರಿತ ಅಕಡೆಮಿಕ್ ಮತ್ತು ಸಾರ್ವಜನಿಕ ಗ್ರಹಿಕೆ ಗಳನ್ನು ಬುಡಮೇಲು ಮಾಡಲಿಲ್ಲ. ಸಿದ್ಧಾಂತ ವೊಂದು ಚಾಲ್ತಿಗೆ ಬಂದಿತು. ಅದು ಯಾವು ದೆಂದರೆ, ಜಾತಿಯೆಂಬುದು ಯುರೋಪಿಯನ್ನರ ಸೃಷ್ಟಿ' ನಾವು ಈಗ ಕಾಣುತ್ತಿ ರುವ ಜಾತಿ ವ್ಯವಸ್ಥೆಯು ವಸಾಹತು ಪೂರ್ವ ಭಾರತದಲ್ಲಿ ಚಾಲ್ತಿಯಲ್ಲಿರ ಲಿಲ್ಲ. ಈಗ ನಾವು ಯಾವುದನ್ನು 'ಜಾತಿ' ಯೆಂದು ಪರಿಗಣಿಸುತ್ತಿ ದ್ದೇವೆಯೋ ಅದು ಪೂರ್ಣವಾಗಿ ಭಾರ ತೀಯ ಸಮಾಜದ ಬಗೆಗೆ ಯುರೋಪಿಯನ್ನರು ಹೊಂದಿರುವ 'ಗ್ರಹಿಕೆ' ಅದನ್ನೇ ನಾವು ನಮ್ಮ ದಿನ ನಿತ್ಯದ ಬದುಕಿನಲ್ಲಿ ಅನುಸರಿಸುತ್ತಿದ್ದೇವೆ. ಈ ಸಿದ್ಧಾಂತ 'ಗಣ್ಯ' ಅಕಡೆಮಿಕ್ ವಲಯಗಳಲ್ಲಿ ಸಾಕಷ್ಟು ಜನಪ್ರಿಯವಾಗಿದೆ.

ಜಾತಿ ವಾಸ್ತವವೊ? ಮಿಥ್ಯೆಯೊ?

ಡಾ|| ಸಿ.ಜಿ. ಲಕ್ಷ್ಮಿಪತಿ

ಪೀಠಿಕೆ:

ಜಾತಿಯ ಹುಟ್ಟಿನ ಬಗೆಗೆ ಅನೇಕ ಸಿದ್ಧಾಂತಗಳಿವೆ.

ಮೊದಲನೆಯದು ವರ್ಣವ್ಯವಸ್ಥೆಯ ರೂಪದಲ್ಲಿದ್ದು ನಂತರ ಅದು ಹೋಳು ಹೋಳಾಗಿ ವಿಂಗಡಿಸಲ್ಪಟ್ಟು ಜಾತಿಯು ರೂಪುಗೊಂಡಿತು.

ಎರಡನೆಯದು, ವ್ಯಕ್ತಿಗಳು, ಕುಟುಂಬಗಳು ಕೈಗೊಳ್ಳುತ್ತಿದ್ದ ಕಸುಬಿನ ಆಧಾರದ ಮೇಲೆ ಸಮಾಜವು ವಿಂಗಡಿಸಲ್ಪಟ್ಟು ಜಾತಿಯ ರಚನೆಯಾಯಿತು.

ಮೂರನೆಯದು ಎಲ್ಲ ಜಾತಿಗಳೂ ಆರಂಭದಲ್ಲಿ ಬುಡಕಟ್ಟಿನ ಸ್ವರೂಪದಲ್ಲಿದ್ದು ನಂತರ ಪರಿವರ್ತನೆ ಹೊಂದಿದವು. ಈಗಲೂ ಆ ಪ್ರಕ್ರಿಯೆ ಮುಂದುವರಿಯುತ್ತಿದೆ. ನಾಲ್ಕನೆಯದು, ಮಧ್ಯ ಏಷಿಯಾದಿಂದ ಬಂದ ಆರ್ಯರು ಅರ್ಥಾತ ಬ್ರಾಹ್ಮಣರು ಮೂಲನಿವಾಸಿಗಳ ಮೇಲೆ ಆಕ್ರಮಣ ಮಾಡಿ ಜಾತಿ ಪದ್ಧತಿಯನ್ನು ಹೇರಿದರು. ಹೀಗೆ ಜಾತಿ ವ್ಯವಸ್ಥೆಯು ರೂಪಗೊಂಡ ಬಗೆಯನ್ನು ಕುರಿತು ಹಲವಾರು ಸಿದ್ಧಾಂತಗಳು ಚಾಲ್ತಿಯಲ್ಲಿವೆ. ಸಮಾಜ ವಿಜ್ಞಾನಿಗಳು ಮತ್ತು ಸಮಾಜ ಶಾಸ್ತ್ರಜ್ಞರ ನಡುವೆ ಮೇಲಿನ ಸಿದ್ಧಾಂತಗಳಲ್ಲಿ ಯಾವುದು ಸಮರ್ಥನೀಯವಾಗಿ ಜಾತಿಯ ಹುಟ್ಟನ್ನು ವಿವರಿಸುತ್ತದೆ, ಯಾವುದು ವಿವರಿಸುವುದಿಲ್ಲ ಎಂಬ ಚರ್ಚೆ ನಿರಂತರವಾಗಿದೆ. ಒಂದು ಸಿದ್ಧಾಂತ ಮತ್ತೊಂದು ಸಿದ್ಧಾಂತವನ್ನು ಗುಡಿಸಿ ಹಾಕುವಷ್ಟು ಪ್ರಬಲವಾಗಿರಲಿಲ್ಲ. ಅವೆಲ್ಲವೂ ಸ್ವಲ್ಪ ಮಟ್ಟಿಗೆ ಅಕಡೆಮಿಕ್ ಚೌಕಟ್ಟಿನಲ್ಲಿಯೂ, ಸಾರ್ವಜನಿಕ ಬದುಕಿನಲ್ಲಿಯೂ ಚರ್ಚೆಗೊಳ ಪಡುತ್ತಿದ್ದವು.

ಆದರೆ ೧೯೮೦ರ ದಶಕದಿಂದೀಚೆಗೆ ಜಾತಿಯ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತಂತೆ, ಶಕ್ತಿಶಾಲಿಯಾದ ತನ್ನ ತರ್ಕದ ನೇಯ್ಗೆಯಲ್ಲಿಯೇ ಸಮಗ್ರತೆಯನ್ನು ಪಡೆದಿರುವ, ಒಂದೇ ಏಟಿಗೆ ಜಾತಿ ಕುರಿತ ಅಕಡೆಮಿಕ್ ಮತ್ತು ಸಾರ್ವಜನಿಕ ಗ್ರಹಿಕೆಗಳನ್ನು ಬುಡಮೇಲು ಮಾಡಲಿಲ್ಲ. ಸಿದ್ಧಾಂತವೊಂದು ಚಾಲ್ತಿಗೆ ಬಂದಿತು. ಅದು ಯಾವುದೆಂದರೆ, 'ಜಾತಿಯೆಂಬುದು ಯುರೋಪಿಯನ್ನರ ಸೃಷ್ಟಿ' ನಾವು ಈಗ ಕಾಣುತ್ತಿರುವ ಜಾತಿ ವ್ಯವಸ್ಥೆಯು ವಸಾಹತು ಪೂರ್ವ ಭಾರತದಲ್ಲಿ ಚಾಲ್ತಿಯಲ್ಲಿರಲಿಲ್ಲ. ಈಗ ನಾವು ಯಾವುದನ್ನು 'ಜಾತಿ' ಯೆಂದು ಪರಿಗಣಿಸುತ್ತಿದ್ದೇವೇಯೋ ಅದು ಪೂರ್ಣವಾಗಿ ಭಾರತೀಯ ಸಮಾಜದ ಬಗೆಗೆ ಯುರೋಪಿಯನ್ನರು ಹೊಂದಿರುವ 'ಗ್ರಹಿಕೆ' ಅದನ್ನೇ ನಾವು ನಮ್ಮ ದಿನ ನಿತ್ಯದ ಬದುಕಿನಲ್ಲಿ ಅನುಸರಿಸುತ್ತಿದ್ದೇವೆ. ಈ ಸಿದ್ಧಾಂತ 'ಗಣ್ಯ' ಅಕಡೆಮಿಕ್ ವಲಯಗಳಲ್ಲಿ ಸಾಕಷ್ಟು ಜನಪ್ರಿಯವಾಗಿದೆ. 'ಗಣ್ಯ' ಅಕಡೆಮಿಕ್ ವಲಯಗಳಲ್ಲಿ ಉತ್ಪಾದಿತವಾಗುವ ಪರಿಕಲ್ಪನೆಗಳನ್ನು ಪುನರುತ್ಪಾದಿಸುವ' ಅಧ್ಯಾಪಕರು, ತಮ್ಮ ಮಾತೃಭಾಷೆಗಳಲ್ಲಿ ಬರೆಯುವ ಚಿಂತಕರು ಜಾತಿ ಯುರೋಪಿಯನ್ನರ 'ಗ್ರಹಿಕ' ಅಥವಾ ರಚನೆ ಎಂಬುದನ್ನು ಕೊಂಚ ಅನುಮಾನ, ಹಿಂಜರಿಕೆ, ಅಧಿಕೃತತೆಗಳಿಂದ ಮಂಡಿಸತೊಡಗಿದ್ದಾರೆ.

ಈ ಸಿದ್ಧಾಂತ ಸಮಾಜ ಶಾಸ್ತ್ರಜ್ಞರು, ಸಾಹಿತಿಗಳು ಜಾತಿಯ ಅಧ್ಯಯನದಲ್ಲಿ ಆಸಕ್ತಿಯಿರುವವರನ್ನು ಅಲ್ಲಾಡಿಸಿದೆ. ಆದರೆ ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದ ಪ್ರಗತಿಪರರಿಗೆ, ಚಿಂತಕರಿಗೆ, ಜಾತಿ ಅಸಮಾನತೆಯನ್ನು ಹೋಗಲಾಡಿಸುವ ಅಜೆಂಡಾ ಇಟ್ಟುಕೊಂಡು ಹೋರಾಡುತ್ತಿದ್ದವರನ್ನು ಬೆಚ್ಚಿ ಬೀಳಿಸಿದೆ ಕೆಳ ಜಾತಿಯ ವಿರುದ್ಧ ಹೋರಾಡುವವರಿಗೆ ಚಿಂತನಾ ವಿಧಾನವನ್ನು ತೋರಿಸಿತು. ವಸಾಹತುಶಾಹಿ ಸಾಮ್ರಾಜ್ಯಶಾಹಿ ಶಕ್ತಿಗಳ ಜ್ಞಾನವ್ಯವಸ್ಥೆ ಭಾರತದ್ದೇ ಆದ ಪ್ರತ್ಯೇಕ

ಸಂಸ್ಕೃತಿ ಇದೆ. ಭಾರತೀಯತ್ವವೆನ್ನುವ ಯುರೋಪಿನ ಚಿಂತನೆ ಳಿಂದ ಮಸಕಾಗಿದೆ. ಭಾರತೀಯವಾದದ್ದೇ ಏನೊ ವಿಶಿಷ್ಟವಾದ ಎಂದು ನಂಬಿದವರಿಗೆ ಹೊಸ ಹತಾರವನ್ನು ಒದಗಿಸಿದೆ. ಸಂಘಪ ವಾರದ ಹಿಂದೂ ಬ್ರಾಹ್ಮಣ ಸನಾತನವಾದಿಗಳಿಗೆ ಜಾತಿ ವ್ಯವ ಯೆಂಬುದು ಭಾರತದಲ್ಲೇ ಇಲ್ಲ, ಸನಾತನ ಸಂಸ್ಕೃತಿ ಸರ್ವಶ್ರೇ ವಾಗಿತ್ತು ಎಂದು ಸಾರಲು ಬಲವಾದ ಸೈದ್ಧಾಂತಿಕ ಆಯುಧವಾಗಿ ಯಾವುದೇ ಬದಲಾವಣೆ ಇಲ್ಲದೆ ಯಥಾಸ್ಥಿತಿಯನ್ನು ಕಾಯ ಕೊಂಡು ಬ್ರಾಹ್ಮಣ ಯಜಮಾನಿಕೆಯನ್ನು ಮುಂದುವರಿಸಲು ಅಗ ವಾದ ಮನೋಭೂಮಿಕೆಯನ್ನು ರೂಪಿಸಲು ಸಿದ್ಧಾಂತವು ಬಳ ಯಾಗತೊಡಗಿದೆ. ಈ ಹಿನ್ನೆಲೆಯಲ್ಲಿ ಕೆಲವು ವಿಚಾರಗಳನ ಚರ್ಚಿಸಬಹುದು.

ಜಾತಿ ಯುರೋಪಿಯನ್ನರ ಗ್ರಹಿಕೆ: ಸೃಷ್ಟಿ ಅಥವಾ ರಚನೆ

ಜಾತಿ ಯುರೋಪಿಯನ್ನರ ಸೃಷ್ಟಿ ಗ್ರಹಕೆ-ರಚನೆ ಎಂ ಸಿದ್ಧಾಂತ ಮೂಲವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸು ಎಡ್ವರ್ಡ್ ಸೈದ್ ಎಂಬ ಅರೇಬಿಯನ್ ಮೂಲ ಸಂಜಾ ೧೯೭೮ನೇ ಇಸವಿಯಲ್ಲಿ 'ಒರಿಯೆಂಟಲಿಸಮ್' ಎಂಬ ಗ್ರಂ ವೊಂದನ್ನು ಪ್ರಕಟಿಸಿದರು. ಅದು ಅನೇಕ ಮರುಮುದ್ರಣಗಳನ ಕಂಡಿತು ಮತ್ತು ಕಾಣುತ್ತಿದೆ. ಆ ಪುಸ್ತಕವು ಪಾಶ್ಚಾತ್ಯ ಚಿಂತನಕ್ರ ವನ್ನು ಅರ್ಥಮಾಡಿಕೊಳ್ಳುವ ಮೈಲುಗಲ್ಲಾಯಿತು. ಸೈದ್‌ರ 'ಒರಿಯೆಂಟಲಿಸಂ'ನಲ್ಲಿ ಮಂಡಿಸಿದ ಸಿದ್ಧಾಂತಗಳಿಂದ ಅಕಡೆಮಿ ವಲಯಗಳಲ್ಲಿ ರೋಮಾಂಚನ ಉಂಟಾಯಿತು. ನಿರ್ಲಕ್ಷಿ ಸಮುದಾಯಗಳ ಅಧ್ಯಯನ ಮಾಡುತ್ತಿರುವ ಪ್ರಭಾವಶಾಲಿ ಚಿಂತ ಪಾರ್ಥ ಚಟರ್ಜಿಯವರು ಆಡಿದ ಮಾತುಗಳು 'ಒರಿಯೆಂಟಲಿಸಂ

ಸ್ತಕ ಉಂಟು ಮಾಡಿದ ತಲ್ಲಣ ಮತ್ತು ರೋಮಾಂಚನ
ನ್ನು ಪ್ರತಿನಿಧಿಸುತ್ತವೆ. "ನಾನು ಒರಿಯೆಂಟಲಿಸಂ
ಸ್ತಕ ಓದಿದ ದಿನ ನನಗಿನ್ನು ಚೆನ್ನಾಗಿ ನೆನಪಿದೆ ವಸಾಹ
ಶಾಹಿ ಹೋರಾಟದ ಯಶಸ್ಸಿನ ಮಗುವಾದ ನನಗೆ ಆ
ವನೆಗಳೆಲ್ಲಾ ನನಗೂ ಅನ್ನಿಸುತ್ತಿತ್ತು. ಆದರೆ ಸ್ಪಷ್ಟವಾದ
ಷೆಯಲ್ಲಿ ಅದನ್ನು ರೂಪಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ"
ನ್ ಪುಸ್ತಕ ಉಂಟು ಮಾಡಿದ ಪ್ರಭಾವ ಗ್ರಹಿಸಲು
ಲಿನ ಉದಾಹರಣೆ ಸಾಕೆನ್ನಿಸುತ್ತದೆ. ಒರಿಯೆಂಟಲಿಸಂ
೮೦-೯೦ ರ ದಶಕದಲ್ಲಿ ಕ್ರಾಂತಿಕಾರಿ ಪುಸ್ತಕವಾಗಿ
ರಹೊಮ್ಮಿತು.

ಪೂರ್ವದ ಬಗೆಗೆ ಅಥವಾ ವಸಾಹತುಶಾಹಿ ಆಡ
ಕ್ಕೆ ಒಳಪಟ್ಟ ದೇಶಗಳ ಬಗೆಗೆ ಈಗಾಗಲೆ ಪಾಶ್ಚಾತ್ಯ
ದ ರೂಪಿಸಲ್ಪಟ್ಟ ಜ್ಞಾನ ವ್ಯವಸ್ಥೆಯನ್ನು ಮರುಪರಿಶೀಲಿ
ಪ್ರಶ್ನಿಸಲು ಪ್ರೇರೇಪಿಸಿತ್ತು. ಎಡ್ವರ್ಡ್ ಸೈದ್‌ರಿಗಿಂತ
ದಲು ಅನೇಕರು ಈ ಪರಿಕಲ್ಪನೆಗಳನ್ನು ಮಂಡಿಸಿ
ೂ ಕೂಡ ಸೈದ್ ಅದಕ್ಕೊಂದು ಸ್ಪಷ್ಟವಾದ, ಸಮಗ್ರ
ೇಷಣಾತ್ಮಕ ರೂಪ ನೀಡಿದರು, 'ಒರಿಯೆಂಟಲಿಸಂ'
ದರೆ ಏನು? ಕನ್ನಡದಲ್ಲಿ ನಮ್ಮ ಅನುಕೂಲಕ್ಕಾಗಿ
ನ್ನು ಪೌರಾತ್ಯವಾದ ಎಂದು ಕರೆದುಕೊಳ್ಳಬಹುದು.
ೆ ಲೇಖನದುದ್ದಕ್ಕೂ ಒರಿಯೆಂಟಲಿಸಂ ಎಂಬ
ನ್ನೇ ಬಳಸುತ್ತೇನೆ.

ಒರಿಯೆಂಟಲಿಸಂ ಒಂದು ಬೀಸಿನ ಅನೇಕ ಚಿಂತ
ಗುಂಪು. ಒಂದು ನಿರ್ದಿಷ್ಟ ನಿರ್ವಚನದ ಮೂಲಕ
ನ್ನು ವಿವರಿಸುವುದು ಕಷ್ಟ ಸಾಧ್ಯ. ಎಡ್ವರ್ಡ್ ಸೈದ್
ಯೆಂಟಲಿಸಂ ಚಿಂತನಾ ಸರಣಿಯನ್ನು ಸಂಗ್ರಹಿತ
ದಲ್ಲಿ ಕೆಳಕಂಡಂತೆ ಮಂಡಿಸಬಹುದು.

* ಯಾವುದೇ ಪ್ರದೇಶವನ್ನು ಅದರಲ್ಲಿಯೂ
ೋಪಿಯನ್ನರಿಂದ ಆಳ್ವಿಕೆಗೆ ಒಳಗಾದ ವಸಹಾತು
ಪ್ರದೇಶವನ್ನು ಅಲ್ಲಿಯದೇ ಭಾಷೆ ಮತ್ತು ಬರಹಗಳ
ಲಕ ಅಧ್ಯಯನ ಮಾಡುವುದು, ಪುನರ್ರಚಿಸುವುದು
ೋಧಿಸಿವುದು ಮತ್ತು ಪ್ರತಿನಿಧಿಸಿವುದು, ಯಾರು
ನ್ನೆಲ್ಲಾ ಮಾಡುತ್ತಾರೋ ಅವರನ್ನು 'ಒರಿಯೆಂಟಲಿಸ್ಟ್
ು ಕರೆಯಲಾಗುತ್ತದೆ. ವಸಾಹತು ಪ್ರದೇಶಗಳನ್ನು
ಯನ ಮಾಡಿದ 'ಒರಿಯೆಂಟಲಿ'ಸ್ಟರು ಸಾಮಾನ್ಯವಾಗಿ
ತ್ಯರೇ ಆಗಿರುತ್ತಾರೆ. ಅಥವಾ ಈಗಾಗಲೇ ಪಾಶ್ಚಾ
ಚಿಂತನ ಕ್ರಮದಿಂದ ಪ್ರೇರಿತರಾದ ಪೌರಾತ್ಯರೂ
ಬಹುದು. ಇವರು ಪ್ರತಿನಿಧಿಸುವ ಜ್ಞಾನ ಅಥವಾ
ಳಿಕೆ ಯುರೋಪಿನ ಪಾಶ್ಚಾತ್ಯ ಜೀವನಾನುಭವದಿಂದ
ಗೊಂಡಿದ್ದಾಗಿರುತ್ತದೆ.

* ಪೌರಾತ್ಯರನ್ನು ತಮ್ಮ ಪಾಶ್ಚಾತ್ಯ ಜೀವನಾನು
ಮೂಲಕ ಪ್ರತಿನಿಧಿಸುವ ಒರಿಯೆಂಟಲಿಸ್ಟರು ಪೂರ್ವ
ವಸಹಾತು ಶಾಹಿ ದೇಶಗಳನ್ನು ತಾವು ಅಧ್ಯಯನ
ಬಹುದಾದ "ವಿಷಯ" ಎಂದುಕೊಂಡಿರುತ್ತಾರೆ.
ಗೆ ಪಾಶ್ಚಾತ್ಯ ಜೀವನಾನುಭದ ಕಣ್ಣಿನಲ್ಲಿ ಪೌರಾತ್ಯ
ನ್ನು ಕಟ್ಟಿಕೊಡುತ್ತಾರೆ.

* ಹೀಗೆ ಒರಿಯೆಂಟಲಿಸ್ಟರಿಂದ ರೂಪಿಸಲ್ಪಟ್ಟ
ತ್ಯ ಜ್ಞಾನವ್ಯವಸ್ಥೆಯು, ಪಾಶ್ಚಾತ್ಯ ಸಾಮ್ರಾಜ್ಯವನ್ನು
ಮಾನಿಕೆಯನ್ನು ಪೂರ್ವ ದೇಶಗಳ ಅರ್ಥಾರ್ತ್
ಹತಾಗಿದ್ದ ಆಗಿರುವ ದೇಶಗಳ ಮೇಲೆ ಅಧಿಕಾರ
ಚಲಾಯಿಸುವುದಾಗಿರುತ್ತದೆ. ಆ ಕಾರಣಕ್ಕಾಗಿ
ಪೌರಾತ್ಯ ರಾಷ್ಟ್ರಗಳನ್ನು, ವಸಾಹತು ದೇಶಗಳನ್ನು,
ರಾಷ್ಟ್ರಗಳನ್ನು ಅನಾಗರಿಕ ಅಜ್ಞಾನದಿಂದ

ಕ್ಯಾಸ್ಟ್ ಕೆಮಿಸ್ಟ್ರಿ

೧

ತುಂಬಿದ, ಪೈಶಾಚಿಕ, ಹಿಂದುಳಿದ, ಪಾಶ್ಚಾತ್ಯರು ಮೇಲೆತ್ತಲೇಬೇಕಾದ ಸಮುದಾಯಗಳೆಂದು ಚಿತ್ರಿಸುತ್ತಾರೆ. ತನ್ಮೂಲಕ ಯಜಮಾನಿಕೆಯನ್ನು ಹೇರುತ್ತಾರೆ.

* ಎಡ್ವರ್ಡ್ ಸೈದ್ ಪ್ರಕಾರ ಈ ಬಗೆಯ ಜ್ಞಾನ ವ್ಯವಸ್ಥೆಯು, ಸಾಹಿತ್ಯ ವಿವಿಧ ಪ್ರಕಾರಗಳು, ಚರಿತ್ರೆ ಸಮಾಜಶಾಸ್ತ್ರ, ಮಾನವ ಶಾಸ್ತ್ರ ಮನ:ಶಾಸ್ತ್ರ ಪುರಾತತ್ವ ಎಲ್ಲ ಕಡೆಯೂ ಪ್ರತಿ ನಿಧೀಕರಣಗೊಂಡಿರುತ್ತದೆ.

ಒಟ್ಟಾರೆಯಾಗಿ ಎಡ್ವರ್ಡ್ ಸೈದ್‌ರ ಒರಿಯೆಂಟಲಿಸಂ ಚಿಂತನಾಕ್ರಮವು ಸಮಗ್ರವಾಗಿ ಪಾಶ್ಚಾತ್ಯ ಜೀವಾನುಭವ ಗ್ರಹೀತವು ಇಡೀ ಪೂರ್ವ ಅಂದರೆ ವಸಾಹತುಶಾಹಿ ಮುಸ್ಲಿಂ ರಾಷ್ಟ್ರಗಳ ಜ್ಞಾನವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಈ ಪ್ರತಿನಿಧೀಕರಣವು ಪೂರ್ವಾಗ್ರಹಪೀಡಿತವಾಗಿದ್ದು ಪೂರ್ವ ರಾಷ್ಟ್ರಗಳ ಜನರನ್ನು ಅದರಲ್ಲಿಯೂ ಮುಸ್ಲಿಂರನ್ನು ಅನಾಗರೀಕರೆಂದು ಪೈಶಾಚಿಕರೆಂದು ಹಿಂದುಳಿದ ರೆಂದು ಅಭಿಪ್ರಾಯವನ್ನು ಮೂಡಿಸುತ್ತದೆ. ಈ ಬಗೆಯ ಗ್ರಹಿಕೆಯು ಯುರೋಪಿಯನ್ನರು ಎಂದು ತಮ್ಮ ದೇಶಗಳಾಚೆಯ ಪ್ರದೇಶಗಳನ್ನು ಕುರಿತು ಬರೆಯತೊಡಗಿದರು, ಅಧ್ಯಯನ ಮಾಡತೊಡಗಿದರೋ ಅಂದಿನಿಂದಲೇ ಆರಂಭವಾಯಿತು ಎಂಬುದು ಒರಿಯೆಂಟಲಿಸ್ಟರ ತಿಳುವಳಿಕೆ. ಓರಿಯಂಟಲಿಸ್ಟರಿಂದ ಉತ್ಪಾದನೆಯಾದ ಪಠ್ಯಗಳು ಪೂರ್ವ ಪ್ರದೇಶಗಳ ಬಗೆಗೆ ಸೃಷ್ಟಿಸಿದ ಜ್ಞಾನವು 'ನಿಜ'ವಾದ ಜ್ಞಾನವೆಂಬಂತೆ ಬಿಂಬಿತವಾಗುತ್ತವೆ. ಇದರಿಂದ ಪೂರ್ವರಾಷ್ಟ್ರಗಳಿಗೆ ತಮ್ಮ ಜ್ಞಾನವ್ಯವಸ್ಥೆಯೆಂಬುದೇ ಇರುವುದಿಲ್ಲ. ಅವು ತಮ್ಮದೇ ಜ್ಞಾನ ವ್ಯವಸ್ಥೆಯೆಂದು ತಿಳಿದುಕೊಂಡಿರುವುದು ಕೂಡ ಪಾಶ್ಚಾತ್ಯ ಜ್ಞಾನವ್ಯವಸ್ಥೆಯ ಕಣ್ಣಿನಿಂದ ನೋಡಿರುವುದೇ ಆಗಿರುತ್ತದೆ. ಹೀಗೆ ಒಂದೇ ಬೀಸಿನಲ್ಲಿ ಸೈದ್‌ರವರು ಈಗ ಪ್ರಸ್ತುತ ವಸಾಹತುರಾಷ್ಟ್ರಗಳ ಜ್ಞಾನಪರಂಪರೆಯನ್ನೆ ಹೊಡೆದು ಬೀಳಿಸುತ್ತಾರೆ.

ಪೂರ್ವದ ಬಗೆಗೆ ಅಥವಾ ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟ ದೇಶಗಳ ಬಗೆಗೆ ಈಗಾಗಲೆ ಪಾಶ್ಚಾತ್ಯರಿಂದ ರೂಪಿಸಲ್ಪಟ್ಟ ಜ್ಞಾನವ್ಯವಸ್ಥೆಯನ್ನು ಮರುಪರಿಶೀಲಿಸಲು ಪ್ರಶ್ನಿಸಲು ಪ್ರೇರೇಪಿಸಿತ್ತು. ಎಡ್ವರ್ಡ್ ಸೈದ್‌ರಿಗಿಂತ ಮೊದಲು ಅನೇಕರು ಈ ಪರಿಕಲ್ಪನೆಗಳನ್ನು ಮಂಡಿಸಿದರೂ ಕೂಡ ಸೈದ್ ಅದಕ್ಕೊಂದು ಸ್ಪಷ್ಟವಾದ, ಸಮಗ್ರ ವಿಶ್ಲೇಷಣಾತ್ಮಕ ರೂಪ ನೀಡಿದರು, 'ಒರಿಯೆಂಟಲಿಸಂ' ಎಂದರೆ ಏನು? ಕನ್ನಡದಲ್ಲಿ ನಮ್ಮ ಅನುಕೂಲಕ್ಕಾಗಿ ಅದನ್ನು ಪೌರಾತ್ಯವಾದ ಎಂದು ಕರೆದುಕೊಳ್ಳಬಹುದು.

ಈಗ ಪ್ರಸ್ತುತ ಲೇಖನದ ಮೂಲ ಉದ್ದೇಶಕ್ಕೆ ಮರಳುವ. ಭಾರತದಲ್ಲಿರುವ ಜಾತಿ ವ್ಯವಸ್ಥೆಯು ಯುರೋಪಿಯನ್ನರ ಸೃಷ್ಟಿ ಅಥವಾ ಸಮಕಾಲೀನ ರೂಪದಲ್ಲಿರುವಂತೆ ಜಾತಿವ್ಯವಸ್ಥೆ ಖಂಡಿತ ಇರಲಿಲ್ಲ. ಎನ್ನುವ ಸಿದ್ಧಾಂತ ಪೂರ್ಣವಾಗಿ ಸಯಿದ್‌ರ ಒರಿಯೆಂಟಲಿಸಂನಿಂದ ರೂಪುಗೊಂಡಿದೆ. ಹಾಗಾಗಿಯೇ ಜಾತಿವ್ಯವಸ್ಥೆ ಯುರೋಪಿಯನ್ ಪೂರ್ವ ಭಾರತದಲ್ಲಿತ್ತೊ ಅಥವಾ ಸೃಷ್ಟಿಯಾಯಿತೋ ಎಂಬುದನ್ನು ಪರಿಶೀಲಿಸಲು ಇಡೀ ಒರಿಯೆಂಟಲಿಸಂನ ಮೂಲ ಗ್ರಹಿಕೆಗಳನ್ನು ಮಂಡಿಸಬೇಕಾಯಿತು.

ಜಾತಿ ಯುರೋಪಿಯನ್ನರ ಸೃಷ್ಟಿ

ಜಾತಿ ಬ್ರಿಟೀಷರ ಜ್ಞಾನವ್ಯವಸ್ಥೆಯ ಕೂಸು ಎಂಬ ಸಿದ್ಧಾಂತವನ್ನು ಲೇಖಕನ ತಿಳಿವಳಿಕೆಯಲ್ಲಿರುವಂತೆ ರೊನಾಲ್ಡ್ ಇಂಡೇನ್‌ರ 'ಇಮ್ಯಾಜಿನಿಂಗ್ ಇಂಡಿಯಾ' (ಭಾರತವನ್ನು ಕಲ್ಪಿಸಿಕೊಳ್ಳುವಿಕೆ) ರೊನಾಲ್ಡ್ ಇಂಡೇನ್ ಹೆಗಲ್‌ರಿಂದ ಹಿಡಿದು ಲ್ಯೂಯಿ ಡ್ಯೂಮೋರವರೆಗೆ ಯುರೋಪಿಯನ್ನರು 'ಜಾತಿಯನ್ನು ಗ್ರಹಿಸಿರುವ ಬಗೆಯನ್ನು ವಿಶ್ಲೇಷಿಸುತ್ತಾರೆ. ಹೆಗಲ್, ಜೇಮ್ಸ್‌ಮಿಲ್, ಹರ್ಬರ್ಟ್‌ರಿಸ್ಲೆ, ಕಾಲ್ಡ್‌ವೆಲ್ ಮ್ಯಾಕ್ಸವೆಬರ್ ಕಾರ್ಲ್‌ಮಾರ್ಕ್ಸ್, ಮೊದಲಾದವರು 'ಜಾತಿ'ಯನ್ನು ಮತ್ತು ಭಾರತವನ್ನು ಕಲ್ಪಿಸಿ ಕಟ್ಟಿಕೊಟ್ಟ ಬಗೆಯನ್ನು ವಿಶ್ಲೇಷಿಸುತ್ತಾರೆ. ಪ್ರಸ್ತುತ ಲೇಖನದ ಪರಿಮಿತಿಯಲ್ಲಿ ಅವುಗಳನ್ನೆಲ್ಲಾ ಚರ್ಚಿಸುವ ಅಗತ್ಯವಿಲ್ಲವಾದ್ದರಿಂದ ಇಂಡೇನ್‌ರ 'ಜಾತಿ' ಕುರಿತ ಗ್ರಹಿಕೆಯಿಷ್ಟು, ಪಶ್ಚಿಮದ ಸಾಮಾಜಿಕ ರಚನೆಯ ಸಕಾರಾತ್ಮಕ ಇಮೇಜನ್ನು ಒರಿಯೆಂಟಲಿಸ್ಟರು ಜಾತಿ ಕಟ್ಟುವ ಮೂಲಕ ಪ್ರತಿಪಾದಿಸಿದರು. ಮೇಲು ಕೀಳು, ಮೂಢ ನಂಬಿಕೆ ಬಡತನ ಶೋಷಣೆಗೆ ಜಾತಿಯೇ ಮೂಲಕಾರಣ ಎಂದು ಪ್ರತಿಪಾದಿಸುವ ಮೂಲಕ ಯುರೋಪಿಯನ್ ಸಮಾಜವು ತರ್ಕ ಬದ್ಧವಾದ ವೈಜ್ಞಾನಿಕ ಹೊಂದಿದ, ಸೆಕ್ಯುಲರ್ ಆದ ವ್ಯವಸ್ಥೆಯನ್ನು ಹೊಂದಿದೆ ಎಂದು ಪ್ರತಿನಿಧಿಸಿದರು. ಸ್ಥಗಿತಗೊಂಡ ಎಂದಿಗೂ ಸಾಮಾಜಿಕ ಚಲನೆಯಿಲ್ಲದ ಆಡಳಿತದಲ್ಲಿ ಅರಾಜಕತೆ ಹೊಂದಿದ ಭಾರತವನ್ನು ಉದ್ಧರಿಸಲು ಬಿಳಿಯರಿಂದ ಮಾತ್ರ ಸಾಧ್ಯವೆಂಬ ನಂಬಿಕೆಯನ್ನು ಬಲಪಡಿಸಿದರು. ಜಾತಿ ವ್ಯವಸ್ಥೆ ಭಾರತದ ಕೇಂದ್ರ ಒಂದು ಎಂದು ಹೇಳುತ್ತಾ ಜಾತಿಯ ಮೂಲಕವೇ ಭಾರತವನ್ನು ನೋಡುವ ಜ್ಞಾನದ ಕಿಂಡಿಯನ್ನಾಗಿ ರೂಪಿಸಿ ವಾಸ್ತವ ಭಾರತವನ್ನು ಮರೆಮಾಚಿದರು ಎಂಬುದು ಇಂಡೇನ್‌ರ ಒಟ್ಟು ಪ್ರಮೇಯ.

ಇಂಡೇನ್‌ರ ಹಾದಿಯಲ್ಲಿಯೇ ಸಾಗಿದ ಮತ್ತೊಬ್ಬ ಸಮಾಜವಿಜ್ಞಾನಿಯೆಂದರೆ ನಿಕೋಲಸ್ ಬಿ. ಡರ್ಕ್ಸ್ 'ಕ್ಯಾಸ್ಟ್ಸ್ ಆಫ್ ಮೈಂಡ್', ಕಲೋನಿಯಲಿಸಂ ಮತ್ತು ಮೇಕಿಂಗ್ ಮಾಡರ್ನ್ ಇಂಡಿಯಾ, ಎಂಬ ಪುಸ್ತಕವನ್ನು ಪ್ರಿನ್ಸಟನ್ ಯುನಿವರ್ಸಿಟಿಯ ೨೦೦೧ ರಲ್ಲಿ ಪ್ರಕಟಿಸಿತು. ೨೦೦೨ರಲ್ಲಿ ಭಾರತದಲ್ಲಿ ಈ ಪುಸ್ತಕ ಪ್ರಕಟವಾಯಿತು ಸದ್ಯಕ್ಕೆ ಜಾತಿಯ ಅಧ್ಯಯನದಲ್ಲಿ ತೊಡಗಿಕೊಂಡವರೆಲ್ಲರೂ ಗಂಭೀರವಾಗಿ ಪರಿಗಣಿಸಿರುವ ಪುಸ್ತಕ ಇದು. ಡರ್ಕ್ಸ್ ಎತ್ತಿದ ಪ್ರಶ್ನೆಗಳೆಂದರೆ ಜಾತಿ ಏಕೆ ಮತ್ತು ಹೇಗೆ ವಸಾಹತುಶಾಹಿ ಭಾರತಶಾಸ್ತ್ರಜ್ಞರಿಗೆ ಅತ್ಯಂತ ಮಹತ್ವದ ವಿಚಾರವಾಯಿತು? ಆಧುನಿಕ ಭಾರತೀಯ ಸಮಾಜದ ಪಲ್ಲಟದ ವಸಾಹತುಶಾಹಿ ಅಧ್ಯಯನಗಳು ಉಂಟು

ಮಾಡಿದ ಪರಿಣಾಮಗಳೇನು? ಈ ಅಧ್ಯಯನಗಳ ಮೂಲಕ ಕಟ್ಟಿದ ಜ್ಞಾನವ್ಯವಸ್ಥೆಯು ಮೂರ್ತಗೊಂಡ ಪಶ್ಚಿಮದ 'ಅಧಿಕಾರ'ವಾಗಿ ಪರಿವರ್ತಿತವಾದುದ್ದಾರೂ ಹೇಗೆ? ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ಡರ್ಕ್ಸ್ ಸಾಕಷ್ಟು ಪ್ರಮಾಣದ ಆಧಾರಗಳನ್ನು ಒರಿಯೆಂಟಲಿಸ್ಟ್ ಸಾಹಿತ್ಯದಿಂದ ಹೆಕ್ಕಿತೆಗೆಯುತ್ತಾರೆ. ಅದರ ಮೂಲಕ ಡರ್ಕ್ಸ್ ರೂಪಿಸುವ ಮೂಲ ಪ್ರಮೇಯಗಳೇನೆಂದರೆ ಈಗ ನಾವು ಕಾಣುತ್ತಿರುವ ಜಾತಿ ವ್ಯವಸ್ಥೆಯು ವಸಾಹತುಶಾಹಿ ಜ್ಞಾನವ್ಯವಸ್ಥೆಯ ಕೂಸು. ಭಾರತೀಯ ನಾಗರೀಕತೆಯನ್ನು ವಿವರಿಸುವ ಏಕಮಾತ್ರ ಸಂಸ್ಥೆಯೆಂದು ಜಾತಿಯನ್ನು ಪರಿಗಣಿಸಬೇಕಾಗಿಲ್ಲ.

ಭಾರತ ಮತ್ತು ಪಶ್ಚಿಮ ಜಗತ್ತಿನ ಅಧಿಕಾರ ಸಂಬಂಧದ ಅನುಸಂಧಾನದ ಫಲವಾಗಿ ಹುಟ್ಟಿಕೊಂಡ ಫಲಶ್ರುತಿಯೇ ಈಗ ನಾವು ಕಾಣುತ್ತಿರುವ ಜಾತಿವ್ಯವಸ್ಥೆ. ಏಕಾಏಕಿ ಜಾತಿಯು ಅಸ್ತಿತ್ವಕ್ಕೆ ಬಂದದ್ದಲ್ಲ. ಬದಲಿಗೆ ಯುರೋಪಿನ ೨೦೦೦ ವರ್ಷಗಳ ಸತತ ಪ್ರಾಬಲ್ಯದಿಂದ ಜಾತಿಯು ಅಭಿವ್ಯಕ್ತಿಯ ಕ್ರಮವಾಗಿ, ಗುರುತು ರಾಜಕಾರಣದ ಪ್ರತಿನಿಧಿಯಾಗಿ, ಸಂಘಟನಾ ತಂತ್ರವಾಗಿ ಕಾಣಿಸಿಕೊಂಡಿದೆ. ಇಂದು ನಮಗೆ ಕಾಣಿಸುತ್ತಿರುವ ಜಾತಿ ವಸಾಹತುಶಾಹಿಯ ಸೃಷ್ಟಿ. ಆದುದರಿಂದ ಭಾರತದ ಅದರಲ್ಲಿಯೂ ಜಾತಿ ಚರಿತ್ರೆ ರಚನಾಶಾಸ್ತ್ರವನ್ನೇ ಮರು ರಚಿಸಬೇಕಾಗುತ್ತದೆ ಎಂಬುದು ನಿಕೋಲಸ್ ಡರ್ಕ್ಸ್‌ರ ಒಟ್ಟು ಅಭಿಪ್ರಾಯ.

ನಾವು ಕಾಣುತ್ತಿರುವ ಜಾತಿ ವ್ಯವಸ್ಥೆ ಯುರೋಪಿಯನ್ನರ ಕಲ್ಪನೆಯ ಕೂಸೇ ವಸಾಹತುಶಾಹಿ ಜ್ಞಾನವ್ಯವಸ್ಥೆಯ ರಚನೆಯನ್ನೇ ನಾವು ಒಪ್ಪಿದ್ದೇವೆಯೇ ಜಾತಿ ಎಂಬ ಯುರೋಪಿಯನ್ 'ಐಡಿಯಾ' ನಮ್ಮ ದಿನ ನಿತ್ಯದ ಬದುಕನ್ನು ರಾಜಕೀಯ ಆಗುಹೋಗುಗಳನ್ನು ಮೀಸಲಾತಿ ಸಂಘರ್ಷ ದಲಿತ ಸಮುದಾಯಗಳ ಮೇಲಿನ ದೌರ್ಜನ್ಯ ಸನಾತನ ಬ್ರಾಹ್ಮಣವಾದದ ಅಟ್ಟಹಾಸ, ಪ್ರಬಲ ಜಾತಿಗಳ ಕೈಗೆ ರಾಜಕೀಯ ಅಧಿಕಾರವನ್ನು ನೀಡಿದೆಯೆ? ಅದು ವಾಸ್ತವವಲ್ಲವೆ; ಜಾತಿ ಕೇವಲ ಯುರೋಪಿಯನ್ನರ ಜ್ಞಾನ ರಚನೆಯೇ ಎಂಬ ಪ್ರಶ್ನೆಗಳು ಎದುರಾಗುತ್ತದೆ. ಆ ಪ್ರಶ್ನೆಗಳಿಗೆ ಉತ್ತರವೊಂದನ್ನು ರೂಪಿಸಿಕೊಳ್ಳಲು ಒರಿಯಂಟಲಿಸಂ ಹುಟ್ಟು ಮತ್ತು ಬೆಳವಣಿಗೆಯನ್ನು ಅದರ ಮಿತಿಗಳನ್ನು ತೀವ್ರ ನಿಕಷಕ್ಕೊಡ್ಡುವುದರ ಹೊರತು ಬೇರೆ ಮಾರ್ಗವೇ ಇಲ್ಲ. ಒರಿಯೆಂಟಲಿಸಂ ವಾದ ಜನಪ್ರಿಯವಾದ ಮೇಲೆ ಭಾರತೀಯ ಜನ ಸಮುದಾಯ, ಸಾಮಾಜಿಕ ಚಳುವಳಿಗಳು ಮಾರ್ಕ್ಸ್‌ವಾದದ ದಲಿತ ಚಳುವಳಿಗಳ ಮೇಲೆ ಅದು ಬೀರಿರುವ ಮತ್ತು ಬೀರಲಿರುವ ಪರಿಣಾಮದ ಮೇಲೆ ಆಳವಾದ ವಿಶ್ಲೇಷಣೆ ನೆಡೆಸುವ ಅನಿವಾರ್ಯತೆ ಒದಗುತ್ತದೆ.

'ಜಾತಿ' ಭಾರತೀಯ ಸಮಾಜದ ವಾಸ್ತವ ಸಂಗತಿ!

ಜಾತಿಯೆಂಬುದು ನಮ್ಮ ಸಮಾಜದ ವಾಸ್ತವ ಸಂಗತಿಯೇ ಅಲ್ಲವೋ ಎಂಬುದನ್ನು ಪರಿಶೀಲಿಸುವ ಮೊದಲು ಈಗ ಕಂಡುಬರುತ್ತಿರುವ 'ಜಾತಿ'ಯು ಯುರೋಪಿಯನ್ ಸಮಾಜದ 'ಸೃಷ್ಟಿ' ಎಂಬ 'ಒರಿಯೆಂಟಲಿಸಂ' ಮೂಲದಿಂದ ಹುಟ್ಟಿದ ಸಿದ್ಧಾಂತವನ್ನು ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ.

'ಜಾತಿ' ಯುರೋಪಿಯನ್ನರ ಸೃಷ್ಟಿ ಎಂಬುದು ಒರಿಯೆಂಟಲಿಸಂನ ಮರು ಉತ್ಪನ್ನ ಆದುದರಿಂದ ಒರಿಯಂಟಲಿಸಂನ ಮೇಲಿರುವ ವಿಮರ್ಶೆಗಳನ್ನು ಗಮನಿಸು



ವುದು ಅನಿವಾರ್ಯ 'ಒರಿಯೆಂಟಲಿಸಂ' ಎಂಬುದು ತನ್ನೊಳಗೆ ಆಪಾರ ವೈರುಧ್ಯಗಳಿರುವ ಚಿಂತನಾ ಸರಣಿ. ಸಾಹಿತ್ಯ, ಚರಿತ್ರೆ, ಮಾನವ ಶಾಸ್ತ್ರದ ಜೊತೆಗೆ ಸಕಲ ಸಾಧ್ಯತೆಗಳಲ್ಲೂ ಅಡಗಿರಬಹುದಾದ ಪಶ್ಚಿಮ ಜಗತ್ತಿನ ಅಧಿಕಾರ ಕೇಂದ್ರಗಳನ್ನು ಗುರುತಿಸಿ ಅದು ಹೊಂದಿದ್ದ ತರ್ಕ,

> **ಇಬ್ಬಾಯ ಖಡ್ಗದಂತಿರುವ ಈ ವಾದ ಒಂದೇ ಬೀಸಿನಲ್ಲಿ ಸುಮಾರು ಶತಮಾನಗಳ ಗ್ರಹಿಕೆಯ 'ಸಮಗ್ರ ಪತ್ಯ'ವೆಂಬಂತೆ ಮುಂದಿಡುತ್ತದೆ. ಅದರೊಳಗೇ ಅಡಿಗಿರಬಹುದಾದ ವೈವಿಧ್ಯತೆಗಳ ಸಾಧ್ಯತೆಯನ್ನೇ ಮುಚ್ಚಿ ಹಾಕಿ ಬಿಡುತ್ತದೆ. ಪೌರಾತ್ಯ ಜಗತ್ತನ್ನು ಸ್ಟಿರಿಯೋ ಟೈಪ್ ಮಾಡಿದಂತೆ 'ಒರಿಯಂಟಲಿಸಂ' ಪಶ್ಚಿಮದ ಜಗತ್ತನ್ನು ಸ್ಟಿರಿಯೊ ಟೈಪ್ ಮಾದರಿಯಲ್ಲಿ ಚಿತ್ರಿಸುತ್ತದೆ. ಪಶ್ಚಿಮದ ಜಗತ್ತು ಅದು ಓರಿಯಂಟಲಿಸ್ಟ್ ಎಂದು ಸಯಿದ್ ಯಾವುದನ್ನು ಕರೆಯುತ್ತಾರೋ ಅದು ಏಕರೂಪಿಯಾಗಿರಲೂ ಸಾಧ್ಯವೇ ಇಲ್ಲ. ವಿಲಿಯಂ ಜೋನ್ಸ್ ಕಾರ್ಲ್‌ಮಾರ್ಕ್ಸ್ ಪೂರ್ವ ಜಗತ್ತಿನ ಕಟುವಿಮರ್ಶಕರಾಗಿದ್ದಂತೆಯೇ ಪಶ್ಚಿಮದ ಆತ್ಮಸಾಕ್ಷಿಗಳಂತೆ ಪಶ್ಚಿಮದ ಯಾಜಮಾನಿಕೆಯನ್ನು, ಜ್ಞಾನವ್ಯವಸ್ಥೆಯನ್ನು ಕುಟುಕುತ್ತಿದ್ದರು.**

ವೈಚಾರಿಕ, ವೈಜ್ಞಾನಿಕ ಎಂಬ ಮುಸುಕನ್ನು ಸೃ... ಕಿತ್ತೆಸೆಯಿತು. ವೈರುಧ್ಯವೆಂದರೆ ಈ ವಾದದ... ಕಾಂಕ್ಷೆಯು ಮಾರ್ಕ್ಸ್‌ರನ್ನು, ಮಾರ್ಕ್ಸ್‌ವಾದ... ಯನ್ನು ತೀವ್ರ ಅನುಮಾನದಿಂದ ನೋಡಿದ್ದಲ್ಲದೆ... ಸಿತು. ಏಷಿಯಾದ ಸಮಾಜದ ಬಗೆಗಿದ್ದ ಮಾರ್ಕ್ಸ್... ಕೆಯನ್ನೆ ಟೀಕೆಯ ಪ್ರಧಾನ ಭೂಮಿಕೆಯ... ಮೂರನೇ ಜಗತ್ತಿಗೂ ಅನ್ವಯವಾಗಬ... ಮಾರ್ಕ್ಸ್‌ವಾದದ 'ನ್ಯಾಯ'ದ ಕಲ್ಪನೆಯನ್ನು ಕುರುಡಾಗಿ ತಿರಸ್ಕರಿಸಿತು. ಸೈದ್‌ರ ಪ್ರಕಾರ... ವಾದವೂ ಕೂಡ ಪಶ್ಚಿಮದ ಸಾಮ್ರಾಜ್ಯ ಶಾಹಿ... ಮಾನಿಕೆಯ ಕಾರ್ಯತಂತ್ರವೇ ಆಗಿತ್ತು... ನಿಜವಾಗಿದ್ದರೆ ಚೀನಾ ದೇಶ ಮಾರ್ಕ್ಸ್ ತತ್ವಗಳ... ಮೇಲೆ ಪಶ್ಚಿಮ ದೇಶಗಳಿಗೆ ಅದರಲ್ಲಿಯೂ... ಸಂಯುಕ್ತ ಸಂಸ್ಥಾನಕ್ಕೆ ಸೆಡ್ಡು ಹೊಡೆದು ನಿಲ್ಲುತ್ತಿರ...

ವಿಯಟ್ನಾಮಿಗಳು ಅಮೆರಿಕಾ ಎಂಬ ಆ... ಸೋಲಿಸಿದ ಮಿಡತೆಗಳಾಗಿರುತ್ತಿರಲಿಲ್ಲ. ಇಂದಿಗೂ ಜಗತಿನಾದ್ಯಂತ ಮಾರ್ಕ್ಸ್‌ವಾದದಿಂದ ಪ್ರೇರಿತರಾ... ಸಾಮ್ರಾಜ್ಯಶಾಹಿಗೆ ದೊಡ್ಡ ಸವಾಲಾಗಿರುವುದು. ವಾಗ 'ಒರಿಯೆಂಟಲಿಸಂ' ವಾದದಂತೆ ಏಷಿಯಾ... ವಸಾಹತುಶಾಹಿ ರಾಷ್ಟ್ರ, ಮೂರನೇ ಜಗತ್ತಿನ ಮಾರ್ಕ್ಸ್‌ರ ಗ್ರಹಿಕೆಯು ಕೇವಲ ಸಾಮ್ರಾಜ್ಯಶಾಹಿ ತಂತ್ರವಾಗಿ ಕೊನೆಗೊಳ್ಳಬೇಕಿತ್ತೇ ಹೊರತು. ಬ... ಗಳು ಸಾಮ್ರಾಜ್ಯಶಾಹಿಗಳ ವಿರುದ್ಧ ಒರಿಯೆಂ... ಪಶ್ಚಿಮವನ್ನು ಏಕರೂಪಯಾಗಿ ಗ್ರಹಿಸುತ್ತದೆ ಸೈದ... ಮುಸ್ಲಿಂ ರಾಷ್ಟ್ರಗಳನ್ನು 'ಒರಿಯೆಂಟಲಿಸಂ' ಪ್ರತಿನಿ... ಬಗೆಯನ್ನು ಪ್ರತಿ ಪಾದಿಸುವ ಭರದಲ್ಲಿ ಒರಿಯೆಂ... ಸ್ಟಿರಿಯೋ ಟೈಪ್‌ಗಳನ್ನು ಮರು ಉತ್ಪಾ ದಿಸುತ್ತಾರೆ.

ಇಬ್ಬಾಯ ಖಡಗದಂತಿರುವ ಈ ವಾದ... ಬೀಸಿನಲ್ಲಿ ಸುಮಾರು ಶತಮಾನಗಳ ಗ್ರಹಿಕೆಯ... ಪತ್ಯ'ವೆಂಬಂತೆ ಮುಂದಿಡುತ್ತದೆ. ಅದರೊಳಗೇ ಅ... ಬಹುದಾದ ವೈವಿಧ್ಯತೆಗಳ ಸಾಧ್ಯತೆಯನ್ನೇ ಮುಚ್ಚಿ... ಬಿಡುತ್ತದೆ. ಪೌರಾತ್ಯ ಜಗತ್ತನ್ನು ಸ್ಟಿರಿಯೋ ಟೈಪ್... ದಂತೆ 'ಒರಿಯೆಂಟಲಿಸಂ' ಪಶ್ಚಿಮದ ಜಗತ್ತನ್ನು ಸ್ಟಿ... ಟೈಪ್ ಮಾದರಿಯಲ್ಲಿ ಚಿತ್ರಿಸುತ್ತದೆ. ಪಶ್ಚಿಮದ... ಅದು ಒರಿಯೆಂಟಲಿಸ್ಟ್ ಎಂದು ಸೈದ್ ಯಾವು... ಕರೆಯುತ್ತಾರೋ ಅದು ಏಕರೂಪಿಯಾಗಿರಲೂ ಸಾ... ಇಲ್ಲ. ವಿಲಿಯಂ ಜೋನ್ಸ್ ಕಾರ್ಲ್‌ಮಾರ್ಕ್ಸ್ ಪೂರ್ವ... ತ್ತಿನ ಕಟುವಿಮರ್ಶಕರಾಗಿದ್ದಂತೆಯೇ ಪಶ್ಚಿಮದ ಆ... ಗಳಂತೆ ಪಶ್ಚಿಮದ ಯಾಜಮಾನಿಕೆಯನ್ನು, ಜ್ಞಾನ... ಯನ್ನು ಕುಟುಕುತ್ತಿದ್ದರು. ಸೈದ್‌ರ ಒರಿಯೆಂಟ... ಬಹೃತ್‌ಸಂಕಥನವೆಂದು ಕರೆದುಕೊಂಡರೂ ಅದೊ... ವಿಮರ್ಶೆಯಾಗಿ ಪಶ್ಚಿಮವನ್ನು ಅರಿತುಕೊಳ್ಳಲು ಸ... ಗುವ ಒಂದು ಚಿಂತನ ಕ್ರಮ ಮಾತ್ರವಾಗಬಲ್ಲದು.

ಈ ಎಲ್ಲ ಮಿತಿಗಳ ಒರಿಯೆಂಟಲಿಸಂನಿಂದ... ಕೊಂಡ 'ಜಾತಿ' ಯುರೋಪಿನ ಒರಿಯೆಂಟ... ಸೃಷ್ಟಿಯೋ ಅಥವಾ ಅದೊಂದು ವಾಸ್ತವ ಸತ್ಯವೊ... ಪ್ರಶ್ನೆಗೆ ಮರಳುವ. ಈ ಪ್ರಶ್ನೆಯ ಸ್ವರೂಪವೇ... ಗೊಲ್ಲರ ಬುಡಕಟ್ಟು ಜಾತಿಗೆ ಸೇರಿದ್ದ ಈ ಲೇಖಕ... ವ್ಯಗ್ರನನ್ನಾಗಿ ಮಾಡುವುದರ ಜೊತೆಗೆ ಆಘಾತಕ್ಕೂ ಈ... ಮಾಡುತ್ತದೆ. ಏಕೆಂದರೆ ಸಾಮಾಜೀಕರಣ ಪ್ರಕ್ರಿಯೆ... ಒಂದು ಅವಿಭಾಜ್ಯ ಅಂಗವಾಗಿ ರೂಪುಗೊಂಡ... ರೆವಿನ್ಯೂ ಗ್ರಾಮವಾಗಿ ಘೋಷಿಸಲ್ಪಡದ, ಕಾನೂನು ಪ...



ಮೂಲಕ ರಾಷ್ಟ್ರದ ಪರಿಕಲ್ಪನೆಯನ್ನು ೨೦
ಹಿಂದೆ ಮತ್ತು ತೀರ ಇತ್ತೀಚಿನವರೆಗೂ ಪಡೆ
ೋಟು ಚಲಾವಣೆಯ ಮೂಲಕವಷ್ಟೆ ಸರ್ಕಾರದ
ಹೊಂದಿದ್ದ ಲೇಖಕನ ಗೊಲ್ಲರ ಹಟ್ಟಿಯಲ್ಲಿ
ಆಚರಣೆಗಳು-ಜಾತಿಯ ಸ್ವರೂಪವು ಅಸ್ತಿತ್ವದ
ಸ್ತಿತ್ವದಲ್ಲಿದೆ ಮತ್ತು ಮುಂದೂ ಅಸ್ತಿತ್ವದಲ್ಲಿರಬಹು
ಧ್ಯತೆಯೂ ಇಲ್ಲದಿಲ್ಲ. ಏಕೆಂದರೆ ನಿಕೋಲಸ್
ುತ್ತು ಇಂಡೇನ್‌ರು ಜಾತಿಯ ಚರಿತ್ರೆಯನ್ನು
ತಿಸುವ ಅವಶ್ಯಕತೆಯನ್ನು, ಒರಿಯಂಟಲಸ್ಟರ
ತನಾ ಶಾಸ್ತ್ರವನ್ನೇ ಪ್ರಶ್ನಿಸುತ್ತಾರೆ. ಹಾಗೇ ಪ್ರಶ್ನಿ
ಲಕ ಜಾತಿಯ ಅಸ್ತಿತ್ವವನ್ನೆ ಅಲ್ಲಗೆಳೆಯುತ್ತಾರೆ.
ಜಾತಿಯೊಂದರಲ್ಲಿ ಹುಟ್ಟಿದ, ಜಾತಿಯ ಒಂದು
ಬೆಳೆದ ನನ್ನಂಥವರ ಸಾಮಾಜೀಕರಣ ಪ್ರಕ್ರಿಯೆ
ಒರಿಯೆಂಟಲಿಸಂ ನಿರಾಕರಿಸುತ್ತದೆ. ಎಡ್ವರ್ಡ್
ರವೇ ಹೇಳುವುದಾದರೆ ಪೂರ್ವ ಮತ್ತು ಅರಬ್
ವಾಸ್ತವವನ್ನು ಪೌರತ್ಯರು ಮರೆಮಾಡಿ ತಮಗೆ
ವಾದ ಚಿತ್ರಣವನ್ನು ಕೊಟ್ಟರು. ಹಾಗೆಯೇ
ಲಿಸಂನ್ನೇ ಪರಿಪೂರ್ಣ ಎಂದು ಭಾವಿಸು
ಯುರೋಪಿನವರು ಮಾಡಿದ್ದಕ್ಕಿಂತ ಭಿನ್ನಾವಾ
ಡುವುದಿಲ್ಲ.
ಲ್ಲಾ ಸಿದ್ಧಾಂತಗಳು ಅರಿವಿನ ವಿಕಾಸವೇ. ಒರಿ
ಸಂ ಸಿದ್ಧಾಂತ/ವಿವರ್ಶಾಪಂಥ ಕೂಡ ಅರಿವಿನ
ಹಾದಿ. ಎಲ್ಲಿಯವರೆಗೆ ಅದು ತನ್ನನ್ನು ವಿವರ್ಶೆ
ಒಡ್ಡಿಕೊಳ್ಳುವ ಅವಕಾಶವನ್ನು ಕೊಡುತ್ತದೆಯೇ
ರೆಗೆ ಆದರೆ. ಒರಿಯೆಂಟಲಿಸಂನ ಸಿದ್ಧಾಂತದಲ್ಲಿ
ಟ್ಟವರು ಅದೇ ಸಮಗ್ರ ಸತ್ಯವೆಂಬಂತೆ ಬಿಂಬಿಸು
ರ್ಕ್ಸ್ ಮತ್ತು ಇಂಡೇನ್‌ರ ಸಮಸ್ಯೆಯೂ ಅದೇ
ಬಹುದು 'ಬ್ರಿಟೀಷರ ಸೃಷ್ಟಿ' ಎಂಬ ವಾದವನ್ನು
ಜನರ ಭೌತಿಕ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ.
ಭೌತಿಕ ಅಸ್ತಿತ್ವವನ್ನು ಅಲ್ಲಗಳೆಯುವುದು
ನನಿತ್ಯದ ದಲಿತರ ಮೇಲೆ ಜರಗುವ ದೌರ್ಜನ್ಯ,
ಜಾತಿ ಸಂಘರ್ಷಗಳಿಗೆ ಕುರುಡಾಗುವುದಲ್ಲ
ರಿಯೆಂಟಲಿಸ್ಟರು ಕಟ್ಟಿದ 'ಪ್ರಜ್ಞೆ' ಭಾರತದ ಜಾತಿ
ಂಘಟಿಸುತ್ತಿದೆ ನಿರೂಪಿಸುತ್ತಿದೆ ಎಂದು ವಾದಿ

ಸುತ್ತ ತಲೆಕೆಳಕಾಗಿ ನಿಂತಿರುವ ಒರಿಯೆಂಟಲಿಂನ ಆರಾಧಕರನ್ನು ಕಾಲ ಮೇಲೆ ನಿಲ್ಲಿಸಲಾಗುತ್ತದೆ.

ಎಡ್ವರ್ಡ್ ಸೈದ್‌ರ ಒರಿಯೆಂಟಲಿಸಂ ಕೃತಿಯ ಕೇಂದ್ರ ಬಿಂದುವಾಗಿದ್ದು ಅರಬ್ ಮುಸ್ಲಿಂ ಸಮುದಾಯಗಳು. ಸಾಮ್ರಾಜ್ಯಶಾಹಿ ಯುರೋಪಿಯನ್ನರು ಮುಸ್ಲಿಂ ಸಮುದಾಯಗಳನ್ನು ಪೈಶಾಚೀಕರಣಗೊಳಿಸಿದ ಹುನ್ನಾರವನ್ನು ಬಯಲಿಗೆಳೆಯಿತು. ಆದರೆ ಅಲ್ಲಿಯೇ ಆಂತರಿಕ ವರ್ಗ-ಬುಡಕಟ್ಟು ಸಾಂಸ್ಕೃತಿಕ ವೈರುದ್ಯವನ್ನು ಮುಸ್ಲಿಂ ಪುರೋಹಿತಶಾಹಿಯು ನುಂಗಿ ನೊಣಯುತ್ತಿರುವುದನ್ನು ವಿಶ್ಲೇಸಿಸುವುದಿಲ್ಲ. ಬೃಹತ್ ನಿರೂಪಣೆಯೊಂದು ಅಂಚಿನ ಬಗ್ಗೆ ಮಾತಾಡುತ್ತಲೇ ಅಂಚಿನೊಳಗಿನ ಅಂಚುಗಳನ್ನು ಮತ್ತಷ್ಟು ಸರಿಸುವಂತಾಯಿತು. ಜೊತೆಗೆ ಇಡೀ ಪಾಶ್ಚಾತ್ಯ ನಾಗರಿಕತೆಯನ್ನು ಶತ್ರುವನ್ನಾಗಿ ಕಟ್ಟಿ ಆ ನಾಗರಿಕತೆಯ ಮಾನವೀಯ ಅಂಶಗಳನ್ನು ಕೂಡ ಪೈಶಾಚಿಕಗೊಳಿಸಿತು. ಯಾರ ಭಿನ್ನಾಭಿಪ್ರಾಯಗಳಷ್ಟೆ ಇದ್ದರೂ ಮಾರ್ಕ್ಸ್‌ವಾದಿ ಚಿಂತನೆಗಳೂ ಇಡೀ ಮನುಕುಲದ ದಮನಿತರು ವಿಮೋಚನೆಯನ್ನು ತನ್ನ ಅಜೆಂಡಾವನ್ನಾಗಿಟ್ಟುಕೊಂಡಿತ್ತು. ಅದು ಅರಬ್ ಮುಸ್ಲಿಂ ಸಮುದಾಯವನ್ನು ಒಳಗೊಂಡ ಮಾರ್ಕ್ಸ್‌ವಾದವನ್ನು ಪೈಶಾಚಿಕರಣಗೊಳಿಸಿದ ಒರಿಯೆಂಟಲಸಂನ ಒಟ್ಟು ಅಜೆಂಡಾದ ಬಗ್ಗೆಯೇ ಅನುಮಾನಗಳು ಮೂಡದೇ ಇರಲು ಸಾಧ್ಯವಿಲ್ಲ.

ಎಲ್ಲಾ ಕಾಲದಲ್ಲಿಯೂ ಕೆಳಜಾತಿಗಳೆಂದು ಕರೆಯಲ್ಪಟ್ಟವು ಮೇಲುಜಾತಿಗಳ ಶೋಷಣೆ ದೌರ್ಜನ್ನದ ವಿರುದ್ಧ ಬಂಡಾಯವೆದ್ದಿವೆ, ತಮ್ಮ ಮೇಲೆ ಆಗುತ್ತಿರುವ ಭೌತಿಕ ಹಲ್ಲೆಗಳಿಗೆ, ಭೌದ್ದಿಕ ಹಲ್ಲೆಗಳಿಗೆ ಪ್ರತಿಕ್ರಿಯಿಸಿವೆ. ಈಗಲೂ ಅಷ್ಟೆ. ಸನಾತನ ಬ್ರಾಹ್ಮಣವಾದ ಆಚಿರಿಸುತ್ತಿರುವ ಮೇಲು ಜಾತಿಗಳು ಏಕಕಾಲದಲ್ಲಿ ಜಾತಿವ್ಯವಸ್ಥೆಯನ್ನು ನಿರಾಕರಿಸುತ್ತಲೇ, ನಿರಂತರವಾಗಿ ಜಾತಿ ದೌರ್ಜನ್ಯ ಎಸುಗುತ್ತಿದ್ದಾರೆ. 'ಜಾತಿ' ಒರಿಯಂಟಲಿಸಂನ ಸೃಷ್ಟಿಯೆಂದು ಹೇಳುತ್ತಾ ದೌರ್ಜನ್ಯ ಎಸುಗುವವರ ವಾದವನ್ನು ಮತ್ತಷ್ಟು ಬಲಪಡಿಸುತ್ತಾ ಮಹತ್ವವಾದದ್ದನೇನೂ ಹೆಚ್ಚೇನು ಸಾಧಿಸಲು ಸಾಧ್ಯವಿಲ್ಲ.

ಒರಿಯೆಂಟಲಿಸಂ ಕಾಲ/ಸಂದರ್ಭ/ಪ್ರದೇಶಗಳನ್ನು ಪರಿಗಣಿಸುವುದಿಲ್ಲ. ಒರಿಯಂಟಲಿಸಂನಲ್ಲಿ ಇರಬಹುದಾದ ವೈರುದ್ಯಗಳನ್ನು ಗಮನಿಸದೇ ಹೋಗುತ್ತದೆ. ಅದೇ ತಪ್ಪನ್ನು ಜಾತಿ ಯುರೋಪಿಯನ್ನರ' ಸೃಷ್ಟಿ ಎಂದು ವಾದಿಸುವವರು ಮಾಡುತ್ತಾರೆ. ವಾಸ್ತವ ಪರಿಸ್ಥಿತಿ ಯಾವುದಿದೆಯೋ, ನಮ್ಮ ಭಾಗವಾಗಿ ಬಂದಿದೆಯೋ, ಅದರ ಪರಿಣಾಮಗಳಿಗೆ ಪ್ರತಿಕ್ರಿಯೆ ಒಳಗಾಗುತ್ತಿರುವ ಭೌತಿಕ-ಭೌದ್ಧಿಕ ಕ್ರಿಯೆಯನ್ನು ಯುರೋಪಿಯನ್ನರು ರೂಪಿಸಿದ 'ಪ್ರಜ್ಞೆ' ಎಂದು ಕರೆಯುವವರ ಪ್ರಜ್ಞೆಯ ಮಿತಿಗಳನ್ನೆ ಪ್ರಶ್ನಿಸಬೇಕಾಗುತ್ತಾರೆ. ಏಕೆಂದರೆ 'ಜಾತಿ' ಯುರೋಪಿಯನ್ನರು ಈ ರೂಪದಲ್ಲಿ ಸೃಷ್ಟಿಯಾಯಿತು ಎಂದು ಡರ್ಕ್ಸ್ ಮೊದಲಾದ ನವ ಒರಿಯೆಂಟಲಿಸಂನ ವಕ್ತಾರರು ವಾದಿಸುತ್ತಾರೆ. ಹಾಗಾದರೆ ಪೂರ್ವದಲ್ಲಿ ಹೇಗಿತು.? ಎಂಬುದಕ್ಕೆ ಅವರ ಬಳಿ ಉತ್ತರವಿಲ್ಲ. ಭವಿಷ್ಯದ ಜಾತಿ ರೂಪುತಳೆಯಬಹುದಾದ ಸಾಧ್ಯತೆ ಬಗೆಗೆ ಅವರಲ್ಲಿ ಯಾವ ಸುಳಿವೂ ಇಲ್ಲ. ಆದುದರಿಂದಲೇ ಈಗ ನಾವು ಕಾಣುತ್ತಿರುವ 'ಜಾತಿ ಯುರೋಪಿಯನ್ನ ಸೃಷ್ಟಿ' ಎಂಬ ವಾದವನ್ನು ಒಂದು ಅನುಮಾನಿತ ಸತ್ಯ (Hypo Thesis) ಆಗಿ ಓದಿಕೊಂಡು ರೋಮಾಂಚನಗೊಳ್ಳಬಹುದು. □

(ಮುಂದುವರೆಯುವುದು)



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೨೩೮ ೭೫೪೫/೯೪೪೮೦೪೮೫೦೬

ಲೆಬನಾನ್ V/S ಇಸ್ರೇಲ್: ಪೂರ್ವ ನಿಯೋಜಿತ ದಾಳಿ

ಇಸ್ರೇಲ್‌ನ 'ಆಪರೇಷನ್ ಜಸ್ಟ್ ರಿವಾರ್ಡ್' ಮಿಲಿಟರಿ ದುಸ್ಸಾಹಸ ವಿಫಲವಾಗಿದೆ. ಯುದ್ಧದ ಅವಧಿಯಲ್ಲಿ ಇಸ್ರೇಲಿ ಸೈನಿಕರು ಪ್ರತಿದಿನ ಸತ್ತಿದ್ದಾರೆ. ಹಿಜ್‌ಬುಲ್ಲಾ ಯೋಧರು, ಪಾಲಿಸ್ತೈನ್ ಯೋಧರಿಗಿಂತ ಸುಸಜ್ಜಿತರಾಗಿದ್ದು ದೃಢವಾದ ಇಚ್ಛಾ ಶಕ್ತಿಯನ್ನು ಹೊಂದಿದ್ದಾರೆ ಎನ್ನುವುದನ್ನು ಇಸ್ರೇಲಿ ಅಧಿಕಾರಿಗಳು ಒಪ್ಪುತ್ತಾರೆ. ಗಲ್ಫ್ ಯುದ್ಧದ ನಂತರ ಇದೇ ಮೊದಲ ಬಾರಿಗೆ ಇಸ್ರೇಲ್ ಬೃಹತ್ ಪ್ರಮಾಣದಲ್ಲಿ ರಾಕೆಟ್ ದಾಳಿಗೆ ತುತ್ತಾಗಿರುವುದು. ಯುದ್ಧ ಪ್ರಾರಂಭವಾದ ಮೊದಲೆರಡು ವಾರದಲ್ಲಿ ದಿನಕ್ಕೆ ನೂರಕ್ಕೂ ಹೆಚ್ಚು ರಾಕೆಟ್‌ಗಳನ್ನು ಹಿಜ್‌ಬುಲ್ಲಾ ದಾಳಿ ಮಾಡಿದೆ. ಮೊದಲ ಹಂತದ ದಾಳಿಯ ನಂತರ ಇಸ್ರೇಲ್‌ನ ಮೂರನೇ ದೊಡ್ಡ ನಗರ ಹೈಫಾ ಈಗ ಬಹುತೇಕ ನಿರ್ಜನವಾಗಿದೆ. ೧೯೬೭ರಲ್ಲಿ ಕೇವಲ ಆರು ದಿನಗಳಲ್ಲಿ ಐದು ಅರಬ್ ದೇಶಗಳನ್ನು ಮಣಿಸಿದ್ದ ಇಸ್ರೇಲಿ ಪಡೆ ಹಿಜ್‌ಬುಲ್ಲಾ ಪ್ರತಿರೋಧದಿಂದ ಕಂಗಾಲಾಗಿರುವುದಂತೂ ನಿಜ.

ಗಾಜಾ ಪ್ರಾಂತ್ಯವನ್ನು ನಿರ್ನಾಮಗೊಳಿಸಿದ ಮೇಲೆ ಇಸ್ರೇಲ್ ಕಣ್ಣು ಈಗ ಲೆಬನಾನ್ ಮೇಲೆ ಬಿದ್ದಿದೆ. ಜುಲೈ ೧೨ರಂದು ಹಿಜ್‌ಬುಲ್ಲಾ ಉಗ್ರರು ಇಬ್ಬರು ಇಸ್ರೇಲಿ ಸೈನಿಕರನ್ನು ವಶಪಡಿಸಿಕೊಂಡಿದ್ದನ್ನೇ ನೆಪವಾಗಿಸಿಕೊಂಡ ಇಸ್ರೇಲ್ ಲೆಬನಾನ್ ಮೇಲೆ ಷೆಲ್‌ಗಳ ಸುರಿಮಳೆಗೈದಿದೆ. ಜಗತ್ತಿನ ಸಶಸ್ತ್ರ ಪಡೆಗಳಲ್ಲಿ ಅಗ್ರಪಂಕ್ತಿಯಲ್ಲಿರುವ, ಪಶ್ಚಿಮ ಏಷ್ಯಾದ 'ಸೂಪರ್ ಪವರ್' ಎಂದು ಸ್ವಯಂ ಘೋಷಿಸಿಕೊಂಡಿರುವ ಇಸ್ರೇಲ್ ಬೈರೂತ್ ಮತ್ತಿತರ ಲೆಬನಾನ್ ನಗರಗಳ ನಾಶಕ್ಕೆ ತನ್ನ ಮಿಲಿಟರಿ ಶಕ್ತಿಯನ್ನು ಯಥೇಚ್ಚವಾಗಿ ಬಳಸಿಕೊಂಡಿದೆ. ಯುದ್ಧ ಆರಂಭಿಸಿ ಎರಡು ವಾರಗಳ ನಂತರವೂ ಹಿಜ್‌ಬುಲ್ಲಾ ಉಗ್ರರನ್ನು ರಣರಂಗದಲ್ಲಿ ಸೋಲಿಸುವ ಮೂಲ ಉದ್ದೇಶದಲ್ಲಿ ಇಸ್ರೇಲ್ ಯಶಸ್ವಿಯಾಗಲಿಲ್ಲ. ಆದರೆ ಲೆಬನಾನ್ ಇಸ್ರೇಲ್ ಸೈನ್ಯದ ಆತ್ಮಸ್ಥೈರ್ಯವನ್ನು ಕುಗ್ಗಿಸುವಲ್ಲಿ ಯಶಸ್ವಿಯಾಗಿದೆ. ಇದನ್ನು ಇಸ್ರೇಲಿ ಮಾಧ್ಯಮಗಳು ಕೂಡ ಒಪ್ಪುತ್ತವೆ. ಮಿಸೈಲ್‌ಗಳಿಂದ ತುಂಬಿರುವ ಇಸ್ರೇಲ್‌ನ ಹೈ-ಟೆಕ್ ಸೇನೆ, ಹೈಫಾ ಮತ್ತಿತರ ಇಸ್ರೇಲಿ ನಗರಗಳ ಮೇಲೆ ದಾಳಿಯಿಡುತ್ತಿರುವ ಕತ್ಯುಷಾ ರಾಕೆಟ್‌ಗಳನ್ನು ತಡೆಯುವಲ್ಲಿ ವಿಫಲವಾಗಿದೆ. ಅಮೆರಿಕ ಶಸ್ತ್ರಾಸ್ತ್ರಗಳನ್ನು ಬೃಹತ್ ಪ್ರಮಾಣದಲ್ಲಿ ಪೂರೈಸದೆ ಹೋಗಿದ್ದರೆ ಇಸ್ರೇಲಿ ಪಡೆಗಳು ದೀರ್ಘ ಕಾಲ ದಾಳಿ ಮುಂದುವರಸಲಾಗುತ್ತಿರಲಿಲ್ಲ ಎಂಬುದು ಈಗ ಸಾರ್ವತ್ರಿಕ ವಿಚಾರ. ಈ ಹಿಂದಿನ ಎಲ್ಲಾ ಯುದ್ಧಗಳಲ್ಲಿಯೂ ಅಮೆರಿಕೆಯ ಸಹಾಯದಿಂದ ಇಸ್ರೇಲ್ ಜಯ ಸಾಧಿಸಿತ್ತು ಎನ್ನುವುದನ್ನು ನಾವು ಇಲ್ಲಿ ಮರೆಯುವಂತಿಲ್ಲ.

ಇಸ್ರೇಲ್‌ನ 'ಆಪರೇಷನ್ ಜಸ್ಟ್ ರಿವಾರ್ಡ್' ಮಿಲಿಟರಿ ದುಸ್ಸಾಹಸ ವಿಫಲವಾಗಿದೆ. ಈವರೆಗೆ ಸಾವನ್ನಪ್ಪಿರುವ ಇಸ್ರೇಲಿಗಳ ಸಂಖ್ಯೆ ಇದನ್ನು ಪುಷ್ಟೀಕರಿಸುತ್ತದೆ. ಯುದ್ಧದ ಅವಧಿಯಲ್ಲಿ ಇಸ್ರೇಲಿ ಸೈನಿಕರು ಪ್ರತಿದಿನ ಸತ್ತಿದ್ದಾರೆ. ಹಿಜ್‌ಬುಲ್ಲಾ ಯೋಧರು, ಪಾಲಿಸ್ತೈನ್ ಯೋಧರಿಗಿಂತ ಸುಸಜ್ಜಿತರಾಗಿದ್ದು ದೃಢವಾದ ಇಚ್ಛಾ ಶಕ್ತಿಯನ್ನು ಹೊಂದಿದ್ದಾರೆ ಎನ್ನುವುದನ್ನು ಇಸ್ರೇಲಿ ಅಧಿಕಾರಿಗಳು ಒಪ್ಪುತ್ತಾರೆ. "ಇದುವರೆಗಿನ ನಮ್ಮ ಅನುಭವದ ಆಧಾರದ ಮೇಲೆ ಹೇಳುವುದಾದರೆ, ನಾವು ಎದುರಿಸಿರುವ ಅತ್ಯುತ್ತಮ ಅರಬ್ ಸೇನೆ ಇದು' ಎಂದು ಮಸಾದ್‌ನ ಮಾಜಿ ಅಧಿಕಾರಿ ಮತ್ತು ವಿಶ್ಲೇಷಕ ಯೋಸಿ ಓಲ್ಡರ್ ಇತ್ತೀಚೆಗೆ ಹೇಳಿದ್ದಾರೆ. ದಕ್ಷಿಣ ಲೆಬನಾನ್‌ನ ಬಿಂಟ್ ಬೇಲ್ ಗ್ರಾಮದಲ್ಲಿನ ಕಾಳಗ ಇದಕ್ಕೆ ತಕ್ಕ ನಿದರ್ಶನ. ಇಲ್ಲಿ ಒಂದೇ ದಿನ ಒಂಭತ್ತು ಮಂದಿ ಎಲೀಟ್ ಕಮಾಂಡೋಗಳನ್ನು ಇಸ್ರೇಲ್ ಕಳೆ[illegible] ಕೊಂಡಿದೆ. ಇಸ್ರೇಲಿ ಮಿಲಿಟರಿ ಅಧಿಕಾರಿಗಳ ಪ್ರಕಾರ ಇದು "ಬಾಗಿ[illegible]ನಿಂದ ಬಾಗಿಲವರೆಗೆ, ಕಿಟಕಿಯಿಂದ ಕಿಟಕಿಯವರೆಗೆ" ನಡೆದ ಯು[illegible] ಗಲ್ಫ್ ಯುದ್ಧದ ನಂತರ ಇದೇ ಮೊದಲ ಬಾರಿಗೆ ಇಸ್ರೇಲ್ ಬೃಹ[illegible] ಪ್ರಮಾಣದಲ್ಲಿ ರಾಕೆಟ್ ದಾಳಿಗೆ ತುತ್ತಾಗಿರುವುದು. ಯುದ್ಧ ಪ್ರಾರಂ[illegible]ವಾದ ಮೊದಲೆರಡು ವಾರದಲ್ಲಿ ದಿನಕ್ಕೆ ನೂರಕ್ಕೂ ಹೆಚ್ಚು ರಾಕೆ[illegible]ಗಳನ್ನು ಹಿಜ್‌ಬುಲ್ಲಾ ದಾಳಿ ಮಾಡಿದೆ. ಮೊದಲ ಹಂತದ ದಾಳಿ[illegible]

ಮೂಲ: ಜಾನ್ ಚೆರಿಯನ್

ಅನು: ಸತ್ಯ ಪ್ರಕಾಶ್ ಎಂ. ಆರ್

ನಂತರ ಇಸ್ರೇಲ್‌ನ ಮೂರನೇ ದೊಡ್ಡ ನಗರ ಹೈಫಾ ಈಗ ಬ[illegible]ತೇಕ ನಿರ್ಜನವಾಗಿದೆ. ೧೯೬೭ರಲ್ಲಿ ಕೇವಲ ಆರು ದಿನಗಳಲ್ಲಿ ಐ[illegible] ಅರಬ್ ದೇಶಗಳನ್ನು ಮಣಿಸಿದ್ದ ಇಸ್ರೇಲಿ ಪಡೆ ಹಿಜ್‌ಬುಲ್ಲಾ ಪ್ರ[illegible]ರೋಧದಿಂದ ಕಂಗಾಲಾಗಿರುವುದಂತೂ ನಿಜ. ಇರಾಕ್ ಮ[illegible] ಆಫ್ಘನಿಸ್ತಾನದಲ್ಲಿ ಅಮೆರಿಕಾ ಎದುರಿಸಿದ ಬಿಕ್ಕಟ್ಟಿನಂತೆ ಇಸ್ರೇಲ್ ಕೂ[illegible] ತೊಂದರೆಗೀಡಾಗಿದೆ ಎಂದು ಇಸ್ರೇಲಿ ಮಾಧ್ಯಮಗಳು ಈಗಾಗ[illegible] ಬಿತ್ತರಿಸುತ್ತಿವೆ.

ಇತಿಹಾಸ

ಲೆಬನಾನ್ ದೇಶವನ್ನು ಇಸ್ರೇಲ್ ಆಕ್ರಮಿಸುತ್ತಿರುವುದು ಇ[illegible] ಐದನೇ ಸಲ. ಪಾಲಿಸ್ತೈನ್ ಮುಕ್ತಿ ಸಂಘಟನೆ ಮತ್ತು ಯಾಸಿರ್ ಅ[illegible]ಫತ್ ಮೇಲೆ ದಾಳಿ ಕೈಗೊಂಡಾಗ ೧೯೮೦ರ ದಶಕದಲ್ಲಿ ಇಸ್ರೇ[illegible] ಲೆಬನಾನ್ ದೇಶವನ್ನು ಆಕ್ರಮಿಸಿತ್ತು. ಆಗ ಇಸ್ರೇಲ್ ರಾಯಭಾ[illegible]

ಯನ್ನು ಲಂಡನ್‌ನಲ್ಲಿ ಪಾಲಿಸ್ತೈನಿನ ಅಬು ನಿಡಾಲ್ ಗುಂಪು ಹತ್ಯೆ ನಡೆಸಲು ಯತ್ನಿಸಿತ್ತು ಎಂಬ ನೆಪ ಮುಂದಿಟ್ಟಿತ್ತು ಇಸ್ರೇಲ್. ಆದರೆ ಅಬು ನಿಡಾಲ್ ಗುಂಪು ಪಾಲಿಸ್ತೈನ್ ಮುಕ್ತಿ ಸಂಘಟನೆ (ಪಿಎಲ್‌ಒ)ಯ ವಿರುದ್ಧ ಶಕ್ತಿ ಮಸೆಯುತ್ತಿದ್ದುದು ಎಲ್ಲರಿಗೂ ತಿಳಿದ ವಿಚಾರ. ಲೆಬನಾನ್‌ನ ಇತಿಹಾಸದ ಕರಾಳ ಅಧ್ಯಾಯ ಇದು. ಆಗ ಸ್ವತಃ ಏರಿಯಲ್ ಶಾರೋನ್ ನೂರಾರು ಮುಗ್ಧ ಪಾಲಿಸ್ತೈನಿಯರ ಕಗ್ಗೊಲೆಯನ್ನು ಮುತುವರ್ಜಿ ವಹಿಸಿ ನಡೆಸಿಕೊಟ್ಟಿದ್ದ. ಸತ್ತವರು ಸಬ್ರಾ ಮತ್ತು ಶತಿಲಾದ ನಿರಾಶ್ರಿತ ತಾಣಗಳಲ್ಲಿದ್ದ ಹೆಂಗಸರು-ಮಕ್ಕಳು. ಲೆಬನಾನ್‌ನಿಂದ ಪಿಎಲ್‌ಒ ಹಿಂದೆ ಸರಿದ ನಂತರ ಸಾಮಾನ್ಯ ನಾಗರಿಕರಿಗೆ ಸೂಕ್ತ ರಕ್ಷಣೆ ನೀಡುವುದಾಗಿ ಅಮೆರಿಕ ಭರವಸೆ ನೀಡಿದ ನಂತರವೇ ಈ ದುಷ್ಕೃತ್ಯ ನಡೆದಿದ್ದು. ಇಸ್ರೇಲಿ ಪತ್ರಿಕೆ ಅಲ್ ಹಮಿಷ್ಮಾರ್' ಆಗ 'ಹೋಲೋಕಾಸ್ಟ್ ನಂತರ ಯೆಹೂದ್ಯರ ಮೇಲೆ ಬಂದೆರಗಿದ ಭೀಕರ ಅನಾಹುತ ಇದು' ಎಂದು ಬರೆದಿತ್ತು. ಇಸ್ರೇಲ್‌ನ ಮಾಜಿ ವಿದೇಶಾಂಗ ಸಚಿವ ಅಬಾ ಎಬಾನ್ ೧೯೮೨ರ ಲೆಬನಾನ್ ದಾಳಿಯನ್ನು "ಇಸ್ರೇಲ್‌ನ ಆಧುನಿಕ ಇತಿಹಾಸದ ಅತಿದೊಡ್ಡ ವೈಫಲ್ಯ" ಎಂದು ಅಲ್ಲಗಳೆದಿದ್ದಾರೆ. ೧೯೮೦ರ ದಶಕದ ಇಸ್ರೇಲಿ ದಾಳಿಯಿಂದ ೧೦೦,೦೦೦ಕ್ಕೂ ಹೆಚ್ಚು ಲೆಬನಾನಿಯರು ನಿರ್ನಾಮವಾಗಿದ್ದರು.

ಈಗ ಶತ್ರು ಹಿಜ್‌ಬುಲ್ಲಾ (ದೇವರ ಪಕ್ಷ). ೧೯೮೦ ರ ಯುದ್ಧದ ಅವಶೇಷಗಳಿಂದ ಕೊಡವಿಕೊಂಡು ಕಳೆದ ದಶಕದಿಂದಾಚೆ ಚೇತರಿಸಿಕೊಳ್ಳುತ್ತಿತ್ತು ಲೆಬನಾನ್. ಸಿರಿಯಾ ಪರ ಸಹಾನುಭೂತಿಯಿದ್ದ ಸರ್ಕಾರವನ್ನು ಪರಾಭವಗೊಳಿಸಿ ಕಳೆದ ವರ್ಷ ಪಶ್ಚಿಮದ ಒಲವಿರುವ ನಾಯಕರ ಸರ್ಕಾರ ಲೆಬನಾನ್‌ನಲ್ಲಿ ಈಗ ಅಸ್ತಿತ್ವಕ್ಕೆ ಬಂದಿದೆ. ಹಿಜ್‌ಬುಲ್ಲಾ ಕೂಡ ಸರ್ಕಾರದ ಅಂಗಪಕ್ಷವಾಗಿದ್ದು ಆಂತರಿಕ ರಾಜಕಾರಣದಲ್ಲಿ ರಚನಾತ್ಮಕವಾದ ಕೆಲಸ ಮಾಡುತ್ತಿದೆ. ಆದರೆ, ಇಸ್ರೇಲ್ ದಾಳಿಗಳನ್ನು ವಿರೋಧಿಸುವಲ್ಲಿ, ಪಾಲಿಸ್ತೈನ್‌ನ ಹೋರಾಟಕ್ಕೆ ಬೆಂಬಲ ನೀಡುವಲ್ಲಿ ಹಿಜ್‌ಬುಲ್ಲಾ ಯಾವತ್ತೂ ಹಿಂದೆ ಸರಿದಿಲ್ಲ. ಇಸ್ರೇಲ್ ತನ್ನ ಆಕ್ರಮಿತ ಪ್ರದೇಶದಿಂದ ವಾಪಸ್ಸಾಗುವಂತೆ ಮಾಡಿದ ಪ್ರಾಂತ್ಯದ ಏಕೈಕ ಪಡೆ ಎಂಬ ಹೆಗ್ಗಳಿಕೆ ಹಿಜ್‌ಬುಲ್ಲಾಗಿದೆ. ೧೮ ವರ್ಷಗಳಿಂದ ನೆಲೆವೂರಿದ್ದ ದಕ್ಷಿಣ ಲೆಬನಾನ್‌ನಲ್ಲಿನ ಪ್ರದೇಶವನ್ನು ಬಿಟ್ಟು ಇಸ್ರೇಲ್ ೨೦೦೦ದ ಸಾಲಿನಲ್ಲಿ ಹೊರ ನಡೆದಿತ್ತು. ಇಸ್ರೇಲ್ ವಿರುದ್ಧ ಅರಬ್ ಪಡೆಯ ಮೊದಲ ಗೆಲುವು ಇದು ಎಂದು ಆಗ ಘೋಷಿಸಲಾಗಿತ್ತು. ಈಗ ಇಸ್ರೇಲ್ ತನ್ನ ಯುದ್ಧ ತಂತ್ರಗಾರಿಕೆಯಲ್ಲಿ ಹಿಂದೆಂದಿಗಿಂತಲೂ ದುರ್ಬಲವಾಗಿ ಕಾಣಿಸುತ್ತಿರುವುದು ನಿಜ.

ಇಸ್ರೇಲಿ ದಾಳಿಯ ಹಿನ್ನೆಲೆ:

೨೦೦೪ರಲ್ಲಿ ಇಸ್ರೇಲ್ ಮತ್ತು ಹಿಜ್‌ಬುಲ್ಲಾ ಯುದ್ಧ ಕೈದಿಗಳ ಪರಸ್ಪರ ವಿನಿಮಯದ ನಿರ್ಣಯ ಕೈಗೊಂಡವು. ಲೆಬನಾನ್‌ನಲ್ಲಿ ಸೆರೆಸಿಕ್ಕ ಇಸ್ರೇಲ್‌ನ ಗೂಢಾಚಾರಿ ಮತ್ತು ಯುದ್ಧದಲ್ಲಿ ಮಡಿದ ಇಬ್ಬರು ಇಸ್ರೇಲ್ ಸೈನಿಕರನ್ನು ೪೦೦ ಮಂದಿ ಲೆಬನಾನ್ ಮತ್ತು ಪಾಲಿಸ್ತೈನ್ ಯುದ್ಧ ಕೈದಿಗಳೊಂದಿಗೆ ವಿನಿಮಯ ಮಾಡಿಕೊಳ್ಳುವ ಒಪ್ಪಂದ ಏರ್ಪಟ್ಟಿತ್ತು. ಆದರೆ ಆಗ ಇಸ್ರೇಲ್ ತನ್ನ ಭರವಸೆಯನ್ನು ಸಂಪೂರ್ಣವಾಗಿ ಈಡೇರಿಸಿರಲಿಲ್ಲ.

ಕೊನೆಯ ಹಂತದಲ್ಲಿ, ಇಸ್ರೇಲ್‌ನ ಪ್ರಧಾನಿ ಏರಿಯಲ್ ಶಾರೋನ್ ರಾಜಕೀಯ ಅಸ್ತ್ರವಾಗಿ ಬಳಸಿ ಹೆಚ್ಚಿನ ಲಾಭ ಪಡೆಯಲು ಮೂವರು ಲೆಬನಾನ್ ಯುದ್ಧಖೈದಿಗಳನ್ನು ಒಪ್ಪಂದದ ಕರಾರಿನಂತೆ ಬಿಡುಗಡೆ ಮಾಡಿರಲಿಲ್ಲ. ಶಾರೋನ್ ಇಂತಹ ಉದ್ಧಟತನ ಪ್ರದರ್ಶಿಸಿದ ಮರುಗಳಿಗೆಯಲ್ಲಿಯೇ, ಇಸ್ರೇಲ್ ತನ್ನ ಭರವಸೆಯನ್ನು ಈಡೇರಿಸುವವರೆಗೆ ಹಿಜ್‌ಬುಲ್ಲಾ ಇಸ್ರೇಲ್ ಯೋಧರ ಮೇಲೆ ದಾಳಿ ನಡೆಸುವ ಹಕ್ಕನ್ನು ಮುಂದುವರೆಸುತ್ತದೆ ಎಂದು ಹಿಜ್‌ಬುಲ್ಲಾ ನಾಯಕ ನಸ್ರಲ್ಲಾ ಘೋಷಿಸಿದ್ದ. ಇದು ಲೆಬನಾನ್‌ನಲ್ಲಿ ಭಾವನಾತ್ಮಕ ವಿಷಯವಾಗಿ ಪರಿಗಣಿಸಲ್ಪಟ್ಟಿತ್ತು. ಇತ್ತೀಚೆಗೆ ಲೆಬನಾನ್‌ನಲ್ಲಿ ನಡೆದ 'ಒಪಿನಿಯನ್ ಪೋಲ್' ಪ್ರಕಾರ ಲೆಬನಾನ್ ಮತ್ತು ಸಿರಿಯಾ ನಡುವೆ ಇರುವ ಇಸ್ರೇಲ್ ಆಕ್ರಮಿತ ಶೀಬಾ ಫಾರ್ಮ್ಸ್ ಮರುಪಡೆಯುವಿಕೆಗಿಂತ "ಯುದ್ಧಖೈದಿಗಳ ಬಿಡುಗಡೆ"ಗೆ ಸಾರ್ವಜನಿಕರಿಂದ ಹೆಚ್ಚಿನ ಬೆಂಬಲ ವ್ಯಕ್ತವಾಗಿದೆ.

ಜುಲೈ ೧೨ರಂದು ಹಿಜ್‌ಬುಲ್ಲಾ ಇಬ್ಬರು ಇಸ್ರೇಲ್ ಸೈನಿಕರನ್ನು ವಶಪಡಿಸಿಕೊಂಡಿದ್ದನ್ನು ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕಿದೆ. ಸೈನಿಕರನ್ನು ಸೆರೆಹಿಡಿದ ನಂತರ "ನಮ್ಮ ಯುದ್ಧ ಖೈದಿಗಳನ್ನು ಬಿಡುಗಡೆಗೊಳಿಸುವ ನಿಟ್ಟಿನಲ್ಲಿ ತಾವು ಕೈಗೊಂಡ ನಿರ್ಣಯದ" ಹಿನ್ನೆಲೆಯಲ್ಲಿ ಇಸ್ರೇಲಿ ಸೈನಿಕರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹಿಜ್‌ಬುಲ್ಲಾ ಹೇಳಿಕೆ ನೀಡಿತ್ತು. ಜುಲೈ ೧೩ರಂದು ಇಸ್ರೇಲ್‌ನ ಮಿಲಿಟರಿ ಮುಖ್ಯಸ್ಥ ಡಾನ್ ಹಾಲುಟ್ಸ್ "ನಮ್ಮ ಯೋಧರನ್ನು ಬಿಡುಗಡೆಗೊಳಿಸದೆ ಹೋದರೆ ಲೆಬನಾನ್ ದೇಶವನ್ನು ೨೦ ವರ್ಷಗಳ ಹಿಂದೆ ದೂಡುವುದಾಗಿ" ಎಚ್ಚರಿಕೆ ನೀಡಿದ್ದರು. ಇಡಿಯ ಘಟನೆಗೆ ಇನ್ನೊಂದು ಆಯಾಮ ಕೂಡ ಇದೆ. ಇಸ್ರೇಲ್ ದೇಶ ಗಾಜಾದ ಅಮಾಯಕ ನಾಗರಿಕರ ಮೇಲೆ ನಡೆಸುತ್ತಿರುವ "ಆಪರೇಷನ್ ಡಿಫೆನ್ಸ್ ಷೀಲ್ಡ್"ಗೆ ಪ್ರತಿರೋಧವಾಗಿ ಹಿಜ್‌ಬುಲ್ಲಾ ಇಸ್ರೇಲ್ ಯೋಧರನ್ನು ಸೆರೆ ಹಿಡಿದಿದೆ. ೨೦೦೨ರಲ್ಲಿ ಪಾಲಿಸ್ತೈನ್ ಮೇಲೆ ದಾಳಿ ನಡೆಸಿದ ನಂತರ ಇಸ್ರೇಲ್ ಕೈಗೊಂಡಿರುವ ಅತಿದೊಡ್ಡ ಮಿಲಿಟರಿ ಆಪರೇಷನ್ ಇದಾಗಿದೆ. ಇಸ್ರೇಲಿ ಜೈಲುಗಳಲ್ಲಿ ಕೊಳೆಯುತ್ತಿರುವ ಸಾವಿರಾರು ರಾಜಕೀಯ ಖೈದಿಗಳನ್ನು ಬಿಡುಗಡೆಗೊಳಿಸುವ ಕುರಿತು ತನ್ನ ಭರವಸೆಯನ್ನು ಈಡೇರಿಸದಿರುವ ಇಸ್ರೇಲ್‌ನ ನಾಟಕವನ್ನು ಬಯಲು ಮಾಡುವ ಉದ್ದೇಶದಿಂದ ಪಾಲಿಸ್ತೈನ್ ಯೋಧರು ಇಸ್ರೇಲಿ ಯೋಧರನ್ನು ಕಳೆದ ಜೂನ್‌ನಲ್ಲಿ ಸೆರೆಹಿಡಿದಿದ್ದಾರೆ.

ಓರ್ವ ಇಸ್ರೇಲಿ ಯೋಧನ ಜೀವ ಹೋದರೆ ಅದಕ್ಕೆ ಪ್ರತಿರೋಧವಾಗಿ ೫೦ ಮಂದಿ ಅರಬರ ಪ್ರಾಣ ತೆಗೆಯುವುದಾಗಿ ಇಸ್ರೇಲ್ ಈ ಹಿಂದೆ ಹೇಳಿಕೆ ನೀಡಿತ್ತು. ಈಗ ಕೇವಲ ಇಬ್ಬರು ಇಸ್ರೇಲ್ ಯೋಧರನ್ನು 'ಅಪಹರಣ' ಮಾಡಿದ ಕಾರಣಕ್ಕಾಗಿ ಇಡೀ ಲೆಬನಾನ್ ದೇಶದ ಮೂಲಭೂತ ವ್ಯವಸ್ಥೆಯನ್ನು ನಿರ್ನಾಮ ಮಾಡಲಾಗಿದೆ. ಶಿಯಾ ಮುಸ್ಲಿಮರಿರುವ ಬೈರೂತ್ ಮತ್ತಿತರ ಲೆಬನಾನ್ ಪ್ರದೇಶಗಳು ಇಸ್ರೇಲ್‌ನ ಸತತ ದಾಳಿಗಳನ್ನು ಎದುರಿಸುತ್ತಿದ್ದರೂ ದೇಶದ ಇತರ ಜನಾಂಗಗಳು ಸಹಾ ಇಸ್ರೇಲ್‌ನ ಅಮಾನವೀಯ ಕಾರ್ಯಾಚರಣೆಗೆ ಬಲಿಯಾಗಿವೆ. ವಿಶ್ವ ಸಂಸ್ಥೆಯ ಮುಖ್ಯಸ್ಥ ಕೋಫಿ ಅನ್ನಾನ್ ಅವರ ಯುದ್ಧ ವಿರಾಮದ ಕರೆಯನ್ನು ಅಮೆರಿಕಾ ಸಿನಿಕತನದಿಂದ ತಳ್ಳಿ ಹಾಕಿದೆ. ಜಿ-೮ ಶೃಂಗಸಭೆಯಲ್ಲಿ ಜಾರ್ಜ್ ಬುಷ್ ವ್ಯಂಗ್ಯವಾಗಿ ಕೋಫಿ ಅನ್ನಾನ್‌ರ ಹೇಳಿಕೆಯ ಬಗ್ಗೆ ಮಾತನಾಡುವುದು ಬೆಳಕಿಗೆ ಬಂದಿದೆ. ಲೆಬನಾನ್ ಸರ್ವನಾಶಕ್ಕೆ ಇಸ್ರೇಲ್‌ಗೆ ಎರಡು ವಾರಗಳಷ್ಟು ಕಾಲವಕಾಶ ನೀಡಿ, ನಂತರ ಕೊಂಡಾಲೀಜಾ ರೈಸ್ ಅವರನ್ನು ಪ್ರಾಂತ್ಯಕ್ಕೆ ಜಾರ್ಜ್ ಬುಷ್ ಕಳುಹಿಸಿದ. ರೈಸ್‌ರನ್ನು ಲೆಬನಾನ್ ಹೊರತುಪಡಿಸಿ ಉಳಿದ ಯಾವ ಅರಬ್ ದೇಶವೂ ಸ್ವಾಗತಿಸಲಿಲ್ಲ. ಲೆಬನಾನ್‌ನ ದಾರುಣ ಪರಿಸ್ಥಿತಿಯನ್ನು ("part of new birth pangs of the middle east.") "ಹೊಸದಾಗಿ ಉದಯಿಸುತ್ತಿರುವ ಮಧ್ಯಪ್ರಾಚ್ಯದ ಆರಂಭಿಕ ಒತ್ತಡಗಳು" ಎಂದು ವಿವರಿಸುವಷ್ಟು ಉದ್ಧಟತನವನ್ನು ಪ್ರದರ್ಶಿಸಿದ್ದಾರೆ ರೈಸ್. ಪಶ್ಚಿಮ ಏಷ್ಯಾಕ್ಕೆ ಹೊಸ ರೂಪ ಕೊಡುವ ಅಸ್ತ್ರವಾಗಿ ಅಮೆರಿಕಾ ಮತ್ತಿತರ ಪಶ್ಚಿಮದ ರಾಷ್ಟ್ರಗಳು ಈಗ ಪ್ರಜಾಪ್ರಭುತ್ವವನ್ನು ಬಳಸುತ್ತಿಲ್ಲ ಬದಲಿಗೆ ಇತರ ಮಾರ್ಗಗಳನ್ನು ಅನುಸರಿಸುತ್ತಿವೆ ಎನ್ನುವುದು ಸ್ಪಷ್ಟವಾಗಿ ವೇದ್ಯವಾಗಿದೆ.

ಇಸ್ರೇಲ್ ಬಾಂಬ್ ದಾಳಿಗಳು ಲೆಬನಾನ್ ದೇಶವನ್ನು ತುಂಡರಿಸುತ್ತಿವೆ ಎಂದು ಅಲ್ಲಿನ ಪ್ರಧಾನಿ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ. ಯುದ್ಧನಿರತ ಎರಡೂ ಪಡೆಗಳನ್ನು ಚದುರಿಸಲು ತುರ್ತಾಗಿ ವಿಶೇಷವಾದ ಶಾಂತಿ ಪಡೆಗಳನ್ನು ನಿಯೋಜಿಸಬೇಕೆಂದು ವಿಶ್ವಸಂಸ್ಥೆ ಹೇಳಿದೆ. ಆದರೆ ಅಮೆರಿಕಾ ವಿಶ್ವಸಂಸ್ಥೆ ಪಡೆಯ ಬದಲಿಗೆ ನ್ಯಾಟೋ ಪಡೆಯನ್ನು ನಿಯೋಜಿಸಬೇಕೆಂದು ಪಟ್ಟು ಹಿಡಿದಿದೆ. ಪಶ್ಚಿಮದ ಜತೆ ಇಸ್ರೇಲ್ ಉತ್ತಮ ಸಂಬಂಧ ಹೊಂದಿರುವುದರಿಂದ ಯಾವ ಅರಬ್ ದೇಶವೂ ಇದನ್ನು ಒಪ್ಪಲು ತಯಾರಿಲ್ಲ. ಜತೆಗೆ ೧೯೮೦ರಲ್ಲಿ ಲೆಬನಾನ್‌ನಲ್ಲಿ ಬೀಡು ಬಿಟ್ಟಿದ್ದ ಅಮೆರಿಕಾ ಮತ್ತು ಫ್ರೆಂಚ್ ಪಡೆಗಳು ಇಸ್ರೇಲ್ ಮತ್ತು ಇಸ್ರೇಲ್ ಪರ ಕಾಳಜಿಗಳಿಗೆ ಸಹಾಯವಾಗುವಂತೆ ಕಾರ್ಯನಿರ್ವಹಿಸಿದ್ದ ಕೆಟ್ಟ ನೆನಪನ್ನು ಲೆಬನಾನ್ ಇನ್ನೂ ಮರೆತಿಲ್ಲ.

ಇಸ್ರೇಲಿ ಪಡೆ ಜುಲೈ ಕೊನೆಯ ವಾರದಲ್ಲಿ ಸುಸಜ್ಜಿತರಲ್ಲದ ವಿಶ್ವಸಂಸ್ಥೆಯ ಶಾಂತಿದೂತರ ಮೇಲೆ ದಾಳಿ ನಡೆಸಿ ನಾಲ್ವರನ್ನು ಬಲಿತೆಗೆದುಕೊಂಡ ನಂತರ ಅನ್ನಾನ್ ಅವರು ಕೊನೆಗೂ ತಾಳ್ಮೆ ಮುರಿದಿದ್ದಾರೆ. ಸ್ಪಷ್ಟವಾಗಿ ಗುರುತಿಸಲ್ಪಟ್ಟಿರುವ ವಿಶ್ವಸಂಸ್ಥೆಯ ನೆಲೆಯ ಮೇಲೆ ನಡೆದ ನಿರ್ದಿಷ್ಟವಾದ ದಾಳಿ ಇದು ಎಂದಿದ್ದಾರೆ ಅನ್ನಾನ್. ವಿಶ್ವಸಂಸ್ಥೆ ಅಧಿಕಾರಿಗಳು ತಮ್ಮ ನೆಲೆಗಳ ಮೇಲೆ ದಾಳಿ ನಡೆಸದಿರಲು ಇಸ್ರೇಲ್‌ಗೆ ಸ್ಪಷ್ಟ ನಿರ್ದೇಶನ ನೀಡಿದ್ದರೂ ಈ ದಾಳಿ ನಡೆದಿದೆ. ಈ ಹಿಂದೆ ಏಪ್ರಿಲ್ ೧೮, ೧೯೯೬ರಲ್ಲಿ ಸಹಾ ಲೆಬನಾನ್ ನಿರಾಶ್ರಿತರಿಂದ ತುಂಬಿದ್ದ ಖಾನಾದ ವಿಶ್ವಸಂಸ್ಥೆಯ ನೆಲೆಯ ಮೇಲೆ ಇಸ್ರೇಲಿ ಪಡೆ ಷೆಲ್‌ಗಳಿಂದ ದಾಳಿ ನಡೆಸಿತು. ಆಗ ನೂರಾರು ಜನ ಪ್ರಾಣ

(೨೬ನೇ ಪುಟಕ್ಕೆ)

> **ಲೆಬನಾನ್ ಪ್ರದೇಶಗಳು ಇಸ್ರೇಲ್‌ನ ಸತತ ದಾಳಿಗಳನ್ನು ಎದುರಿಸುತ್ತಿದ್ದರೂ ದೇಶದ ಇತರ ಜನಾಂಗಗಳು ಸಹಾ ಇಸ್ರೇಲ್‌ನ ಅಮಾನವೀಯ ಕಾರ್ಯಾಚರಣೆಗೆ ಬಲಿಯಾಗಿವೆ. ವಿಶ್ವ ಸಂಸ್ಥೆಯ ಮುಖ್ಯಸ್ಥ ಕೋಫಿ ಅನ್ನಾನ್ ಅವರ ಯುದ್ಧ ವಿರಾಮದ ಕರೆಯನ್ನು ಅಮೆರಿಕಾ ಸಿನಿಕತನದಿಂದ ತಳ್ಳಿ ಹಾಕಿದೆ. ಜಿ-೮ ಶೃಂಗಸಭೆಯಲ್ಲಿ ಜಾರ್ಜ್ ಬುಷ್ ವ್ಯಂಗ್ಯವಾಗಿ ಕೋಫಿ ಅನ್ನಾನ್‌ರ ಹೇಳಿಕೆಯ ಬಗ್ಗೆ ಮಾತನಾಡುವುದು ಬೆಳಕಿಗೆ ಬಂದಿದೆ.**

ಜುಲೈ ೩೦ರಂದು ಸರ್ವನಾಶವಾದ ಕಾನಾದ ಮನೆಯೊಂದರಲ್ಲಿ ಹೊದಿಕೆಗಳು ಹಾಗೂ ಪ್ರಾರ್ಥನಾ ಮ್ಯಾಟ್‌ಗಳಿಂದ ಮುಚ್ಚಿದ್ದ ಏಳು ದೇಹಗಳು ಮಲಗಿದ್ದವು. ಹೊದಿಕೆಗಳಿಂದ ಹೊರಕ್ಕೆ ಪುಟ್ಟದಾದ ಕೈಯೊಂದು ಹೊರ ಚಾಚಿತ್ತು; ಬ್ರೇಸ್‌ಲೆಟ್‌ನಂತೆ ಕಾಣಿಸುತ್ತಿದ್ದ ಬಟ್ಟೆಯೊಂದನ್ನು ತೊಟ್ಟಿದ್ದ ಆ ಎಳೆಯ ಕೈ ಒಂದು ಪುಟ್ಟ ಹುಡುಗಿಯದು. ಸ್ಟ್ರೆಚರ್‌ಗಳ ಮೇಲೆ ದೇಹಗಳನ್ನು ತುಂಬುವಾಗ ಇನ್ನೋರ್ವ ಮೃತ ಬಾಲಕಿಯನ್ನು ಕಂಡೆ. ಕಪ್ಪು ಅಂಗಿಯನ್ನು ತೊಟ್ಟಿದ್ದ ಆಕೆ ಕುತ್ತಿಗೆಯ ಸುತ್ತ ಸಡಿಲವಾಗಿ ಬಣ್ಣದ ಸ್ಕಾರ್ಫ್ ತೊಟ್ಟಿದ್ದಳು. ಆಕೆಯ ಮುಖ ಊದಿಕೊಂಡಿತ್ತು.

ನಾನು ಕೊಂಚ ನಿರಮ್ಮಳನಾದೆ. ನಾನು ತೈರೆ ಪಟ್ಟಣದ ಹೋಟೆಲ್‌ನಲ್ಲಿದ್ದಾಗ ಕೇಳಿಬಂದ ವದಂತಿಗಳನುಸಾರ ಇಸ್ರೇಲ್‌ನ ಪ್ಲೇನ್‌ಗಳಿಂದ ಬಾಂಬ್ ದಾಳಿಗೆ ತುತ್ತಾದ ಕಾನಾದ ಮನೆಯೊಂದರಲ್ಲಿ ಕನಿಷ್ಠ ೪೦ ಮಂದಿ ಇದ್ದು, ಅದರಲ್ಲಿ ಸುಮಾರು ಅರ್ಧದಷ್ಟು ಮಕ್ಕಳು ಇರಬೇಕಿತ್ತು. ಆದರೆ ಒಂದು ಗಂಟೆಯ ತರುವಾಯ ರೆಡ್‌ಕ್ರಾಸ್ ಮತ್ತು ಇತರರ ಜತೆ ಸೇರಿ ಹರಸಾಹಸ ಮಾಡಿ ಹಲವು ಬಾರಿ ಹುಡುಕಿದರೂ ನನಗೆ ಕಂಡಿದ್ದು ಇಬ್ಬರು ಪುಟ್ಟ ಹುಡುಗಿಯರು ಮತ್ತು ಐದು ಮಂದಿ ವಯಸ್ಕರ ದೇಹಗಳು ಮಾತ್ರ. ದಕ್ಷಿಣ ಲೆಬನಾನ್‌ನಲ್ಲಿ ನನಗೆ ನಿರಮ್ಮಳನಾಗುವಂತೆ ಮಾಡಿದ ಈ ವಿದ್ಯಮಾನ ವಿಚಿತ್ರವಾದುದಾದರೂ ೪೦ರ ಬದಲಿಗೆ ಏಳು ಮಂದಿ ಮಾತ್ರ ಸತ್ತಿದ್ದಾರೆ ಎನ್ನುವ ವಿಷಯ ನನಗೆ ನಿಜಕ್ಕೂ ಸಮಾಧಾನ ತಂದಿತು.

ನರಕ ಸದೃಶ ದೃಶ್ಯಗಳು:

ಆ ಸ್ಥಳದಲ್ಲಿ ನಿಂತು ನಿಟ್ಟುಸಿರು ಬಿಡುವ ಹೊತ್ತಿಗೆ ನರಕ ಸದೃಶ ದೃಶ್ಯಗಳನ್ನು ನೋಡುವಂತಹ ದೌರ್ಭಾಗ್ಯ ನನ್ನ ಪಾಲಿಗೆ ಬಂತು. ನಾಲ್ವರು ವೈದ್ಯಕೀಯ ಸಹಾಯಕರು ಬಾಲಕನೋರ್ವನನ್ನು ಕಿತ್ತಳೆ ಬಣ್ಣದ ಸ್ಟ್ರೆಚರ್‌ನ ಮೇಲೆ ಕರೆದೊಯ್ಯುತ್ತಿದ್ದರು. ಕಪ್ಪು ಷಾರ್ಟ್ಸ್ ಮತ್ತು ರಂಗು ರಂಗಿನ ಮೋಟರ್ ಬೈಕ್‌ನ ಪ್ರಿಂಟ್ ಇದ್ದ ಬಿಳಿಯ ಟೀ-ಷರ್ಟ್ ತೊಟ್ಟಿದ್ದ ಬಾಲಕ ಸುಮಾರು ೧೨ ವರ್ಷದವನಿರಬಹುದು. ತನ್ನೆರಡು ಕೈಗಳನ್ನು ತಲೆಯ ಹಿಂದೆ ಕಟ್ಟಿದ್ದ ಆತನ ಮುಖದ ಮೇಲೆ ಗಾಯಗಳಾಗಿದ್ದು, ತುಟಿ ಊದಿಕೊಂಡಿತ್ತು. ಉಳಿದಂತೆ ಇನ್ನೂ ಸುಂದರವಾಗಿದ್ದ. ಪ್ರತಿ ಸಲ ಸಾವನ್ನು ಇದಿರುಗೊಂಡಾಗ ಅಂದುಕೊಳ್ಳುವಂತೆ, ಈ ಬಾರಿಯೂ ಒಂದು ಕ್ಷಣ, ಆತ ಕೂಡ ಮಲಗಿರಬೇಕು, ಮತ್ತೆ ನಾಳೆ ಮುಂಜಾನೆ ಎಲ್ಲರಂತೆ ಆರೋಗ್ಯವಾಗಿ ಮೇಲೇಳಬಹುದು ಎಂದುಕೊಂಡೆ. ಆದರೆ ಆತ ಸತ್ತಿದ್ದ.

ಮತ್ತಿಬ್ಬರು ಮೃತ ಬಾಲಕರನ್ನು ಆತನ ಹಿಂದೆಯೇ ಕರೆತರಲಾಯಿತು. ಸ್ಟ್ರೆಚರ್‌ಗಳ ಕೊರತೆಯಿಂದಾಗಿ ಅದೇ ಕಿತ್ತಳೆ ಬಣ್ಣದ ಸ್ಟ್ರೆಚರ್ ಮೇಲೆ ಬಾಲಕರ ಹೆಣಗಳನ್ನು ಒಂದರ ಮೇಲೊಂದರಂತೆ ಪೇರಿಸುತ್ತಿದ್ದರು. ಇವರಲ್ಲಿ ಒಬ್ಬ ಬಾಲಕ ಸ್ವಲ್ಪ ದಷ್ಟಪುಷ್ಟನಾಗಿದ್ದ; ಆತ ಕೆಂಪು ಟೀ-ಷರ್ಟ್ ಹಾಗೂ ಷಾರ್ಟ್ಸ್ ತೊಟ್ಟಿದ್ದ. ಆತ ಇನ್ನೂ ೬ ವರ್ಷದವನಿರಬಹುದಾದ ಕಿರಿಯನ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ. ರಕ್ತ ಮತ್ತು ಮಣ್ಣಿನಿಂದ ಆವೃತ್ತವಾಗಿದ್ದ ಇಬ್ಬರ ತುಟಿಗಳೂ ಸಿಡಿದಿದ್ದವು. ಸಾಯುವ ಗಳಿಗೆಯಲ್ಲಿ ಇಬ್ಬರೂ ಮಲಗಿರಲಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು.

ಮಕ್ಕಳು ಹಾಗೂ ಹಾಲುಗಲ್ಲದ ಹಸುಳೆಗಳು ಯುದ್ಧದ ಭೀಕರತೆಗೆ ಆಹುತಿಯಾಗುತ್ತಿರುವುದು, ಇಲ್ಲಿನ ಪ್ರತಿಯೊಬ್ಬ ವರದಿಗಾರನಿಗೂ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಲಭ್ಯವಿರುವ ಅಲ್ಪಸ್ವಲ್ಪ ಅಧಿಕೃತ ದಾಖಲೆಗಳು ಈ ವಿಷಯವನ್ನು ಪುಷ್ಟೀಕರಿಸುತ್ತವೆ. ಜುಲೈ ೩೧ರಂದು ಕಾನಾದಲ್ಲಿ ಮೃತಪಟ್ಟ ೬೦ ಮಂದಿ ಜನರಲ್ಲಿ ೩೭ ಜನ ಮಕ್ಕಳು ಎಂದು ಯೂನಿಸೆಫ್ ಹೇಳಿಕೆ ನೀಡಿದೆ. ನೀವು ಎಲ್ಲಿ ಹೋದರೂ ಸಾವಿಗೀಡಾದವರು, ಗಾಯಗೊಂಡವರು, ಅನಾಥರಾದವರು ಮಕ್ಕಳೇ ಎನಿಸುತ್ತಿತ್ತು. ಆಗಸ್ಟ್ ೧ರಂದು ಲೆಬನಾನ್ ಸರ್ಕಾರ ನೀಡಿದ ಅಧಿಕೃತ ಹೇಳಿಕೆಯ ಪ್ರಕಾರ ದಾಳಿಗಳಿಂದಾಗಿ ಇದುವರೆವಿಗೂ ಮಡಿದ ೮೨೮ ನಾಗರಿಕರಲ್ಲಿ ಶೇ ೩೫ರಷ್ಟು ಮಕ್ಕಳು ಅಂದರೆ ಸುಮಾರು ೨೯೦ ರಷ್ಟಿದ್ದಾರೆ. ಯೂನಿಸೆಫ್ ಅಂದಾಜಿನ ಪ್ರಕಾರ ಇದುವರೆಗೆ ಲೆಬನಾನ್‌ನಲ್ಲಿ ಸತ್ತವರ ಪೈಕಿ ಮೂರನೇ ಒಂದರಷ್ಟು ಮಂದಿ ಮಕ್ಕಳು.

ಆ ಸ್ಥಳದಲ್ಲಿ ನಿಂತು ನಿಟ್ಟುಸಿರು ಬಿಡುವ ಹೊತ್ತಿಗೆ ನರಕ ಸದೃಶ ದೃಶ್ಯಗಳನ್ನು ನೋಡುವಂತಹ ದೌರ್ಭಾಗ್ಯ ನನ್ನ ಪಾಲಿಗೆ ಬಂತು. ನಾಲ್ವರು ವೈದ್ಯಕೀಯ ಸಹಾಯಕರು ಬಾಲಕನೋರ್ವನನ್ನು ಕಿತ್ತಳೆ ಬಣ್ಣದ ಸ್ಟ್ರೆಚರ್‌ನ ಮೇಲೆ ಕರೆದೊಯ್ಯುತ್ತಿದ್ದರು. ಕಪ್ಪು ಷಾರ್ಟ್ಸ್ ಮತ್ತು ರಂಗು ರಂಗಿನ ಮೋಟರ್ ಬೈಕ್‌ನ ಪ್ರಿಂಟ್ ಇದ್ದ ಬಿಳಿಯ ಟೀ-ಷರ್ಟ್ ತೊಟ್ಟಿದ್ದ ಬಾಲಕ ಸುಮಾರು ೧೨ ವರ್ಷದವನಿರಬಹುದು. ತನ್ನೆರಡು ಕೈಗಳನ್ನು ತಲೆಯ ಹಿಂದೆ ಕಟ್ಟಿದ್ದ ಆತನ ಮುಖದ ಮೇಲೆ ಗಾಯಗಳಾಗಿದ್ದು, ತುಟಿ ಊದಿಕೊಂಡಿತ್ತು. ಉಳಿದಂತೆ ಇನ್ನೂ ಸುಂದರವಾಗಿದ್ದ. ಪ್ರತಿ ಸಲ ಸಾವನ್ನು ಇದಿರುಗೊಂಡಾಗ ಅಂದುಕೊಳ್ಳುವಂತೆ, ಈ ಬಾರಿಯೂ ಒಂದು ಕ್ಷಣ, ಆತ ಕೂಡ ಮಲಗಿರಬೇಕು, ಮತ್ತೆ ನಾಳೆ ಮುಂಜಾನೆ ಎಲ್ಲರಂತೆ ಆರೋಗ್ಯವಾಗಿ ಮೇಲೇಳಬಹುದು ಎಂದುಕೊಂಡೆ. ಆದರೆ ಆತ ಸತ್ತಿದ್ದ.

ಒಂದೆಡೆ ಅಧಿಕೃತ ಅಂಕಿ ಅಂಶಗಳಿವೆ. ಇನ್ನೊಂದೆಡೆ ಮಕ್ಕಳಿದ್ದಾರೆ. ಯುದ್ಧದ ಭೀಕರತೆ ಹಾಗೂ ಅಮಾನವೀಯತೆಯ ಕರಾಳ ರೂಪಕವಾಗಿ ತಮ್ಮದೇ ಆದ ನೋವಿನ ಹಾಗೂ ಭೀಭತ್ಸ ಕಥೆಗಳನ್ನು ಹಿಡಿದಿಟ್ಟುಕೊಂಡಿರುವ ಮಕ್ಕಳಿದ್ದಾರೆ. ಒಂದು ವಾರದ ಹಿಂದೆ ತೈರೆ ಪಟ್ಟಣದ ರಸ್ತೆ ಬದಿ

ಇಸ್ರೇಲ್ ದಾಳಿ: ತತ್ತರಿಸಿಹೋದ ಮಕ್ಕಳು

ಯಲ್ಲಿ ಕುಳಿತಿದ್ದ ಮುದ್ದುಮುದ್ದಾದ ೧೨ ವರ್ಷದ ಅಬ್ಬಾಸ್ ಶೈತೋ ಎಂಬ ಬಾಲಕನನ್ನು ಇದಿರುಗೊಂಡೆ. ಹೊಳೆಯುವ ಬಣ್ಣಬಣ್ಣದ ಟೀ-ಷರ್ಟ್ ತೊಟ್ಟಿದ್ದ ಆತನ ಮುಖ ರಕ್ತಸಿಕ್ತವಾಗಿತ್ತು. ೧೭ ಮಂದಿ ಕುಟುಂಬದ ಸದಸ್ಯರ ಜತೆ ತಾನಿದ್ದ ಮಿನಿವ್ಯಾನ್ ಮೇಲೆ ಬಾಂಬ್ ಅಪ್ಪಳಿಸಿ ಆತನಿಗೆ ಈ ಗತಿ ಬಂದಿತ್ತು. ಸ್ವಲ್ಪ ದೂರದಲ್ಲಿ ಆತನ ತಾಯಿ, ಸಹೋದರ ಮತ್ತು ಚಿಕ್ಕಮ್ಮ ಎಲ್ಲರೂ ಗಾಯಗೊಂಡು ನೋವಿನಿಂದ ನರಳುತ್ತಿದ್ದರು. ರುಂಡವಿಲ್ಲದ ಆತನ ಚಿಕ್ಕಪ್ಪನ ದೇಹ ಮಿನಿವ್ಯಾನ್‌ನಲ್ಲಿಯೇ ಇತ್ತು. ಬಾಲಕನ ಅಜ್ಜ ಮತ್ತು ಬೇರೊಬ್ಬ ಜತೆಗಾರನ ಮೃತದೇಹಗಳು ವ್ಯಾನ್‌ನೊಳಗೆ ಇದ್ದವು.

ಬಹುತೇಕ ಮೂರ್ಛೆ ಹೋಗುತ್ತಿದ್ದ ತಾಯಿಯನ್ನು ಕಳಸಿಕೊಂಡಿದ್ದ ಅಬ್ಬಾಸ್ ರೋದಿಸುತ್ತಿದ್ದ. ಆತನ ತಾಯಿಯ ಎದೆ ಮತ್ತು ತಲೆಗೆ ತೀವ್ರ ಪೆಟ್ಟಾಗಿದ್ದು ಒಂದು ಕೈ ಮುರಿದೇ ಹೋಗುವಂತಿತ್ತು. "ನನ್ನನ್ನು ಬಿಟ್ಟು ಹೋಗಬೇಡ, ಅಮ್ಮಾ," ಬಾಲಕ ಅಳುತ್ತಿದ್ದ. "ಹೋಗಬೇಡ, ಹೋಗಬೇಡ".

ಆತನ ತಾಯಿ ತಾನು ಸಾವಿಗೆ ಹತ್ತಿರವಾಗುತ್ತಿದ್ದೇನೆ ಎಂದು ಅಂದುಕೊಂಡದ್ದು ಸ್ಪಷ್ಟವಾಗಿತ್ತು. "ನಿನ್ನ ತಮ್ಮಂದಿರು ಮತ್ತು ತಂಗಿಯರನ್ನು ಹುಷಾರಾಗಿ ನೋಡಿಕೋ," ಎಂದು ಆಕೆ ಅಬ್ಬಾಸ್‌ಗೆ ಹೇಳುತ್ತಿದ್ದಳು. "ನನ್ನನ್ನು ಬಿಟ್ಟು ಹೋಗಬೇಡ" ಎಂದು ಅಬ್ಬಾಸ್ ಅಳುತ್ತಲೇ ಇದ್ದ. "ನನ್ನ ದೇಹದ ಕೆಳಗೆ ನೆಲದಲ್ಲಿ ಪರ್ಸ್ ಇದೆ. ಅದರಲ್ಲಿ ಹಣ ಇದೆ, ಹುಷಾರು" ಎನ್ನುತ್ತಲೇ ಆಕೆ ನಿಶ್ಶಕ್ತಳಾಗಿ ತಲೆ ತಗ್ಗಿಸಿ ಕಣ್ಣು ಮುಚ್ಚಲಾರಂಭಿಸಿದಳು. ಅಬ್ಬಾಸ್ ರೋದಿಸತೊಡಗಿದ. ತಕ್ಷಣ ಅಲ್ಲಿಗೆ ಬಂದ ವೈದ್ಯಕೀಯ ನಾಯಕರು "ಅಳಬೇಡ ಮಗು.. ಆಕೆ ಗುಣಮುಖಳಾಗುತ್ತಾಳೆ, ಆಕೆಯ ಜತೆ ಮಾತಾಡುತ್ತಿರು" ಎಂದು ಸಮಾಧಾನ ಹೇಳಿದರು.

ಅಬ್ಬಾಸ್‌ನ ತಾಯಿ ಈಗ ಬದುಕಿದ್ದಾಳೆ. ತೀವ್ರ ನಿಗಾ ಕೊಠಡಿಯಲ್ಲಿ ಚೇತರಿಸಿಕೊಳ್ಳುತ್ತಿದ್ದಾಳೆ. ಆದರೆ ಅಬ್ಬಾಸ್ ಸ್ಫೋಟದ ನಂತರ ತನ್ನ ತಾಯಿ ಬದುಕುಳಿಯಬಹುದೆಂಬ ಭರವಸೆ ಇಲ್ಲದೆ ಹೆದರಿ ಎರಡೂ ಕೈಗಳೊಳಗೆ ತನ್ನ ಮುಖವನ್ನಿಟ್ಟು ಬಿಕ್ಕಿ ಬಿಕ್ಕಿ ಅಳುತ್ತಿದ್ದ. ಒಂದು ಕೈಗೆ ಬ್ಯಾಂಡೇಜ್ ಧರಿಸಿ ದೂರ ದಿಗಂತವನ್ನು ನೋಡುತ್ತಾ ಸಮೀಪದಲ್ಲಿಯೇ ಆತನ ಸೋದರ ಆಲಿ ಇದ್ದ.

ಸುಂದರ ಕಂಗಳ ಏಳು ವರ್ಷದ ಸಮಾಹ್ ಸಾಬ್ ಎಂಬ ಬಾಲಕಿಯನ್ನು ಜುಲೈ ೨೬ರಂದು ತೈರೆ ನಗರದ ಆಸ್ಪತ್ರೆಯೊಂದರಲ್ಲಿ ಭೇಟಿಯಾದೆ. ಆಕೆ ಸಮೀಪದ ಲೂಕಾ ಹಳ್ಳಿಯವಳು. ಷೆಲ್ ಬಂದಪ್ಪಳಿಸಿದಾಗ ಆಕೆ ತನ್ನ ನಾಲ್ಕು ಹಾಗೂ ಒಂಭತ್ತು ವರ್ಷದ ಸೋದರರು ಮತ್ತು ೧೪ರ ವರ್ಷದ ಅಕ್ಕನ ಜತೆ ತನ್ನ ಮನೆಯ ಅಂಗಳದಲ್ಲಿ ಆಟವಾಡುತ್ತಿದ್ದಳು. "ರಾಕೆಟ್ ಬಂದಾಗ ನಾನು ಅಕ್ಕ ಹಾಗೂ ಸೋದರರ ಜತೆ ಆಟವಾಡುತ್ತಿದ್ದೆ" ಎನ್ನುತ್ತಾಳೆ ಸಮಾಹ್. "ಅವರೆಲ್ಲರೂ ಭಯದಿಂದ ಕಿರುಚುತ್ತಾ ಅಳಲಾರಂಭಿಸಿದರು. ನನ್ನ ಕಿವಿಯಲ್ಲಿ ಬಹಳ ನೋವಾಗುತ್ತಿತ್ತು. ನನ್ನ ಕೈಗಳು ಮತ್ತು ಕಾಲುಗಳು ರಕ್ತಮಯವಾಗಿತ್ತು. ನನಗೆ ತುಂಬಾ ಭಯವಾಗಿತ್ತು. ನನ್ನ ತಮ್ಮ ಜೋರಾಗಿ ಅಳುತ್ತಿದ್ದ. ನನಗೆ ವಿಪರೀತ ಭಯವಾಗಿತ್ತು." ವೈದ್ಯರ ಪ್ರಕಾರ ತೀವ್ರವಾಗಿ ಸುಟ್ಟು ಬೆಂದುಹೋಗಿದ್ದ ಸಮಾಹ್ ಕಾಲುಗಳಿಗೆ ಚರ್ಮದ ಗ್ರಾಫ್ಟ್ ಚಿಕಿತ್ಸೆ ನಡೆಸಬೇಕಿದ್ದು, ಆಕೆ ಮತ್ತೆ ಮೊದಲಿನಂತೆ ನಡೆದಾಡುವುದು ಬಹುತೇಕ ಸಾಧ್ಯವಿಲ್ಲ.

ಜುಲೈ ೩೧ರಂದು ನಾನು, ಬಿಂಟ್‌ಬೇಲ್ ಗ್ರಾಮದಲ್ಲಿ ೨೦ ದಿನಗಳ ಕಾಲ ತನ್ನ ಚಿಕ್ಕಮ್ಮಂದಿರು ಮತ್ತು ಅರೆ ಬುದ್ಧಿಮಾಂದ್ಯ ಚಿಕ್ಕಪ್ಪನೊಂದಿಗೆ ಮನೆಯ ಬೇಸ್‌ಮೆಂಟ್‌ನಲ್ಲಿ ಅಡಗಿಕೊಂಡಿದ್ದ ಒಂಭತ್ತು ವರ್ಷದ ಆಲಿ ಎಂಬ ಬಾಲಕನನ್ನು ಭೇಟಿಯಾದೆ (ಆತ ತನ್ನ ಪೂರ್ತಿ ಹೆಸರನ್ನು ನನಗೆ ಹೇಳಲಿಲ್ಲ). ಇಡೀ ಕುಟುಂಬ ಪಾತಾಳದಲ್ಲಿ ಅಡಗಿಕೊಂಡಿದ್ದರೆ, ಮೇಲೆ ಯುದ್ಧ ತಾಂಡವವಾಡುತ್ತಿತ್ತು. ಇಸ್ರೇಲಿ ಸೈನಿಕರು ಹಾಗೂ ಹಿಜ್‌ಬುಲ್ಲಾ ಯೋಧರ ನಡುವೆ ಭೀಕರವಾದ ಬೀದಿಕಾಳಗ ಇಲ್ಲಿ ಕೂಡ ನಡೆಯುತ್ತಿತ್ತು. ವೈಮಾನಿಕ ದಾಳಿಗೆ ಸ್ವಲ್ಪ ವಿರಾಮ ನೀಡಿದಾಗ ಅಂದು ಸೋಮವಾರ ಹೊರಜಗತ್ತಿಗೆ ಬಂದಾಗ ಆಲಿ ಒಮ್ಮೆಲೆ ಹೆದರಿ ಕಂಪಿಸಿದ. ತನ್ನ ನೆಚ್ಚಿನ ಗ್ರಾಮವನ್ನು ಗುರುತಿಸಲೂ ಆಗದೆ ಸ್ತಂಭೀಭೂತನಾಗಿದ್ದ.

ಒಂದು ಕೈಯಲ್ಲಿ ನೀರಿನ ಬಾಟಲ್ ಮತ್ತೊಂದು ಕೈಯಲ್ಲಿ ನೀಲಿ ಬ್ಯಾಗ್ ಹಿಡಿದು, ಸರ್ವನಾಶವಾದ ದೊಡ್ಡ ದೊಡ್ಡ ಕಟ್ಟಡಗಳ ಕಾಂಕ್ರೀಟ್ ಅವಶೇಷಗಳ ಗುಡ್ಡೆಗಳ ಮೇಲೆ ಒಂದೆರಡು ಹೆಜ್ಜೆಗಳನ್ನಿಡುತ್ತಿದ್ದಂತೆ ನಡುಗುತ್ತಾ ಅಳಲಾರಂಭಿಸಿದ. ಆತನನ್ನು ಕರೆದೊಯ್ಯುತ್ತಿದ್ದ ಆತನ ತಾತ ಸ್ವಲ್ಪ ದೂರ ನಡೆಯುತ್ತಿದ್ದಂತೆ ನಿಶ್ಶಕ್ತಿಯಿಂದ ಮೂರ್ಛೆ ಹೋದ. ಆಲಿ ಮತ್ತು ಕುಟುಂಬದ ಇತರರು ಅಜ್ಜನನ್ನು ಅಲ್ಲಿಯೇ ಬಿಟ್ಟು ಸುಮಾರು ಒಂದು ಕಿ.ಮೀ ದೂರದ ಗಡಿಯಲ್ಲಿ ನಿಂತಿದ್ದ ರೆಡ್‌ಕ್ರಾಸ್ ವಾಹನಗಳ ಕಡೆಗೆ ನಡೆಯುತ್ತಾ ಹೋದರು. ಕಾಂಕ್ರೀಟ್ ಅವಶೇಷಗಳ ರಾಶಿ ರಾಶಿಯನ್ನು ದಾಟಿ ಹೋಗುವುದೇ ಒಂದು ದುಸ್ಸಾಹಸವಾಗಿತ್ತು. ನಾನೂ ಕೂಡ ಅವರ ಜತೆಗೆ ನಡೆದು ಹೋದೆ. ಒಂದು ಕಾಂಕ್ರೀಟ್ ರಾಶಿಗಳನ್ನೇರಿ ಇನ್ನೊಂದಕ್ಕೆ ಕಾಲಿಡುತ್ತಾ ನಡೆಯುತ್ತಿದ್ದಾಗ ಆಲಿ ಹೇಳಿದ: "ನನ್ನ ಅಪ್ಪ-ಅಮ್ಮ ನನ್ನ ಸೋದರ-ಸೋದರಿಯರ ಜತೆ ಬೇರೆ ಪಟ್ಟಣಕ್ಕೆ ಹೋಗಿದ್ದಾರೆ. ಬಾಂಬ್‌ಗಳ ದಾಳಿ ನಿಂತಾಗ ನನ್ನನ್ನು ಬಂದು ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದ್ದಾರೆ."

ಉರಿವ ಬಿಸಿಲಿನಲ್ಲಿ ಮೇಲೆ ಆಕಾಶದಲ್ಲಿ ಇಸ್ರೇಲಿ ಜೆಟ್‌ಗಳು ಹಾರಾಡುತ್ತಿದ್ದವು. ಅವುಗಳ ಸದ್ದು, ದುಂಬಿಗಳ ನಾದದ ಜತೆ ಸೇರಿಕೊಂಡು ವಿಚಿತ್ರ ಅನುಭವವಾಗುತ್ತಿತ್ತು. ಇದ್ದಕ್ಕಿದ್ದಂತೆ ದೂರದ ಬೆಟ್ಟದಲ್ಲಿ ಧಡ್! ಎಂಬ ಸದ್ದಾಯಿತು. ತಕ್ಷಣ ಆಲಿ ಹೆದರಿ ಕಂಗಾಲಾದ. "ಅವರು ಮತ್ತೆ ಬಾಂಬ್ ಹಾಕುತ್ತಾರೆ!" ಆಲಿ ಅಳಲಾರಂಭಿಸಿದ. "ಇಸ್ರೇಲ್‌ನವರು ಯಾಕೆ ನಮ್ಮನ್ನು ಕೊಲ್ಲುತ್ತಿದ್ದಾರೆ? ಅವರಿಗೆ ನಮ್ಮ ಮೇಲೆ ದ್ವೇಷವೇ? ನನ್ನ ಸೋದರ ಮಹಮದ್ ಫೋನ್ ಮಾಡಿ ಹೇಳಿದ ನ್ಯೂಕ್ಲಿಯರ್ ಬಾಂಬ್‌ಗಳು ತುಂಬಾ ದೊಡ್ಡದು ಅಂತ. ಅದು ಈ ರಾಕೆಟ್‌ಗಳಷ್ಟೇ ದೊಡ್ಡದೇ?" ಆ ಬಾಲಕ ಎಷ್ಟು ತತ್ತರಿಸಿಹೋಗಿದ್ದನೆಂದು ವಿವರಿಸುವುದಕ್ಕೇ ಆಗುತ್ತಿಲ್ಲ. ಆತ ಬಹುತೇಕ ವಿಸ್ಮೃತಿಹೀನನಾಗಿದ್ದ.

ಉರಿವ ಬಿಸಿಲಿನಲ್ಲಿ ಮೇಲೆ ಆಕಾಶದಲ್ಲಿ ಇಸ್ರೇಲಿ ಜೆಟ್‌ಗಳು ಹಾರಾಡುತ್ತಿದ್ದವು. ಅವುಗಳ ಸದ್ದು, ದುಂಬಿಗಳ ನಾದದ ಜತೆ ಸೇರಿಕೊಂಡು ವಿಚಿತ್ರ ಅನುಭವವಾಗುತ್ತಿತ್ತು. ಇದ್ದಕ್ಕಿದ್ದಂತೆ ದೂರದ ಬೆಟ್ಟದಲ್ಲಿ ಧಡ್! ಎಂಬ ಸದ್ದಾಯಿತು. ತಕ್ಷಣ ಆಲಿ ಹೆದರಿ ಕಂಗಾಲಾದ. "ಅವರು ಮತ್ತೆ ಬಾಂಬ್ ಹಾಕುತ್ತಾರೆ!" ಆಲಿ ಅಳಲಾರಂಭಿಸಿದ. "ಇಸ್ರೇಲ್‌ನವರು ಯಾಕೆ ನಮ್ಮನ್ನು ಕೊಲ್ಲುತ್ತಿದ್ದಾರೆ? ಅವರಿಗೆ ನಮ್ಮ ಮೇಲೆ ದ್ವೇಷವೇ? ನನ್ನ ಸೋದರ ಮಹಮದ್ ಫೋನ್ ಮಾಡಿ ಹೇಳಿದ ನ್ಯೂಕ್ಲಿಯರ್ ಬಾಂಬ್‌ಗಳು ತುಂಬಾ ದೊಡ್ಡದು ಅಂತ. ಅದು ಈ ರಾಕೆಟ್‌ಗಳಷ್ಟೇ ದೊಡ್ಡದೇ?" ಆ ಬಾಲಕ ಎಷ್ಟು ತತ್ತರಿಸಿಹೋಗಿದ್ದನೆಂದು ವಿವರಿಸುವುದಕ್ಕೇ ಆಗುತ್ತಿಲ್ಲ. ಆತ ಬಹುತೇಕ ವಿಸ್ಮೃತಿಹೀನನಾಗಿದ್ದ.

ನಾವು ಪಟ್ಟಣದ ಮಧ್ಯಭಾಗಕ್ಕೆ ಬಂದೆವು. ಬಾಂಬ್ ದಾಳಿಯಿಂದಾಗಿ ಒಂದೆಡೆ ವಿಶಾಲವಾದ, ಆಳವಾದ ಕಂದಕವಾಗಿದ್ದರೆ, ಇನ್ನೊಂದೆಡೆ ಅರ್ಧ ನಿರ್ನಾಮವಾದ ಪೆಟ್ರೋಲ್ ಸ್ಟೇಷನ್ ಇತ್ತು. ಸುಟ್ಟು ಕರಕಲಾಗಿದ್ದ ಕಾರುಗಳು ಕಾಣಿಸಿದವು. ಸ್ವಲ್ಪ ದೂರ ಕ್ರಮಿಸಿದ ನಂತರ ದಣಿವಾರಿಸಿಕೊಳ್ಳಲು ನಿಂತೆವು. ಆಲಿ ತನ್ನ ನೀಲಿ ಬ್ಯಾಗ್‌ನೊಳಗಿಂದ ಮಿನರಲ್ ನೀರು ತುಂಬಿದ್ದ ಹಸಿರು ಬಾಟಲ್ ತೆಗೆದ. ಅದರಲ್ಲಿ ಕೆಲವೇ ಸೆಂಟಿಮೀಟರ್‌ಗಳಷ್ಟು ನೀರು ಉಳಿದಿತ್ತು. ಅದರಲ್ಲೇ ಸ್ವಲ್ಪ ನೀರು ಕುಡಿದು ನನಗೆ ಕೊಟ್ಟ. ನಾನು ಉಳಿದ ನೀರು ಕುಡಿದು ಮುಗಿಸಿ ಬಾಟಲ್ ಬಿಸಾಡುವುದರಲ್ಲಿದ್ದೆ. ಅಷ್ಟರಲ್ಲಿ ಆಲಿ, "ಬೇಡ, ಇದು ನನ್ನ ಅದೃಷ್ಟದ ವಸ್ತು-ಹಸಿರು ಬಣ್ಣದ್ದು, ಇಮಾಮ್ ಹುಸೇನ್ ಬಣ್ಣದ್ದು" (ಇಮಾಮ್ ಹುಸೇನ್, ಪ್ರವಾದಿ ಮಹಮದರ ಮೊಮ್ಮಗ; ಶಿಯಾ ನಂಬಿಕೆಯ ಅವಿಭಾಜ್ಯ ಅಂಗ. ಈತ ಹುತಾತ್ಮರ ಮಹಾನ್ ಸಂಕೇತವಾಗಿ ಪ್ರಸಿದ್ಧ) ಎಂದ.

ಇನ್ನೊಂದು ನೂರು ಮೀಟರ್ ದಾರಿ ಕ್ರಮಿಸಿದ ಮೇಲೆ ರೆಡ್‌ಕ್ರಾಸ್ ಆಂಬುಲೆನ್ಸ್‌ಗಳನ್ನು ತಲುಪಿದೆವು. ಆಲಿ, ತನ್ನ ಚಿಕ್ಕಮ್ಮಂದಿರು ಮತ್ತು ಇತರ ಹೆಂಗಸರು-ಮಕ್ಕಳ ಜತೆ ಆಂಬುಲೆನ್ಸ್ ಒಂದರಲ್ಲಿ ನುಸುಳಿಕೊಂಡ. ಅವರೆಲ್ಲರನ್ನು ಸಿಡೋನ್ ಮತ್ತು ಬೈರೂತ್‌ನ ಪುನಶ್ಚೇತನ ಕ್ಯಾಂಪ್‌ಗಳಿಗೆ ಕರೆದೊಯ್ಯಲಾಗುತ್ತಿತ್ತು. ಆಲಿ ಅದೃಷ್ಟವಂತ. ಆದರೆ ಇತರ ದುರದೃಷ್ಟವಂತರನ್ನು ನಾನು ಪಟ್ಟಣದುದ್ದಕ್ಕೂ ಕಂಡೆ. ಪಟ್ಟಣ ಬಿಡುವಾಗ ದಾರಿಯುದ್ದಕ್ಕೂ ಮಕ್ಕಳು ಮತ್ತು ಅವರ ಕುಟುಂಬದವರು ಸುರಕ್ಷಿತ ಸ್ಥಳಗಳಿಗೆ ಧಾವಂತದಲ್ಲಿ ತೆರಳುತ್ತಿರುವುದನ್ನು ಕಂಡೆ. ಒಬ್ಬ ತಂದೆಯಂತೂ ತನ್ನ ನಾಲ್ಕು ಹಸುಳೆಗಳನ್ನು ವ್ಹೀಲ್‌ಗಾಡಿಯಲ್ಲಿ ಒಯ್ಯುತ್ತಿದ್ದ.

ಈಗ ತಾನೆ ಹುಟ್ಟಿದ ಹಸುಳೆಗಳು ಮತ್ತು ಪುಟ್ಟ ಮಕ್ಕಳು ಈ ಯುದ್ಧದ ಕಹಿಯನ್ನು ಮರೆಯಲು ಸಾಕಷ್ಟು ಸಮಯ ಬೇಕು. □

ಸೌಜನ್ಯ: 'ದಿ ಹಿಂದೂ'

ಮೂಲ; ಗೇತ್ ಅಬ್ದುಲ್ ಮಹಮದ್

ಅನು: ಸತ್ಯಪ್ರಕಾಶ್ ಎಂ. ಆರ್.

(೨೩ನೇ ಪುಟದಿಂದ)

ಲೆಬನಾನ್ V/S ಇಸ್ರೇಲ್: ಪೂರ್ವನಿಯೋಜಿತ ದಾಳಿ

ತೆತ್ತಿದ್ದರು. ವಿಶ್ವಸಂಸ್ಥೆ ಆಗ ಈ ಘಟನೆಯನ್ನು "ಕಗ್ಗೊಲೆ" ಎಂದು ವಿವರಿಸಿತ್ತು.

ನಾಲ್ವರು ವಿಶ್ವಸಂಸ್ಥೆಯ ಶಾಂತಿದೂತರ ಹತ್ಯೆಯನ್ನು ಖಂಡಿಸಿ ಜುಲೈ ಕೊನೆಯ ವಾರದಲ್ಲಿ ಚೀನಾ ಮಂಡಿಸಿದ ವಿಶ್ವಸಂಸ್ಥೆಯ ರಕ್ಷಣಾ ಕೌನ್ಸಿಲ್‌ನ ನಿಲುವಳಿಯನ್ನು ಅಮೆರಿಕಾ ವಿಟೋ ತನ್ನ ಅಧಿಕಾರ ಬಳಸಿ ತಿರಸ್ಕರಿಸಿದೆ. ಹತರಾದವರಲ್ಲಿ ಓರ್ವ ಚೀನಾದ ನಾಗರಿಕ. ಇದಕ್ಕೂ ಮುನ್ನ ಸಿರಿಯಾದ ನಿರಾಶ್ರಿತರ ತಾಣಕ್ಕೆ ಸಾಮಾನ್ಯ ನಾಗರಿಕರನ್ನು ಕೊಂಡೊಯ್ಯುತ್ತಿದ್ದ ರೆಡ್‌ಕ್ರಾಸ್ ವಾಹನಗಳ ಮೇಲೆ ಕೂಡ ಇಸ್ರೇಲ್ ದಾಳಿ ನಡೆಸಿತ್ತು. ಅರಬ್ ಮಾಧ್ಯಮಗಳು ಇಸ್ರೇಲ್‌ನ 'ಪಿನ್ ಪಾಯಿಂಟ್' ದಾಳಿಗಳಿಗೆ ತುತ್ತಾಗುತ್ತಿವೆ. ಕ್ರಿಶ್ಚಿಯನರ ನಿಯಂತ್ರಣದಲ್ಲಿರುವ ಮಾಧ್ಯಮಗಳು ಕೂಡ ಇಸ್ರೇಲ್ ದಾಳಿಗಳನ್ನು ಎದುರಿಸುವಂತಾಗಿದೆ.

ಒಮ್ಮೆ ಇಸ್ರೇಲಿ ಪಡೆಗಳು ಲೆಬನಾನ್ ಪ್ರವೇಶಿಸುತ್ತಿದ್ದಂತೆ "ದೇಶದ ಎಲ್ಲಾ ಭಾಗಗಳ ಮೇಲೆ ದಾಳಿ ನಡೆಸುವ ಹಕ್ಕು ಇಸ್ರೇಲ್‌ನದಾಗುತ್ತದೆ – ಬರಿಯ ದಕ್ಷಿಣ ಲೆಬನಾನ್, ಹಿಜ್‌ಬುಲ್ಲಾ ತಾಣಗಳು ಮಾತ್ರವಲ್ಲ" ಎಂದು ಇಸ್ರೇಲ್‌ನ ಉತ್ತರ ಕಮಾಂಡ್‌ನ ಮೇಜರ್ ಜನರಲ್ ಉದಿ ಆಡಮ್ ಜುಲೈ ೧೨ರಂದೇ ಎಚ್ಚರಿಕೆ ನೀಡಿದ್ದ. ಇಸ್ರೇಲ್‌ನ ಸತತ ದಾಳಿಗಳಿಂದ ಸಾವಿಗೀಡಾಗುತ್ತಿರುವ ಲೆಬನಾನ್ ನಾಗರಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇತ್ತು. ಜುಲೈ ಕೊನೆಯ ವಾರದೊತ್ತಿಗೆ ಐವರು ಲೆಬನಾನಿಯರಲ್ಲಿ ಒಬ್ಬರು ನಿರಾಶ್ರಿತರಾಗಿದ್ದಾರೆ.

ಲೆಬನಾನ್‌ನ ಸಾಗರ ಮತ್ತು ವಾಯು ಮಾರ್ಗಗಳನ್ನು ಇಸ್ರೇಲ್ ನಾಶಪಡಿಸಿರುವುದರಿಂದ ಒಟ್ಟಾರೆ ನಾಗರಿಕರ ಪರಿಸ್ಥಿತಿ ದುಸ್ತರವಾಗಿದೆ. ಬೈರೂತ್‌ನ ವಿಮಾನ ನಿಲ್ದಾಣ ಬಾಂಬ್ ದಾಳಿಗೆ ತುತ್ತಾದ ಮೊದಲ ಪ್ರಮುಖ ಕೇಂದ್ರ. ದೇಶದ ಎಲ್ಲಾ ಪ್ರಮುಖ ಹೈವೇಗಳು, ಸೇತುವೆಗಳನ್ನು ನಾಶಮಾಡಲಾಗಿದೆ. ಹಿಜ್‌ಬುಲ್ಲಾ ಇಸ್ರೇಲ್ ಮೇಲೆ ದಾಳಿ ಮಾಡುವ ಪ್ರತಿ ಕತ್ಯುಷಾ ರಾಕೆಟ್‌ಗೆ ಪ್ರತಿಯಾಗಿ ಬೈರೂತ್‌ನ ೧೦ ಕಟ್ಟಡಗಳನ್ನು ನಾಶ ಮಾಡಲು ಇಸ್ರೇಲ್ ಸರ್ಕಾರ ಆದೇಶ ನೀಡಿದೆ.

ಇಸ್ರೇಲ್ ಲೆಬನಾನ್ ಪ್ರವೇಶಿಸಿದ ನಂತರವಷ್ಟೇ ಕತ್ಯುಷಾ ರಾಕೆಟ್ ದಾಳಿ ಆರಂಭವಾಗಿತ್ತು. ಇದಕ್ಕೆ ಪ್ರತ್ಯುತ್ತರವಾಗಿ ಇಸ್ರೇಲ್ ಅಮಾನವೀಯ ವೈಮಾನಿಕ ದಾಳಿ ಕೈಗೊಂಡಿತು. ವಿಶ್ವಸಂಸ್ಥೆಯ ಮಾನವೀಯ ವ್ಯವಹಾರಗಳ ಉಪ-ಕಾರ್ಯದರ್ಶಿ ಜಾನ್ ಎಗೆಲಾಂಡ್, ಇಸ್ರೇಲ್ ಮಾನವ ಹಕ್ಕುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ ಎಂದು ಬೈರೂತ್‌ನಲ್ಲಿ ಜೂನ್ ಮೂರನೆಯ ವಾರ ಹೇಳಿಕೆ ನೀಡಿದ್ದಾರೆ. ವಿಶ್ವಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ಸತ್ತವರಲ್ಲಿ ಮೂರನೆಯ ಒಂದು ಭಾಗದಷ್ಟು ಜನ ನಾಗರಿಕರು.

ಲೆಬನಾನ್ ದೇಶವನ್ನು ಆಕ್ರಮಿಸಲು ಇಸ್ರೇಲ್ ಕಳೆದ ಒಂದು ವರ್ಷದಿಂದ ತಯಾರಿ ನಡೆಸುತ್ತಿತ್ತು ಎಂದು ಇಸ್ರೇಲಿ ಮಾಧ್ಯಮಗಳು ಹೇಳಿವೆ. ಈ ಹಿನ್ನೆಲೆ ಯಲ್ಲಿ ಇಬ್ಬರು ಇಸ್ರೇಲಿ ಯೋಧರ "ಅಪಹರಣ"ದ ಕಾರಣ ಲೆಬನಾನ್ ಮೇಲೆ ದಾಳಿ ನಡೆಸಲು ಕೇವಲ ಒಂದು ನೆಪ ಅಷ್ಟೆ ಎನ್ನುವುದು ವೇದ್ಯವಾಗುತ್ತದೆ. ಈಗ ಲೆಬನಾನ್ ಸೆರೆಯಲ್ಲಿರುವ ಇಬ್ಬರು ಇಸ್ರೇಲಿ ಸೈನಿಕರು ಮೂಲತಃ ಲೆಬನಾನ್ ದೇಶವನ್ನು ಆಕ್ರಮಿಸಲು ನುಸುಳಿದ ಇಸ್ರೇಲಿ ದಂಡಿನ ಭಾಗವಾಗಿದ್ದರು ಎಂದು ಪಶ್ಚಿಮದ ಕೆಲವು ಸುದ್ದಿ ಸಂಸ್ಥೆಗಳು ಹಾಗೂ ಕೆಲವು ಸ್ವತಂತ್ರ ಸುದ್ದಿ ಮೂಲಗಳು ತಿಳಿಸಿವೆ. ಲೆಬನಾನ್‌ನಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರವನ್ನು ಪತನಗೊಳಿಸಿ ತಮಗೆ ಬೇಕಾದ ಸರ್ಕಾರವನ್ನು ಪ್ರತಿಷ್ಠಾಪಿಸು ವುದು ಇಸ್ರೇಲ್‌ನ ಮೂಲ ಉದ್ದೇಶ.

ಅಮೆರಿಕಾ ಬೆಂಬಲವಿದ್ದ ೧೯೮೨ರ "ಗಲೀಲಿ ಶಾಂತಿ ಕಾರ್ಯಾಚರಣೆ" ಕೂಡ ಇದೇ ಗುರಿ ಹೊಂದಿದ್ದು ಸಂಪೂರ್ಣವಾಗಿ ವಿಫಲವಾಗಿತ್ತು. ನಿಜ ಹೇಳಬೇಕೆಂದರೆ ಈ ಕಾರ್ಯಾಚರಣೆಯ ನಂತರ ಲೆಬನಾನ್ ನಲ್ಲಿದ್ದ ಇಸ್ರೇಲಿ ಪರ ಬಲಪಂಥೀಯರ ಸಂಖ್ಯೆ ಗಣನೀಯವಾಗಿ ಇಳಿಮುಖ ಕಂಡಿತು. ಆಗ ಇಸ್ರೇಲ್ ಬಷೀರ್ ಗೆಮಾಯೆಲ್ ಎಂಬ ತೊಗಲು ಬೊಂಬೆ ಅಧ್ಯಕ್ಷನನ್ನು ನೇಮಕ ಮಾಡುವಲ್ಲಿ ಯಶಸ್ವಿ ಯಾದರೂ ಈತ ಬಹಳ ಕಾಲ ಉಳಿಯಲಿಲ್ಲ. ಈತನ ಹತ್ಯೆಯಾಗುವುದನ್ನು ತಡೆ ಯುವಲ್ಲಿ ಇಸ್ರೇಲ್ ವಿಫಲವಾಗಿತ್ತು. ಇಸ್ರೇಲ್ ಆಕ್ರಮಣದ ಅವಧಿಯಲ್ಲಿಯೇ ಹಿಜ್‌ಬುಲ್ಲಾ ಒಂದು ಬಲಿಷ್ಠ ಶಕ್ತಿ ಯಾಗಿ ಹೊರಹೊಮ್ಮಿದ್ದು ಇನ್ನೊಂದು ಪ್ರಮುಖವಾದ ಅಂಶ.

ಹಿಜ್‌ಬುಲ್ಲಾ ಮಿಲಿಟರಿ ವಿಷಯಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ತಾನೇ ತೆಗೆದುಕೊಳ್ಳುತ್ತದೆ, ಅಮೆರಿಕಾ ಮತ್ತು ಇಸ್ರೇಲ್ ಈಗಲೂ ಪ್ರತಿಪಾದಿಸುತ್ತಿರುವಂತೆ ಇರಾನ್ ಮತ್ತು ಸಿರಿಯಾ ಸಲಹೆಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಬಹುತೇಕ ಎಲ್ಲಾ ಅರಬ್ ಮಾಧ್ಯಮ ವಿಶ್ಲೇಷಕರು ಬರೆದಿದ್ದಾರೆ. ಆದರೆ ದುರದೃಷ್ಟವಶಾತ್ ಈಜಿಪ್ಟ್, ಸೌದಿ ಅರೇಬಿಯಾ ಮತ್ತಿತರ ದೇಶಗಳು ಸುನ್ನಿ ಮುಸ್ಲಿಮರ ಪ್ರಭಾವವಿರುವ ಪ್ರಾಂತ್ಯದಲ್ಲಿ "ಶಿಯಾ ಶಕ್ತಿಗಳ ಉದಯ" ಎಂಬ ಅಮೆರಿಕಾದ ಪ್ರಚಾರ ವೈಖರಿ, ಶಬ್ದಾಡಂಬರಕ್ಕೆ ಬಲಿಯಾಗಿವೆ.

ಅಮೆರಿಕಾದ ರಾಜಕಾರಣಿಗಳು, ಪ್ರಮುಖ ಅಧಿಕಾರಿಗಳು ಮತ್ತು ಪತ್ರಕರ್ತರ ಮುಂದೆ ಕಳೆದ ವರ್ಷವೇ ಇರಾಕ್‌ನ ಅಧಿಕಾರಿಗಳು "ಲೆಬನಾನ್‌ನಲ್ಲಿ ಮೂರು ವಾರಗಳ ಯುದ್ಧ ಎಂಬ" ಪವರ್ ಪಾಯಿಂಟ್ ಪ್ರೆಸೆಂಟೇಷನ್ ಪ್ರಸ್ತುತಪಡಿಸಿದ್ದರು. ಈ ದಾಳಿಯ ಮೂಲಕ ಇಸ್ರೇಲ್ ಹಿಜ್‌ಬುಲ್ಲಾ ಸಂಘಟನೆಯನ್ನು ಬಗ್ಗುಬಡಿದರೆ ಪಾಲಿಸ್ಟೈನ್ ಪ್ರತ್ಯೇಕ ದೇಶವಾಗುವುದನ್ನು ತಪ್ಪಿಸುವ ತನ್ನ ಮೂ… ಉದ್ದೇಶದ ಕಡೆ ಗಮನಹರಿಸಬಹುದು ಎಂದು ಇಸ್ರೇ… ಲೆಕ್ಕಾಚಾರ ಹಾಕಿತ್ತು.

ಇಸ್ರೇಲ್ ಲೆಬನಾನ್ ಮೇಲೆ ಈ ಅಮಾನವೀ… ದಾಳಿ ಕೈಗೊಂಡ ನಂತರ ಲೆಬನಾನ್ ನಾಗರಿಕರ… ಉದ್ದೇಶಿಸಿ ಮಾತನಾಡಿದ ನಸ್ರಲ್ಲಾ, ಲೆಬನಾನಿಯ… ಈಗ ಎರಡು ಆಯ್ಕೆಗಳಿವೆ, "ಒಂದು; ಅಮೆರಿಕ… ಪ್ರಪಂಚದ ಇತರ ರಾಷ್ಟ್ರಗಳು ಹಾಗೂ ದುರದೃಷ್ಟವಶಾ… ಬಹುತೇಕ ಎಲ್ಲಾ ಅರಬ್ ದೇಶಗಳ ಬೆಂಬಲ ಮತ್ತು … ಡಗಳೊಂದಿಗೆ ಈ ಜಿಯೋನಿಸ್ಟ್ ಶತ್ರು ನಮ್ಮ ಮುಂ… ಟ್ಟಿರುವ ಎಲ್ಲಾ ಅಂಶಗಳನ್ನು ಒಪ್ಪಿಕೊಂಡು ತಲೆಬಾ… ವುದು ಅಥವಾ ಎರಡು; ತೀವ್ರವಾಗಿ ಪ್ರತಿರೋಧ ಒ… ವುದು," ಎಂದು ಕರೆ ಕೊಟ್ಟಿದ್ದಾನೆ.

ಇಸ್ರೇಲ್ ದಾಳಿಯ ಬಗ್ಗೆ ಭಾರತದ ಪ್ರತಿಕ್ರಿ… ಕೂಡ ಆರಂಭದಲ್ಲಿ ನೀರಸವಾಗಿತ್ತು. ವಿದೇಶಾಂಗ ವ… ಹಾರಗಳ ಸಚಿವಾಲಯ ಇಸ್ರೇಲ್ ದಾಳಿಯನ್ನು "ಸ… ತೋಲನವಿಲ್ಲದ ಪ್ರತಿರೋಧ" ಎಂದಷ್ಟೆ ವಿವರಿಸಿ ಹೇ… ನೀಡಿತ್ತು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳನ್ನು ಹೊ… ಪಡಿಸಿ, ಎಡಪಕ್ಷಗಳು, ಮತ್ತಿತರ ಪಕ್ಷಗಳು ಇಸ್ರೇಲ್ ದಾ… ಯನ್ನು ಸರ್ಕಾರ ತೀಕ್ಷ್ಣವಾಗಿ ಖಂಡಿಸಬೇಕೆಂ… ಒತ್ತಾಯಿಸಿದ ನಂತರವಷ್ಟೆ ಪ್ರಧಾನಿ ಮನಮೋಹ… ಸಿಂಗ್ ಲೋಕಸಭೆಯಲ್ಲಿ "ಇಸ್ರೇಲ್‌ನದು ಸಮತೋಲ… ಲ್ಲದ ತೀವ್ರವಾದ ಮಿಲಿಟರಿ ಪ್ರತಿರೋಧ" ಎಂದು ಖ… ಸಿದ್ದು. ಆದರೆ ತಮ್ಮ ಹೇಳಿಕೆಯಲ್ಲಿ ಪ್ರಧಾನಿ ಇಬ್ಬ… ಇಸ್ರೇಲಿ ಸೈನಿಕರನ್ನು ಹಿಜ್‌ಬುಲ್ಲಾ ಅಪಹರಿಸಿರುವುದನ್ನ… ಕೂಡ ಖಂಡಿಸಿದ್ದಾರೆ. ಪ್ರಧಾನಿ ಹೇಳಿಕೆಗಷ್ಟೆ ತೃಪ್ತಿ ಪಡ… ಎಡಪಕ್ಷಗಳು ಈಗ ಭಾರತ ಸರ್ಕಾರ ಇಸ್ರೇಲ್‌ನ… ನಡೆಯುತ್ತಿರುವ ಶಸ್ತ್ರಾಸ್ತ್ರಗಳ ಖರೀದಿಯನ್ನು ಈ ಕೂ… ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿವೆ.

ಸೌಜನ್ಯ: 'ಫ್ರಂಟ್ ಲೈನ್'

ಅಣ್ಣ ತಮ್ಮಂದಿರ ಆತ್ಮಕತೆ

ಅಣ್ಣ............

ಇವನ ಮುಂದೆ ಎಮ್ಮೆಗಳ ಹಿಂಡು
ಮೈಯಲ್ಲ ಸೆಗಣಿ ಗಂಜಳ ದುರ್ವಾಸನೆ
ತಲೆಯ ಮೇಲಿನ ಮುಂಡಾಸು ತುಂಬ ಗಿಣ್ಣು ಹಾಲಿನ, ಎಮ್ಮೆ ಕರುವಿನ
ಜೊಲ್ಲಿನ ಕಲೆ
ಇಳಿಸಲಾಗದ ಹೊರೆ ಬೆನ್ನ ಮೇಲೆ ಚಿಂದಿ ಸೇರಿಸಿ ಕಟ್ಟಿದ ಗಂಡು
ಅಂಗಿ
ತಲೆಮಾರುಗಳಿಂದ ಎಲ್ಲರೊಂದಾಗಿ ಇವನಿಗೆಂದೇ
ಹೆಣೆದ ಬಲೆ
ಅಂಗೈ ಮೇಲೆ ಇಟ್ಟ ಖಟಿ ರೊಟ್ಟಿ ಖಾರಪುಡಿಗೆ
ಒಡತಿ ಬಸಿದ ಮಜ್ಜಿಗೆ ಕಲಸುತ್ತ ಊಟ
ನಿನ್ನೆ ಹುಟ್ಟಿದ ಅಳ್ಳಗಿ ಲಕ್ಷ್ಮಿಗೆ ಬಿಟ್ಟ
ಕೋಣಕರು,
ಹಾಲು ಕುಡಿದು ಸಂತೃಪ್ತಿಯಿಂದ ಬೀಗಿ ಅಂಬಾ$_{sss}$......ಎಂಬ ನೋಟ.

ತಮ್ಮ............

ಕುರುಚಲು ಗಡ್ಡದ ನಡುವೆ ಮಿಂಚುವ
ಮುದ್ದು ತುಟಿಗಳ ನರಿಯ ಮುಗ್ಳುಳಗೆ
ಬಗಲಿಗಿಳಿಬಿಟ್ಟ ಚೀಲದ ತುಂಬ "ಉದ್ಧಾರ"ದ
ಯೋಜನೆಗಳ ಕಟ್ಟಿನ ಬಿಗು,
ಕಾವ್ಯವನು ಖಡ್ಗವಾಗಿಸಿ, ಗುಡಿಸಲುಗಳ
ಗಳ ಹಿರಿದು ಬಂಗಲೆಗಳ ನಡುಗಿಸಿ
"ಭೌಪರಾಕೆ"ಗೆ "ಘೋಷಣೆ"ಯ ವೇಷ ತೊಡಿಸಿ
ಹಳ್ಳಿಯಿಂದ ಹಾರಿದ ಕಪ್ಪೆ ದಿಲ್ಲಿಯಲ್ಲಿ ಹಿಡಿದ ಖುರ್ಚಿ
ಒಡಲುಗೊಂಡ ಅಪ್ಪ ಬೀದಿಗುಡಿಸುವ ತಂಗಿ,
ಬೆಸೆಗೊಂಡು ಕಲಿಸಿದ ಅಕ್ಷರ.... ವಿದ್ಯೆ.

ಊರದನ ಬೇಲಿಹಾರಿ
"ಬಸವಣ್ಣ"ನ ಬೆಳೆ ಮೇಯ್ದಾಗ
ನಿನ್ನ ಬೆನ್ನಿಗೆಬಿದ್ದ ಬರೆ ತಪ್ಪಿಸಿ
ನಾ ಬಗ್ಗಿ ನಿಂತಾಗ ನೋವಾಗಿರಲಿಲ್ಲ

ನೀನು ವಿಧಾನಸೌಧದ ಧಣಿಯಾಗಲೆಂದು
ನನ್ನ ಓಣಿಯವರೆಲ್ಲ ಓಟಿನ ಗುತ್ತಿಗೆ ಕೊಟ್ಟು
ಝಣ ಝಣ ಹಣ ಎಣಿಸುತ್ತ ಮಾರುತಿ ಓಮ್ನಿಯಲ್ಲಿ
ಓಡಾಡುವಾಗ ಬೆನ್ನು ನೋವು ಬಂದದ್ದು
ನನಗೆ ಈಗ ನೆನಪಾಗುತ್ತಿದೆ.



○ ಡಿ.ಎಂ. ನದಾಫ್

ಬಿಸ್ಮಿಲ್ಲಾ ಖಾನ್: ಸೀಮಾತೀತ ಸಂಗೀ

ಹಿಂದೂಸ್ಥಾನಿ ಸಂಗೀತದಲ್ಲಿ ಉಸ್ತಾದ್ ಬಿಸ್ಮಿಲ್ಲಾ ಖಾನರದ್ದು ಉನ್ನತ ಸ್ಥಾನ. ಸಮಾರಂಭಗಳು ಹಾಗೂ ಮಂಗಳ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗಿದ್ದ ಶಹನಾಯಿಯನ್ನು ಶಾಸ್ತ್ರೀಯ ಸಂಗೀತ ಮುಖ್ಯ ಭೂಮಿಗೆ ತರುವಲ್ಲಿ ಅವರ ಸಾಧನೆಗಳು ಅಪ್ರತಿಮ ಬಿಹಾರಿನ ಕುಗ್ರಾಮವೊಂದರಲ್ಲಿ ಜನಿಸಿ ಅವರು ಸಂಗೀತ ಸಾಮ್ರಾಟರಾಗಿದ್ದು ಒಂದು ರೋಚಕ ಕಥೆ.

ಅವರು ೧೯೧೬ರ ಮಾರ್ಚ್ ೨೧ರಂದು ಬಿಹಾರದ ಸಣ್ಣ ಗ್ರಾಮ ದುಮರಾನ್‌ನಲ್ಲಿ ಜನಿಸಿದರು. ಅವರ ಖಾನ್‌ದಾನ್‌ಗೆ ಸಂಗೀತದ ಹಿನ್ನೆಲೆ ಇತ್ತು. ಅವರ ಕುಟುಂಬಕ್ಕೂ ಸನಾದಿಗೂ ಹಳೆಯ ನಂಟು. ಚಿಕ್ಕಪ್ಪ ಆಲಿ ಭಕ್ಷ್ ವಿಲಾಯತ್ ಕಾಶಿಯ ವಿಶ್ವನಾಥ್ ದೇಗುಲದ ಆಸ್ಥಾನ ವಿದ್ವಾಂಸರಾಗಿದ್ದರು. ಬಿಸ್ಮಿಲ್ಲಾ ಖಾನರು ಒಂದು ಹಂತದ ಬೆಳವಣಿಗೆಯ ನಂತರ ಕಾಶಿಯಲ್ಲಿ ನೆಲೆ ನಿಂತರು. ಅದಕ್ಕೂ ಅವರಿಗೂ ಅವಿನಾಭವ ಸಂಬಂಧ. ಇದರ ಬಗ್ಗೆ ಅನೇಕ ಸಂಗತಿಗಳಿವೆ; ಕೆಲವು ದಂತ ಕಥೆಗಳೂ ಆಗಿ ಹೋಗಿವೆ.

ಬಿಸ್ಮಿಲ್ಲಾ ಖಾನರ ಸಂಗೀತ ಜೀವನದ ವಿಶಿಷ್ಟ ಮೈಲಿಗಲ್ಲುಗಳ ಅವರು ಏರಿದ ಎತ್ತರವನ್ನು ಸೂಚಿಸುತ್ತವೆ. ಭಾರತ ಸ್ವಾತಂತ್ರ್ಯ ಗ ಸಿದ ಸಂತಸದ ಕ್ಷಣಗಳನ್ನು ನಮ್ಮ ಜನರು ಅವರ ಶಹಾನಾಯಿ ವಾದನದ ಮೂಲಕ ಆಸ್ವಾದಿಸಿದರು. ಸುವರ್ಣ ಸ್ವಾತಂತ್ರ್ಯೋ ವದಲ್ಲೂ ಕೆಂಪು ಕೋಟೆಯಲ್ಲಿ ಅವರ ಕಾರ್ಯಕ್ರಮವಿತ್ತು.

ಅನೇಕ ಸಂಗೀತಗಾರರು ಅವರ ಕಲಾ ಪ್ರೌಢಿಮೆಯನ ಕೊಂಡಾಡಿದ್ದಾರೆ. ಅವರ ಸನಾದಿಯಿಂದ ಹರಿದು ಬರುತ್ತಿದ್ದ ರಾ ಸುಧೆಯ ತರಂಗಗಳಲ್ಲಿ ಅಪಾರ ಸಂಖ್ಯೆಯ ಅಭಿಮಾನಿಗಳು ಮ ಸಾರೆ ಮಿಂದಿದ್ದಾರೆ. ಸಂಗೀತ ಪ್ರಪಂಚದಲ್ಲಿ ಈ ಮಟ್ಟಕ್ಕೆ ಏರಿದ್ದರು ಕಾಶಿಯಲ್ಲಿ ಅವರ ದೈನಂದಿನ ಜೀವನ ಸರಳವಾಗಿತ್ತು ಒಡಾಟಗಳಿ ಹೆಚ್ಚಾಗಿ ಸೈಕಲ್ ರಿಕ್ಷಾವನ್ನೇ ಬಳಸುತ್ತಿದ್ದರು. ಪ್ರತಿವರ್ಷ ತಪ್ಪ ಮೊಹರಂ ಅವಧಿಯಲ್ಲಿ ಕಪ್ಪು ಬಟ್ಟೆ ಧರಿಸಿ ಕರ್ಬಾಲ ಹುತಾತ್ಮರಿ ಗೌರವಾದಾರವನ್ನು ತಮ್ಮ ಸಂಗೀತದ ಮೂಲಕ ಸಮರ್ಪಿಸುತ್ತಿದ್ದರ ಆ ಸಂದರ್ಭದಲ್ಲಿ ನುಡಿಸುತ್ತಿದ್ದ ವಿಕ್ಷಣ್ಣ ರಾಗಗಳನ್ನು ಕೇಳಿ ಸಂಗೀ

ಬಿಸ್ಮಿಲ್ಲಾ ಖಾನರ ಸಂಗೀತ ಜೀವನದ ವಿಶಿಷ್ಟ ಮೈಲಿಗಲ್ಲುಗಳು ಅವರು ಏರಿದ ಎತ್ತರವನ್ನು ಸೂಚಿಸುತ್ತವೆ. ಭಾರತ ಸ್ವಾತಂತ್ರ್ಯ ಗಳಿಸಿದ ಸಂತಸದ ಕ್ಷಣಗಳನ್ನು ನಮ್ಮ ಜನರು ಅವರ ಶಹಾನಾಯಿ ವಾದನದ ಮೂಲಕ ಆಸ್ವಾದಿಸಿದರು. ಸುವರ್ಣ ಸ್ವಾತಂತ್ರ್ಯೋತ್ಸವದಲ್ಲೂ ಕೆಂಪು ಕೋಟೆಯಲ್ಲಿ ಅವರ ಕಾರ್ಯಕ್ರಮವಿತ್ತು. ಅನೇಕ ಸಂಗೀತಗಾರರು ಅವರ ಕಲಾ ಪ್ರೌಢಿಮೆಯನ್ನು ಕೊಂಡಾಡಿದ್ದಾರೆ. ಅವರ ಸನಾದಿಯಿಂದ ಹರಿದು ಬರುತ್ತಿದ್ದ ರಾಗ ಸುಧೆಯ ತರಂಗಗಳಲ್ಲಿ ಅಪಾರ ಸಂಖ್ಯೆಯ ಅಭಿಮಾನಿಗಳು ಮನ ಸಾರೆ ಮಿಂದಿದ್ದಾರೆ. ಪ್ರತಿವರ್ಷ ತಪ್ಪದೆ ಮೊಹರಂ ಅವಧಿಯಲ್ಲಿ ಕಪ್ಪು ಬಟ್ಟೆ ಧರಿಸಿ ಕರ್ಬಾಲ ಹುತಾತ್ಮರಿಗೆ ಗೌರವಾದಾರವನ್ನು ತಮ್ಮ ಸಂಗೀತದ ಮೂಲಕ ಸಮರ್ಪಿಸುತ್ತಿದ್ದರು. ಆ ಸಂದರ್ಭದಲ್ಲಿ ನುಡಿಸುತ್ತಿದ್ದ ವಿಕ್ಷಣ್ಣ ರಾಗಗಳನ್ನು ಕೇಳಿ ಸಂಗೀತ ತಿಳಿಯದ ಸಾಮಾನ್ಯ ಜನರು ಆರ್ದ್ರರಾಗುತ್ತಿದ್ದರು.

ಮ. ಶ್ರೀ. ಮುರಳಿ ಕೃಷ್ಣ

ತಿಳಿಯದ ಸಾಮಾನ್ಯ ಜನರು ಆರ್ದ್ರರಾಗುತ್ತಿದ್ದರು.

ಅವರು ವಾರಣಾಸಿಯ ಬಾಲ್ಹಾಜಿ ದೇವಸ್ಥಾನದಲ್ಲಿ ತಮ್ಮ ಸಂಗೀತದ ಪ್ರಥಮ ಪಾಠಗಳನ್ನು ಕಲಿತರು. ನಸುಕಿನಲ್ಲೇ ಎದ್ದು, ನಮಾಜು ಮಾಡಿ, ಶಹನಾಯಿಯನ್ನು ಹಿಡಿದುಕೊಂಡು ಸಂಕಟ್ ಮೋಚನ್ ದೇಗುಲಕ್ಕೆ ತಾಲೀಮಿಗಾಗಿ ಆಗಮಿಸುತ್ತಿದ್ದರು. ವಿಶ್ವನಾಥನ ದರ್ಶನವನ್ನು ಪಡೆಯುತ್ತಿದ್ದರು. ಗಂಗಾ ನದಿಯ ತಟದಲ್ಲಿ ಕುಳಿತು ತನ್ಮಯರಾಗಿ ನಾದಸುರಭಿಯನ್ನು ಪಸರಿಸುತ್ತಿದ್ದರು. ಒಮ್ಮೆ ಅವರು ಯೂರೋಪಿಗೆ ಸಂಗೀತ ಪ್ರವಾಸಕ್ಕೆ ಹೋಗಿದ್ದರು. ಅವರ ಸನಾದಿ ವಾದನದ ಮೋಡಿಗೆ ಸಂಮೋಹನಗೊಂಡ ಅಲ್ಲಿನ ಅಭಿಮಾನಿಗಳು ಅಲ್ಲೇ ಸ್ಥಿರವಾಗಿ ನೆಲೆವೂರಲು ಬೇಕಾಗುವಂಥ ಸಕಲ ಏರ್ಪಾಟುಗಳನ್ನು ಮಾಡುವುದಾಗಿ ತಿಳಿಸಿದರು. ಆಗ ಅವರು–" "ಎಲ್ಲಾ ಸರಿ... ಆದರೆ ಇಲ್ಲಿ ನನ್ನ ಗಂಗೆ ಹರಿಯುವುದಿಲ್ಲವಲ್ಲಾ" ಎಂದು ಪ್ರತಿಕ್ರಿಯಿಸಿದರಂತೆ!

ಕಳೆದ ವರ್ಷ ಸಂಕಟ್ ಮೋಚನ್ ದೇವಾಲಯದ ಮೇಲೆ ಭಯೋತ್ಪಾದಕರು ಧಾಳಿ ಮಾಡಿದಾಗ, ಅವರು ಮಾನಸಿಕವಾಗಿ ಘಾಸಿಗೊಂಡಿದ್ದರು. ಆ ಹೀನ ಕೃತ್ಯ ಎಸಗಿದವರನ್ನು ಕೆಟ್ಟ ಪದಗಳಿಂದ ಜರಿದರು. ನಂತರ ಸಮಾಧಾನಗೊಂಡು– "ಕಾಶಿಗೆ ಐದು ಸಾವಿರ ವರ್ಷಗಳ ಇತಿಹಾಸವಿದೆ. ಅದನ್ನು ಬಾಂಬ್ ಸ್ಫೋಟದ ಐದು ಅಡಿ ಆಳ ಹಳ್ಳ ಮುಚ್ಚುವುದೆ?" ಎಂದು ಪ್ರಶ್ನಿಸಿದರು. ಆ ಸಂದರ್ಭದಲ್ಲಿ ಕಾಶಿಯಲ್ಲಿ ಕೋಮು ಗಲಭೆಗಳಲ್ಲಿ, ಯಾವ ಅಹಿತಕರ ಘಟನೆಗಳೂ ಜರುಗಲಿಲ್ಲ. ಇದರಲ್ಲಿ ಬಿಸ್ಮಿಲ್ಲಾ ಖಾನ್‌ರ ಪಾತ್ರವೂ ಹಿರಿದಾಗಿತ್ತು. ಅವರ ಕರೆಗೆ ಓಗೊಟ್ಟು ಅನೇಕ ಮುಸಲ್ಮಾನ ಮಹಿಳೆಯರು ಬಾಂಬ್ ಸ್ಫೋಟದಲ್ಲಿ ಗಾಯಗೊಂಡವರಿಗೆ ರಕ್ತದಾನ ಮಾಡಲು ಮುಂದಾಗಿದ್ದರು. ಹೀಗಿತ್ತು ಅವರ ಮತ್ತು ಕಾಶಿಯ ನಡುವಿನ ಬಾಂಧವ್ಯ!!

ಬಿಸ್ಮಿಲ್ಲಾ ಖಾನರು ಕೋಮು ಸೌಹಾರ್ದತೆಯ ಪ್ರತ್ಯಕ್ಷ ಮಾದರಿಯಾಗಿದ್ದರು. ಆದರೆ ಅವರು ಈ ತತ್ವವನ್ನು ಪ್ರಜ್ಞಾಪೂರ್ವಕವಾಗಿ ಪ್ರತಿಪಾದಿಸುತ್ತಿರಲಿಲ್ಲವೆಂದು ತೋರುತ್ತದೆ. ಸಂಗೀತದ ಮೇಲಿದ್ದ ಅತೀವ ಶ್ರದ್ಧೆ ಹಾಗೂ ಸಂಸ್ಕಾರಗಳು ಅವರ ವ್ಯಕ್ತಿತ್ವಕ್ಕೆ, ಈ ತತ್ವದ ಜೊತೆ ಸಮೀಕರಿಸಬಹುದಾದ ವಿಶಿಷ್ಟ ಆಯಾಮವನ್ನು ನೀಡಿದ್ದವು. ಒಂದು ಬಾರಿ ಅಂತಹಾ ಸಂದರ್ಶನದಲ್ಲಿ ಪತ್ರಕರ್ತರೊಬ್ಬರು ಈ ವಿಷಯದ ಬಗ್ಗೆ ಪ್ರಶ್ನಿಸಿದಾಗ, ಅವರು ಸಿಡಿಮಿಡಿಗೊಂಡು "ನನಗೆ ಗೊತ್ತಿರುವುದು ಸುರ್ ಮತ್ತು ಅಲ್ಲಾ ಮಾತ್ರ" ಎಂದು ಹೇಳಿದ್ದರು ಅಂದರೆ ಸಂಗೀತಕ್ಕೆ ಎಲ್ಲೆಗಳಿಲ್ಲ. ಅದಕ್ಕೆ ಧರ್ಮ, ಮತ, ಜಾತಿ, ಮೇಲು, ಕೀಳು, ಭಾಷೆಗಳ ಗಡಿಗಳಿಲ್ಲ ಎಂಬುದು ಅದರ ಮನೋಧರ್ಮವಾಗಿತ್ತು. ಅವರ ಈ ಬಗೆಯ ಅಪ್ರಜ್ಞಾಪೂರ್ವಕವಾದ, ಅನುಕರಣೀಯ ದೃಷ್ಟಿಕೋನ–ಕ್ರಿಯೆಗಳು ಅವರನ್ನು ಎಲ್ಲರೂ ಆದರದಿಂದ ಕಾಣುವಂತೆ ಮಾಡಿದ್ದವು. ಇರಾನಿಗೆ ಒಮ್ಮೆ ಭೇಟಿ ನೀಡಿದಾಗ, ಮೌಲ್ವಿಯೊಬ್ಬರು ಅವರ ಸಂಗೀತ–ಪ್ರವೃತ್ತಿಗಳ ಬಗ್ಗೆ ಕ್ಯಾತೆ ತೆಗೆದು, ಅದನ್ನು ಬಿಡಲು ಸೂಚಿಸಿದರಂತೆ. ಅದಕ್ಕೆ ಪ್ರತಿಯಾಗಿ, ಬಿಸ್ಮಿಲ್ಲಾ ಖಾನರು ...ದ್ ರಾಗದಲ್ಲಿ ಅಲ್ಲಾ ಪದವನ್ನು ಹಾಡಿದಾಗ, ಮೌಲ್ವಿ ...ನವಾದರಂತೆ. ನಡವಳಿಕೆಯಲ್ಲಿರುವ ಇಸ್ಲಾಂ ಧರ್ಮದಲ್ಲಿ ಸಂಗೀತಕ್ಕೆ ಪ್ರಶಸ್ತ್ಯವಿಲ್ಲ. ಆದರೆ ಬಿಸ್ಮಿಲ್ಲಾ ಖಾನರನ್ನು ಒಳಗೊಂಡು ಇತರ ಮುಸಲ್ಮಾನ ಹಿಂದೂ ಸಂಗೀತಗಾರರು ಧರ್ಮದ ಕಟ್ಟುಪಾಡುಗಳನ್ನು ಮೀರಿ ಸಂಗೀತಕ್ಕೆ ಆತುಕೊಂಡು, ಅಪೂರ್ವ ಸಾಧನೆಗಳನ್ನು ಮಾಡಿ, ಜನಮನಗಳನ್ನು ಗೆದ್ದಿರುವುದನ್ನು ಕಂಡರೆ, ಲಂಕೇಶರು ಹೇಳಿದ ಮಾತೊಂದು ನೆನಪಿಗೆ ಬರುತ್ತದೆ. ಅವರ ಪ್ರಕಾರ ಇಂತಹ ಕ್ರಿಯೆಗಳ ಹಿಂದೆ, ಮೌನ ಬಂಡಾಯ ಕೆಲಸ ಮಾಡಿರುತ್ತದೆ.

ಬಿಸ್ಮಿಲ್ಲಾ ಖಾನರು ಕರ್ನಾಟಕಕ್ಕೆ ಹಲವು ಬಾರಿ ಭೇಟಿ ನೀಡಿ ಸಂಗೀತ ಕಛೇರಿಗಳನ್ನು ನಡೆಸಿ ಕೊಟ್ಟಿದ್ದಾರೆ. ಅವರಿಗೆ ಉತ್ತರ ಕರ್ನಾಟಕದ ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಬಸವರಾಜ್ ರಾಜಗುರು, ಸವಾಯಿ ಗಂಧರ್ವ ಮತ್ತಿತರ ಹಿಂದೂಸ್ತಾನಿ ಸಂಗೀತದ ದಿಗ್ಗಜರೊಡನೆ ನಿಕಟ ಸಂಪರ್ಕವಿತ್ತು. 'ಸನಾದಿ ಅಪ್ಪಣ್ಣ' ಎಂಬ ಕನ್ನಡ ಚಲನಚಿತ್ರ ಯಶಸ್ವಿಯಾದದ್ದಕ್ಕೆ ಅವರ ಕೊಡುಗೆಗಳು ಕಾರಣವಾಗಿದ್ದವು. ಆ ಚಿತ್ರದ ಕರೆದರೂ ಕೇಳದೆ... ಎಂಬ ಗೀತೆ ಇಂದಿಗೂ ಜನಪ್ರಿಯವಾಗಿದೆ.

ಕೆಲವು ದಶಕಗಳ ಹಿಂದೆ, ಈ ಸಂಗೀತಗಾರರು ದೃಢವಾದ ಸಂಕಲ್ಪದಿಂದ ಸೃಜನಶೀಲ ಕಲೆಗೆ ಒಡ್ಡಿರಬಹುದಾದ ಅಡೆತಡೆಗಳನ್ನು ಮೀರಿ ತಮ್ಮ ಗುರಿಯನ್ನು ಸದ್ದುಗದ್ದಲವಿಲ್ಲದೆ ಸಾಧಿಸಿದ್ದು ಅಭೂತಪೂರ್ವ ವಿಷಯವೇ ಸರಿ.

ಇಂತಹ ಅನೇಕ ದೃಷ್ಟಾಂತಗಳು ಸಂಗೀತ ಜಗತ್ತಿನಲ್ಲಿ ಕಂಡು ಬರುತ್ತವೆ. ಒಮ್ಮೆ ಬಿಸ್ಮಿಲ್ಲಾ ಖಾನರು ಮದರಾಸಿನಲ್ಲಿ ಕಛೇರಿ ನಡೆಸಿದರು. ಅಂದು ಅವರ ಶಹನಾಯಿಯಿಂದ ಹರಿದ ನಾದಗಂಗೆಯಲ್ಲಿ ಜಳಕ ಮಾಡಿದವರಲ್ಲಿ ಕರ್ನಾಟಕ ಸಂಗೀತ ಉದ್ದಾಮ ವಿದ್ವಾಂಸರಾಗಿದ್ದ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್‌ರವರು ಒಬ್ಬರಾಗಿದ್ದರು. ಕಛೇರಿ ಮುಗಿದ ತರುವಾಯ ಅವರು ಖಾನ್ ಸಾಹೇಬರ ಬಳಿ ಸಾಗಿ, ಅದರ ಪಾದಕ್ಕೆ ಎರಗಿದರಂತೆ. ಅದು ಅಲ್ಲಿದ್ದ ಕೆಲವರಿಗೆ ಸಹ್ಯವಾಗ ಶೆಮ್ಮಂಗುಡಿಯವರು ಸಂಗೀತಕ್ಕೆ ಯಾವುದೇ ಮೇರೆಗಳಿಲ್ಲ ಎಂದು ವಿವರಣೆ ನೀಡಿದರಂತೆ. ಇಂತಹ ಅನೇಕ ಉದಾತ್ತ ಮಹಾನ್ ಕಲಾವಿದರು, ವಿದ್ವಾಂಸರು ನಮ್ಮ ನಾಡಿನಲ್ಲಿ ಆಗಿ ಹೋಗಿದ್ದಾರೆ. ನಮ್ಮ ಬಹುಮುಖಿ ಸಂಸ್ಕೃತಿಗೆ ಮೆರುಗನ್ನು ನೀಡಿದ್ದಾರೆ.

ಬಿಸ್ಮಿಲ್ಲಾ ಖಾನರು ಕರ್ನಾಟಕಕ್ಕೆ ಹಲವು ಬಾರಿ ಭೇಟಿ ನೀಡಿ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟಿದ್ದಾರೆ. ಅವರಿಗೆ ಉತ್ತರ ಕರ್ನಾಟಕದ ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಬಸವರಾಜ್ ರಾಜಗುರು, ಸವಾಯಿ ಗಂಧರ್ವ ಮತ್ತಿತರ ಹಿಂದೂಸ್ತಾನಿ ಸಂಗೀತದ ದಿಗ್ಗಜರೊಡನೆ ನಿಕಟ ಸಂಪರ್ಕವಿತ್ತು. 'ಸನಾದಿ ಅಪ್ಪಣ್ಣ' ಎಂಬ ಕನ್ನಡ ಚಲನಚಿತ್ರ ಯಶಸ್ವಿಯಾದದ್ದಕ್ಕೆ ಅವರ ಕೊಡುಗೆಗಳು ಕಾರಣವಾಗಿದ್ದವು. ಆ ಚಿತ್ರದ ಕರೆದರೂ ಕೇಳದೆ... ಎಂಬ ಗೀತೆ ಇಂದಿಗೂ ಜನಪ್ರಿಯವಾಗಿದೆ.

ಕರೆದರೂ ಕೇಳಿಸದಷ್ಟು ದೂರ ಸಾಗಿದ್ದಾರೆ ಬಿಸ್ಮಿಲ್ಲಾ ಖಾನ್. ಆದರೆ ಅವರ ಶಹನಾಯಿಯ ಮೂಲಕ ಪ್ರವಹಿಸಿದ ಠುಮ್ರಿ, ಧುನ್, ಕಜರಿ, ಚೈತಿ, ಸನಾನಿ ಹಾಗೂ ಇತರ ಪ್ರಕಾರಗಳು ಎಂದಿಗೂ ಅಜರಾಮರ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಈ ಬಾರಿಯ ವೈಶಿಷ್ಟ್ಯ ವೆಂದರೆ, ಎಂದಿಗೂ, ಯಾವುದೇ ಕಾರಣಕ್ಕೂ ಬೀದಿಗೆ ಬಾರದ, ಜನಪರ ಕಾಳಜಿ ವ್ಯಕ್ತಪಡಿಸದ, ಧನಾರ್ಜನೆಯನ್ನೇ ಜೀವ ನದ ಪರಮೋದ್ದೇಶವ ನ್ನಾಗಿ ಪರಿಗಣಿಸುವ, ಇಲ್ಲಿ ಸಂಪಾದಿಸಿದ ಜ್ಞಾನವನ್ನು ಪರದೇಶದಲ್ಲಿ ಧಾರೆ ಎರೆದು, ಡಾಲರ್ ಸಂಸ್ಕೃತಿಯನ್ನು ಪ್ರತಿನಿಧಿಸುವ, ವೈದ್ಯ ಕೀಯ ಹಾಗೂ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಮೀಸ ಲಾತಿ ವಿರೋಧಿ ಚಳುವಳಿಯಲ್ಲಿ ಭಾಗವಹಿ ಸಿದ್ದು. ಇವರನ್ನು ಬೆಂಬ ಲಿಸಿ ನಿಂತವರು, ಜಾಗ ತೀಕರಣದ ಹೆಸರಿನಲ್ಲಿ, ದೇಶದ ಹಿತಾಸಕ್ತಿಗಳನ್ನು ಒತ್ತೆ ಇಟ್ಟು, ಸಾಮ್ರಾಜ್ಯ ಶಾಹಿಗಳ ಗುಲಾಮಗಿರಿಗೆ ದೇಶವನ್ನು ತಳ್ಳುತ್ತಿರುವ ದೇಶೀ ಬಂಡವಾಳ ಶಾಹಿಗಳು. ಈ ಇಡೀ ಪ್ರಜಾತಂತ್ರ ವಿರೋಧಿ ಪ್ರಕ್ರಿಯೆಗೆ ಇಂಬು ಕೊಟ್ಟು, ನಿರಂತರ ಪ್ರಚಾರ ನೀಡಿ, ರಂಜನೀ ಯವಾಗಿಸುವುದಕ್ಕೆ, ಟೊಂಕ ಕಟ್ಟಿ ನಿಂತವರು, ನಮ್ಮ ಟಿವಿ ಚಾನೆಲ್‌ಗಳು ಮತ್ತು ಇತರ ಮಾಧ್ಯಮಗಳು

ನಾಡಿ ಬಂಗಾರ ಪೇಟೆ

ಮೀಸಲಾತಿ ವಿವಾದದ

ಹೊಸ ಆಯಾಮ

ಜನವರಿ ೨೦ ೨೦೦೬ ರಂದು ಸಂಸತ್ತಿನಲ್ಲಿ ಮಂಡಿಸಲಾದ, ಸಂವಿಧಾನದ ೯೩ ನೇ ತಿದ್ದುಪಡಿಯನ್ವಯ, ಸಂವಿಧಾನದ ವಿಧಿ ೧೫ ಕ್ಕೆ ಪರಿಚ್ಛೇದ ೫ನ್ನು ಸೇರಿಸುವ ಮೂಲಕ, ಶಿಕ್ಷಣ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಶೇ ೨೭ ರಷ್ಟು, ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ನಿಲುವು, ೧೫ ವರ್ಷಗಳ ನಂತರ ಮತ್ತೊಮ್ಮೆ ದೇಶದಲ್ಲಿ ಮೀಸಲಾತಿ ವಿವಾದಕ್ಕೆ ಎಡೆ ಮಾಡಿಕೊಟ್ಟಿದ್ದು, ೧೯೯೯ ರಲ್ಲಿ ವಿ.ಪಿ. ಸಿಂಗ್‌ರ ಸರ್ಕಾರ ಮಂಡಲ್ ವರದಿಯನ್ನು ಅನುಷ್ಠಾನಗೊಳಿಸಿದಾಗ, ಪೊರಕೆ ಹಿಡಿದು, ಬೀದಿ ಗುಡಿಸಿ, ಷೂ ಪಾಲಿಷ್ ಮಾಡಿ, ತರಕಾರಿ ಮಾರಿ, ತಮ್ಮ (ಅ) ಮಾನವೀಯ ಸಂವೇದನೆಯನ್ನು ಹೊರಗೆಡಹಿದ್ದ ಮೇಲ್ಜಾತಿಯ ರಕ್ಷಕರಿಗೆ, ಮತ್ತೊಮ್ಮೆ ತಮ್ಮ ಸಂವೇದನೆಯನ್ನು ವ್ಯಕ್ತಪಡಿಸಲು ಅವಕಾಶ ದೊರೆತಂತಾಗಿದೆ.

ಈ ಬಾರಿಯ ವೈಶಿಷ್ಟ್ಯವೆಂದರೆ, ಎಂದಿಗೂ, ಯಾವುದೇ ಕಾರಣಕ್ಕೂ ಬೀದಿಗೆ ಬಾರದ, ಜನಪರ ಕಾಳಜಿ ವ್ಯಕ್ತಪಡಿಸದ, ಧನಾರ್ಜನೆಯನ್ನೇ ಜೀವನದ ಪರಮೋದ್ದೇಶವನ್ನಾಗಿ ಪರಿಗಣಿಸುವ, ಇಲ್ಲಿ ಸಂಪಾದಿಸಿದ ಜ್ಞಾನವನ್ನು ಪರದೇಶದಲ್ಲಿ ಧಾರೆ ಎರೆದು, ಡಾಲರ್ ಸಂಸ್ಕೃತಿಯನ್ನು ಪ್ರತಿನಿಧಿಸುವ, ವೈದ್ಯಕೀಯ ಹಾಗೂ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಮೀಸಲಾತಿ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿದ್ದು. ಇವರನ್ನು ಬೆಂಬಲಿಸಿ ನಿಂತವರು, ಜಾಗತೀಕರಣದ ಹೆಸರಿನಲ್ಲಿ, ದೇಶದ ಹಿತಾಸಕ್ತಿಗಳನ್ನು ಒತ್ತೆ ಇಟ್ಟು, ಸಾಮ್ರಾಜ್ಯಶಾಹಿಗಳ ಗುಲಾಮಗಿರಿಗೆ ದೇಶವನ್ನು ತಳ್ಳುತ್ತಿರುವ ದೇಶೀ ಬಂಡವಾಳ ಶಾಹಿಗಳು. ಈ ಇಡೀ ಪ್ರಜಾತಂತ್ರ ವಿರೋಧಿ ಪ್ರಕ್ರಿಯೆಗೆ (ಇದನ್ನು ಚಳುಚಳಿ ಎಂದು ಕರೆದರೆ ಆ ಪದದ ಪಾವಿತ್ರ್ಯತೆಗೆ ಭಂಗ ಬರುವ ಸಾಧ್ಯತೆಗಳಿವೆ), ಇಂಬು ಕೊಟ್ಟು, ನಿರಂತರ ಪ್ರಚಾರ ನೀಡಿ, ರಂಜನೀಯವಾಗಿಸುವುದಕ್ಕೆ, ಟೊಂಕ ಕಟ್ಟಿ ನಿಂತವರು, ನಮ್ಮ ಟಿ. ಚಾನೆಲ್‌ಗಳು ಮತ್ತು ಇತರ ಮಾಧ್ಯಮಗಳು (ಕೆಲವು ಪತ್ರಿಕೆಗಳನ್ನು ಹೊರತುಪಡಿಸಿ.)

ಈ ಇಡೀ ಪ್ರಕ್ರಿಯೆಯಲ್ಲಿ ಎರಡು ವಿಡಂಬನೆಗಳನ್ನು ಕಾ ಬಹುದು. ಮೊದಲನೆಯದಾಗಿ, ಹಿಂದುಳಿದ ವರ್ಗಗಳಿಗೆ ಮೀಸಲಾ ನೀಡುವುದರ ವಿರುದ್ಧ ದನಿ ಎತ್ತಿದ ಯುವಕರು, ಅಸಮಾನತೆಯನ್ ಪ್ರತಿಪಾದಿಸಿದರೂ, 'ಸಮಾನತೆಗಾಗಿ ಯುವಕರು' (Youth f Equality) ಎಂಬ ಸಂಘಟನೆಯಡಿ ಹೋರಾಡಿದ್ದು, ಮತ್ತು ಇವ ಸಮಾನತಾ ಧ್ಯೇಯಗಳನ್ನು ಯಾರೂ ಪ್ರಶ್ನಿಸದಿದ್ದುದು. ಎರಡನೆ ವಿಡಂಬನೆ ಎಂದರೆ ಮಾಧ್ಯಮಗಳು ಈ ಪ್ರಕ್ರಿಯೆಯನ್ನು ಮಂಡ ೨ ಎಂದು ಹೆಸರಿಸಿದ್ದು.

ಬಿ.ಪಿ. ಮಂಡಲ್ ನೇತೃತ್ವದ ಮಂಡಲ್ ಸಮಿತಿ ತನ್ನ ಪ್ರಥ ವರದಿ ಸರ್ಕಾರಕ್ಕೆ ಸಲ್ಲಿಸಿದ್ದು ೧೯೮೦ ರಲ್ಲಿ. ಆ ಸಂದರ್ಭದಲ್ಲಿ ರಾ ಪತಿ ಗ್ಯಾನಿ ಜೈಲ್‌ಸಿಂಗ್‌ರವರಿಗೆ ವರದಿಯನ್ನು ಸಲ್ಲಿಸಿದ ನಂತ ಮಂಡಲ್‌ರವರು 'ಈ ದಿನ ನಾವು ಒಂದು ಚಾರಿತ್ರಿಕ ದಾಖಲೆಯನ (Historic document) ಸಂಪ್ರದಾಯಬದ್ಧವಾಗಿ ವಿಸರ್ಜಿಸಿದ್ದೇ ಎಂದು ಹೇಳಿದ್ದನ್ನು ಇಂದಿನ ಸನ್ನಿವೇಶಕ್ಕೆ ಹೋಲಿಸಬಹುದಾಗಿ ಏಕೆಂದರೆ ಈ ವರದಿ ಸಲ್ಲಿಸಿದ ೧೦ ವರ್ಷಗಳ ಕಾಲ ಅದು ಸ 'ತ್ತಿನ ಕಡತಗಳಲ್ಲೊಂದಾಗಿ ಧೂಳು ತಿನ್ನುತ್ತಿತ್ತು. ೧೯೮೯ ರಲ್ಲಿ ಅ ಕಾರಕ್ಕೆ ಬಂದ ವಿ.ಪಿ. ಸಿಂಗ್‌ರವರ ನೇತೃತ್ವದ ಜನತಾ ಪರಿವಾರ ಸರ್ಕಾರ, ಈ ವರದಿಯ ಒಂದು ಭಾಗವನ್ನು ಮಾತ್ರ ಅನುಷ್ಠಾ ಗೊಳಿಸಿತ್ತು. ಮೀಸಲಾತಿ ವಿರೋಧಿಗಳು ಹೇಳುವಂತೆ ಪ್ರಸ್ತುತ ಸರ್ಕಾ

ಪ ತೀರ್ಮಾನ, ಕೇಂದ್ರ ಮಂತ್ರಿ ಅರ್ಜುನ ಸಿಂಗ್‌ರ ರದ್ದಾಗಲೀ, ಯು.ಪಿ.ಎ. ಸರ್ಕಾರದ್ದಾಗಲೀ ಅಲ್ಲ. ರ್ಲ ರಲ್ಲಿ ವಿ.ಪಿ.ಸಿಂಗ್ ಸರ್ಕಾರ ಮಂಡಲ್ ವರದಿ ಯಲ್ಲಿ ಶಿಫಾರಸು ಮಾಡಲಾಗಿತ್ತು. ಇವೇ ಅಂಶಗಳನ್ನು ಯು.ಪಿ.ಎ. ಸರ್ಕಾರ ಅನುಷ್ಠಾನಗೊಳಿಸುತ್ತಿದೆ.

ಮಂಡಲ್ ವರದಿಯು ಅನುಷ್ಠಾನಗೊಂಡ ೧೯೯೦ ರ ಸಂದರ್ಭದಲ್ಲಿ ಮೀಸಲಾತಿಯನ್ನು ವಿರೋಧಿ ದ ಗುಂಪುಗಳು, ಭಾ.ಜ.ಪ ಮತ್ತು ಸಂಘ ಪರಿವಾರ ನ್ನೂ ಸೇರಿದಂತೆ, ಶಿಕ್ಷಣದಲ್ಲಿ ಮೀಸಲಾತಿ ನೀಡುವ ಮೂಲಕ ಹಿಂದುಳಿದ ವರ್ಗಗಳಿಗೆ ಉತ್ತಮ ಅವಕಾಶ ಲ್ಪಿಸಿ ಕೊಡಿ, ಇಲ್ಲದಿದ್ದಲ್ಲಿ ಸರ್ಕಾರಿ ಕಛೇರಿಗಳಲ್ಲಿ ಪ್ರತಿಭಾ ರಣ ಆಗುತ್ತದೆ ಎಂದು ಪ್ರತಿಪಾದಿಸುತ್ತಿದ್ದವು. ಇಂದು ವೇ ಗುಂಪುಗಳು, ಶಿಕ್ಷಣದಲ್ಲಿ ಮೀಸಲಾತಿ ಜಾರಿಗೊಳಿ ವ ಸಂದರ್ಭದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ಡುವುದರಿಂದ ಪ್ರತಿಭೆಗೆ ಅವಕಾಶವಿಲ್ಲದಂತಾಗುತ್ತದೆ ಂದು ಪ್ರತಿಪಾದಿಸುತ್ತಿರುವುದು, ಮೀಸಲಾತಿ ವಿರೋಧಿ ಠಕ್ಕುತನಕ್ಕೆ ಕನ್ನಡಿ ಹಿಡಿದಂತಿದೆ. ಒಂದೆಡೆ ಮೀಸ ತಿಯನ್ನು ವಿರೋಧಿಸುವ ನೆಪದಲ್ಲಿ, ದಲಿತ ಹಾಗೂ ದುಳಿದ ಜನಾಂಗಗಳನ್ನು ನಿರಂತರ ಕತ್ತಲಿನಲ್ಲಿಡುವ ನ್ನಾರು ಕಂಡು ಬಂದರೆ, ಇನ್ನೊಂದೆಡೆ ಪ್ರತಿಭೆಯ ದಲ್ಲಿ, ಸಮಾಜದ ಶೋಷಿತ ವರ್ಗಗಳನ್ನು ಅವಕಾಶ ಚಿತರನ್ನಾಗಿ ಮಾಡುವ ಪಿತೂರಿ ಕಂಡುಬರುತ್ತದೆ. ಸಲಾತಿ ನೀಡುವುದರಿಂದ ಪ್ರತಿಭೆ ಕುಂಠಿತವಾಗುತ್ತದೆ, ಕುಶಲತೆ ಕ್ಷೀಣಿಸುತ್ತದೆ ಎಂದು ವಾದಿಸುವವರು ಶ: ದಕ್ಷಿಣ ರಾಜ್ಯಗಳಾದ ಕರ್ನಾಟಕ, ತಮಿಳು ನಾಡಿ ಕಳೆದ ನೂರು ವರ್ಷಗಳಿಂದಲೂ ಮೀಸಲಾತಿ ಜಾರಿ ಲ್ಲಿರುವುದನ್ನು ಗಮನಿಸಿಲ್ಲವೆಂದೆನಿಸುತ್ತದೆ.

ಇಷ್ಟಕ್ಕೂ ಪುಸ್ತಕಗಳಲ್ಲಿರುವುದನ್ನು, ಪರೀಕ್ಷೆಯಲ್ಲಿ ಇಳಿಸಿ, ನೂರಕ್ಕೆ ೯೫ ಅಂಕ ಗಳಿಸುವುದನ್ನೇ ಪ್ರತಿಭೆ ವುದಾದರೆ, ಅದು ಅರ್ಥವಿಲ್ಲದ ಪದವಾಗುತ್ತದೆ. ಭಾರ ಯ ಶಿಕ್ಷಣ ಪದ್ಧತಿಯಲ್ಲಿ, ಪರೀಕ್ಷೆಯಲ್ಲಿ ಗಳಿಸುವ ಗಳೇ ಒಬ್ಬ ವಿದ್ಯಾರ್ಥಿಯ ಪ್ರತಿಭೆ, ಯೋಗ್ಯತೆಗಳ ಪಕವಾಗಿರುವುದು, ಶಿಕ್ಷಣ ಕ್ಷೇತ್ರದ ವಾಣಿಜ್ಯೀಕರಣಕ್ಕೆ ರಕವಾಗಿದೆಯೇ ಹೊರತು, ನಿಜವಾದ ಪ್ರತಿಭೆಯ ಷ್ಕಾರಕ್ಕೆ ಸಹಾಯಕವಾಗಿಲ್ಲ. ಕಾಲೇಜುಗಳಲ್ಲಿ ಉನ್ನತ ಂಗದಲ್ಲಿ, ವೃತ್ತಿ ಪರ ಶಿಕ್ಷಣ ಕ್ಷೇತ್ರದಲ್ಲಿ, ತಮ್ಮದೇ ರಾಜ್ಯಭಾರ ನಡೆಸುತ್ತಿರುವ ಮಾಫಿಯಾಗಳು, ಂತರ ರೂಗಳ ಕ್ಯಾಪಿಟೇಷನ್ ಶುಲ್ಕ ಪಡೆಯಲು ಈ ಅನುಕೂಲಕರವಾಗಿದೆ. ಶೇ ೬೦ ಕ್ಕಿಂತಲೂ ಅಂಕ ಗಳಿಸಿದವರನ್ನು ಬಹುತೇಕ ನಾಲಾಯಕ್ ದೇ ಪರಿಗಣಿಸುವ ಈ ವ್ಯವಸ್ಥೆಯಲ್ಲಿ, ಪ್ರತಿಭೆ ಎಂಬ ತನ್ನ ಅರ್ಥವನ್ನೇ ಕಳೆದುಕೊಂಡಿದೆ. ನಗರ ಪ್ರದೇಶ . ಅತ್ಯುತ್ತಮ ಸೌಕರ್ಯ ಹಾಗೂ ಬೋಧನಾ ಸವಲತ್ತು ವ ಶಾಲೆ, ಕಾಲೇಜುಗಳಲ್ಲಿ ಓದಿ, ಅದರೊಟ್ಟಿಗೆ ಸು ಶಿಕ್ಷಕರಿಂದ ಟ್ಯೂಷನ್ ಹೇಳಿಸಿಕೊಂಡು, ತಮ್ಮ ಗಳಲ್ಲಿ ಎಲ್ಲಾ ರೀತಿಯ ಸುಖ ಅನುಭವಿಸುವ ರ್ಥಿ ಗಳಿಸುವ ಅಂಕಕ್ಕೂ, ಹಳ್ಳಿಗಳಿಂದ ನಗರ ಪ್ರದೇ ಓದಲು ಬರುವ, ಶುಲ್ಕ ಭರಿಸಲೂ ಪರದಾಡುವ, ದೇ ಕಂಫರ್ಟ್‌ಗಳನ್ನು ಕೇಳರಿಯದ ಹಿಂದುಳಿದ ಗಳ ವಿದ್ಯಾರ್ಥಿ ಗಳಿಸುವ ಅಂಕಗಳಿಗೂ ತುಲನೆ ವುದು, ಅರ್ಥಹೀನವೆನಿಸುತ್ತದೆ. ಅವಕಾಶ ನೀಡಿ ಯಾವುದೇ ವಿದ್ಯಾರ್ಥಿಯಾದರೂ ಉತ್ತಮ ಅಂಕ

> **ಸಂವಿಧಾನಾತ್ಮಕವಾಗಿ ತಮಗೆ ಲಭಿಸಬೇಕಾದ ಹಕ್ಕುಗಳಿಗಾಗಿಯೂ, ನಿರಂತರ ಹೋರಾಟ ನಡೆಸಬೇಕಾಗಿರುವುದು ಈ ದೇಶದ ದಮನಿತ ವರ್ಗಗಳ ದುರ್ದೈವವೆಂದೇ ಹೇಳಬಹುದು.**

ಗಳಿಸಬಲ್ಲ ಎಂಬ ಅಂಶವನ್ನು ಮೀಸಲಾತಿ ವಿರೋಧಿಗಳು ಗ್ರಹಿಸುವುದು ಅವಶ್ಯವಾಗಿದೆ.

ಪ್ರತಿಭೆಯನ್ನು ಕೇವಲ ಪರೀಕ್ಷೆಯಲ್ಲಿ ಅಂಕ ಗಳಿಸುವ ಪ್ರಕ್ರಿಯೆಗೆ ಅಥವಾ ಓದಿದ್ದನ್ನು ಯಥಾವತ್ ಪುನರುಚ್ಚರಿಸಿ, ಜ್ಞಾಪಕ ಶಕ್ತಿಯನ್ನು ಪ್ರದರ್ಶಿಸುವುದಕ್ಕೆ ಸೀಮಿಗೊಳಿಸುವುದು ತಪ್ಪಾಗುತ್ತದೆ. ಭಾರತೀಯ ಶ್ರೇಣೀಕೃತ ಜಾತಿ ವ್ಯವಸ್ಥೆಯು ಶತಮಾನಗಳ ಕಾಲ ಜೀವಂತವಾಗಿರುವುದು ಈ ಒಂದು ಕಲ್ಪನೆಯಿಂದಲೇ ಎಂದು ಹೇಳಬಹುದು. ಈ ಕಲ್ಪನೆಯಿಂದಲೇ, ಈ ದೇಶದ ಲಕ್ಷಾಂತರ ಜನ ಇಂದು ಈ ಪ್ರತಿಭೆ ಎಂಬ ಪರಿಕಲ್ಪನೆಯಿಂದ ಹೊರಗುಳಿದಿದ್ದಾರೆ. ಹತ್ತು ಚದರದ ಒಂದು ಕಟ್ಟಡಕ್ಕೆ ಎಷ್ಟು ಇಟ್ಟಿಗೆ ಬೇಕಾಗುತ್ತದೆ ಎಂದರೆ, ಯಾವುದೇ ಸಿವಿಲ್ ಇಂಜಿನಿಯರ್

> **ಮಂಡಲ್ ವರದಿಯು ಅನುಷ್ಠಾನಗೊಂಡ ೧೯೯೦ ರ ಸಂದರ್ಭದಲ್ಲಿ ಮೀಸಲಾತಿಯನ್ನು ವಿರೋಧಿಸಿದ ಗುಂಪುಗಳು, ಭಾ.ಜ.ಪ ಮತ್ತು ಸಂಘ ಪರಿವಾರವನ್ನೂ ಸೇರಿದಂತೆ, ಶಿಕ್ಷಣದಲ್ಲಿ ಮೀಸಲಾತಿ ನೀಡುವ ಮೂಲಕ ಹಿಂದುಳಿದ ವರ್ಗಗಳಿಗೆ ಉತ್ತಮ ಅವಕಾಶ ಕಲ್ಪಿಸಿ ಕೊಡಿ, ಇಲ್ಲದಿದ್ದಲ್ಲಿ ಸರ್ಕಾರಿ ಕಛೇರಿಗಳಲ್ಲಿ ಪ್ರತಿಭಾಹರಣ ಆಗುತ್ತದೆ ಎಂದು ಪ್ರತಿಪಾದಿಸುತ್ತಿದ್ದವು. ಇಂದು ಅವೇ ಗುಂಪುಗಳು, ಶಿಕ್ಷಣದಲ್ಲಿ ಮೀಸಲಾತಿ ಜಾರಿಗೊಳಿಸುವ ಸಂದರ್ಭದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ನೀಡುವುದರಿಂದ ಪ್ರತಿಭೆಗೆ ಅವಕಾಶವಿಲ್ಲದಂತಾಗುತ್ತದೆ ಎಂದು ಪ್ರತಿಪಾದಿಸುತ್ತಿರುವುದು, ಮೀಸಲಾತಿ ವಿರೋಧಿಗಳ ಠಕ್ಕುತನಕ್ಕೆ ಕನ್ನಡಿ ಹಿಡಿದಂತಿದೆ.**

ಮೀಸಲಾತಿ ಚರ್ಚೆ

ಕೂಡಲೇ ಕ್ಯಾಲ್ಕ್ಯುಲೇಟರ್ ಮೊರೆ ಹೋಗುತ್ತಾನೆ. ಆದರೆ ಒಬ್ಬ ಅನುಭವಿ ಮೇಸ್ತ್ರಿ ಕ್ಷಣಾರ್ಧದಲ್ಲಿ ಕರಾರುವಾಕ್ಕಾಗಿ ಇಷ್ಟೇ ಇಟ್ಟಿಗೆ, ಸಿಮೆಂಟು, ಮರಳು, ಜಲ್ಲಿ ಬೇಕೆಂದು ಹೇಳುತ್ತಾನೆ. ಇದೇ ರೀತಿ ರೈತರೂ ಸಹ ತಮ್ಮ ಕೃಷಿಯಲ್ಲಿ ಎಷ್ಟು ಬೆಳೆಯಬಹುದೆಂದು ಮನದಲ್ಲಿಯೇ ಲೆಕ್ಕ ಹಾಕಿ ಹೇಳುವ ಸಾಮರ್ಥ್ಯ ಹೊಂದಿರುತ್ತಾರೆ. ಆದರೆ ಈ ದುಡಿಯುವ ವರ್ಗದ ಜನತೆಗೆ ಯಾವುದೇ ಶಿಕ್ಷಣ ಲಭ್ಯವಿರುವುದಿಲ್ಲ. ಅವರ ಕ್ಷೇತ್ರಗಳಲ್ಲಿ ನೂರಕ್ಕೆ ನೂರು ಅಂಕ ಗಳಿಸುವ ಈ ಪ್ರತಿಭಾವಂತ ಜನಸಮುದಾಯ, **ಪ್ರತಿಭೆ** ಎಂಬ ಪರಿಕಲ್ಪನೆಯಿಂದ ಸದಾಕಾಲ ಹೊರಗುಳಿಯುತ್ತಾರೆ. ಏಕೆಂದರೆ ಈ ಕಲ್ಪನೆಗೆ ಜನ್ಮ ನೀಡಿದವರು, ದುಡಿಯುವ ಕೈಗಳಲ್ಲ. ಮಾನಸಿಕ ಶ್ರಮವನ್ನೇ ಬಂಡವಾಳವನ್ನಾಗಿಸಿಕೊಂಡು, ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಹುಟ್ಟು ಹಾಕಿರುವ ಮನುವಾದಿಗಳಿಗೆ, ಈ ದೇಶದ ಬಹುಸಂಖ್ಯಾತ ದೈಹಿಕ ಶ್ರಮಿಕರು ಎಂದಿಗೂ ಪ್ರತಿಭಾವಂತರೆನಿಸುವುದಿಲ್ಲ. ಶೋಷಿತವರ್ಗಗಳು, ಈ **ಪ್ರತಿಭೆಯನ್ನು** ಪಡೆಯಲು ಸವಲತ್ತುಗಳನ್ನು ಕೇಳಿದಾಗ, ಸೌಕರ್ಯಗಳನ್ನು ಬಯಸಿದಾಗ, ಸರ್ಕಾರದ ಸಹಾಯ ಹಸ್ತಕ್ಕಾಗಿ ಕೈಚಾಚಿದಾಗ, ಮೀಸಲಾತಿ ವಿವಾದ ಉದ್ಭವಿಸುತ್ತದೆ. Merit vs Quota, Deserve vs Reserve, ಎಂಬ ವಾದಗಳು ಮರುಜನ್ಮ ಪಡೆಯುತ್ತವೆ.

ಮೀಸಲಾತಿಯಡಿಯಲ್ಲಿ ಬರುವವರೆಲ್ಲ ಮಂದಮತಿಗಳು ಎಂಬ ಅಭಿಪ್ರಾಯ ಮೂಡಿಸುವುದರಲ್ಲಿ ನಮ್ಮ ಮಾಧ್ಯಮಗಳು ಪ್ರಮುಖ ಪಾತ್ರ ವಹಿಸಿವೆ ಎಂದರೆ ತಪ್ಪಾಗಲಾರದು. Deserve vs Reserve, Merit vs Quota, Ghost of mandal returns, Death of Merit, ಇವೇ ಮುಂತಾದ ಪದ ಪುಂಜಗಳನ್ನು ಹುಟ್ಟುಹಾಕುವ ಮೂಲಕ ಟಿ.ವಿ. ಮಾಧ್ಯಮಗಳು ಮೀಸಲಾತಿ ವಿರೋಧಿ ಪ್ರಕ್ರಿಯೆಗೆ ಬೆನ್ನೆಲುಬಾಗಿ ನಿಂತಿದ್ದವು. ನಮ್ಮ ದೇಶದ ಇಡೀ ಮಾಧ್ಯಮಗಳು, ಮೇಲ್ಜಾತಿಯವರ ಹಿಡಿತದಲ್ಲಿರುವುದು ಈ ಮೀಸಲಾತಿ ವಿವಾದದಿಂದ ಬಹಿರಂಗವಾಗಿದೆ. ಮೀಸಲಾತಿ ನೀಡುವುದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯುವುದಿಲ್ಲ ಎಂದು ಪ್ರತಿಪಾದಿಸುವವರು, ಕ್ಯಾಪಿಟೇಷನ್ ಮತ್ತು ಡೊನೇಷನ್‌ಗಳ ಬಗ್ಗೆ ಚಕಾರವೆತ್ತದಿರುವುದು ಅಚ್ಚರಿಯ ಅಂಶವೇ. ಖಾಸಗೀ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಾಗೂ ಇನ್ನಿತರ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ, ಶೇ ೫೦ ರಷ್ಟು ಸ್ಥಾನಗಳನ್ನು ಹಣವಂತರಿಗಾಗಿ ಮೀಸಲಾಗಿಡಲಾಗುತ್ತದೆ. ಕ್ಯಾಪಿಟೇಷನ್ ವಂತಿಗೆ ನೀಡಿ ಪ್ರವೇಶ ಪಡೆಯುವವರು ಪ್ರತಿಭಾವಂತರಾಗಿರುವುದಿಲ್ಲ ಎಂದು ಹೇಳಬೇಕಿಲ್ಲ. ಸಮಾನತೆಗಾಗಿ ಹೋರಾಡುವ Youth for Equality ಯುವಕರು ಈ ಪಿಡುಗಿನ ಬಗ್ಗೆ ದಿವ್ಯ ಮೌನ ವಹಿಸುತ್ತಾರೆ. ಈ ಸಂಘಟನೆಯಲ್ಲಿ ಬಹುತೇಕ ಯುವಕರು ಈ ಗುಂಪಿಗೆ ಸೇರಿದ್ದವರಾಗಿದ್ದು, ಅವರ ಕಾಳಜಿ ಪ್ರತಿಭೆಗಿಂತಲೂ ಹೆಚ್ಚಾಗಿ, ಖಾಸಗೀ ಶಿಕ್ಷಣ ಸಂಸ್ಥೆಗಳ ಮಾರುಕಟ್ಟೆಯ ಬಗ್ಗೆ ಹೆಚ್ಚಾಗಿದೆ ಎಂದು ಹೇಳಬಹುದು.

ಜಾತಿ ಆಧಾರಿತ ಮೀಸಲಾತಿ ಕೂಡದು, ಆರ್ಥಿಕ ಸ್ಥಿತಿಯನ್ನಾಧರಿಸಿದ ಮೀಸಲಾತಿ ನೀಡುವುದು ಸೂಕ್ತ ಎಂದು ಪ್ರತಿಪಾದಿಸುವವರು, ಭಾರತೀಯ ಸಮಾಜದಲ್ಲಿ ಇಂದಿಗೂ ಜಾತಿಯಾಧಾರಿತ ಅಸಮಾನತೆ ನಿರ್ಮೂಲನವಾಗಿಲ್ಲ ಎಂಬ ಅಂಶವನ್ನು ಮನದಟ್ಟು ಮಾಡಿಕೊಳ್ಳಬೇ

(೩೭ನೇ ಪುಟಕ್ಕೆ)

ಮಂಡಲ್ ಮಕ್ಕಳು, ಪ್ರತಿಭೆ ಮತ್ತು ಸಾಮಾಜಿಕ ಸೌಲಭ್ಯಗಳ

ಎನ್.ಎಸ್. ರಘುನಾಥ್

೩೦೦೦ ವರ್ಷಗಳ ನಂತರ ಸಂವಿಧಾನ ಕೊಟ್ಟಿರುವ ಸಮಾನತೆ ಯೇನೋ ಇದೆ. ಆದರೆ ಸಾಮಾಜಿಕ ಸೌಲಭ್ಯ ಗಳು (equity) ಇವೆಯೆ? ಒಂದು ಮುಂದುವರೆದವರ ಸಂಸಾರದಲ್ಲಿರುವ ವಿದ್ಯಾರ್ಥಿಗೆ ಇರುವ ಸಾಮಾಜಿಕ ಸೌಲಭ್ಯ ಗಳನ್ನು ಸಂವಿಧಾನ ಒಬ್ಬ ಹಿಂದುಳಿದ ವಿದ್ಯಾರ್ಥಿಗೆ ಕೊಡುತ್ತದೆಯೆ? ಉದಾ ಹರಣೆಗೆ ಒಬ್ಬ ಕೂಲಿ ಕಾರ, ಬಡ ರೈತ, ಆಟೋಚಾಲಕ ಇತ್ಯಾದಿ ಅವರ ಮಕ್ಕಳು ಯಾವ ವಿವಿಯಲ್ಲಿ ಬೇಕಾದರೂ ಪ್ರವೇಶ ಕೋರಬಹುದು. ಆದರೆ ಅವರಿಗೆ ಒಬ್ಬ ಮುಂದುವರೆದವರ ಸಂಸಾರದಲ್ಲಿರುವ ವಿದ್ಯಾರ್ಥಿಗೆ ಸಿಗುವ ಸಾಮಾಜಿಕ ಸೌಲಭ್ಯ ಗಳು ದೊರಕುತ್ತ ವೆಯೆ? ಎಲ್ಲ ವೆಬ್‌ಸೈಟುಗಳು ಅವರ ಬೆರಳ ತುದಿಯಲ್ಲಿ ರುತ್ತವೆ. ಎಲ್ಲ ರೀತಿಯ ಮಾಹಿತಿ ಅವರಿಗೆ ಲಭ್ಯ ವಿರುತ್ತವೆ. ಆದರೆ ದಲಿತ, ಹಿಂದುಳಿದ ಮಕ್ಕಳಿಗೆ ಈ ಸೌಲಭ್ಯಗಳು ಇರುವುವೇ?

ಮಂಡಲ್ ಮೀಸಲಾತಿ ವಿರುದ್ಧ ಚಳುವಳಿ ಮತ್ತೆ ಆರಂಭವಾಗಿದೆ. ಸಮಸ್ಯೆಯನ್ನು ಚಾರಿತ್ರಿಕವಾಗಿ ನೋಡಿದರೆ 'ಮಂಡಲ್ ಮಕ್ಕಳಿಗೆ' ಅದಕ್ಕಿಂತಲೂ ಬಲವಾದ ವಾದವಿದೆ ಎನ್ನುವುದು ಗೊತ್ತಾಗುತ್ತದೆ. ಇಲ್ಲಿ ಮೀಸಲಾತಿಗೆ ಅವಕಾಶ ಮಾಡಿರುವುದು ಪ್ರತಿಭೆ ಇಲ್ಲದವರಿಗೆ ಅವಕಾಶ ಕಲ್ಪಿಸುವುದಕ್ಕೊ ಅಥವಾ ಸೌಲಭ್ಯಗಳಿಲ್ಲದೆ ನಶಿಸಿಹೋಗುತ್ತಿರುವ ಪ್ರತಿಭೆಗಳನ್ನು ರಕ್ಷಿಸುವುದಕ್ಕೊ ಎನ್ನುವುದನ್ನು ನಾವು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಪ್ರಶ್ನೆ ಇಲ್ಲಿ ಅತ್ಯಂತ ಗಂಭೀರವಾಗುತ್ತದೆ. ಇದರ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ಚರಿತ್ರೆ ಅಪರಾಧಿ ಎನಿಸುತ್ತದೆ. ೩೦೦೦-೪೦೦೦ ವರ್ಷಗಳ ಹಿಂದಿನಿಂದ ಬೆಳೆದು ಬಂದಿರುವ ನಮ್ಮ ದೇಶದ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಗಮನಿಸಿದರೆ, ಕೇವಲ ಎರಡು ವರ್ಣದವರು ಮಾತ್ರ ವಿದ್ಯೆಗೆ ಅರ್ಹರಾಗಿದ್ದರೆ ಹೊರತು ಉಳಿದವರಾರು ವಿದ್ಯೆಗೆ ಅರ್ಹರೆ ಅಲ್ಲ ಎನ್ನುವಂತೆ ನಡೆಸಿಕೊಳ್ಳಲಾಗಿದೆ.

ಈಗಿನ 'ಮಂಡಲ್ ಮಕ್ಕಳು'ಗಳ ಪೂರ್ವಜರು ಎರಡು ವರ್ಣದವರಿಗೆ ಮಾತ್ರ ಮೀಸಲಾಗಿದ್ದ ಗುರುಕುಲಾಶ್ರಮಗಳ ಹತ್ತಿರ ಎಂದೂ ಸುಳಿಯಲು ಸಾಧ್ಯವಿರಲಿಲ್ಲ. ಹಾಗೆ ಉಳಿದ ವರ್ಣದವರಿಗೆ ವಿದ್ಯಾಭ್ಯಾಸಕ್ಕೆ ಯಾವ ರೀತಿಯ ಅವಕಾಶವಿತ್ತು, ಅವರಿಗಾಗಿ ಎಷ್ಟು ಸಂಸ್ಥೆಗಳಿದ್ದವು ಎಂದು ಕೇಳಿದರೆ ಮುಂಚೂಣಿಯಲ್ಲೇ ಬಂದಿರುವ ಉತ್ತಮ ಜಾತಿಯವರಿಗೆ ಕಷ್ಟವಾಗಬಹುದು. ಇವರನ್ನು ಅವಕಾಶದಿಂದ ವಂಚಿಸಿ ದಮನಗೊಳಿಸಲಾಗಿದೆ ಎನ್ನುವುದಕ್ಕೆ "ಚರಿತ್ರೆಯಲ್ಲಿ ದಾಖಲೆಗಳಿಲ್ಲ" ಎಂದು ಅರುಣ್ ಶೌರಿಯವರು (ಸಿಎನ್‌ಎನ್ ಐಬಿಎನ್ ಚಾನೆಲ್‌ನಲ್ಲಿ ಕರಣ್ ಥಾಪರ್ ಅವರು ನಡೆಸಿದ ಸಂದರ್ಶನದಲ್ಲಿ) ಹುರುಳಿಲ್ಲದ ವಾದ ಮಾಡಿದರು.

ಸುಳ್ಳುಗಳನ್ನು ಹೇಳುವಲ್ಲಿ ಮೂಲಭೂತವಾದಿಗಳಿಗೆ ಯಾವ ಸಂಕೋಚವೂ ಇರುವುದಿಲ್ಲ. ಸಾಹಿತ್ಯ ಎನ್ನುವುದು ಆಯಾಕಾಲದ ಸಮಾಜಶಾಸ್ತ್ರಕ್ಕೆ ಕನ್ನಡಿ ಎನ್ನುವುದಾದರೆ ಮುನ್ಶಿ ಪ್ರೇಮ್‌ಚಂದ್, ಶಿವರಾಮ ಕಾರಂತ, ಮುಲ್ಕ್‌ರಾಜ್ ಆನಂದ್, ಶರಣಕುಮಾರ್ ಲಿಂಬಾಳೆ, ದೇವನೂರು ಮಹದೇವ ಇತ್ಯಾದಿ ಅವರ ಸಾಹಿತ್ಯ, ಸತ್ಯಜಿತ್ ರಾಯ್ ಅವರ 'ಸದ್ಗತಿ' ಸಿನಿಮಾ, ಅಂಬೇಡ್ಕರ್ ಅವರ ಬರಹಗಳು, ಈಗ ಪತ್ರಿಕೆಗಳಲ್ಲಿ, ಟಿವಿ ಚಾನೆಲ್‌ಗಳಲ್ಲಿ ಬರುತ್ತಿರುವ ಸುದ್ದಿಯೂ ಸುಳ್ಳೆ ಆಗುತ್ತದೆ. ಇವರ ಪಕ್ಷದವರೆ ಆದ ಮುರಳಿ ಮನೋಹರ ಜೋಶಿಯವರು ದೆಹಲಿಯಲ್ಲಿ ಆಡಳಿತ ನಡೆಸುತ್ತಿದ್ದಾಗ ಎನ್‌ಸಿಆರ್‌ಟಿ ಚರಿತ್ರೆ ಪಠ್ಯಪುಸ್ತಕಗಳಲ್ಲಿ ಹೇಳಿರುವ ಸುಳ್ಳುಗಳಿಗೇನೂ ಕಡಿಮೆ ಇಲ್ಲ.

ಉದಾಹರಣೆಗೆ ಆರ್ಯರು ದನದ ಮಾಂಸ ತಿನ್ನುತ್ತಿದ್ದರು ಎಂದು ಪ್ರಸಿದ್ಧ ಚರಿತ್ರೆಕಾರರು ಬರೆದಿದ್ದನ್ನು ಅಳಿಸಿಹಾಕಿ ಅದು ತಪ್ಪು ಎಂದು ಸಾರಿದರು. ತಪ್ಪು ಯಾರದು, ಸುಳ್ಳು ಯಾರದು ಎನ್ನುವುದನ್ನು ಸ್ವಾಮಿ ವಿವೇಕಾನಂದರ ಬರವಣಿಗೆಯಲ್ಲಿ ನೋಡಬಹುದು: "ಪುರಾತನ ಭಾರತದಲ್ಲಿ ಹಸುವಿನ ಮಾಂಸ ತಿನ್ನದೆ ಯಾವ ಬ್ರಾಹ್ಮಣನೂ ಬ್ರಾಹ್ಮಣನಾಗಿ ಉಳಿಯುತ್ತರಲಿಲ್ಲ." (ವಿವೇಕಾನಂದರ ಸಮಗ್ರ ಬರಹಗಳು, ೩ನೇ ಸಂಪುಟ, ಪು. ೧೭೪. ಇದರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಆದಿತ್ಯ ನಾರಾಯಣ ಅವರ 'ಚರಿತ್ರೆಯ ವಿಕೃತೀಕರಣ ಭಾರತದ ಬಹುಮುಖಿ ಸಂಸ್ಕೃತಿಗೆ ಧಕ್ಕೆ' ಎನ್ನುವ ಪುಸ್ತಕದಲ್ಲಿ ನೋಡಬಹುದು).

ಸುಳ್ಳು ಹೇಳಿ ವಾದವನ್ನು ಹಳಿ ತಪ್ಪಿಸುವ ಕಲೆಯಲ್ಲಿ ಅರುಣ್ ಶೌರಿಯವರನ್ನು ಬಿಟ್ಟರೆ ಬೇರೆಯವರ ಹೆಸರನ್ನು ಹೇ ವುದು ಕಷ್ಟ. ನಳಂದ ಮತ್ತು ಉಜ್ಜಯಿನಿ ವಿಶ್ವವಿದ್ಯಾಲಯಗಳಲ್ಲಿ ದ ಪಂಡಿತರು ಇರುತ್ತಿದ್ದರೆಂದು ತುಂಬಾ ಹೆಸರುವಾಸಿಯಾದ ಪ್ರಾಧ್ಯಾ ರೊಬ್ಬರು ಹೇಳಿದರು. ಇವರು ಅಲ್ಲಿ ಪ್ರವೇಶ ಕೋರಿ ಬರುತ್ತಿ ೧೦ ರಲ್ಲಿ ೮ ವಿದ್ಯಾರ್ಥಿಗಳನ್ನು ಪ್ರವೇಶ ದ್ವಾರದಿಂದಲೇ ಹಿಂ ಕಳುಹಿಸಿಬಿಡುತ್ತಿದ್ದರಂತೆ. ಆದರೆ ಈ ೮ ವಿದ್ಯಾರ್ಥಿಗಳು ಯಾ ಎನ್ನುವುದನ್ನು ಅವರು ಹೇಳಲಿಲ್ಲ. ಆಗಿನ ವ್ಯವಸ್ಥೆಯನ್ನು ಸ್ಮ ಕೊಂಡರೆ ಇವರು ಯಾರು ಎಂದು ಕಲ್ಪಿಸಿಕೊಳ್ಳಲು ಅಸಾಧ್ಯವೇನ ಅಂದರೆ ೩೦೦೦-೪೦೦೦ ವರ್ಷಗಳ ವಿದ್ಯೆ ಇಲ್ಲದ ಪರಂಪರೆ ಇ ಹಿಂದುಳಿದ ಜಾತಿಗಳಲ್ಲಿ ಬೆಳೆಯಿತು. ಮುಂದುವರಿದವರಲ್ಲಿ ಜ್ಞಾ ರ್ಜನೆಯ ಪರಂಪರೆ ಬೆಳೆದು ಬಂದಿತು.

ಅದರಿಂದಲೆ ಅವರುಗಳನ್ನು ಮುಂದುವರೆದವರಾಗಲು ಸಾ ವಾಯಿತು. ಭಾರತದಲ್ಲಿ ಕೇವಲ ೩% ಇರುವ ಉತ್ತಮ ಜಾತಿ ಎ ಕೊಂಡವರಲ್ಲಿ ಏಕೆ ೬೦% ಪದವೀಧರರಿದ್ದಾರೆ ಆದರೆ ೮೦% ಇರು ಹಿಂದುಳಿದವರಲ್ಲಿ ಕೇವಲ ೧೬% ಮಾತ್ರ ಪದವೀಧರರಿದ್ದಾರೆ ಎನ್ನು ದಕ್ಕೆ ವಿವರಣೆ ಇಲ್ಲಿ ಸಿಗಬಹುದು. ಇಂಥ ಪರಂಪರೆಯನ್ನು ಬೌ ವಾಗಿ ಎದುರಿಸಿ ಕೇವಲ ೫೦ ವರ್ಷಗಳಲ್ಲಿ ಸಮಾನತೆಯನ್ನು ಸ ಸಲು ಸಾಧ್ಯವೆ? ಅದರ ವಿರುದ್ಧ ಆ ಪರಂಪರೆಯೆ ಇಲ್ಲದವರು ಸ್ಪ ಸಲು ಸಾಧ್ಯವೆ? ಸ್ಪರ್ಧೆ ಸಾಧ್ಯವಾಗುವ ಮಟ್ಟಕ್ಕೆ ಬರುವವರೆ ಸರ್ಕಾರ ಇವರಿಗೆ ಯಾವುದಾದರೂ ಒಂದು ರೀತಿಯಲ್ಲಿ ರಕ್ಷ ನೀಡಬೇಕಾಗುತ್ತದೆ.

೩೦೦೦ ವರ್ಷಗಳ ನಂತರ ಸಂವಿಧಾನ ಕೊಟ್ಟಿರುವ ಸಮಾ ನತೆ ಇದೆ. ಆದರೆ ಸಾಮಾಜಿಕ ಸೌಲಭ್ಯಗಳು (equity) ಇವೆಯ ಒಂದು ಮುಂದುವರೆದವರ ಸಂಸಾರದಲ್ಲಿರುವ ವಿದ್ಯಾರ್ಥಿಗೆ ಇರು ಸಾಮಾಜಿಕ ಸೌಲಭ್ಯಗಳನ್ನು ಸಂವಿಧಾನ ಒಬ್ಬ ಹಿಂದುಳಿದ ವಿ ರ್ಥಿಗೆ ಕೊಡುತ್ತದೆಯೆ? ಉದಾಹರಣೆಗೆ ಒಬ್ಬ ಕೂಲಿಕಾರ, ಬ ರೈತ, ಆಟೋಚಾಲಕ ಇತ್ಯಾದಿ ಅವರ ಮಕ್ಕಳು ಯಾವ ವಿವಿಯ ಬೇಕಾದರೂ ಪ್ರವೇಶ ಕೋರಬಹುದು. ಆದರೆ ಅವರಿಗೆ ಒ ಮುಂದುವರೆದವರ ಸಂಸಾರದಲ್ಲಿರುವ ವಿದ್ಯಾರ್ಥಿಗೆ ಸಿಗುವ ಸಾಮಾ ಜಿಕ ಸೌಲಭ್ಯಗಳು ದೊರಕುತ್ತವೆಯೆ?

ಮುಂದುವರಿದವರ ತಂದೆ ತಾಯಿಗಳು, ಅಜ್ಜ ಅಜ್ಜಿಯ ವಿದ್ಯಾವಂತರಿರುತ್ತಾರೆ, ಇಂಗ್ಲಿಷ್ ಮಾತನಾಡುತ್ತಾರೆ. ಅವರ ಮ ಬರುವ ಸ್ನೇಹಿತರು ಸಾಮಾಜಿಕ ಸಾಂಸ್ಕೃತಿಕ ಸಮಸ್ಯೆಗಳ ಬಗ್ಗೆ ಚ ಸುತ್ತಾರೆ; ಇವು ಮಕ್ಕಳ ಕಿವಿಯ ಮೇಲೆ ಬೀಳುತ್ತಿರುತ್ತವೆ, ದಿನ ಕೆಗಳು, ನಿಯತಕಾಲಿಕಗಳು ಅವರ ಟೇಬಲ್ಲಿನ ಮೇಲೆ ಬಿದ್ದಿರುತ್ತ ಮೊಬೈಲ್ ಫೋನುಗಳು, ಪಿಡಿಎ, ಎಲ್ಲ ವೆಬ್‌ಸೈಟುಗಳು ಅ ಬೆರಳ ತುದಿಯಲ್ಲಿರುತ್ತವೆ. ಎಲ್ಲ ರೀತಿಯ ಮಾಹಿತಿ ಅವರಿಗೆ ಲ ರುತ್ತವೆ. ಮನೆಯಲ್ಲಿ ಅವರ ಅಭ್ಯಾಸದ ವೇಳೆಯಲ್ಲಿ ತಂದೆತಾಯಿಗ ಅವರಿಗೆ ಸಹಾಯ ಮಾಡುತ್ತಾರೆ. ಅಲ್ಲಿ ವಿದ್ಯೆಕಲಿಯುವ ವಾ ವರಣವಿರುತ್ತದೆ. ಇವರಿಗಾಗಿ ಪ್ರತ್ಯೇಕ ಕೊಠಡಿ ಇರುತ್ತದೆ. ಶಾ ಯಿಂದ ಹೊರಗೂ ಇವರಿಗೆ ಜ್ಞಾನ ಬೆಳೆಯುತ್ತಿರುತ್ತದೆ.

ಆದರೆ ನಮ್ಮ ಯಾವುದೇ ಹಳ್ಳಿಯ ಶಾಲೆಯನ್ನು ತೆಗ ಕೊಳ್ಳಿ. ಇಲ್ಲಿ ಶೇಕಡ ೮೦ರಿಂದ ೯೦ ವಿದ್ಯಾರ್ಥಿಗಳು ದಲಿತ ಅಥವಾ ಒಬಿಸಿ ಎಂದು ಗುರುತಿಸಲ್ಪಟ್ಟಿರುವವರು. ಸಾಧಾರಣ ಇವರಿಗೆ ದಿನಕ್ಕೆ ಒಂದು ಊಟ ಸಿಗುವುದೇ ಕಷ್ಟ. ಈ ವಿಷಯ



ನಸ್ಸಿಗೆ ಅತ್ಯಂತ ಖೇದವನ್ನುಂಟುಮಾಡುವ ದೃಶ್ಯಗಳನ್ನು ್‌ಡಿಟಿವಿ ೧೧ನೇ ತಾರೀಖು ತೋರಿಸಿತು. ಬಿಹಾರಿನ ಹಾರ್ ಜಿಲ್ಲೆಯ ಚಂದೋಲಿ ಹಳ್ಳಿಯ ಮಕ್ಕಳಿಗೆ ಧ್ಯಾಹ್ನದ ಊಟಕ್ಕೆ ಕಳ್ಳು ಕುಡಿಸಲಾಗುತಿತ್ತು. ಕಾರಣ ನ್ನು ಮನೆಯ ಮುಂದಿರುವ ಮರದಿಂದ ಬಿಟ್ಟಿ ಇಳಿಸಿ ಳ್ಳಬಹುದು. "ನಮಗೆ ತಿನ್ನಲು ಏನೂ ಇಲ್ಲ" ಎಂದು ಹುಡುಗ ಹೇಳಿದ. ಇದನ್ನು ಕುಡಿದ ಮೇಲೆ ಮಕ್ಕಳು ಗಿಬಿಡುತ್ತವೆ. ಹಸಿವು ಅವರಿಗೆ ಗೊತ್ತಾಗುವುದಿಲ್ಲ. ಈ ಹಳ್ಳಿಯ ಎಳೆಯ ಜನಾಂಗ ಈ ರೀತಿ ಮಲಗಿದರೆ ಷ್ಯದ ಗತಿ ಏನು? ಇಂಥ ಹಳ್ಳಿಗಳು ಭಾರತದಲ್ಲಿ ಎಷ್ಟು ?

೧.೨ ಬಿಲಿಯನ್ ಜನಸಂಖ್ಯೆಯಲ್ಲಿ ಸುಮಾರು % ಈ ಸ್ಥಿತಿ ಅನುಭವಿಸುತ್ತಿರಬಹುದು. ಈ ಮಾನವ ಪನ್ಮೂಲವನ್ನು ರಾಷ್ಟ್ರ ಹೇಗೆ ಬೆಳೆಸಬೇಕು? ಇದೇ ್ ಬಿಬಿಸಿ ಬಿತ್ತರಿಸಿದ ಮೇ ತಿಂಗಳ ವರದಿಯ ರ ಭಾರತದಲ್ಲಿ ೩೫೦ ಮಿಲಿಯನ್ ಮಕ್ಕಳು ಆಹಾ ಕೊರತೆಯಿಂದ ನರಳುತ್ತಿವೆ. ಇವರಿಗಾಗಿ ದೇಶ ಮಾಡಿದೆ? ಹಸಿವಿನಿಂದ ನರಳುತ್ತಿರುವ ಮಕ್ಕಳು ಶಾಲೆಗೆ ಹೋಗುತ್ತಾರೆ? ಹಸಿರು ಕ್ರಾಂತಿ ನಡೆದಿ ಈ ದೇಶದಲ್ಲಿ ಇದು ದಿಗ್ಭ್ರಮೆ ಹಿಡಿಸುವಂತಹದ್ದು. ಪ್ರದೇಶದ ಬುಂಡೇಲ್‌ಖಂಡ್ ಹಳ್ಳಿಯಲ್ಲಿ ಈವರೆಗೂ ಪದವೀಧರನಿಲ್ಲ ಎನ್ನುವುದು ಯಾವ ಮಂತ್ರಿಯ ನಕ್ಕೂ ಬಂದಿಲ್ಲವೆ? ಆ ಹಳ್ಳಿಯಲ್ಲಿ ಸರಿಯಾದ ಶಾಲೆಯೂ ಇಲ್ಲ ಎನ್ನುವ ವರದಿ ಇದೆ.

NCERT ರಾಷ್ಟ್ರೀಯ ಸಂಶೋಧನೆ ಮತ್ತು ಶಿಕ್ಷಕ ೇತಿ ಸಂಸ್ಥೆ **ಸರ್ವಶಿಕ್ಷಣ ಅಭಿಯಾನ್** ಎನ್ನುವ ರ್ಯಕ್ರಮದಡಿಯಲ್ಲಿ ಶಾಲೆಗೆ ಹೋಗದೆ ಉಳಿದಿರುವ ಳನ್ನು ಶಾಲೆಗೆ ಕಳುಹಿಸುವ ಜವಾಬ್ದಾರಿ ಹೊಂದಿದೆ. ಕ್ಕಾಗಿ ಸಂಸ್ಥೆಗೆ ಕೇಂದ್ರ ಸರ್ಕಾರ ಕೋಟಿಗಟ್ಟಲೆ ಹಣ ್ರಿದೆ. ಆದರೂ ಸಂಸ್ಥೆ ಈ ಮಕ್ಕಳನ್ನು ಇನ್ನೂ ಏಕೆ ಗೆ ತಂದಿಲ್ಲ? ಇದರ ನಿರ್ದೇಶಕರಾದ ಡಾ॥ ಕೃಷ್ಣ ಾರ್ ಅವರು ಇಂಗ್ಲಿಷ್ ಪತ್ರಿಕೆಗಳಲ್ಲಿ ಹಳ್ಳಿಯ ಮಕ್ಕಳ ಅಪಾರವಾಗಿ ಮೊಸಳೆ ಕಣ್ಣೀರು ಸುರಿಸುತ್ತಾರೆ.

ಆದರೆ ವಾಸ್ತವವಾಗಿ ಇವರು ಮಾಡುತ್ತಿರುವುದೇನು? ಇವರು ತಯಾರಿಸುವ ಪಾಠಕ್ರಮ ಮತ್ತು ಪಠ್ಯ ಪುಸ್ತಕಗಳು ಸಿಬಿಎಸ್‌ಸಿಗಲ್ಲದೆ ಹಳ್ಳಿಗಳಿಗೆ ತಲುಪಿರುವುದು ಅಪರೂಪ.

ಹೊಸ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಬಳಸುವುದರ ಬಗ್ಗೆ ಇತ್ತೀಚೆಗೆ ನಡೆದ ತರಬೇತಿ ಕಮ್ಮಟದಲ್ಲಿ ನಾವು ಆಹ್ವಾನಿಸಿದ್ದು ಕೇಂದ್ರೀಯ ವಿದ್ಯಾಲಯದ ಮತ್ತು ನವೋದಯ ವಿದ್ಯಾಲಯದ ಶಿಕ್ಷಕರನ್ನು ಮಾತ್ರ, ಏಕೆಂದರೆ ರಾಷ್ಟ್ರೀಯ ಸಂಶೋಧನೆ ಮತ್ತು ಶಿಕ್ಷಕ ತರಬೇತಿ ಸಂಸ್ಥೆ ಸಿಬಿಎಸ್‌ಇಗಿಂತ ಹೊರಗಿನ ಜಗತ್ತಿಗೆ ತಲುಪಿಲ್ಲ. ಇದು ಇರುವುದೇ ಈ ಶಾಲೆಗಳಿಗಾಗಿ ಎನ್ನುವಂತಾಗಿದೆ. ಅಂದರೆ ರಾಷ್ಟ್ರೀಯ ಮಟ್ಟದ ವಿದ್ಯಾಭ್ಯಾಸ ೨೦೦೬ರಲ್ಲು ಹಳ್ಳಿಯ ಯಾವ ಮಕ್ಕಳಿಗೆ ತಲುಪುತ್ತಿಲ್ಲ ಎನ್ನುವುದನ್ನು ನಾವು ಗಮನಿಸಬೇಕು. ಶಾಲೆಯಲ್ಲೆ ಒಳ್ಳೆಯ ವಿದ್ಯಾಭ್ಯಾಸ ದೊರೆಯದಿದ್ದಲ್ಲಿ ಮುಂದೆ ಇವರು ಪ್ರತಿಷ್ಠಿತ ಶಾಲೆಗಳು ಅಂದರೆ ಡಾನ್‌ಬಾಸ್ಕೊ, ಡೆಲ್ಲಿ ಪಬ್ಲಿಕ್ ಶಾಲೆ, ಡೆಹರಡೂನ್, ಲವ್ ಡೇಲ್ ಅಂಥ ಕಾನ್ವೆಂಟ್‌ಗಳಿಂದ ಬರುವ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸುವ ಶಕ್ತಿ ಎಲ್ಲಿಂದ ಬರಬೇಕು? ಶಾಲೆಯ ಮಟ್ಟದಲ್ಲೆ ಇವರು ಸ್ಪರ್ಧೆಯ ಶಕ್ತಿ ಕಳೆದುಕೊಂಡು ಹೊರಹಾಕಲ್ಪಟ್ಟಿರುತ್ತಾರೆ.

ಇಂಥ ವ್ಯವಸ್ಥೆಯಲ್ಲೂ ಕಿರಿಯ ವೈದ್ಯರ ಸಂಘದ ಉಪಾಧ್ಯಕ್ಷರಾದ ಡಾ॥ ದಿನೇಶ್ ಕುಮಾರ್ ಅವರು ೨೫ ನೇ -ತಾರೀಖು ಉದಯ ಟಿವಿಯಲ್ಲಿ ನಡೆದ ವಿಚಾರ-ವಿವಾದದಲ್ಲಿ ಕೇಂದ್ರ ಸರ್ಕಾರ ನಡೆಸುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ತರಹದ ಮೀಸಲಾತಿ ಇರಕೂಡದು. ಇಲ್ಲಿ ಪ್ರತಿಭೆ ಒಂದೇ ಮುಖ್ಯವಾಗಬೇಕು ಎಂದರು. ಪ್ರತಿಭೆಯನ್ನು

ಹೊಸ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಬಳಸುವುದರ ಬಗ್ಗೆ ಇತ್ತೀಚೆಗೆ ನಡೆದ ತರಬೇತಿ ಕಮ್ಮಟದಲ್ಲಿ ಆಹ್ವಾನಿಸಿದ್ದು ಕೇಂದ್ರೀಯ ವಿದ್ಯಾಲಯದ ಮತ್ತು ನವೋದಯ ವಿದ್ಯಾಲಯದ ಶಿಕ್ಷಕರನ್ನು ಮಾತ್ರ, ಏಕೆಂದರೆ ರಾಷ್ಟ್ರೀಯ ಸಂಶೋಧನೆ ಮತ್ತು ಶಿಕ್ಷಕ ತರಬೇತಿ ಸಂಸ್ಥೆ ಸಿಬಿಎಸ್‌ಇಗಿಂತ ಹೊರಗಿನ ಜಗತ್ತಿಗೆ ತಲುಪಿಲ್ಲ. ಇದು ಇರುವುದೇ ಈ ಶಾಲೆಗಳಿಗಾಗಿ ಎನ್ನುವಂತಾಗಿದೆ. ಅಂದರೆ ರಾಷ್ಟ್ರೀಯ ಮಟ್ಟದ ವಿದ್ಯಾಭ್ಯಾಸ ೨೦೦೬ರಲ್ಲು ಹಳ್ಳಿಯ ಯಾವ ಮಕ್ಕಳಿಗೆ ತಲುಪುತ್ತಿಲ್ಲ ಎನ್ನುವುದನ್ನು ನಾವು ಗಮನಿಸ ಬೇಕು.

ಮೀಸಲಾತಿ ಚರ್ಚೆ

ಅಳೆಯಲು ಅಂಕಪಟ್ಟಿಯೊಂದೆ ಆಧಾರವೆ? ಈ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ಈ ವೈದ್ಯರು ಪ್ರತಿಭೆಗೂ ಅಂಕಪಟ್ಟಿಗೂ ಸಂಬಂಧವಿದೆ ಎಂದು ತಿಳಿದಿರುವುದೇ ದುರಂತ. ಇದು ವಿವೇಚನೆ ಇಲ್ಲದ ವಾದಕ್ಕೆ ಅವಕಾಶ ಕೊಡುತ್ತದೆ. ಅಂಕಪಟ್ಟಿಯನ್ನು ಹೆಚ್ಚೆಂದರೆ ಒಂದು ರಹದಾರಿ ಪತ್ರ ಎಂದು ಮಾತ್ರ ಪರಿಗಣಿಸಬಹುದು. ಒಳಗಿರುವ ಪ್ರತಿಭೆ ಅರಳಲು ಖ್ಯಾತಿವೆತ್ತ ಅಧ್ಯಾಪಕಪ್ರಾಧ್ಯಾಪಕರುಗಳಿರುವ ಉನ್ನತ ಶಾಲೆ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಲು ಸಿಗುವ ಅವಕಾಶ ಬಹಳ ಮುಖ್ಯ. ಜ್ಞಾನವನ್ನು ಯಾವ ಮಟ್ಟದಲ್ಲಿ ಪಡೆದು, ಯಾವ ಮಟ್ಟದಲ್ಲಿ ಬೆಳೆಸಿಕೊಂಡು ಹೋಗಬೇಕು ಎನ್ನುವುದನ್ನು ಕಲಿಸುವುದೆ ಈ ಪ್ರಾಧ್ಯಾಪಕರುಗಳು. ಇದನ್ನು ಬೇಡ ಎನ್ನುವುದು ಗುರುಕುಲಾಶ್ರಮಗಳಲ್ಲಿ ನಡೆದ ಅಪರಾಧದಷ್ಟೆ ಅಗಾಧವಾಗಬಹುದು.

ಇಂಥ ಮಕ್ಕಳು ಅಕಸ್ಮಾತ್ ಶಾಲೆಗೆ ಹೋದರೂ ಮನೆಯಲ್ಲಿ ಅಭ್ಯಾಸ ಮಾಡಲು ಸಾಧ್ಯವಿಲ್ಲ. ಮನೆಗೆ ಬರುತ್ತಿದ್ದಂತೆಯೆ ಅಮ್ಮನ ಜೊತೆ ಮನೆಗೆಲಸ ಅಥವಾ ಅಪ್ಪನ ಜೊತೆ ಮನೆಯ ಆದಾಯ ಹೆಚ್ಚಿಸಲು ಹೊರಗಡೆ ಕೆಲಸ ಮಾಡಬೇಕಾಗುತ್ತದೆ. ಇನ್ನು ಅಭ್ಯಾಸ ಮಾಡಲು ಸಮಯವೆಲ್ಲಿ? ಅಂಕಪಟ್ಟಿಯನ್ನೆ ಅಳತೆಗೋಲಾಗಿಟ್ಟುಕೊಂಡಿರುವ ನಮ್ಮ ವ್ಯವಸ್ಥೆಯಲ್ಲಿ ಅವರ ಪೂರ್ಣ ಕ್ರಿಯಾಶೀಲತೆಯನ್ನು ಕಂಡುಕೊಳ್ಳಲು ಅವರಿಗೆ ಸಾಧ್ಯವೇ ಇಲ್ಲದಂತಾಗುತ್ತದೆ. ಇವರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರವೇಶ ಪಡೆಯುವುದಾದರೂ ಹೇಗೆ? ಗರಿಮಾ ಗಡೇರಿಯಾಳ ಉದಾಹರಣೆ ಇಲ್ಲಿ ನೋಡಬಹುದು. ಈಕೆ ಸಿಬಿಎಸ್‌ಇ ೧೦ನೇ ತರಗತಿ ಪರೀಕ್ಷೆಯಲ್ಲಿ ೯೭.೬% ಅಂಕ ತೆಗೆದಿದ್ದರೂ ಡೆಲ್ಲಿ ಪಬ್ಲಿಕ್ ಶಾಲೆಯವರು ಈಕೆಗೆ ಪ್ರವೇಶ ನಿರಾಕರಿಸಿದರು. ಅವಳಿಗೆ ಇಂಗ್ಲಿಷ್ ಮಾತನಾಡಲು ಬರುವುದಿಲ್ಲ ಎನ್ನುವ ಕಾರಣ ಹೇಳಿದರು. ಒಬ್ಬ ಕಾನಿಸ್ಟೇಬಲ್ ಮಗಳಾದ ಅವಳು ಸಂಭಾಷಣೆ ಮಾಡುವಷ್ಟು ಇಂಗ್ಲಿಷ್ ಕಲಿಯುವುದಾದರೂ ಹೇಗೆ? ಮೊದಲು ಇವರಿಗೆ ಸಮಾನ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಿ ಆನಂತರ ಸ್ಪರ್ಧೆಯಲ್ಲಿ ಭಾಗವಹಿಸಲು ಕೇಳಬೇಕು. ಅಲ್ಲಿಯವರೆಗೂ ಅವರಿಗೆ ಮೀಸಲಾತಿಯ ಅವಶ್ಯಕತೆ ಇದೆ.

ಅಂದರೆ ೩೦೦೦-೪೦೦೦ ವರ್ಷಗಳ ಪರಂಪರೆ ಇರುವ ಜನರೊಂದಿಗೆ ಅದು ಇಲ್ಲದವರು ಏಕಾ ಏಕಿ ಸ್ಪರ್ಧೆಯಲ್ಲಿ ನಿಲ್ಲಬೇಕೆಂದರೆ ಅಸಾಧ್ಯದ ಕೆಲಸ. ಒಂದು ರಾಷ್ಟ್ರದ ಬದುಕಿನಲ್ಲಿ ೫೦ ವರ್ಷಗಳು ಯಾವ ಲೆಕ್ಕಕ್ಕೂ ಬರುವುದಿಲ್ಲ. ಈಗಲೂ ಐಐಟಿಗಳು, ಐಐಎಮ್‌ಗಳು, ಎಐಐಎಮ್‌ಎಸ್‌ಗಳು, ಐಐಎಸ್‌ಸಿ ಇತ್ಯಾದಿಗಳು ಹಳೆಯ ಗುರುಕುಲಾಶ್ರಮಗಳಂತೆ ಹೆಚ್ಚು ಸೌಲಭ್ಯಗಳಿರುವವರಿಗಾಗಿಯೆ ಮೀಸಲಾಗಿರಬೇಕೆ? ಇವುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಇದರ ಜೊತೆಗೆ ೪೦ ವರ್ಷಗಳ ಹಿಂದೆ ೮೦% ೯೦% ತೆಗೆದುಕೊಳ್ಳುವ ಮಕ್ಕಳು ಬಹಳ ಕಡಿಮೆ ಇರುತ್ತಿದ್ದರು. ಈಗ ಅವರ ಸಂಖ್ಯೆ ಅಧಿಕವಾಗಿದೆ. ಅವರೆಲ್ಲ ಭಾರತದ ಪ್ರತಿಭೆಗಳು. ಅವರೆಲ್ಲರಿಗೂ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಅವಕಾಶ ಸಿಗಬೇಕು. ಮೀಸಲಾತಿಗೂ ಹೆಚ್ಚು ಅವಕಾಶವಾಗುತ್ತದೆ. 'ಪ್ರತಿಭೆ' ಹೆಸರಿನಲ್ಲಿ ಈಗ ನಡೆಯುತ್ತಿರುವ ಚಳುವಳಿಗೆ ನಿರಾತಂಕವಾಗಿ ಹಣ

(೩೭ನೇ ಪುಟಕ್ಕೆ)

ಭಾರತದಲ್ಲಿನ ಆರ್ಥಿಕ 'ಸುಧಾರಣೆ' ಗಳಿಗೆ ಬೆಂಬಲವಾಗಿ ನಿಂತಿರುವ ಭಾರತದ ರಿಸರ್ವ್ ಬ್ಯಾಂಕ್‌ನ ಆರ್ಥಿಕ ಸಲಹಾಕಾರರಲ್ಲೊಬ್ಬರಾದ ಡಾ॥ ನರೇಂದ್ರ ಜಾಧವ್ ಈ ಹಿಂದೆ, 'ಅಂತರ ರಾಷ್ಟ್ರೀಯ ಹಣಕಾಸು ನಿಧಿ' (ಐಎಂಎಫ್)ಯಲ್ಲಿ ಅಧಿಕಾರಿಯಾಗಿದ್ದವರು. ಇವರನ್ನೀಗ 'ಉದಾರ ವಾದಿ ನವಭಾರತ'ದ ವಿಮೋಚಿತ ದಲಿತ ಮಾದರಿಯನ್ನಾಗಿ ಪ್ರಸ್ತುತ ಪಡಿಸಲಾಗುತ್ತಿದೆ. ಅವರೀಗ ತಮ್ಮ ತಂದೆ ತಾಯಿಗಳ ಮತ್ತು ತಮ್ಮ ನೆನಪುಗಳನ್ನು ತಮ್ಮ ಮಗಳ ಹಿನ್ನುಡಿಯೊಂದಿಗೆ ಸಂಕಲಿಸಿ 'ಬಹಿಷ್ಕೃತ' ಎಂಬ ನೆನಪುಗಳ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಇದು ಮೊದಲು ಮರಾಠಿಯಲ್ಲಿ ಪ್ರಕಟಗೊಂಡು ನಂತರ ಇಂಗ್ಲಿಷ್‌ನಲ್ಲಿ ತದನಂತರ ಫ್ರೆಂಚ್ ಭಾಷೆಯಲ್ಲಿ ಪ್ರಕಾಶಿತವಾಗಿದೆ. ಈಗ ಕನ್ನಡ ಮತ್ತು ಇತರ ಭಾರತೀಯ ಭಾಷೆ ಗಳಿಗೂ ಅನುವಾದ ಗೊಂಡು 'ಹೊಸ ದಲಿತ ಘನತೆ'ಯ ಪರ್ಯಾಯವೆಂಬಂತೆ ಪ್ರಸ್ತುತಗೊಳ್ಳುತ್ತಿದೆ.

ಡಿ.ಎಸ್. ನಾಗಭೂಷಣ

ಪುಸ್ತಕ ಅವಲೋಕನ

ಹೋರಾಟದ ಮಾರ್ದವ ಕಥನ

ದಲಿತ ಮಧ್ಯಮ ವರ್ಗದಲ್ಲಿ ಈಚೀನ ದಿನಗಳಲ್ಲಿ ಸಂಚಲನ ಉಂಟು ಮಾಡಿರುವ ಒಂದು ಸಂಗತಿಯೆಂದರೆ 'ದಲಿತ ಬಂಡವಾಳ'ದ ಕಲ್ಪನೆ ಕೆ.ಪಿ.ಸಿಂಗ್, ದೇವೇಶ್ ಕಪೂರ್, ರಾಮಕೃಷ್ಣ ಭೂಪತಿ ಮುಂತಾದ ಅನಿವಾಸಿ ಭಾರತೀಯರಿಂದ ಒಂದು ಚಳುವಳಿಯಾಗಿ ಬೆಳೆಯುವ ತವಕದಲ್ಲಿರುವ ಈ ಕಲ್ಪನೆಗೆ ಭಾರತದಲ್ಲಿ ಈಗ ಬೆಂಬಲವಾಗಿ ನಿಂತು ಅದರ ತಾತ್ವಿಕತೆಯನ್ನು ವಿವರಿಸುತ್ತಿರುವವರು ಜಗತ್ತಿನ ಬಹುಶಃ ಏಕೈಕ ದಲಿತ ಅಂಕಣಕಾರರಾದ ಚಂದ್ರ ಭಾನ್ ಪ್ರಸಾದ್ ಅವರು. ಅವರ ಪ್ರಕಾರ ದಲಿತ ಬಂಡವಾಳ ಒಂದು ವಿಶಾಲವಾದ ದಲಿತ ಮಧ್ಯಮ ವರ್ಗವನ್ನು ಸೃಷ್ಟಿಮಾಡಿ ಬೆಳೆಯುವ ಮೂಲಕ ಮೇಲ್ಜಾತಿ ಬಂಡವಾಳದ ಎಲ್ಲ ದೌರ್ಬಲ್ಯಗಳನ್ನು ಮೀರಿ, ಕನಿಷ್ಟ ದಲಿತ ಸಮುದಾಯಕ್ಕೆ ಈಗಿನ ಸಂಕಷ್ಟಗಳಿಂದ ಮುಕ್ತಿ ದೊರಕಿಸಿಕೊಡಬಲ್ಲದು ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಇದು ಅಂಬೇಡ್ಕರ್‌ರ ಅರ್ಥಶಾಸ್ತ್ರದ ಕಲ್ಪನೆಗಳಿಗೆ ವಿರುದ್ಧವೇನೂ ಅನಿಸುವುದಿಲ್ಲ. ಈ ನಂಬಿಕೆಗೆ ಪುಷ್ಟಿ ಕೊಡುವಂತೆ ಈಗ ದಲಿತ ಮಧ್ಯಮ ವರ್ಗದ ಪ್ರತಿನಿಧಿಯಾಗಿ ಖಾಸಗಿ ಬಂಡವಾಳ, ಮುಕ್ತ ಮಾರುಕಟ್ಟೆ ಹಾಗೂ ಸ್ಪರ್ಧೆಗಳನ್ನು ಪ್ರತಿಪಾದಿಸುತ್ತಿರುವವರಲ್ಲಿ ಪ್ರಮುಖರೆಂದು ಹೆಸರಾದವರು ಡಾ॥ ನರೇಂದ್ರ ಜಾಧವ್. ಭಾರತದ ರಿಸರ್ವ್ ಬ್ಯಾಂಕ್‌ನ ಆರ್ಥಿಕ ಸಲಹಾಕಾರರಲ್ಲೊಬ್ಬರಾದ ಡಾ॥ ಜಾಧವ್ ಈ ಹಿಂದೆ, ಭಾರತದಲ್ಲಿನ ಆರ್ಥಿಕ 'ಸುಧಾರಣೆ'ಗಳಿಗೆ ಬೆಂಬಲವಾಗಿ ನಿಂತಿರುವ 'ಅಂತರರಾಷ್ಟ್ರೀಯ ಹಣಕಾಸು ನಿಧಿ' (ಐಎಂಎಫ್)ಯಲ್ಲಿ ಅಧಿಕಾರಿಯಾಗಿದ್ದವರು. ಇವರನ್ನೀಗ 'ಉದಾರವಾದಿ ನವಭಾರತ'ದ ವಿಮೋಚಿತ ದಲಿತ ಮಾದರಿಯನ್ನಾಗಿಯೂ ಪ್ರಸ್ತುತ ಪಡಿಸಲಾಗುತ್ತಿದೆ. ಅವರೀಗ ತಮ್ಮ ತಂದೆ ತಾಯಿಗಳ ಮತ್ತು ತಮ್ಮ ನೆನಪುಗಳನ್ನು ತಮ್ಮ ಮಗಳ ಹಿನ್ನುಡಿಯೊಂದಿಗೆ ಸಂಕಲಿಸಿ 'ಬಹಿಷ್ಕೃತ' ಎಂಬ ನೆನಪುಗಳ ಸಂಗ್ರಹವೊಂದನ್ನು ಪ್ರಕಟಿಸಿದ್ದಾರೆ. ಇದು ಮೊದಲು ಮರಾಠಿಯಲ್ಲಿ ಪ್ರಕಟಗೊಂಡು ನಂತರ ಇಂಗ್ಲಿಷ್‌ನಲ್ಲಿ ತದನಂತರ ಫ್ರೆಂಚ್ ಭಾಷೆಯಲ್ಲಿ ಅನುವಾದಗೊಂಡು ಪ್ರಕಾಶಿತವಾಗಿದೆ. ಈಗ ಕನ್ನಡ ಮತ್ತು ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡು 'ಹೊಸ ದಲಿತ ಘನತೆ'ಯ ಪರ್ಯಾಯವೆಂಬಂತೆ ಪ್ರಸ್ತುತಗೊಳ್ಳುತ್ತಿದೆ.

ಈಗ ಬಹು ಜನಪ್ರಿಯವಾಗಿರುವ ಮತ್ತು ಮೌಲಿಕವೂ ಎಂದು ಪರಿಗಣಿಸಲ್ಪಟ್ಟಿರುವ ಅನೇಕ ಮರಾಠಿ ದಲಿತ ಆತ್ಮಚರಿತ್ರೆಗಳಿಗಿಂತ ಈ ಕೃತಿ ಭಿನ್ನವಾಗಿ ನಿಲ್ಲುವುದು, ಇದು ಆತ್ಮಚರಿತ್ರೆಯಾಗಿರದೆ ಒಂದು ಕುಟುಂಬದ ಮೂರು ತಲೆಮಾರುಗಳ ನೆನಪುಗಳ ಸಂಗ್ರಹವೆಂಬ ಕಾರಣಕ್ಕೆ ಮಾತ್ರವಲ್ಲ; ಈ ನೆನಪುಗಳ-ವಿಶೇಷವಾಗಿ ಮೊದಲ ತಲೆಮಾರಿನ ದಾಮು ಮತ್ತು ಸೋನಾ (ನರೇಂದ್ರ ಜಾಧವರ ತಂದೆ ತಾಯಿ) ನಿವೇದನೆಗಳು-ನಿರೂಪಣೆಯಲ್ಲಿನ ಅತ್ಯುತ್ತಮ ಕಥನ ಗುಣದಿಂದ ಕೂಡಾ. ಮೂಲತಃ ಅನಕ್ಷರಸ್ಥರಾದ-ನಂತರ ಅನೌಪಚಾರಿಕವಾಗಿ ಅಕ್ಷರಸ್ಥರಾದರೂ-ಈ ದಂಪತಿಗಳು ತಮ್ಮ ಅನುಭವಗಳನ್ನು ಆಯ
ವಿನ್ಯಾಸಗೊಳಿಸಿ ಮಂಡಿಸಿರುವ ರೀತಿ (ಇದರಲ್ಲಿ ಅವರ ವಿದ್ಯಾವಂ
ಮಕ್ಕಳ ಸಾಕಷ್ಟು ಕೈವಾಡವಿದೆಯಾದರೂ) ಒಂದು ಸೃಜನಶೀ
ಸಾಹಿತ್ಯ ಕೃತಿಯ ಎಲ್ಲ ಮಾರ್ದವತೆಯನ್ನು ಪ್ರಕಟಪಡಿಸುತ್ತದೆ. ಇ
ಸಾಧ್ಯವಾಗಿರುವುದು, ಕೃತಿ ದಲಿತ ಲೋಕವನ್ನು ಒಳಗೊಂಡಿದ್ದ
(ಈಗ ಇಂತಹ ಕೃತಿ ಬಂಡವಾಳವಾಗಿ ಕ್ಲೀಷೆಯಾಗಿ ಹೋಗಿ ಬಿ
ರುವ) ಶೋಷಣೆ-ಬಂಡಾಯಗಳ ಬಗ್ಗೆ ಅನಗತ್ಯವಾಗಿ ಆರ್ಭಟಿಸ
ಸ್ವಪ್ರಜ್ಞೆಯ ಮೂಲಕ ಎಲ್ಲ ಅಡೆತಡೆಗಳನ್ನು ದಾಟಿ ಗುರಿ ಮುಟ್ಟಬ
ಮನುಷ್ಯ ಛಲದ ಸಾಧ್ಯತೆಯನ್ನು ಸಾರ್ವತ್ರಿಕವಾಗಿ ಅನಾವರಣಗೊ
ಸುವ ತನ್ನ ಉದ್ದೇಶದೆಡೆಗೆ ಏಕಾಗ್ರತೆಯಿಂದ ಸಾಗುವುದರಿಂದ.

ಬಾಬಾ ಸಾಹೇಬ ಅಂಬೇಡ್ಕರ್‌ರ ಇಡೀ ಹೋರಾಟವನ
ಹುಟ್ಟಿನಿಂದ ಕುಲವನ್ನು ವಿಂಗಡಣೆ ಮಾಡುವ ಜಾತಿ ಎಂಬು
ಎಷ್ಟು ದೊಡ್ಡ ಸುಳ್ಳು ಎಂಬುದನ್ನು ಸಾಬೀತುಪಡಿಸಿ, ಆ ಸು
ನಿಂದಾದ ಅನ್ಯಾಯಗಳ ಚರಿತ್ರೆಯನ್ನು ಪುನರ್ರೂಪಿಸುವುದೇ ಆಗಿ
ಎಂದು ಬಣ್ಣಿಸಬಹುದಾದರೆ, ಈ ಪುಸ್ತಕವೂ ತನ್ನದೇ ಮಿತಿಯ
ಅದನ್ನೇ ಮಾಡುತ್ತದೆ. ಅಂಬೇಡ್ಕರ್‌ರಂತೆಯೇ ಅಸ್ಪೃಶ್ಯ ಮಹ
ಕುಲಕ್ಕೆ ಸೇರಿದ ಈ ಕೃತಿಯ ವಾರಸುದರ-ನಾಯಕನಲ್ಲ; ನಾ
ಕನೇನಿದ್ದರೂ ನರೇಂದ್ರ ಜಾಧವ್‌ರೇ-ಕೂಲಿಕಾರ ದಾಮ
ಅಂಬೇಡ್ಕರ್ ಚಳುವಳಿಯ ಪ್ರಭಾವಕ್ಕೆ ಸಿಕ್ಕಿ ತನ್ನ ಕುಟುಂಬವ
ಜಾತಿ-ಅಸ್ಪೃಶ್ಯತೆಗಳೆಂಬ ಶಾಪಗಳಿಂದ ಪಾರಾಗಿಸಿಕೊಂಡು ಕುಲಿ
ಮನೆತನದ ಬ್ರಾಹ್ಮಣ ಕನ್ಯೆಯೊಬ್ಬಳನ್ನು ಸಹಜವೆಂಬಂತೆ ತ
ಮನೆಯ ಸೊಸೆಯಾಗಿಸಿಕೊಳ್ಳಬಲ್ಲ ರೀತಿಯಲ್ಲಿ ಕಟ್ಟಿ ನಿಲ್ಲಿಸಿ
ಕೌಶಲ್ಯ ಇಲ್ಲಿ Best of Ambedkar ಎ
ವಂತೆ ಚಿತ್ರಿತವಾಗಿದೆ. ಜಾತಿ ಮೀರು
ದೆಂದರೆ-ಅದರ ಎಲ್ಲ ನೆಲೆಗಳಲ್ಲಿ-ಹೀಗೆ;
ತ್ರೆಯನ್ನು ಮುರಿದು ಕಟ್ಟುವುದು ಎಂ
ಹೀಗೆ ಎಂಬಷ್ಟರ ಮಟ್ಟಿಗೆ ಈ ಕಥನ
thentic ಆದ ವಿವರಗಳೊಂದಿಗೆ ಗವ
ಸೆಳೆಯುತ್ತದೆ.

ಈ ದೇಶದಲ್ಲಿ ಪ್ರತಿಯೊಂ
ಜಾತಿಗೂ ಅದರ ಚರಿತ್ರೆ ಇದ್ದಂತಿದೆ.
ರದೇ ಆದ ಕಾವ್ಯ, ಪುರಾಣ, ನಂ
ಮೌಲ್ಯಗ ಳೊಂದಿಗೆ ಅಸ್ಪೃಶ್ಯ ಜಾತಿಗ
ಇದಕ್ಕೆ ಹೊರತಲ್ಲ. ಹಾಗಾಗಿಯೇ ಜ
ಮೀರುವು ದೆಂದರೆ ಈ ಚರಿತ್ರೆಯ
ಮೀರುವುದು, ಅದನ್ನು ಮುರಿದು ಕಟ್ಟುವು
ಆಧುನಿಕ ವಿದ್ಯೆಯಿಂದ ಪ್ರಚೋದಿತವ
ಪ್ರಜ್ಞಾಪೂರ್ವಕವಾಗಿ ಇದನ್ನು ಮಾಡ ಹೊ
ಡುವುದು ಸಾಹಸದ ಕೆಲಸವೇ ಸರಿ. ದಾ
ತನ್ನ ಮಹರ್ ಜಾತಿಯ 'ಎಸ್ಕಾರ್ ಡೂ
(ಹಳ್ಳಿಗೆ ಸಂಬಂಧಿಸಿದ ಜಾತಿ ಕರ್ತವ್ಯ-ಜ
ಬ್ದಾರಿಗಳು)ಯಿಂದ ಅವಮಾನಿತವಾಗಿ ಮ
ಹೊರಡುವುದೂ ಇದನ್ನೇ. ಇದಕ್ಕೆ ಪ್ರ
ಪೂರ್ವಕತೆಯನ್ನು ಒದಗಿಸುವುದು ಅಂ
ಡ್ಕರ್‌ರ ಚಳುವಳಿ. 'ಮಹರ್ ಧರ್ಮ'ದ
ರಲ್ಲಿ, ಜಾತಿ ಚರಿತ್ರೆಯ ಭಾಗವಾಗಿಯೇ ಉ
ಯುವುದೆ ಕ್ಷೇಮಕರವೆಂಬ ತನ್ನ ತಾ



ಬಹಿಷ್ಕೃತ ಒಂದು ನೆನಪು
ಲೇ: ನರೇಂದ್ರ ಜಾಧವ್
ಬೆಲೆ: ರೂ. ೧೫೦/-
ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್

ಹೆಂಡತಿ, ನೆಂಟರು ಎಲ್ಲರ ಒತ್ತಡದ ಮಧ್ಯೆಯೂ ಯಾವುದೋ ದೂರದ ನಕ್ಷತ್ರದ ಗುರುತ್ವಾಕರ್ಷಣೆಗೆ ಸಿಕ್ಕ ಗ್ರಹದಂತೆ ತನ್ನ ಕಕ್ಷೆ ಬಿಟ್ಟು ಹಾರುವ ದಾಮು ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ತನ್ನ ಗುರಿ ಕಳೆದುಕೊಳ್ಳದಂತಹ ವಿವೇಕ ಪ್ರದರ್ಶಿಸುವ ಪರಿಯೇ ಈ ಕೃತಿಯ ಜೀವ'ವನ್ನೂ ನಿರೂಪಿಸುತ್ತದೆ. ಇದೇ ಈ ಪುಸ್ತಕದ ಹೆಗ್ಗಳಿಕೆ ಕೂಡ. ದಾಮು ಪ್ರಾಮಾಣಿಕನಷ್ಟೇ ಅಲ್ಲ, ಜಾಣನಾದ ದುಡಿಮೆಗಾರ: ಭೂಮಿ ಅಗೆಯುವ, ಗೋಡೆ ಒಡೆಯುವಂತಹ ಅಥವಾ ರೈಲ್ವೆ ಕೂಲಿಕಾರನ ಕೆಲಸದಲ್ಲೂ ತನ್ನದೇ ಕೌಶಲ ಪ್ರದರ್ಶಿಸಬಲ್ಲ ಪ್ರತಿಭಾವಂತ; ಪ್ರತಿಫಲ ಕೊಡುವಲ್ಲಿ ಮೋಸ ಮಾಡುವೆಡೆಯಿಂದ ಕೂಡಲೇ ಕೆಲಸ ತ್ಯಾಗ ಮಾಡುವ ಸ್ವಾಭಿಮಾನಿ; ಹೆಂಡತಿಗೆ ಒಮ್ಮೆ ಮನೆಯ ಹಿಂದಿನ ಕಡಿದಾದ ಕಪ್ಪು ಬೆಟ್ಟದಂತೆ, ಮಗದೊಮ್ಮೆ ದೂರದ ಗೋಪುರದಂತೆ ಕಾಣುವ ಪ್ರೀತಿಯ ಗಂಡ; ಜಾತಿ ಚರಿತ್ರೆಗೆ ಅರ್ಪಿಸಿಕೊಂಡ ತಾಯಿಯನ್ನು ಪ್ರೀತಿ-ಸಿಟ್ಟುಗಳ ಮೂಲಕ ಚರಿತ್ರೆಯ ಎಲ್ಲೆಗಳನ್ನು ದಾಟಿಸಬಲ್ಲ ಪ್ರೀತಿಯ ಮಗ; ಮಕ್ಕಳಿಗೆ ಸುಳ್ಳು-ಕಪಟಗಳ ಬಗ್ಗೆ ಸದಾ ಎಚ್ಚರಿಕೆ ನೀಡುವುದರ ಜೊತೆಗೆ ಬೂಟು ಮತ್ತು 'ಬೆಣ್ಣೆ ಬಿಸ್ಕತ್' ತಂದುಕೊಡುವ caring ಅಪ್ಪ. ಇದೆಲ್ಲದರ ಹಿಂದೆ ತಾವೂ ಮಾಸ್ತರ್ ಹಾಗೂ ಉಪಶಮನ್ ಗುರೂಜಿ ಮಾರ್ಗದರ್ಶನದಲ್ಲಿ ಪಡೆದ ಅಂಬೇಡ್ಕರ್ ಶಿಷ್ಯತ್ವ-'ಶಿಕ್ಷಣ, ಸಂಘರ್ಷ, ಐಕ್ಯತೆಗಳ ಮೂಲಕ ಮಕ್ಕಳನ್ನು ತನ್ನ ಸ್ಥಿತಿಗಿಂತ ಮೇಲಕ್ಕೆ ಒಯ್ಯದಿರದ ತಂದೆ ಮನುಷ್ಯನೇ ಅಲ್ಲ ಎಂಬ, ಕಿವಿಯಲ್ಲಿ ಸದಾ ಮೊರೆಯುವ ಸಂದೇಶ.

ಹಾಗೆಂದ ಮಾತ್ರಕ್ಕೆ ಇದೊಂದು ಆದರ್ಶ ಹೋರಾಟಗಾರನೊಬ್ಬನ ಜೀವನ ಪಥದ ಧೀರಗಂಭೀರ ಚಿತ್ರಣವಾಗಿ ಮಾತ್ರ ಉಳಿದಿಲ್ಲ. ದಲಿತ ಕುಟುಂಬವೊಂದರ ಸಾಂಸ್ಕೃತಿಕ ಚಿತ್ರಣವೂ ಇಲ್ಲಿ ಅದರೆಲ್ಲ ಬಣ್ಣ ಬೆಡಗುಗಳೊಂದಿಗೆ ಸಜೀವವಾಗಿ ಮೂಡಿಬಂದಿದೆ. ದಾಮು ಮತ್ತು ಸೋನು ಪರಸ್ಪರ ಪ್ರೀತಿಸುವ ಗಂಡ ಹೆಂಡತಿಯರಾಗಿ 'ಎಸ್ಕಾರ್ ಡ್ಯೂಟಿ'ಯ ಕ್ರೌರ್ಯವನ್ನು ಪ್ರತಿಭಟಿಸಿ ಹಳ್ಳಿ ಬಿಟ್ಟು ಹೊಸ ಸ್ವಾತಂತ್ರ್ಯ ಅರಸಿಕೊಂಡು ಮುಂಬೈ ಕಡೆಗೆ 'ಹೆಗಲಿಗೆ ಹೆಗಲ ಕೊಟ್ಟು' ನಡೆಸುವ ಪಯಣದ ಜೊತೆಯಲ್ಲೇ ಆರಂಭವಾಗುವ ಈ ಸಾಂಸ್ಕೃತಿಕ ಕಥನವು ಇಬ್ಬರ ಬಾಲ್ಯದ ಸಿಹಿ-ಕಹಿ ನೆನಪುಗಳ ಉಲ್ಲಾಸ-ವಿಷಾದಗಳು, ವಿವಾಹದ ರೀತಿ ರಿವಾಜುಗಳ ಸಂಭ್ರಮ, ಮೊದಲ ಸಮಾಗಮದ ಆತಂಕ, ಮುಂಬೈ ನಗರ ಬದುಕಿನ ರೇಜಿಗೆಗಳು, ಕುಲದೇವರ ಜಾತ್ರೆಯ ಆಚರಣೆಗಳಲ್ಲಿನ ಶ್ರದ್ಧಾ-ಭಕ್ತಿಗಳು, ಬಹುಕಾಲ ಮಕ್ಕಳಾಗದುದರ ದುಃಖದುಮ್ಮಾನಗಳು, ಗಂಡನ ಬಾಲ್ಯದ 'ಬಿಳಿ ಗೆಳತಿ'ಯ ಪ್ರಸ್ತಾಪ ಹೆಂಡತಿಯಲ್ಲಿ ಉಂಟು ಮಾಡುವ ತಲ್ಲಣಗಳು, ಸತಿ ಧರ್ಮದ ವಿವರಗಳು ('...... ಅದಕ್ಕೋಸ್ಕರವೇ ನಮಗೆ ಸ್ಪಷ್ಟವಾದ ಸೆರಗು ಕೊಟ್ಟಿರೋದು. ಗಂಡಸರ ತಪ್ಪನ್ನೆಲ್ಲ ಮುಚ್ಚಿಕ್ಕೊಂಡು, ಅವರನ್ನ ಅರ್ಥ ಮಾಡಿಕೊಳ್ಳೋಕೆ') ಮೊದಲ ಹೋಟೆಲ್ ಭೇಟಿ-ಸಮೋಸದ ರುಚಿ ಕಂಡು ಕೊಂಡ ಬಗೆ, ಗಂಡ ಹೆಂಡತಿ ಮೊದಲ ಬಾರಿಗೆ ಹೊರ ಹೋಗಿ ಎಳೆನೀರು ಕುಡಿದು ಜಿಲೇಬಿ ತಿಂದುದರ [illegible] ಕ್ಷಣಗಳು. ಹೆಂಡತಿ ಗರ್ಭಿಣಿಯಾದು[illegible] ಸೂಕ್ಷ್ಮವಾಗಿ ತಿಳಿಯಲಾರದ ಗಂಡನ ಪೆದ್ದುತನ [illegible] ಹಂತ [illegible] ಅಂಬೇಡ್ಕರ್‌ರೊಂದಿಗೆ

ಇದೊಂದು ಆದರ್ಶ ಹೋರಾಟಗಾರನೊಬ್ಬನ ಜೀವನ ಪಥದ ಧೀರಗಂಭೀರ ಚಿತ್ರಣವಾಗಿ ಮಾತ್ರ ಉಳಿದಿಲ್ಲ. ದಲಿತ ಕುಟುಂಬವೊಂದರ ಸಾಂಸ್ಕೃತಿಕ ಚಿತ್ರಣವೂ ಇಲ್ಲಿ ಅದರೆಲ್ಲ ಬಣ್ಣ ಬೆಡಗುಗಳೊಂದಿಗೆ ಸಜೀವವಾಗಿ ಮೂಡಿ ಬಂದಿದೆ. ದಾಮು ಮತ್ತು ಸೋನು ಪರಸ್ಪರ ಪ್ರೀತಿಸುವ ಗಂಡ ಹೆಂಡತಿಯರಾಗಿ 'ಎಸ್ಕಾರ್ ಡ್ಯೂಟಿ'ಯ ಕ್ರೌರ್ಯವನ್ನು ಪ್ರತಿಭಟಿಸಿ ಹಳ್ಳಿ ಬಿಟ್ಟು ಹೊಸ ಸ್ವಾತಂತ್ರ್ಯ ಅರಸಿಕೊಂಡು ಮುಂಬೈ ಕಡೆಗೆ 'ಹೆಗಲಿಗೆ ಹೆಗಲು ಕೊಟ್ಟು' ನಡೆಸುವ ಪಯಣದ ಜೊತೆಯಲ್ಲೇ ಆರಂಭವಾಗುವ ಈ ಸಾಂಸ್ಕೃತಿಕ ಕಥನವು ಇಬ್ಬರ ಬಾಲ್ಯದ ಸಿಹಿ-ಕಹಿ ನೆನಪುಗಳ ಉಲ್ಲಾಸ-ವಿಷಾದಗಳು, ವಿವಾಹದ ರೀತಿ ರಿವಾಜುಗಳ ಸಂಭ್ರಮ, ಮೊದಲ ಸಮಾಗಮದ ಆತಂಕ, ಮುಂಬೈ ನಗರ ಬದುಕಿನ ರೇಜಿಗೆಗಳು ಎಲ್ಲವನ್ನೂ ದಾಖಲಿಸುತ್ತದೆ



ಬೌದ್ಧ ಮತಕ್ಕೆ ಮತಾಂತರಕ್ಕೆ ಸಿದ್ಧವಾಗಬೇಕಾದಾಗ. ಲೌಕಿಕ ವಿಷಯಗಳಲ್ಲಿ ಗಂಡನೊಡನೆ ಅಂಬೇಡ್ಕರ್ ವಿಚಾರಗಳೊಂದಿಗೆ ಸಹಮತ ತೋರುವ, ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಸೋನು, ತನ್ನ ದೇವರುಗಳ ವಿಷಯಕ್ಕೆ ಬಂದಾಗ ಅವನೇ ಕಲಿಸಿಕೊಟ್ಟ ವಿಚಾರ ಸ್ವಾತಂತ್ರ್ಯವನ್ನು ಬಳಸಿಕೊಂಡು ಸಿಡಿದು ನಿಲ್ಲುತ್ತಾಳೆ. ಜೀವನದಲ್ಲಿ ಮೊದಲ ಬಾರಿಗೆ ಗಂಡನಿಗೆ ಎದುರು ನಿಲ್ಲುತ್ತಾಳೆ.

ಅವಳಿಗೆ ತನ್ನ ಪೂರ್ವಜರ ಧರ್ಮ-ದೇವರುಗಳನ್ನು ಬಿಡುವುದು ಅಷ್ಟು ಸುಲಭದ ಕೆಲಸವಾಗಿ ಕಾಣುವುದಿಲ್ಲ. ತನ್ನನ್ನು ತನ್ನ ಕುಟುಂಬದವರೊಂದಿಗೆ ಪೊರೆದಿರುವರೆಂದು ನಂಬಿರುವ ತನ್ನ ದೇವರುಗಳನ್ನು-ಅವುಗಳ ಮೂರ್ತಿಗಳನ್ನು-ಹೊರಗೆಸೆಯಲು ಅವಳಿಗೆ ಸಾಧ್ಯವಾಗುವುದಿಲ್ಲ. 'ಹೌದು, ಬಾಬಾ ಸಾಹೇಬರು ಹೇಳಿದಂತೆ ನಾವು ನಮ್ಮ ಹಕ್ಕಿಗಾಗಿ, ಗೌರವಕ್ಕಾಗಿ ಹೋರಾಡಬೇಕು. ಆದರೆ ದೇವರು ಧರ್ಮದ ಗೋಜಿಗೆ ಹೋಗುವುದೇ? ಅದು ತೀರಾ ಅತಿಯಾಯಿತು ನಾನು ಈ ಧರ್ಮ ದ್ರೋಹ ಮಾಡಲು ಬಿಡುವುದಿಲ್ಲ. ನಾನೇನು ಮಾಡಬಹುದು?' ವಿಪರ್ಯಾಸವೆಂದರೆ ಅವಳು ತನ್ನ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದೂ ತನ್ನ ಆ ಪೂರ್ವಜರ ಧರ್ಮದೊಳಗಿನಿಂದಲೇ "ನನ್ನೊಳಗೇ ಹೆದರಿದೆ. ಎಂದಿನಂತೆ ನನ್ನ ಗಂಡನನ್ನ ಅನುಸರಿಸೋದು ಬಿಟ್ಟು ನನಗೆ ಆಯ್ಕೆಯಿರಲಿಲ್ಲ. ನಾನು ಮೌನವಾಗೇ ಮಾರಿ ಆಯಿಗೆ ಪ್ರಾರ್ಥಿಸಿದೆ. ನನಗೆ ಸರಿಯಾದ ಹಾದಿಯಲ್ಲಿ ನಡೆಯುವ ಶಕ್ತಿ ಕೊಡು ಎಂದು. ನನ್ನವನು ನನ್ನನ್ನು ಮುಂಬೈಗೆ ಕರೆದುಕೊಂಡು ಹೋಗಲು ಬಂದಾಗ, ನಮ್ಮ ಆಯಿ ಹೇಳಿದ್ದ ಮಾತುಗಳನ್ನು ನೆನಪಿಸಿಕೊಂಡೆ. 'ಸೋನೆ, ನಿನ್ನ ಗಂಡನೇ ನಿನ್ನ ದೇವರು. ನಿರ್ವಿವಾದವಾಗಿ ಅವನಿಗೆ ವಿಧೇಯಳಾಗಿರುವ, ಅವನೇನೇ ಮಾಡಲಿ. ಅವನನ್ನು ಪೂರ್ತಿಯಾಗಿ ಸ್ವೀಕರಿಸು. ನಿನಗೆ ಅವನೇ ಸರ್ವಸ್ವ, ನಿನ್ನ ಸಾವಿನೊಂದಿಗೇ ಅವನ ಬಿಡುಗಡೆ. 'ಈಗ ನಾನೇನು ಮಾಡುವುದು?' ಒಲ್ಲದ ಮನಸ್ಸಿನಿಂದಲೇ ಅವಳು ಗಂಡನೊಂದಿಗೆ ನಾಗಪುರಕ್ಕೆ ಹೋಗಿ ಬೌದ್ಧ ಮತದ ದೀಕ್ಷೆ ಪಡೆಯುತ್ತಾಳೆ. ಆ ಜನಸಾಗರದ ಸಂಭ್ರಮದ ಆಚರಣೆಗಳ ಮಧ್ಯೆ ತನ್ನ ಆತಂಕಗಳನ್ನು ಕಳೆದುಕೊಳ್ಳುತ್ತಾಳೆ.

ಇದಾದ ಅನತಿ ಕಾಲದಲ್ಲೇ ಅಂಬೇಡ್ಕರ್ ಕೊನೆಯುಸಿರೆಳೆಯುತ್ತಾರೆ. ಇದರೊಂದಿಗೆ ಪುಸ್ತಕ ೧೯೫೬ ರಿಂದ ೧೯೯೭ ಕ್ಕೆ ಜಿಗಿಯುತ್ತದೆ. ಅಲ್ಲಿಂದ ದಾಮುವಿನ ಮಗನ (ನರೇಂದ್ರ ಜಾಧವ್) ನೆನಪುಗಳು ಆರಂಭವಾಗುತ್ತವೆ: ಘೋಷಣೆಗಳ ಕೋಲಾಹಲದ ಮಧ್ಯೆ ಗಾಬರಿಗೊಂಡ ಮಕ್ಕಳ ಕೈ ಹಿಡಿದು ಸಭೆಯೊಂದರಲ್ಲಿ ಭಾಗವಹಿಸಿದ್ದ ದಾಮುಗೆ ಒಂದರೆಕ್ಷಣ ಎದುರಾದ ಅಂಬೇಡ್ಕರ್ ಹೇಳುವುದು- 'ದಾಮು, ಮಕ್ಕಳನ್ನು ಚೆನ್ನಾಗಿ ಓದಿಸು.' ದಾಮು ಅದನ್ನು ಆಶೀರ್ವಾದವೆಂಬಂತೆ ಸ್ವೀಕರಿಸಿ ಮಕ್ಕಳನ್ನು ಓದಿಸುತ್ತಾನೆ. ಅಭಿಮಾನದಿಂದ ಅವರಿಗೆ ಅಂಬೇಡ್ಕರ್ ಓದಿದ ಶಾಲಾ-ಕಾಲೇಜುಗಳನ್ನೇ ಆಯ್ಕೆ ಮಾಡುತ್ತಾನೆ. ತಾನು ವಾಸಿಸುತ್ತಿದ್ದ ಪ್ರದೇಶದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ರೌಡಿಗಳ ಮಧ್ಯೆ ಮಕ್ಕಳು ಹಾಳಾಗದಂತೆ ಸಕಲ ನೈತಿಕ ಎಚ್ಚರದಿಂದ ಅವರನ್ನು ಬೆಳೆಸುತ್ತಾನೆ. ಅವರಿಗೆ ಭಾಷೆಯಾಗಿ ಸಂಸ್ಕೃತ ಕೊಡಿಸುತ್ತಾನೆ. ಮಗ ಸಂಸ್ಕೃತದಲ್ಲಿ ಅತಿ ಹೆಚ್ಚು ಅಂಕ ಪಡೆದಾಗ [illegible] ಗರ್ವ ಮುರಿದಂತೆ [illegible] ಹಾಗೇ ಮಕ್ಕಳು [illegible] ಪದವಿಗಳ ಸಾರ್ಥಕತೆಯನ್ನು [illegible]

ತ್ತಾನೆ: 'ನೀನು ಓದಿದ್ದೆಲ್ಲವೂ ಬೀದಿಯಲ್ಲಿರೋ ಮನುಷ್ಯನ ಉದ್ಧಾರಕ್ಕಲ್ಲದಿದ್ದರೆ ಅದು ನಿಷ್ಪ್ರಯೋಜಕ' ಎಂದು ಅವರನ್ನು ಛೇಡಿಸುತ್ತಾನೆ. ಒಬ್ಬ ಮಗ ಐ.ಎ.ಎಸ್. ಮಾಡಿ ಜಿಲ್ಲಾ ಕಲೆಕ್ಟರಾದರೆ, ಇನ್ನೊಬ್ಬ ಮಗ ಅಂತರರಾಷ್ಟ್ರೀಯ ಮನ್ನಣೆ ಪಡೆದ ಅರ್ಥಶಾಸ್ತ್ರಜ್ಞನಾಗುತ್ತಾನೆ. ಆದರೆ ಅಪ್ಪನಿಗೆ ಅವರು ಪ್ರೀತಿಯ 'First Class scoundrel' ಗಳೇ! (ಅದು ಅವನು ಬಾಲ್ಯದಲ್ಲಿ ಬಿಳಿ ಅಧಿಕಾರಿಯೊಬ್ಬನ ಬಳಿ ಕೆಲಸ ಮಾಡುತ್ತಿದ್ದಾಗ ಕಿವಿ ಮೇಲೆ ಪದೇ ಪದೇ ಬಿದ್ದು ಪರಿಚಿತವಾದ ಪ್ರಿಯ ಬೈಗುಳ) ಏಕೆಂದರೆ ಸ್ಥಳೀಯ ಶಿವಾಜಿ ಬೀಡಿ ಸೇದಿ ಗಂಟಲು ಕೆಡಿಸಿಕೊಂಡ ಈ ಅಪ್ಪನಿಗೆಂದು 'ವಿಕ್ಟೋರಿಯಾ ರಾಣಿಗಾಗಿಯೇ ವಿಶೇಷವಾಗಿ ತಯಾರಿಸಿದ' ೫೫೫ ಸಿಗರೇಟನ್ನು ಪ್ರೀತಿಯಿಂದ ತಂದು ಕೊಡುವ ಆ ಮಕ್ಕಳಿಗೆ, ವಿಕ್ಟೋರಿಯಾ ರಾಣಿ ಶಿವಾಜಿ ಬೀಡಿಯ ರುಚಿ ನೋಡಿಲ್ಲವೆಂಬುದೇ ಗೊತ್ತಿಲ್ಲ! ಹಾಗೇ ನರೇಂದ್ರ ಜಾಧವ್ ತನ್ನ ಅಪ್ಪನ ವ್ಯಕ್ತಿತ್ವವನ್ನು ನಿರೂಪಿಸುವ ಈ ಸ್ವಾರಸ್ಯಕರ ಪ್ರಸಂಗ:

ದಾದಾ ಒಂದು ದಿನ ನನ್ನನ್ನು ಕರೆದು 'ನಿನ್ನ ನಡವಳಿಕೆ ಸರಿಯಿಲ್ಲವೆಂದು ಹೇಳಿದರು. ಬಾಬಾ ಸಾಹೇಬರು ವಿದೇಶಿ ಡಿಗ್ರಿಯನ್ನು ಹಿಡಿದು ಭಾರತಕ್ಕೆ ಬಂದಾಗ ಅವರಿಗೆ ಬೇಕಾದ ಯಾವುದಾದರೂ ಸರಕಾರಿ ನೌಕರಿ ಹಿಡಿಯಬಹುದಿತ್ತು. ಅವರು ನಮ್ಮ ಮಂದಿಯನ್ನು ಒಗ್ಗೂಡಿಸಲು ಸಾಮಾಜಿಕ ಕ್ರಾಂತಿಯನ್ನು ಆಯ್ಕೆ ಮಾಡಿದರು. ನಿನ್ನ ಹತ್ತಿರ ಅಮೆರಿಕನ್ ಡಿಗ್ರಿಯಿದೆ. ನೀನ್ಯಾಕೆ ರಿಸರ್ವ್ ಬ್ಯಾಂಕಿ ನಲ್ಲಿ ಕೆಲಸ ಮಾಡಬೇಕು?'

"ಬಾಬಾ ಸಾಹೇಬರ ಮಾತು ಬೇರೆ, ನಾನು ಒಬ್ಬ ಸಾಮಾನ್ಯ ಮನುಷ್ಯ"

"ನಾನು ಒಪ್ಪುವುದಿಲ್ಲ. ನಿನ್ನಂಥ ವಿದ್ಯಾವಂತ ಯುವಕರು ರಾಜಕೀಯಕ್ಕೆ ಹೋಗಿ ಜನಗಳ ಸೇವೆ ಮಾಡಬೇಕು"

"ಕೊನೆಗೆ ನಾನೇ ಮಾತು ಮುಗಿಸುವ ಸಲುವಾಗಿ ಹೇಳಿದೆ, 'ಈಚಿನ ದಿನಗಳಲ್ಲಿ ಯಾರೂ ಜನರ ಸೇವೆಗಾಗಿ ರಾಜಕೀಯದಲ್ಲಿ ಉಳಿದಿಲ್ಲ. ಆ ದಿನಗಳು ಹೋಯಿತು. ಈಗಿನ ರಾಜಕಾರಣದಲ್ಲಿ ಬರಿ ಮೋಸಗಾರರು, ಗೂಂಡಾಗಳೇ ಇರುವುದು."

"ದಾದಾ ಎಂದಿಗೂ ಬಿಟ್ಟು ಕೊಡುತ್ತಿರಲಿಲ್ಲ. 'ಆದ್ರೇನು, ನೀನೂ ಫಸ್ಟ್ ಕ್ಲಾಸ್ ಸ್ಕೌಂಡ್ರಲ್ ತಾನೇ!' ನನಗೆ ಮಾತೇ ಹೊರಡಲಿಲ್ಲ."

ಇಂತಹ ವರ್ಗ ವಿಶಿಷ್ಟವಾದ ಹಾಸ್ಯಪ್ರಜ್ಞೆಯಿಂದಾಗಿಯೇ, ತನ್ನ ಮಕ್ಕಳ ಅಭ್ಯುದಯದಿಂದ ದೊರೆತ ಸುಖ-ಸೌಲಭ್ಯಗಳಿಂದ ಎಂದೂ ತಲೆ ತಿರುಗಿ (ಒಮ್ಮೊಮ್ಮೆ ಸ್ವಭಾವ ದೋಷದಿಂದಾಗಿ, ಕಲೆಕ್ಟರನೆಂಬ ಅಧಿಕಾರದಿಂದ ತನ್ನನ್ನು ದಬಾಯಿಸ ಬಂದ ಅಧಿಕಾರಿಗೆ ತಾನು ಕಲೆಕ್ಟರನ ತಂದೆ ಎಂದು ಪ್ರತಿ ದಬಾಯಿಸುವುದೂ ಉಂಟು!) ದಾಮು ತನ್ನ ಬೇರುಗಳನ್ನು ಮುರಿದುಕೊಳ್ಳುವುದಿಲ್ಲ. ಹಾಗಾಗಿಯೇ, ಮಗನನ್ನು ಕಲೆಕ್ಟರ್‌ನನ್ನಾಗಿ ಮಾಡಿದ ಸಾಧನೆಯ ಗೌರವಾರ್ಥ ತಾನು ಕೆಲಸ ಮಾಡುತ್ತಿದ್ದ ಬಂದರು ಪ್ರಾಧಿಕಾರದ ಮೇಲಾಧಿಕಾರಿ ತನಗೆ ಸೇವಾ ವಿಸ್ತರಣೆ ಕೊಡಲು ಮುಂದಾದಾಗ ಆತ ಹೀಗೆ ಹೇಳಲು ಸಾಧ್ಯವಾಗುವುದು– 'ಸಾಹೇಬ್, ನೀವು ಬೇರೆ ಇನ್ನಾರಿಗಾದರೂ ಒಂದು ವರ್ಷದ ವಿಸ್ತರಣೆ ಕೊಡಲು ಸಾಧ್ಯವೇ ನೋಡಿ... ಯಾರ ಮಕ್ಕಳು ಇನ್ನೂ ಓದುತ್ತಿದ್ದಾರೋ– ಯಾರ ಶಿಕ್ಷಣ ಅವರ ತಂದೆಯ ನಿವೃತ್ತಿಯಿಂದ ನಿಂತು ಹೋಗುವಂತಾಗುತ್ತದೋ ಅಂತಹವರ ಅವಶ್ಯಕತೆ ನೋಡಿ ಕೊಡಿ...' ದಾಮುವಿನ ತಲೆಮಾರಿನವರು 'ಜೈಭೀಮ್' ಘೋಷಣೆಗಳ ಮೂಲಕ ಕಂಡುಕೊಂಡ ವಿವೇಕ ಇಂತಹುದು. ಇಂತಹ ವಿವೇಕಕ್ಕೆ ಮತ್ತೊಂದು ಉದಾಹರಣೆ, ಪೂನಾ ಒಪ್ಪಂದದ ಸಂದರ್ಭದಲ್ಲಿ ಗಾಂಧಿ-ಅಂಬೇಡ್ಕರ್ ಮುಖಾಮುಖಿ ಕುರಿತು ದಾಮು ಸೇರಿದಂತೆ ಅಂಬೇಡ್ಕರ್ ಅನುಯಾಯಿಗಳ ನಡುವೆ ನಡೆಯುವ ಚರ್ಚೆ. ಈ ಮುಖಾಮುಖಿ ದೇಶಾದ್ಯಂತ ಹುಟ್ಟು ಹಾಕಿದ್ದ ಕಹಿಯಿಂದ ಕಂಗೆಟ್ಟಿದ್ದ ದಾಮುವಿನ 'ಈ ಇಬ್ಬರು ಮಹಾನ್ ನಾಯಕರು ತಮ್ಮ ಭಿನ್ನಾಭಿಪ್ರಾಯಗಳನ್ನು ಖಾಸಗಿಯಾಗಿ ಕೂತು ಏಕೆ ಪರಿಹರಿಸಿಕೊಳ್ಳಬಾರದು? ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಚರ್ಚೆ ಮುಗಿಯುವುದು; 'ಇವೆಲ್ಲ ಕುಶಲತೆಯ-ಸೂಕ್ಷ್ಮವಾಗಿ ನಿರ್ವಹಿಸಬೇಕಾದ-ವಿಷಯಗಳು. ಅದನ್ನು ನಾವು ನಮ್ಮ ನಾಯಕರೊಂದಿಗೆ ಬಿಡೋಣ' ಎಂಬ ಕೊನೆಯ ಮಾತುಗಳೊಂದಿಗೆ. ಗಾಂದಿ-ಅಂಬೇಡ್ಕರ್ ಮುಖಾಮುಖಿಯ ವಿಷಯವಾಗಿ ಇಂದೂ ಮುಂದುವರೆದಿರುವ ಚರ್ಚೆ ಹುಟ್ಟು ಹಾಕುತ್ತಿರುವ ಕಹಿಯ ಹಿನ್ನೆಲೆಯ ಈ ಮಾತುಗಳನ್ನು ತೂಗಿ ನೋಡಬೇಕಾಗಿದೆ.

ಇಂತಹ ವಿಶಿಷ್ಟ ವಿವೇಕ ಪ್ರಕಟವಾಗುವುದು ಜಾಗೃತಿಯ ದಾಂಧಲೆ ನಡುವೆ ಮುಗ್ಧತೆಯನ್ನು ಕಳೆದುಕೊಳ್ಳದಿದ್ದಾಗ ಮಾತ್ರ ಎಂದು ಕಾಣುತ್ತದೆ. ನರೇಂದ್ರ ಜಾಧವ್ ಅವರು ಆ ಮುಗ್ಧತೆಯ ಹಸಿ ಸೌಂದರ್ಯವನ್ನು ಉ… ಸಮಯವಾಗಿ ಪ್ರಕಟಿಸುವ ತಮ್ಮ ತಂದೆ ತಾಯಿ… ನೆನಪುಗಳನ್ನು ಎಷ್ಟು ಆತ್ಮೀಯವಾಗಿ ಕಟ್ಟಿಕೊಡು… ರೆಂದರೆ, ಆ ತಂದೆ ತಾಯಿಗಳ ಭಾವಚಿತ್ರಗಳಿಲ್ಲದಿರುವು… ಈ ಪುಸ್ತಕದ ದೊಡ್ಡ ಕೊರತೆಯೆನ್ನಿಸಿಬಿಡುತ್ತದೆ. ಏಕೆಂ… ಆ ನೆನಪುಗಳಲ್ಲಿ ಮೂಡಿಬರುವ ತಂದೆ ತಾಯಿಗ… ಜಾಧವರ ತಂದೆ ತಾಯಿ ಮಾತ್ರವಲ್ಲ. ಭಾರತದ ನವೋ… ಯದ ಆ ಕಾಲದಲ್ಲಿ 'ಜಾಗೃತ'ಗೊಂಡು ತನ್ನ ಮಕ್ಕಳ… 'ಬೆಳಕಿಗೆ' ತಂದ ಎಲ್ಲ ತಂದೆ ತಾಯಿಗಳು ಆಗಿದ್ದಾ… ಹಾಗಾಗಿಯೇ ನವೋದಿತ ಭಾರತದಲ್ಲಿ ಅತಿಗಣ್ಯ… ಯಾಗಿ ಪಂಡರಪುರ ವಿಠಲ ಮಂದಿರಕ್ಕೆ ಬಂದು ಮಂ… ರದ ಪುರೋಹಿರು ಹಾಗೂ ಅಧಿಕಾರಿಗಳಿಂದ ವಿಶೇ… ಮರ್ಯಾದೆಗೆ ಬಾಧ್ಯರಾಗುವ ನರೇಂದ್ರ ಜಾಧವ್, … ತುಂಬಿ ಹಾಡುತ್ತಾ ಕುಣಿಯುತ್ತಾ ಬರುತ್ತಿದ್ದ ತನ್ನ ಜ… ಮಂದಿರ ಪ್ರವೇಶ (ನಿಷೇಧ)ಕ್ಕೆ ಗಡಿಕಲ್ಲಿನಂತಿದ್ದ ಕ… ಬಂಡೆಯ ಬಳಿಗೆ ಓಡಿ ಭಾರವಾದ ನೆನಪುಗಳಲ್ಲಿ … ಯಾಗಿ ನಿಲ್ಲುವ ಪ್ರಸಂಗ ನಮ್ಮೆಲ್ಲರನ್ನೂ ಆರ್ದ್ರಗೊ… ಬಲ್ಲುದಾಗಿದೆ. ಆದರೆ ಎಲ್ಲ ನೆನಪುಗಳೂ ಹಾಗಲ್ಲ… … ಯಲ್ಲಿ ಧ್ರುವನೆಂದು ಕರೆಯಲ್ಪಡುತ್ತಿದ್ದ ನರೇಂದ್ರ ಜಾಧ… ತಾನು ಓದುತ್ತಾ, ಆಡುತ್ತಾ, ಬೆಳೆದಿದ್ದ ಮುಂಬೈನ-ದೌ… ಉಸ್ತಾದ್‌ರಂತಹ ಗೂಂಡಾಗಳನ್ನು ಸಲುಹಿದ್ದ… ಹಳೆಯ ಜಾಗೆಗಳಿಗೆ ಈಗ ತನ್ನ ಮಗನೊಂದಿಗೆ ನೆನ… ಗಳನ್ನು ಹಂಚಿಕೊಳ್ಳಲು ಹೋದಗ ಕಂಡದ್ದು: 'ಹೊ… ಮತ್ತು ಗುಂಪು ನಮ್ಮನ್ನು ಮುತ್ತಿದ್ದವು. ತೂರಾಡು… ಆತ್ಮಗಳು ಕೆಂಪಾದ ಕಣ್ಣುಗಳಿಂದ ತಮ್ಮಷ್ಟಕ್ಕೆ ತಾವು ತೆ… ಲುತ್ತಿದ್ದವು. ಅವರಲ್ಲೂ ದೌಲತ್ ಉಸ್ತಾದ್‌ಗಳು ತು… ಇರಬಹುದು. ಆದರೆ ಆ ಸಣ್ಣ ಮಕ್ಕಳಲ್ಲಿ ಧ್ರುವನಂತ … ರನ್ನು ನಾನು ಹುಡುಕುತ್ತಿದ್ದೆ...'

> **ಅಂಬೇಡ್ಕರ್‌ವಾದ, ಗಾಂಧಿವಾದ ದಂತೆಯೇ, ಅದರ ಇವೊತ್ತಿನ ಅನುಯಾಯಿಗಳ ಮೂಲಕ ಅನೇಕ ದೌರ್ಬಲ್ಯಗಳಿಂದ ನರಳಿದಂತೆ ಕಾಣುತ್ತಿರಬಹುದು. ಆದರೆ ಅದು ಗಾಂದಿವಾದ ದಂತೆಯೇ ತನ್ನ ಉದಯದ ಕಾಲದಲ್ಲಿ ಅಂದಿನ ಅನುಯಾಯಿಗಳ ಬಾಳಿನಲ್ಲಿ ಉಂಟು ಮಾಡಿದ ಮಹಾ ಪರಿವರ್ತನೆಯ ದೃಷ್ಟಿಯಿಂದ ಎಷ್ಟು ನಿಜವೂ, ಋಜುವೂ ಮತ್ತು ಪರಿಣಾಮಕಾರಿಯೂ ಆಗಿತ್ತು ಎಂಬುದನ್ನು ಇಂತಹ ಕೃತಿಗಳು ನಮಗೆ ಮನಗಾಣಿಸುತ್ತವೆ. ಹಾಗೆ ನೋಡಿದರೆ ಭಾರತದ ಆಧುನಿಕ ಸಾಮಾಜಿಕ ಚರಿತ್ರೆಗೆ ಅಂಬೇಡ್ಕರರ ಕೊಡುಗೆಯನ್ನು ಇಂದಿನ ಪರಿಪ್ರೇಕ್ಷ್ಯದಲ್ಲಿ ಸರಿಯಾಗಿ ಹಾಗೂ ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಅವರನ್ನು ಕುರಿತ ಜೀವನ ಚರಿತ್ರೆಯ ಮತ್ತು ತಾತ್ವಿಕ ಪುಸ್ತಕಗಳಿಗಿಂತ ಇಂತಹ ವೈಯಕ್ತಿಕ ನಿರೂಪಣೆಯ ಪುಸ್ತಗಳೇ ಹೆಚ್ಚು ಉಪಯುಕ್ತವೆಂದು ತೋರುತ್ತದೆ.**

ಆದರೆ ನಿಜವಾದ ಹುಡುಕಾಟ ಧ್ರುವ ಅಮ್ಮನ… ಸೋನುಳದು. ಈ ಪುಸ್ತಕದ ನಿಜವಾದ-ಆತ್ಯಂತಿಕವಾ… ತಾತ್ವಿಕ ಬಿಕ್ಕಟ್ಟು ಅರ್ಥಪೂರ್ಣವಾಗಿ ಬಿಚ್ಚಿಕೊಳ್ಳುವು… "ನೀನೇನು ಮಾಡಿದರೂ ಅದರ ಎತ್ತರಕ್ಕೇರು. ನಿ… ಕಳ್ಳನಾಗಬೇಕೇನು? ತೊಂದರೆ ಇಲ್ಲ ಅದರಲ್ಲಿ ಪರಿ… ಪಡೆ, ಪ್ರಪಂಚವೇ ನಿನಗೆ ಸಲಾಂ ಮಾಡು… ಪ್ರಪಂಚವೇ ನಿನ್ನ ಕಡೆನೋಡಿ 'ಓ ಎಂಥ ಕಳ್ಳ! ಎ… ಕೈಚಳಕ' ಎನ್ನಬೇಕು... ಯಾವತ್ತೂ ಕಡಿಮೆಯಿಂದ … ನಾಗಬೇಡ" ಎಂಬ ಆದೇಶದ ಮೇರೆಗೆ ಅಪ್ಪನ … ನಾಗಿ, ನರೇಂದ್ರ ಜಾಧವ್ ಅರ್ಥಶಾಸ್ತ್ರ ಆಡಳಿತಗಾರ… ಮೆಟ್ಟಿಲು ಏರುತ್ತಾ ೧೯೯೭ ರಲ್ಲಿ 'ಅಂತರಾಷ್ಟ್ರೀಯ … ಕಾಸು ನಿಧಿ' ಸೇರಲು ಅಮೆರಿಕಾಕ್ಕೆ ಪ್ರಯಾಣ… ಹೊರಟ ಮುಂಬೈ ವಿಮಾನ ನಿಲ್ದಾಣದಲ್ಲಿ ಜನ ಜ… ಳಿಯ ನಡುವೆ ತನ್ನನ್ನು ಹುಡುಕುತ್ತಾ ಬಂದ … ಅಮ್ಮನ ಮಗನಾಗಿ ಅವಳ ರೋದನವನ್ನು ಎದುರಿಸ… ಕಾಗಿ ಬಂದಾಗ–

'ನಂಗೆ ಹೋಗೋಕೆ ಬಿಡಿ... ದ್ರುವನನ್ನಕರಿ… ಅರ್ರೇ, ನನ್ನ ಮಗನ ಜೊತೆ ಸೊಲ್ಪ ಹೊತ್ತಾದ್ರೂ … ಬಿಡಿ... ಅವನು ಏಳು ಸಮುದ್ರ ದಾಟಿ ಹೋಗ್ತಿದಾನೆ... … ಸಾಯೋ ಮುದುಕಿ....'

'ಬಾಯಿ....' ನಾನು ಕರೆದೆ. ನನ್ನ ಅಮ್ಮನ … ಹೋಗಿ ಕಾಲು ಮುಟ್ಟಿ ನಮಸ್ಕಾರ ಮಾಡಿ ಆಶೀವಾ… ಪಡೆಯಲು ಹೋದೆ. ಅದೆಲ್ಲ ಅವಳಿಗೆ ಬೇಡವಾದದ್ದು… ಅವಳು ಜೋರಾಗಿ ಕಿರುಚಿದಳು, 'ನೀನಿಲ್ಲಿ ಕಷ್ಟಪಟ್ಟು …

ದ್ದು ಯಾಕೆ? ಊರು ಬಿಟ್ಟು ಹೋಗಾಕಾ? ನಂಗಂತೂ ರ್ಥವೇ ಆಗೊಲ್ಲ. ಈಗ ನೀನೇನು ಹುಡುಕ್ತಾ ಇದ್ದಿ...? ಲ್ಲಿ ಸಿಕ್ಕದ್ದು ಏಳು ಸಮುದ್ರದಾಚೆ ಸಿಗುತ್ತಾ? ನಿನ್ನ ಹೊಟ್ಟೆಗೆ ನಡು ಹೊತ್ತು ಊಟಕ್ಕಿಂತ ಎಷ್ಟು ಹೆಚ್ಚು ಬೇಕು? ನಿನಗೆ ನ್ನೂ ಹೆಚ್ಚು ಬೇಕು.... ನಿನಗಿನ್ನೆಷ್ಟು ಬೇಕು? ಅವಳು ಬಡ ಡಿಸುತ್ತಲೇ ಇದ್ದಳು.

ಇದು ಇಂದಿನ ಜಾಗತಿಕ ಅರ್ಥ ರಾಜಕಾರಣದ ಂದರ್ಭದಲ್ಲಿ ಒಬ್ಬ ತಾಯಿ–ಮಗನ ನಡುವಣ ಮುಖಾ ುಖಿ ಎನ್ನಿಸದೆ 'ಉದಾರವಾದಿ ನವ ಭಾರತ'ವು ಇಂದು ದುರಿಸುತ್ತಿರುವ ನಿರ್ಣಾಯಕ ತಾತ್ವಿಕ ದ್ವಂದ್ವದ ಹಿನ್ನೆಲೆ ಲ್ಲಿ ಆಳವಾದ ರೂಪಕಾರ್ಥವನ್ನು ಪಡೆಯುತ್ತದೆ. ದರೆ 'ಶಬ್ದ'ಗಳ ಆಳಕ್ಕಿಂತ ಹೆಚ್ಚಾಗಿ 'ಅರ್ಥ'ದ ಎತ್ತರಗಳ ಡುಕಾಟದಲ್ಲಿರುವಂತೆ ತೋರುವ ನರೇಂದ್ರ ಜಾಧವ್, ಂಡತಿ ಮಕ್ಕಳೊಂದಿಗೆ ಅಮೆರಿಕಾಕ್ಕೆ ಹೋಗುತ್ತಾರೆ. ಲ್ಲಿ ಶಾಲೆಗೆ ಸೇರುವ ಮಗಳು ಅಪೂರ್ವ, ಭಾರತದಲ್ಲಿ ಕರೆಯಲ್ಪಡುತ್ತಿದ್ದ 'ನೀನು ದಲಿತ ವಿದ್ವಾಂಸ ಡಾ॥ ನರೇಂದ್ರ ಧವರ ಮಗಳೇ? ಎಂಬ ಪ್ರಶ್ನೆಯಿಂದ ವಿಮೋಚಿತ ಗಿ, ಈ ಇಡೀ ಕೃತಿಗೆ ತನ್ನ ಹಿನ್ನುಡಿಯಲ್ಲಿ ಹೀಗೆ ಷ್ಯ ಬರೆಯುತ್ತಾಳೆ–

'....ಈಗ ನಾನು ಯಾರು ಎಂದು ಮನಗಂಡಿದ್ದೇ ಎಂದು ನನಗನ್ನಿಸುತ್ತದೆ. ನಾನೀಗ ಕೇವಲ ಅಪೂರ್ವ, ಅಷ್ಟೆ. ಗೆ ಯಾವ ಕುಲ, ಮತ ಧರ್ಮ ಅಥವಾ ಜಾತಿಯ ಧನಗಳೂ ಇಲ್ಲ. ನನ್ನ ಹಿರಿಯರು ತಾವು ದಲಿತರೆಂಬ ರೆ ಹೊತ್ತು, ಭಾರತ ಸ್ವತಂತ್ರವಾದ ನಂತರವೂ ಅತ್ಯಂತ ನಾಯದ ಕೆಲಸ ಕಾರ್ಯಗಳನ್ನು ತಲೆಬಾಗಿ ನಡೆಸಿ ಂಡು ಬಂದಿದ್ದಾರೆ. ಆದರೆ ನನ್ನ ವಿಷಯ ಬೇರೆ. ಅವರು ಗಾಗಿ ಹಚ್ಚಿಕೊಟ್ಟ ದೀವಟಿಗೆಯನ್ನು ನಾನೀಗ ಕೈಲಿ ಹಿಡಿ ದ್ದೇನೆ. ನನ್ನನ್ನು ಯಾವ ಶಕ್ತಿಯೂ ತಡೆಹಿಡಿಯಲಾಗದು'.

ನನ್ನ ವಿಷಯ ಬೇರೆ?! ಇದೇ ಈ ಪುಸ್ತಕ ತು ಅದರೊಳಗಿಂದಲೇ ಒಡಮೂಡಿ ಬರುವ ಖ್ಯಾನ ಕೂಡ. ಅಂಬೇಡ್ಕರ್‌ವಾದ, ಗಾಂಧಿವಾದ ತೆಯೇ, ಅದರ ಇವೊತ್ತಿನ ಅನುಯಾಯಿಗಳ ಮೂಲಕ ಅನೇಕ ದೌರ್ಬಲ್ಯಗಳಿಂದ ನರಳಿದಂತೆ ಕಾಣು ಬಹುದು. ಆದರೆ ಅದು ಗಾಂದಿವಾದದಂತೆಯೇ ತನ್ನ ದಯದ ಕಾಲದಲ್ಲಿ ಅಂದಿನ ಅನುಯಾಯಿಗಳ ಬಾಳಿ ಉಂಟು ಮಾಡಿದ ಮಹಾ ಪರಿವರ್ತನೆಯ ದೃಷ್ಟಿ ದ ಎಷ್ಟು ನಿಜವೂ, ಋಜುವೂ ಮತ್ತು ಪರಿಣಾಮ ಯೂ ಆಗಿತ್ತು ಎಂಬುದನ್ನು ಇಂತಹ ಕೃತಿಗಳು ಗೆ ಮನಗಾಣಿಸುತ್ತವೆ. ಹಾಗೆ ನೋಡಿದರೆ ಭಾರತದ ನಿಕ ಸಾಮಾಜಿಕ ಚರಿತ್ರೆಗೆ ಅಂಬೇಡ್ಕರರ ಕೊಡುಗೆ ನ್ನು ಇಂದಿನ ಪರಿಪ್ರೇಕ್ಷ್ಯದಲ್ಲಿ ಸರಿಯಾಗಿ ಹಾಗೂ ಗ್ರವಾಗಿ ಅರ್ಥ ಮಾಡಿಕೊಳ್ಳಲು ಅವರನ್ನು ಕುರಿತ ನ ಚರಿತ್ರೆಯ ಮತ್ತು ತಾತ್ವಿಕ ಪುಸ್ತಕಗಳಿಗಿಂತ ಹ ವೈಯಕ್ತಿಕ ನಿರೂಪಣೆಯ ಪುಸ್ತಗಳೇ ಹೆಚ್ಚು ಯುಕ್ತವೆಂದು ತೋರುತ್ತದೆ.

ಸುಮಾ ದ್ವಾರಕಾನಾಥ್ ಅವರ ಅನುವಾದ ನಿಷ್ಠಾ ವಾಗಿ ಒಮ್ಮೆ ಉತ್ತರ ಕರ್ನಾಟಕದ ಆಡುಭಾಷೆಗೂ, ಮ್ಮೆ ಹಳೆ ಮೈಸೂರಿನ ಹಳ್ಳಿಗಾಡಿನ ಭಾಷೆಗೂ ದಳುತ್ತಾ ಕೆಲವೆಡೆ ಕನ್ನಡದ ಜಾಯಮಾನಕ್ಕೊಗ್ಗದ ರಚನೆ ಹಾಗೂ ಪದಗುಚ್ಛಗಳ ಮೂಲಕ ಗೊಂದಲ ಸುತ್ತದಾದರೂ, ಒಟ್ಟಾರೆಯಾಗಿ ಅಭಿನಂದನೀಯ ಯೇ ಇದೆ. ☐

ಮೀಸಲಾತಿ ವಿವಾದದ ಹೊಸ ಆಯಾಮ

(೩೧ನೇ ಪುಟದಿಂದ)

ಕಾಗಿದೆ. ಭಾರತೀಯ ಸಮಾಜದಲ್ಲಿ ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳು ಜಾತಿಯನ್ನೇ ಆಧರಿಸಿರುತ್ತವೆ. ರಾಜಧಾನಿ ದೆಹಲಿಯ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಇಂದಿಗೂ ಜಾತಿ ತಾರತಮ್ಯ ನಡೆಯುತ್ತಿರುವುದನ್ನು ಅನೇಕ ಸಮಾಜ ಶಾಸ್ತ್ರಜ್ಞರು ನಿರೂಪಿಸಿದ್ದಾರೆ.

ಜಾತಿ ಪ್ರಜ್ಞೆ ಹಾಗೂ ಜಾತಿ ಆಧಾರಿತ ಪಕ್ಷಪಾತ ಇರುವವರೆಗೂ, ಜಾತಿ ಆಧರಿತ ಮೀಸಲಾತಿಯ ಅವಶ್ಯಕತೆಯೂ ಇರುತ್ತದೆ. ಹಾಗೆಯೇ ಭಾರತೀಯ ಆಳುವ ವರ್ಗಗಳು ಪ್ರಾಥಮಿಕ ಶಿಕ್ಷಣದಲ್ಲಿ ಸಂಪೂರ್ಣ ಗುಣಾತ್ಮಕ ಬದಲಾವಣೆ ತಂದು, ಏಳನೇ ತರಗತಿಯವರೆಗೆ ಖಡ್ಡಾಯ, ಉಚಿತ ಶಿಕ್ಷಣ ನೀತಿಯನ್ನು ಜಾರಿಗೊಳಿಸುವವರೆಗೂ, ಮೀಸಲಾತಿಯ ಅವಶ್ಯಕತೆ ಇರುತ್ತದೆ. ಶಿಕ್ಷಣ ಕ್ಷೇತ್ರವನ್ನು ಖಾಸಗಿಯವರಿಂದ ಕಸಿದು ಕೊಂಡು ಸರ್ಕಾರವೇ ಅದರ ಹೊಣೆ ಹೊರುವವರೆಗೂ, ಮೀಸಲಾತಿ ಅಗತ್ಯವಾಗಿರುತ್ತದೆ. ಇಲ್ಲಿ ಪ್ರತಿಭೆಗಿಂತಲೂ ಹೆಚ್ಚಾಗಿ ಒಂದು ಜನ ಸಮುದಾಯದ, ಭವಿಷ್ಯದ ಪ್ರಶ್ನೆ ಅಡಗಿದೆ.

ಸಂವಿಧಾನಾತ್ಮಕವಾಗಿ ತಮಗೆ ಲಭಿಸಬೇಕಾದ ಹಕ್ಕುಗಳಿಗಾಗಿಯೂ, ನಿರಂತರ ಹೋರಾಟ ನಡೆಸಬೇಕಾ ಗಿರುವುದು ಈ ದೇಶದ ದಮನಿತ ವರ್ಗಗಳ ದುರ್ದೈ ವವೆಂದೇ ಹೇಳಬಹುದು. ಸಂವಿಧಾನವನ್ನು ಉಲ್ಲಂಘಿಸಿ ಎಲ್ಲಾ ಸವಲತ್ತುಗಳನ್ನು ಪಡೆಯುವವರಿಗೆ ಯಾವುದೇ ಹೋರಾಟ ಅಗತ್ಯವಿರುವುದಿಲ್ಲ. ಅವರಿಗೆ ಯಾವುದೇ ಶಿಕ್ಷೆಯೂ ಆಗುವುದಿಲ್ಲ. ಉದಾಹರಣೆಗೆ ಕ್ಯಾಪಿಟೇಷನ್ ವಂತಿಗೆ ನೀಡುವುದು, ಡೊನೇಷನ್ ನೀಡುವುದು, ಕೇವಲ ಹಣಬಲದಿಂದಲೇ ಡಿಗ್ರಿಗಳನ್ನು ಪಡೆಯುವುದು, ಸಂಸತ್ತಿ ನಲ್ಲಿ ಪ್ರಶ್ನೆ ಕೇಳಲು ಲಂಚ ಸ್ವೀಕರಿಸುವುದು, ಅಧಿಕಾರದ ಲ್ಲಿದ್ದುಕೊಂಡೂ, ಇತರ ಲಾಭದಾಯಕ ಹುದ್ದೆಗಳನ್ನು ಅಲಂಕರಿಸುವುದು, ಸರ್ಕಾರದ ಕಣ್ಣಿಗೆ ಮಣ್ಣೆರಚಿ ಕೋಟ್ಯಾಂತರ ರೂಗಳ ಆಸ್ತಿ ಸಂಪಾದಿಸುವುದು, ಕಳ್ಳ ಸಾಗಣೆ, ಕಾಳಸಂತೆ ವ್ಯಾಪಾರಗಳಲ್ಲಿ ತೊಡಗುವುದು, ಇವೆ ಲ್ಲವೂ, ನಮ್ಮ ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿದ್ದು, ಈ ಕೈಂಕರ್ಯಗಳಿಗೆ ಯಾವುದೇ ಪರವಾನಗಿಯಾಗಲೀ, ಮಸೂ ದೆಯಾಗಲೀ, ☐

ಮಂಡಲ್ ಮಕ್ಕಳು, ಪ್ರತಿಭೆ ಮತ್ತು ಸಾಮಾಜಿಕ ಸೌಲಭ್ಯಗಳು

(೩೩ನೇ ಪುಟದಿಂದ)

ಬರುತ್ತಿರುವುದು ಕಾರ್ಪೋರೇಟ್ ಕಂಪನಿಗಳಿಂದ ಎಂದು ಟಿವಿಯಲ್ಲಿ ವೈದ್ಯಕೀಯ ವಿದ್ಯಾರ್ಥಿಯೊಬ್ಬ ಹೇಳಿದ. ಇದರ ಜೊತೆಗೆ ಎನ್‌ಆರ್‌ಐಗಳಿಂದಲೂ ಬರುತ್ತಿದೆ. ಇವ ರಿಗೇಕೆ ಈ ರೀತಿಯ ಆಸಕ್ತಿ ಎಂದು ನೋಡಿದರೆ ಇವು ಗಳು ಹೇಗೆ ಆಧುನಿಕ ಗುರುಕುಲಾಶ್ರಮಗಳಾಗಿಬಿಟ್ಟವೆ ಮತ್ತು ಅವನ್ನು ಹಾಗೆ ಉಳಿಸಿಕೊಂಡು ಬರುವ ಹುನ್ನಾ ರವಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಹಾಗೆ ನೋಡಿದರೆ ಈ ದೇಶದಲ್ಲಿ 'ಪ್ರತಿಭೆ'ಯನ್ನು ಯಾವಾಗ ಗೌರವಿಸಲಾಗಿತ್ತು? ಆ ರೀತಿ ಗೌರವವಿದ್ದಿದ್ದರೆ ನಾವು ಇಷ್ಟು ಭ್ರಷ್ಟರಾಗುತ್ತಿರಲಿಲ್ಲ. ಏಕೆಂದರೆ ಪ್ರತಿಭೆಯ ಜೊತೆ ಕೆಲವು ಆದರ್ಶಗಳು ಜೋಡಿಯಾಗಿರುತ್ತವೆ. ದ್ವಿಜರು ಮತ್ತು ರಾಜಮನೆತನದವರು ಹುಟ್ಟಿನಿಂದಲೇ ಪ್ರತಿ ಭಾವಂತರು, ಅದು ವಂಶಪಾರಂಪರ್ಯ ಎನ್ನುವುದನ್ನು ನಾವು ರಾಮಾಯಣ ಮಹಾಭಾರತಗಳ ಕಾಲದಿಂದಲೂ ಮೂಕ ಪಶುಗಳಂತೆ ಒಪ್ಪಿಕೊಂಡು ಬಂದಿದ್ದೇವೆ. ಸ್ವಾತಂತ್ರ್ಯ ಬಂದ ಅರ್ಧ ಶತಮಾನಗಳ ಮೇಲೆ ಬೇರೆ ಯವರಲ್ಲೂ ಈ ಪ್ರತಿಭೆ ಇರಬಹುದೆ ಎಂದು ಹುಡುಕಾ ಡುತ್ತಿದ್ದೇವೆ. ಈ ದಿನ ಓಬಿಸಿಗಳು ಎಂದು ಯಾರನ್ನು ಕರೆ ಯುತ್ತಿದ್ದೇವೆಯೋ ಅವರು ನಮ್ಮ ಸಮಾಜದಲ್ಲಿ ಸಾವಿ ರಾರು ವರ್ಷಗಳ ಕಾಲ ಅನಿರ್ದಿಷ್ಟ ದಾಸ್ಯಕ್ಕೆ ಒಳಪಟ್ಟಿದ್ದರು ಎಂದು ಚರಿತ್ರೆಕಾರರು ಗುರುತಿಸಿದ್ದಾರೆ. ೧೮೭೮ರಲ್ಲಿ ಕೋಲ್ ಬ್ರೂಕ್ ಭಾರತೀಯ ವರ್ಗಗಳ ಪಟ್ಟಿಯನ್ನು ರಚಿಸಿದ. ಈ ಮಾಹಿತಿಯನ್ನಾದರಿಸಿ ಮಿಲ್ ೧೮೧೮ರಲ್ಲಿ **'ಭಾರತದ ಇತಿಹಾಸ'** ಎನ್ನುವ ಪುಸ್ತಕದಲ್ಲಿ "ಯಾವುದೇ ಜನಾಂಗಕ್ಕಿಂತ ಹಿಂದೂಗಳು ವರ್ಣ ಹೀನಾಯತೆಯನ್ನು ಅತ್ಯಂತ ವಿನಾಶಕರ ಹಂತಕ್ಕೆ ಕೊಂಡೊಯ್ದಿದ್ದಾರೆ" ಎಂದು ದಾಖಲಿಸಿದ್ದಾನೆ. ಈ ಹೀನಾಯ ಸ್ಥಿತಿಯನ್ನು ಸರಿ ಪಡಿಸುವುದು ನಮ್ಮ ಜವಾಬ್ದಾರಿ. ಈಗಲೇ ತಡವಾಗಿದೆ. ಇನ್ನು ತಡವಾಗುವುದು ಬೇಡ.

ಆದರೆ ಈ ಮೀಸಲಾತಿ ನಿರಂತರವಾಗಿರಲು ಸಾಧ್ಯವಿಲ್ಲ. ಮುಂದಿನ ೧೫ರಿಂದ ೨೦ ವರ್ಷಗಳ ಅವಧಿ ಇಟ್ಟುಕೊಂಡು ನಿಧಾನವಾಗಿ ಸಮಾಜವನ್ನು ಮೀಸಲಾತಿ ಯಿಂದ ಮುಕ್ತಿಗೊಳಿಸಬೇಕು. ಆದರೆ ಅಷ್ಟರಲ್ಲಿ ಇರುವ ಸಂಸ್ಥೆಗಳಲ್ಲಿ ಸೀಟುಗಳನ್ನು ಹೆಚ್ಚು ಮಾಡುತ್ತ, ಪ್ರತಿ ರಾಜ್ಯ ದಲ್ಲೂ ಒಂದೊಂದು ಐಐಟಿಗಳು, ಐಐಎಮ್‌ಗಳು, ಐಐ ಎಸ್‌ಸಿಗಳು ಎಐಐಎಮ್‌ಎಸ್‌ಗಳು ಸ್ಥಾಪಿತವಾಗಬೇಕು. ಒಂದು ಎನ್‌ಸಿಇಆರ್‌ಟಿ ಈಗ ಭಾರತಕ್ಕೆ ಯಾವ ವಿಧ ದಲ್ಲೂ ಸಾಲದು. ಇದು ಆರಂಭವಾದ ೪೫ ವರ್ಷಗಳ ಹಿಂದೆ ರಾಷ್ಟ್ರಕ್ಕೆ ಒಂದು ಸಂಸ್ಥೆಗಿಂತ ಹೆಚ್ಚು ಕಲ್ಪನೆ ಮಾಡಿ ಕೊಳ್ಳಲು ಸಾಧ್ಯವಿರಲಿಲ್ಲ. ಆದರೆ ಈಗ ಸಮಾಜ, ಸಂದರ್ಭ ಮತ್ತು ಅವಶ್ಯಕತೆಗಳು ಬದಲಾಗಿವೆ. ದೇಶಕ್ಕೆ ಈಗ ಆರು ಸಂಸ್ಥೆಗಳು ಬೇಕಾಗುತ್ತವೆ. ಇದನ್ನು ಅರಿಯದ ಅಧಿಕಾರಿಗಳು ಮತ್ತು ರಾಜಕಾರಣಿಗಳು ಇದಕ್ಕೆ ಕಾರಣರು ಎನ್ನುವುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ☐

ಹೊಸ ವಿಚಾರಧಾರೆ

'ದಲಿತ್ ಡೈರಿ' ಮುಂಚಿನ ದಿನಗಳಲ್ಲಿ ಅಮೆರಿಕಾದ ಸಾಮಾಜಿಕ ನೀತಿಗಳ ಬಗ್ಗೆ ಉಲ್ಲೇಖಿಸುವುದೆಂದರೆ ಅದೊಂದು ಮಹಾಪಾಪ ಎಂಬಂತೆ ಪರಿಗಣಿಸಲಾಗುತ್ತಿತ್ತು. ಅಮೆರಿಕಾದ ಜನಾಂಗೀಯ ಸಂಬಂಧದ ಬಗೆಗಿನ ನೀತಿಗಳನ್ನು ದಲಿತ್ ಡೈರಿ ಇಲ್ಲಿ ಜನಪ್ರಿಯಗೊಳಿಸಿತು. ಇಂದು ಪ್ರಧಾನಮಂತ್ರಿ ಈ ಸಕಾರಾತ್ಮಕ ಕ್ರಿಯೆಯ ಬಗ್ಗೆ ಮಾತನಾಡುತ್ತಾರೆ. ಹಾಗೆಯೇ ಕೈಗಾರಿಕೋದ್ಯಮ ಅದರ ಬಗ್ಗೆ ಮಾತನಾಡುತ್ತದೆ. ಅಲ್ಲದೆ ಅನೇಕ ದಲಿತಗುಂಪುಗಳೂ ಸಹ ಅದರ ಬಗ್ಗೆ ಚರ್ಚಿಸುತ್ತಿರುತ್ತವೆ. ಹಾಗೆಯೇ, ದಲಿತ್ ಡೈರಿ ಮುಂಚಿನ ದಿನಗಳಲ್ಲಿ ದಲಿತ ಕ್ಯಾಪಿಟಲಿಸಂ ಬಗ್ಗೆ ಮಾತಾನಾಡುವುದೆಂದರೆ ಸಾಮಾಜಿಕ ಅಪರಾಧ ಎಂದು ಭಾವಿಸಲಾಗುತ್ತಿತ್ತು. ದಲಿತರ ಹಕ್ಕುಗಳೆಂದರೆ ಭೂ ದಾಖಲೆ ಪತ್ರಗಳು, ದಿನಗೂಲಿ, ರೇಷನ್ ಕಾರ್ಡ್, ಬಡತನ ನಿರ್ಮೂಲನೆ ... ಎಂದು ಭಾವಿಸಲಾಗುತ್ತಿತ್ತು.

ಅನು: ಡೊಮಿನಿಕ್. ಡಿ

ಹೊಸ ತಿರುವು ಕಾಣಿಸಿಕೊಂಡಿದೆ. ಇದನ್ನು ಸ್ವಾಭಿಮಾನ ಅಥವಾ ಸಾಧನೆಯ ತೃಪ್ತಿ ಎನ್ನಿ. ೧೯೯೯ ಏಪ್ರಿಲ್‌ನಲ್ಲಿ ದಲಿತ್ ಡೈರಿ ಆರಂಭವಾಯಿತು. ಈ ಏಳು ವರ್ಷಗಳ ದೀರ್ಘ ಪಯಣದಲ್ಲಿ ದಲಿತ ಹಕ್ಕುಗಳ ಬಗೆಗಿನ ಸಾರ್ವಜನಿಕ ಚರ್ಚೆಯಲ್ಲಿ ಹೊಸ ಪರಿಕಲ್ಪನೆಗಳನ್ನು ಪರಿಚಯಿಸಲಾಗಿದೆ. ಉದಾಹರಣೆಗೆ 'ಸಕಾರಾತ್ಮಕ ಕ್ರಿಯೆ' ಸಾಕಷ್ಟು ಚಲಾವಣೆಗೆ ಬಂದಿದೆ.

ದಲಿತ್ ಡೈರಿ ಮುಂಚಿನ ದಿನಗಳಲ್ಲಿ 'ವೈವಿಧ್ಯತೆ' ಎನ್ನುವುದನ್ನು 'ವೈವಿಧ್ಯತೆಯಲ್ಲಿ ಏಕತೆ' ಎಂದು ಬಹುವಾಗಿ ಬಳಸಲಾಗುತ್ತಿತ್ತು. ಅಂದರೆ ಭಾರತದಲ್ಲಿ ವಿವಿಧ ಧಾರ್ಮಿಕ ಗುಂಪುಗಳ ಐಕ್ಯತೆ ಎಂದು ಅರ್ಥೈಸಲಾಗುತ್ತಿತ್ತು. ಹೀಗಿದ್ದರೂ ದಲಿತರು/ಆದಿವಾಸಿಗಳು ತಮ್ಮ ಬದುಕಿನ ಎಲ್ಲಾ ರಂಗಗಳಾದ ಉದ್ಯೋಗ, ಕೈಗಾರಿಕೆ, ವಾಣಿಜ್ಯ, ವ್ಯಾಪಾರ... ಇತ್ಯಾದಿಗಳಲ್ಲಿ ಆ ಪರಿಕಲ್ಪನೆಯನ್ನು ಒಂದು ಪ್ರಧಾನ ಅಭಿವೃದ್ಧಿ ಮಾದರಿಯನ್ನಾಗಿ ಸೂಚಿಸಿರಲಿಲ್ಲ ಅಥವಾ ಅರ್ಥೈಸಿರಲಿಲ್ಲ.

ದಲಿತ್ ಡೈರಿ ಮುಂಚಿನ ದಿನಗಳಲ್ಲಿ ಅಮೆರಿಕಾದ ಸಾಮಾಜಿಕ ನೀತಿಗಳ ಬಗ್ಗೆ ಉಲ್ಲೇಖಿಸುದೆಂದರೆ ಅದೊಂದು ಮಹಾಪಾಪ ಎಂಬಂತೆ ಪರಿಗಣಿಸಲಾಗುತ್ತಿತ್ತು. ಅಮೆರಿಕಾದ ಜನಾಂಗೀಯ ಸಂಬಂಧದ ಬಗೆಗಿನ ನೀತಿಗಳನ್ನು ದಲಿತ್ ಡೈರಿ ಇಲ್ಲಿ ಜನಪ್ರಿಯಗೊಳಿಸಿತು. ಇಂದು ಪ್ರಧಾನಮಂತ್ರಿ ಈ ಸಕಾರಾತ್ಮಕ ಕ್ರಿಯೆಯ ಬಗ್ಗೆ ಮಾತನಾಡುತ್ತಾರೆ. ಹಾಗೆಯೇ ಕೈಗಾರಿಕೋದ್ಯಮ ಅದರ ಬಗ್ಗೆ ಮಾತನಾಡುತ್ತದೆ. ಅಲ್ಲದೆ ಅನೇಕ ದಲಿತಗುಂಪುಗಳೂ ಸಹ ಅದರ ಬಗ್ಗೆ ಚರ್ಚಿಸುತ್ತಿರುತ್ತವೆ.

ಹಾಗೆಯೇ, ದಲಿತ್ ಡೈರಿ ಮುಂಚಿನ ದಿನಗಳಲ್ಲಿ ದಲಿತ ಕ್ಯಾಪಿಟಲಿಸಂ ಬಗ್ಗೆ ಮಾತಾನಾಡುವುದೆಂದರೆ ಸಾಮಾಜಿಕ ಅಪರಾಧ ಎಂದು ಭಾವಿಸಲಾಗುತ್ತಿತ್ತು. ದಲಿತರ ಹಕ್ಕುಗಳೆಂದರೆ ಭೂ ದಾಖಲೆ ಪತ್ರಗಳು, ದಿನಗೂಲಿ, ರೇಷನ್ ಕಾರ್ಡ್, ಬಡತನ ನಿರ್ಮೂಲನೆ ... ಎಂದು ಭಾವಿಸಲಾಗುತ್ತಿತ್ತು.

ಹೀಗೆ ದಲಿತ್ ಡೈರಿಗಿನ ಮುಂಚಿನ ದಿನಗಳಲ್ಲಿ ದಲಿತರ ಹಕ್ಕುಗಳು ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿನ ಉದ್ಯೋಗ ಮತ್ತು ನೌಕರಿಗಷ್ಟೇ ಸೀಮಿತವಾಗಿತ್ತು. ಆದರಿಂದು ಸರಬರಾಜು/ಗುತ್ತಿಗೆ ಪರಿಕಲ್ಪನೆಗಳು ದಲಿತರ ಸಶಕ್ತಿಯ ಕೇಂದ್ರವಾಗಿ ರೂಪುಗೊಂಡಿದೆ. ದಲಿತ್ ಡೈರಿ ಬರುವ ಮೊದಲು ಖಾಸಗಿ ವಲಯದಲ್ಲಿನ ಮೀಸಲಾತಿ ಚರ್ಚೆಯು ಒಂದು ಸ್ಥಿರವಾದ ಸಿದ್ಧಮಾದರಿಯಲ್ಲಿತ್ತು-ಚಾರಿತ್ರಿಕ ಕಾರಣಗಳಿಂದಾಗಿ ದಲಿತರಿಗೆ ನೆರವಾಗಬೇಕು.



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ದಲಿತ್ ಡೈರಿಯು ಈ ಚರ್ಚೆಯ ಮೂಲ ಆಯಾಮಗಳನ್ನೆ ಮರುರೂಪಿಸಿತು. ಸರ್ಕಾರದಲ್ಲಿನ ದಲಿತ್ ಮೀಸಲಾತಿಯಿಂದಾಗಿ ಪ್ರಯೋಜನವಾಗಿರುವುದು ಖಾಸಗಿ ವಲಯಕ್ಕೇ ಎಂದು ದಲಿತ ಡೈರಿಯು ವಾದಮಾಡಿತು. ದಲಿತ ಡೈರಿ ಅಂದಾಜು ಮಾಡಿದಂತೆ ದಲಿತರು/ಆದಿವಾಸಿಗಳು ಸುಮಾರು ೩೦೦ ಬಿಲಿಯನ್‌ನಷ್ಟು ಮಾರುಕಟ್ಟೆಯಲ್ಲಿ ಖರ್ಚುಮಾಡುತ್ತಾರೆ. ಅಂದರೆ ತಿಂಗಳ ಮೂರನೇ ವಾರಕ್ಕಾಗಲ್ಲೇ ಸರ್ಕಾರಿ ನೌಕರಿಯಲ್ಲಿರುವ ದಲಿತ/ಆದಿವಾಸಿ ನೌಕರರು ತಮ್ಮೆಲ್ಲಾ ಸಂಬಳವನ್ನು ಮಾರುಕಟ್ಟೆಯಲ್ಲಿ ವ್ಯಯಿಸಿಬಿಡುತ್ತಾರೆ. ಹಾಗಾಗಿ ಮೀಸಲಾತಿ ಅಂತಿಮವಾ ಖಾಸಗಿ ವಲಯಕ್ಕೆ ದೊಡ್ಡ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ.

ಆದ್ದರಿಂದ, ಡೈರಿ ವಾದಿಸುವುದೇನೆಂದರೆ ಸಕಾರಾತ್ಮಕ ಕ್ರಿ ಅಥವಾ ವೈವಿಧ್ಯತೆಯು ಅಂತಿಮವಾಗಿ ಖಾಸಗಿ ವಲಯದ ಹಿತಾ ಕ್ತಿಗೆ ಪೂರಕವಾಗಿಯೇ ಇರುತ್ತದೆಯಲ್ಲದೆ ಮತ್ತೇನೂ ಅಲ್ಲ ಎನ್ನು ಒಂದು ಮಾರುಕಟ್ಟೆಯ ನಿಜವನ್ನು ಪ್ರತಿಪಾದಿಸಿತು. ಅಲ್ಲದೆ, ಹೊ ದಾಗಿ ಮ್ಯಾನೇಜರ್, ಇಂಜಿನಿಯರ್, ಸರಬರಾಜುದಾರರು/ಡೀಲ ಗಳಾಗಿ ಹೊಮ್ಮುತ್ತಿರುವ ದಲಿತರು ತಮ್ಮೆಲ್ಲಾ ಗಳಿಕೆಯನ್ನು ಖಾಸ ವಲಯಕ್ಕೆ ಹಿಂತಿರುಗಿಸುತ್ತಾರೆ.

ಆದರೆ ಇಲ್ಲಿಯವರೆಗೆ ಖಾಸಗಿ ವಲಯ ವಾದಿಸಿದ್ದೇನೆಂದ ದಲಿತ ನೌಕರರು ಬಂದೊಡನೆ ಸ್ಪರ್ಧಾತ್ಮಕತೆ ನಾಶವಾಗಿ ಭಾರ ಕೈಗಾರೀಕರಣದಿಂದ ವಂಚಿತವಾಗುತ್ತದೆಯಾದ್ದರಿಂದ ಅಂತಿಮವಾ ಮೆರಿಟ್ ಸೋಲುತ್ತದೆ. ನೀತಿಯ ಮಟ್ಟಿಗಾದರೂ ಖಾಸಗಿ ವಲ ದಲ್ಲಿ ಬದಲಾವಣೆಯೊಂದು ಕಾಣಿಸಿಕೊಂಡು ಹೊಸ ವ್ಯಕ್ತಿತ್ವವೊಂ ಕಾಣಿಸಿಕೊಂಡಿದೆ.

ಕೈಗಾರಿಕೋದ್ಯಮಿಗಳ ಒಕ್ಕೂಟವಾದ ಸಿಐಐ/ಅಸೋಚವ ದಲಿತ/ಆದಿವಾಸಿಗಳ ಸಕಾರಾತ್ಮಕ ಕಾರ್ಯಕ್ಕಾಗಿ ಒಂದು ಕಾರ್ಯ ಪ ಯನ್ನು ಸ್ಥಾಪಿಸಿತು. ಅದರ ಅಧ್ಯಕ್ಷರಾದವರು ಟಾಟಾ ಸನ್ಸ್ ಚೇರ್ಮ ಆದ ಡಾ.ಜೆ.ಜೆ.ಇರಾನಿ. ಇತ್ತೀಚೆಗೆ ಅವರು ಈ ರೀತಿ ಬರೆದಿದ್ದ (ಇಂಡಿಯನ್ ಎಕ್ಸ್‌ಪ್ರೆಸ್-೨೯-೨೦೬),

"ನಮ್ಮ ಶ್ರಮಶಕ್ತಿಯಲ್ಲಿ ದಲಿತ/ಆದಿವಾಸಿಗಳ ಪ್ರಾತಿನಿಧ್ಯ ಕೈಗಾ ಕೋದ್ಯಮದ ಬೆಳವಣಿಗೆಗೆ ಅಗತ್ಯವಾದುದು"

ಅದೇ ಲೇಖನದಲ್ಲಿ ಅವರು ವ್ಯಕ್ತಪಡಿಸಿದ ಮತ್ತೊಂದು ಸ ತಿಯೆಂದರೆ, "ದಲಿತ/ಆದಿವಾಸಿಗಳಲ್ಲಿ ಹೊಸ ಉದ್ಯಮಶೀಲತೆಯ ಬೆಳೆಸುವುದರಲ್ಲಿ ಖಾಸಗಿ ವಲಯ ಬಹು ಮುಖ್ಯ ಪಾತ್ರವನ್ನು ವ ಸಬಹುದಾಗಿದೆ. ಇದು ದಲಿತ/ಆದಿವಾಸಿಗಳಲ್ಲಿ ಸ್ವತಂತ್ರವಾದ ಇಚ ಶಕ್ತಿಯುಳ್ಳ ಸಶಕ್ತ ಬ್ಯುಸಿನೆಸ್ ವ್ಯಕ್ತಿಗಳನ್ನು ಸೃಷ್ಟಿಸುತ್ತದೆ. ಅಂಥ ಉ ಮಶೀಲ ವ್ಯಕ್ತಿಗಳೊಡನೆ ಕಂಪನಿಗಳು ಪರಿಣಾಮಕಾರಿ ಸಂಪ ಗಳನ್ನು ಕಟ್ಟಿಕೊಂಡು ವಾಣಿಜ್ಯ-ವಹಿವಾಟನ್ನು ಏರ್ಪಡಿಸಿಕೊಳ್ಳಬ ದಾಗಿದೆ.

"ಅಲ್ಲದೆ, ಅಂಥ ವಹಿವಾಟಿನಿಂದ ಉದ್ಯೋಗ ಸೃಷ್ಟಿಯಾ ತ್ತದೆ. ಈ ಸಂದರ್ಭದಲ್ಲಿ "ಸಮಾನ ಉದ್ಯೋಗಸ್ಥ ಅವಕಾಶ" ಎನ್ನು ಅಮೆರಿಕಾದ ಕಾರ್ಯಕ್ರಮವು ಅಮೆರಿಕಾದ ಕೈಗಾರಿಕೆಯನ್ನು ಮತ್ತ ಸ್ಪರ್ಧಾತ್ಮಕತೆಗೆ ಹೊಯ್ಯು ದರಲ್ಲಿ ಬಹು ಮುಖ್ಯವಾ ಪಾತ್ರವನ್ನು ವಹಿದ್ದನ್ನು ನ ಪಿಸಿಕೊಳ್ಳಬೇಕಾ ಗುತ್ತದೆ."

ಇದಲ್ಲದೆ, ಡಾ. ಇರಾ ಹೇಳುವುದೇನೆಂದರೆ, "ಭಾ ತವು ಜಾತಿಯಾಧಾರಿ ಸಮಾಜವನ್ನು ಹೊಂದಿ ನಮ್ಮ ಸಾಮಾಜಿಕ ಸಂಗತಿಗಳು ವಿಶಿಷ್ಟವಾಗಿದ್ದು ಒಳಗೊಳ್ಳುವಿ ವಿಶೇಷ ಸವಾಲುಗಳನ್ನೊಡ್ಡುತ್ತವೆ. ಹೀಗಿರುವಲ್ಲಿ ಭಾರತದ ಜ ಸಂಖ್ಯೆಯ ಚಲನಶೀಲತೆಯನ್ನು ಗಮನಿಸಿದ್ದಲ್ಲಿ ಸಮಾಜ ಯಾವುದೇ ಒಂದು ವರ್ಗವನ್ನು ಮಾರುಕಟ್ಟೆಯ ಆರ್ಥಿಕತೆಯಿಂ ದೂರವಿಡುವುದೆಂದರೆ ಭಾರತೀಯ ಸ್ಪರ್ಧಾತ್ಮಕತೆ ಮತ್ತು ಆರ್ಥಿ ಭವಿಷ್ಯವನ್ನು ಕಡೆಗಣಿಸಿದಂತೆಯೇ ಆಗುತ್ತದೆ."

ದಲಿತ ಡೈರಿ ಏಳು ವರ್ಷಗಳು ಕಾಯಬೇಕಾಯಿತು. ಇನ್ನೊಂದು ೧೨ ತಿಂಗಳು ಕಾದರೆ ಸಿಐಐ/ಅಸೋಚೆಮ್‌ನ ಜುಲೈ ೨೮ರಂದು ಬಿಡುಗಡೆಮಾಡಿದ ಕಾರ್ಯಯೋಜನೆ ಅನುಷ್ಠಾನಗೊಂಡು ಖಾಸಗೀ ವಲಯದಲ್ಲಿ ಉದ್ಯೋಗ ಮತ್ತು ವಹಿವಾಟು ದಲಿತ ಸಮುದಾಯಕ್ಕೆ ತೆರೆದುಕೊಳ್ಳುತ್ತದೆ.

ಯುಗಗಳಿಂದಲೂ ಮೋಚಿ(ಸಮಗಾರ) ಎನ್ನುವ ಪರಿಕಲ್ಪನೆ ಮತ್ತು ಬೂಟುಗಳನ್ನು ಮಾಡುವವರನ್ನು ಕನಿಷ್ಠವೆಂದು ಪರಿಗಣಿಸಲಾಗುತ್ತಿತ್ತು. ಆದರೆ ಹೈದರಾಬಾದಿನಲ್ಲಿರುವ ಒಂದು ದೊಡ್ಡ ಬೂಟಿನ ಅಂಗಡಿಯನ್ನು **ಮೋಚಿ** ಎಂದು ಕರೆಯಲಾಗಿದೆ. ರಸ್ತೆಗಳನ್ನು ಸ್ವಚ್ಛಾಡುವುವಿಕೆ ದಲಿತರ ಕೆಲಸವೆಂದು ಅವರ ಮೇಲೆ ಹೇರಲಾಗಿತ್ತು. ಆದರೀಗ ಲಕ್ನೋದಲ್ಲಿ ಕಸಗುಡಿಸುವ ಕೆಲಸಕ್ಕಾಗಿ ೧೦೦೦ಕ್ಕಿಂತಲೂ ಅಧಿಕ ಮಂದಿ ಬ್ರಾಹ್ಮಣರು ಅರ್ಜಿಹಾಕಿದ್ದಾರೆ. ಈ ಬೆಳವಣಿಗೆಗಳು ಭಾರತ ಬದಲಾಗುತ್ತಿದೆ ಎನ್ನುವುದನ್ನು ತೋರಿಸುತ್ತವೆ.

ಖಾಸಗಿ ವಲಯದಲ್ಲಿ ದಲಿತ/ಆದಿವಾಸಿಗಳಿಗೆ ಮೀಸಲಾತಿಯ ಚರ್ಚೆಯನ್ನು ಯುಪಿಎ ಸರ್ಕಾರ ಹುಟ್ಟುಹಾಕಿದಾಗ ಕೈಗಾರಿಕೋದ್ಯಮವು ತೀಕ್ಷ್ಣವಾಗಿ ಪ್ರತಿಕ್ರಿಯೆ ಸಲ್ಲಿಸಿತ್ತು. ಆಗ ಕೈಗಾರಕೋದ್ಯಮ ಹೇಳಿದ್ದೇನೆಂದರೆ:

– ಮೀಸಲಾತಿ ಎನ್ನುವ ಪರಿಕಲ್ಪನೆ ಮೆರಿಟ್ ಪ್ರಶ್ನೆಯನ್ನು ಪರಿಗಣಿಸದಿದ್ದಲ್ಲಿ ಅದು ಖಾಸಗಿ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ – ಸಿಐಐ ಅಧ್ಯಕ್ಷ, ಮೇ ೩೧, ೨೦೦೬.

– ಅದು ಮೆರಿಟೋಕ್ರಸಿಯನ್ನು ಆಧರಿಸಿದ್ದ ಕೈಗಾರಿಕೋದ್ಯಮದ ಮೇಲೆ ತೀವ್ರವಾದ ಪರಿಣಾಮ ಬೀರಿ ದಕ್ಷತೆಯನ್ನು ಹಾಳುಮಾಡುತ್ತದೆ – ಅಸೋಚೆಮ್‌ನ ಅಧ್ಯಕ್ಷನಾದ ಮಹೇಂದ್ರ ಕೆ ಸಿಂಗ್, ಜೂನ್ ೧೪,೨೦೦೬.

– ಅದು ಉದ್ಯೋಗ ಸೃಷ್ಟಿಸುವ ಕೈಗಾರೀಕರಣದ ವಿರೋಧವಾಗಿರುವುದರಿಂದ ಅದನ್ನು ನಾವು ವಿರೋಧಿಸುತ್ತೇವೆ–ಭಾರತೀಯ ವಾಣಿಜ್ಯ ಒಕ್ಕೂಟದ ಅಧ್ಯಕ್ಷ, ಸೆಪ್ಟೆಂಬರ್ ೪, ೦೬.

–ಇದು ಖಾಸಗಿ ವಲಯದಲ್ಲಿ ಮೆರಿಟೋಕ್ರಸಿಯನ್ನು ಸಂಪೂರ್ಣವಾಗಿ ನಾಶಮಾಡುತ್ತದೆ– ರಾಷ್ಟ್ರೀಯ ವಾಣಿಜ್ಯ ಒಕ್ಕೂಟದ ಅಧ್ಯಕ್ಷ, ಮೇ ೩೧,೦೬.

–೧೦೦೦ ಮಂದಿ ಉದ್ಯೋಗಿಗಳನ್ನು ನಾನು ನೇಮಕ ಮಾಡಿಕೊಂಡೆನಾದರೆ ಶೇ.೫ ರಷ್ಟು ಮೀಸಲಾತಿಯಿಂದ ಅಂದರೆ ೫೦ ಮಂದಿಯನ್ನು ತೆಗೆದುಕೊಳ್ಳುವುದು ನನಗೆ ಖಂಡಿತ ಬೇಕಾಗಿಲ್ಲ– ಆಲ್ಫಾ ಲಾವಲ್ ಇಂಡಿಯಾದ ಅಧ್ಯಕ್ಷ, ಆಗಸ್ಟ್ ೮, ೦೬.

ಮೇ ೨೦೦೪ ಮತ್ತು ಜುಲೈ ೨೦೦೬ರ ನಡುವೆ ಬದಲಾವಣೆಯ ಬಿರುಗಾಳಿ ಬೀಸಿದಂತೆ ಆಗಿದೆ. ಖಾಸಗಿ ವಲಯವು ಒಂದು ಪ್ರತ್ಯೇಕವಾದ ಸಾಮಾಜಿಕ ಜಗತ್ತಿಗೆ [illegible]ಲಿಸಿದೆ. ಭಾರತದ ಎರಡು ಬೃಹತ್ ಸಂಸ್ಥೆಗಳಾದ ಸಿಐಐ ಮತ್ತು ಅಸೋಚಮ್‌ಗಳು ಈ ಏಪ್ರಿಲ್‌ನಲ್ಲಿ ದಲಿತ/ಆದಿವಾಸಿಗಳ ಸಕಾರಾತ್ಮಕ ಕಾರ್ಯಕ್ಕಾಗಿ ಒಂದು ಕಾರ್ಯಪಡೆ [illegible] ಸ್ಥಾಪಿಸಿದವು. [illegible] ಸನ್ಸ್ ನಿರ್ದೇಶಕರಾದ ಡಾ.ಜೆಜೆ [illegible] ಈ ಕಾರ್ಯಪಡೆಯ ಅಧ್ಯಕ್ಷರಾಗಿದ್ದಾರೆ. ತಿಂಗಳುಗಟ್ಟಲೆ ಆಲೋಚನೆ ನಡೆಸಿದ ನಂತರ ಸಿಐಐ ಮತ್ತು ಅಸೋಚಮ್‌ಗಳು ದಲಿತ/ಆದಿವಾಸಿಗಳ ಸಕಾರಾತ್ಮಕ ಕಾರ್ಯಕ್ಕಾಗಿ ಭಾರತೀಯ ಕೈಗಾರಿಕೋದ್ಯಮದ ಮೂಲಕ ಒಂದು ಪ್ರಾಕ್ಟಿಕಲ್ ಆದ ಕಾರ್ಯಸೂಚಿಯನ್ನು ಜುಲೈ ೨೮, ೨೦೦೬ರಂದು ಪ್ರಧಾನಮಂತ್ರಿಗಳಿಗೆ ಸಲ್ಲಿಸಿದವು. ಅದನ್ನು ಪತ್ರಿಕೆಗಳಿಗೂ ಬಿಡುಗಡೆಗೊಳಿಸಿದವು. ಉದ್ಯೋಗ ಮೀಸಲಾತಿಯ ಪ್ರಶ್ನೆಗೆ ಈ ಕಾರ್ಯಪಡೆಯು ಈ ಕೆಳಗಿನ ಕ್ರಮಗಳನ್ನು ಸೂಚಿಸಿದೆ: ಸಿಐಐ ಮತ್ತು ಅಸೋಚಮ್‌ಗಳು ಒಂದು ಮಾರ್ಗಸೂಚಿಯನ್ನು ರೂಪಿಸಲಿದ್ದು, ಅದನ್ನು ಸಿಐಐ ಮತ್ತು ಅಸೋಚಮ್‌ಗಳ ಎಲ್ಲಾ ಸದಸ್ಯರು ಅಕ್ಟೋಬರ್ ೨೦೦೬ರೊಳಗೆ ಒಪ್ಪಿ ಪಾಲಿಸುವುದು.

ಕಸಗುಡಿಸಿದ್ದು ಸಾರ್ಥಕವಾಯ್ತು: ಲಕ್ನೋದಲ್ಲಿ ಕಸಗುಡಿಸುವ ಕೆಲಸಕ್ಕಾಗಿ ೧೦೦೦ಕ್ಕಿಂತಲೂ ಅಧಿಕ ಮಂದಿ ಬ್ರಾಹ್ಮಣರು ಅರ್ಜಿಹಾಕಿದ್ದಾರೆ. ಈ ಬೆಳವಣಿಗೆಗಳು ಭಾರತ ಬದಲಾಗುತ್ತಿದೆ ಎನ್ನುವುದನ್ನು ತೋರಿಸುತ್ತವೆ.

> ದಲಿತ್ ಡೈರಿಯು ಈ ಚರ್ಚೆಯ ಮೂಲ ಆಯಾಮಗಳನ್ನೆ ಮರುರೂಪಿಸಿತು. ಸರ್ಕಾರದಲ್ಲಿನ ದಲಿತ್ ಮೀಸಲಾತಿಯಿಂದಾಗಿ ಪ್ರಯೋಜನವಾಗಿರುವುದು ಖಾಸಗಿ ವಲಯಕ್ಕೇ ಎಂದು ದಲಿತ ಡೈರಿಯು ವಾದಮಾಡಿತು. ದಲಿತ ಡೈರಿ ಅಂದಾಜು ಮಾಡಿದಂತೆ ದಲಿತರು/ಆದಿವಾಸಿಗಳು ಸುಮಾರು ೩೦೦ ಬಿಲಿಯಸ್‌ನಷ್ಟು ಮಾರುಕಟ್ಟೆಯಲ್ಲಿ ಖರ್ಚು ಮಾಡುತ್ತಾರೆ. ಅಂದರೆ ತಿಂಗಳ ಮೂರನೇ ವಾರಕ್ಕಾಗಲ್ಲೇ ಸರ್ಕಾರಿ ನೌಕರಿಯಲ್ಲಿರುವ ದಲಿತ/ಆದಿವಾಸಿ ನೌಕರರು ತಮ್ಮೆಲ್ಲಾ ಸಂಬಳವನ್ನು ಮಾರುಕಟ್ಟೆಯಲ್ಲಿ ವ್ಯಯಿಸಿಬಿಡುತ್ತಾರೆ. ಹಾಗಾಗಿ ಮೀಸಲಾತಿ ಅಂತಿಮವಾಗಿ ಖಾಸಗಿ ವಲಯಕ್ಕೆ ದೊಡ್ಡ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ.

–ಸಿಐಐ ಮತ್ತು ಅಸೋಚಮ್‌ಗಳು ಒಂದು ಪ್ರತ್ಯೇಕ ಕೌನ್ಸಿಲ್‌ಗಳನ್ನು ಸ್ಥಾಪಿಸುವುದರ ಮೂಲಕ ಮೇಲಿನ ಮಾರ್ಗದರ್ಶಿ ಕ್ರಮಗಳನ್ನು ಅನುಷ್ಠಾನಗೊಳಿಸುವುದಕ್ಕೆ ಬೆಂಬಲ ಮತ್ತು ಸಮನ್ವಯವನ್ನು ಕೈಗೊಳ್ಳುತ್ತದೆ.

–ಸಿಐಐ ತನ್ನೆಲ್ಲಾ ಸದಸ್ಯರು ಈ ಪ್ರಾಕ್ಟಿಕಲ್ ಮಾರ್ಗದರ್ಶಿಕ್ರಮಗಳ ಅನುಷ್ಠಾನ ಪರಿಶೀಲನೆಗಾಗಿ ಒಬ್ಬ ಉಸ್ತುವಾರಿ ವ್ಯಕ್ತಿಯನ್ನು ನೇಮಿಸುವುದು.

–ಅಸೋಚಮ್ ತನ್ನೆಲ್ಲಾ ಸದಸ್ಯರು ಈ ಕೌನ್ಸಿಲ್‌ನ ಮೂಲಕ ಆ ಮಾರ್ಗದರ್ಶಿ ಕ್ರಮಗಳನ್ನು ಅನುಸರಿಸಿದ್ದಾರೆಂದು ಖಚಿತ ಪಡಿಸಿಕೊಳ್ಳಲು ಜವಾಬ್ದಾರಿಯನ್ನು ವಹಿಸುವುದು.

–ಸಿಐಐ ಮತ್ತು ಅಸೋಚಮ್‌ಗಳು ಆ ಮಾರ್ಗದರ್ಶಿ ಕಾರ್ಯಕ್ರಮಗಳನ್ನು ಜಾರಿಯಾಗಿಸುವಲ್ಲಿ ಕೈಗಾರಿಕೆಗಳು ಎಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧಿಸಿವೆ ಎಂಬುದರ ಬಗ್ಗೆ ವರದಿ/ಮಾಹಿತಿಯನ್ನು ದಾಖಲಾತಿ ಮಾಡುವುದು.

–ಈ ಮಾರ್ಗದರ್ಶಿ ಕ್ರಮಗಳನ್ನು ಪ್ರಜ್ಞಾಪೂರ್ವಕವಾಗಿ ಅನುಸರಿಸಿಲ್ಲವೆಂದು ಕಂಡುಬಂದಲ್ಲಿ ಸೂಕ್ತ ಕ್ರಮಕ್ಕಾಗಿ ಕೌನ್ಸಿಲ್‌ಗಳಿಗೆ ಸೂಚನೆ ನೀಡುವುದು.

ಯುಪಿಎ ಸರ್ಕಾರ ಮೀಸಲಾತಿಯ ಚರ್ಚೆಯನ್ನು ಹುಟ್ಟುಹಾಕಿದಾಗ ಅದು ಉದ್ಯೋಗಕ್ಕಷ್ಟೇ ಸೀಮಿತವಾಗಿತ್ತು. ಆದರೆ ಈ ಕಾರ್ಯಪಡೆಯ ಕಾರ್ಯಸೂಚಿಯು ಒಂದು ಹೆಜ್ಜೆ ಮುಂದೆ ಸಾಗಿ ದಲಿತರು/ಆದಿವಾಸಿಗಳಿಗೆ ಬ್ಯುಸಿನೆಸ್ ಅವಕಾಶಗಳನ್ನು ಕಲ್ಪಿಸಲು ನಿರ್ಧರಿಸಿದೆ:

–ದಲಿತ/ಆದಿವಾಸಿಗಳ ಉದ್ಯಮಶೀಲತೆಯನ್ನು ಬೆಳೆಸಲು ದೊಡ್ಡ ಕಂಪನಿಗಳು ವರ್ಷಕ್ಕೆ ಒಂದು ಉದ್ಯಮವನ್ನಾದರೂ ಸ್ಥಾಪಿಸಲೇಬೇಕು. ಇದಕ್ಕಾಗಿ ಅಂಥ ೧೦೦ ಉದ್ಯಮಗಳನ್ನು ಮೊದಲನೆ ವರ್ಷದಲ್ಲೇ ಆರಂಭಿಸಿ, ಮುಂದಿನ ವರ್ಷಗಳಲ್ಲಿ ಅದನ್ನು ಮತ್ತೂ ಹೆಚ್ಚಿಸುವುದು. ಇದು ಕಂಪನಿಯ ಗುಣಮಟ್ಟ, ಉತ್ಪಾದನೆ ಹಾಗೂ ವೆಚ್ಚದ ಸ್ಟ್ಯಾಂಡರ್ಡ್‌ನ್ನು ಉಳಿಸಿಕೊಳ್ಳುತ್ತಲೇ ಸರಬರಾಜು ಮತ್ತು ಹಂಚಿಕೆಯ ಸರಣಿಯಲ್ಲಿ ಬ್ಯುಸಿನೆಸ್ ಸಹಭಾಗಿತ್ವವನ್ನು ಸಂಘಟಿಸುವುದು.

–ಗುಣಮಟ್ಟ ಮತ್ತು ವೆಚ್ಚ ಸಮನಾಗಿದ್ದು ದಲಿತ/ಆದಿವಾಸಿ ಪೋಷಕರು, ಸಹಭಾಗಿಗಳು, ಪ್ರೊಪ್ರೈಟರು

ಬದಲಾಗುತ್ತಿರುವ ಕಾಲಮಾನ

ಸಿಐಐ ಪ್ರಸ್ತಾವನೆಯ ಹೆಗ್ಗಳಿಕೆ

ಗಳು, ಹಾಗೂ ಕಾರ್ಮಿಕರೊಡಗೂಡಿದ ಉದ್ಯಮಗಳಿಗೆ ಕಂಪನಿಗಳು ತಮ್ಮ ಆಯ್ಕೆಯನ್ನು ನೀಡುವುದು.

–ದಲಿತ/ಆದಿವಾಸಿಗಳು ಪೋಷಿಸುವ ಮತ್ತು ಒಡೆ ತನ ಹೊಂದಿರುವ ಬ್ಯುಸಿನೆಸ್ ನಿಗಮಗಳು ಮತ್ತು ಉದ್ಯ ಮಗಳ ಡಾಟಾವನ್ನು ಸಿಐಐ ಮತ್ತು ಅಸೋಚಮ್‌ಗಳು ವ್ಯವಸ್ಥಿತವಾಗಿ ದಾಖಲಾತಿ ಇಡುವುದು.

–ದಲಿತ/ಆದಿವಾಸಿಗಳು ಪೋಷಿಸುವ ಮತ್ತು ಒಡೆ ತನ ಹೊಂದಿರುವ ನಿಗಮಗಳು ಮತ್ತು ಉದ್ಯಮಗಳ ನಡುವೆ ಬ್ಯುಸಿನೆಸ್ ಸಹಭಾಗಿತ್ವವನ್ನು ಸೃಷ್ಟಿಸಲು ಸಿಐಐ ಮತ್ತು ಅಸೋಚಮ್‌ಗಳು ಅನುಕೂಲ ಕಲ್ಪಿಸುವುದು.

ಇದಲ್ಲದೆ ದಲಿತ/ಆದಿವಾಸಿಗಳಿಗೆ ತರಬೇತಿ ಮತ್ತು ಫೆಲೋಶಿಪ್‌ಗಳ ಭರವಸೆಯನ್ನು ನೀಡಲಾಗಿದೆ. ಈ ಕಾರ್ಯ ಸೂಚಿಯು "ಮೀಸಲಾತಿ" ಎನ್ನುವೆಡೆ 'ಸಕಾರಾತ್ಮಕ ಕ್ರಿಯೆ' ಎನ್ನುವುದನ್ನು ಬಳಸಲಾಗಿದೆ. ಈ ಕಾರ್ಯಸೂ ಚಿಯು ಒಂದು ನಿರ್ದಿಷ್ಟ 'ಕೋಟಾ'ವನ್ನಾಗಲೀ ಮತ್ತು ಅದನ್ನು ನಿರ್ವಹಿಸಲು ಕಾನೂನನ್ನಾಗಲೀ ಇರುವುದನ್ನು ತಿರಸ್ಕರಿಸುತ್ತದೆ. ಹಾಗಾದರೆ ದಲಿತರು/ಆದಿವಾಸಿಗಳು ಸ್ವಲ್ಪ ಬದಲಾಗಿ ಈ ಖಾಸಗಿ ವಲಯವು ಒದಗಿಸುವ ಈ ಅವ ಕಾಶಗಳನ್ನು ತೆಗೆದುಕೊಳ್ಳಬಾರದೇ?

ಸಮಾಜವನ್ನು ಪ್ರತ್ಯೇಕಿಸುವಿಕೆಯಿಂದ ಹೊರ ತರುವುದೇ ಸ್ವತಂತ್ರ ಭಾರತದ ಬಹು ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಅನುಸರಿಸಿದ ಮುಖ್ಯ ಮಾರ್ಗ ವೆಂದರೆ ಸರ್ಕಾರಿ ಉದ್ಯೋಗಗಳಲ್ಲಿ ದಲಿತ/ ಆದಿವಾಸಿಗಳನ್ನು ಒಳಗೊಳ್ಳು ವುದು. ಆದ್ದರಿಂದಲೇ ಶೇ.೨೨.೫ ರಷ್ಟು ಕೋಟಾವನ್ನು ನಿಗದಿಮಾಡಲಾಯಿತು. ಸರ್ಕಾರಿ ಉದ್ಯೋಗಗಳಲ್ಲಿ ಈ ಮೀಸಲಾತಿ ಇರದಿದ್ದಲ್ಲಿ ಪ್ರಸ್ತುತ ದಲಿತ/ಆದಿವಾಸಿ ಮಧ್ಯ ಮವರ್ಗದ ಗಾತ್ರವು ಅರ್ಧಕ್ಕೆ ಇಳಿಯುತ್ತಿತ್ತು. ಅಂದರೆ ನನ್ನ ಅಂದಾಜಿನ ಪ್ರಕಾರ ಈ ಮೀಸಲಾತಿಯಿಂದ ಸುಮಾರು ೫ ಮಿಲಿಯನ್ ದಲಿತ/ಆದಿವಾಸಿಗಳು ಪ್ರಯೋಜನ ಪಡೆದಿದ್ದಾರೆ.

ಶೇ.೨೨.೫ ರಷ್ಟು ಮೀಸಲಾತಿಯ ಶಿಲ್ಪಿಯೆಂದರೆ ಬಾಬಾ ಸಾಹೇಬ್ ಅಂಬೇಡ್ಕರರೇ ಆಗಿದ್ದಾರೆ. ಅವರು ಮಹಾ ತತ್ತ್ವಜ್ಞಾನಿಯಾಗಿ ಭಾರತೀಯ ಸಮಾಜದ ಮೂಲ ಲಕ್ಷಣವನ್ನು ಅನಾವರಣಗೊಳಿಸಿದರು. ಶಾಸ ನಾತ್ಮಕ ಚೌಕಟ್ಟಿಲ್ಲದೆ ಸಮಾಜ ಮುಂದುವರೆಯಲು ಸಾಧ್ಯ ವಾಗುತ್ತಿರಲಿಲ್ಲ. ಆದ್ದರಿಂದಲೇ ಅವರು ಈ ಮೀಸಲಾತಿ ನೀತಿಯನ್ನು ಜಾರಿಯಾಗಿಸಿದ್ದು. ಅದು ಕಾರ್ಯಪ್ರವೃತ್ತವಾಗಿ ಸಮುದಾಯದೊಳಗೆ ಒಂದು ಅದ್ಭುತವಾದ ಮಧ್ಯಮ ವರ್ಗದ ಉದಯಕ್ಕೆ ಕಾರಣವಾಯಿತು. ಮಹಾತತ್ತ್ವ ಜ್ಞಾನಿಯಾದ ಅಂಬೇಡ್ಕರವರು ಮಾಡಿದ ಮತ್ತೊಂದು ಕಾರ್ಯವೆಂದರೆ ಶಾಸನ ಮತ್ತು ಸಾಮಾಜಿಕ ಪ್ರಜ್ಞೆಯ ನಡು ವಿದ್ದ ಸಂಘರ್ಷವನ್ನು ಅನಾವರಣಗೊಳಿಸಿದ್ದು. ತಮ್ಮ ಒಂದು ಲೇಖನದಲ್ಲಿ – ರಾನಡೆ, ಗಾಂಧಿ ಮತ್ತು ಜಿನ್ನಾ –ಅಂಬೇಡ್ಕರ್ ಹೀಗೆ ಬರೆಯುತ್ತಾರೆ, "ಅನುಭವ ಕಲಿಸಿ ರುವ ಪಾಠವೆಂದರೆ ಕಾನೂನಿಂದ ಹಕ್ಕುಗಳನ್ನು ಸಂರಕ್ಷಿಸ ಲಾಗದು, ಬದಲು ಸಾಮಾಜಿಕ ನೈತಿಕ ಪ್ರಜ್ಞೆಯಿಂದ ಮಾತ್ರ ಅದು ಸಾಧ್ಯವಾಗುತ್ತದೆ. ಯಾವ ಸಾಮಾಜಿಕ ಪ್ರಜ್ಞೆ ಅಂಥ ಹಕ್ಕುಗಳನ್ನು ಮಾನ್ಯಮಾಡಲು ಸಾಧ್ಯವಾಗುತ್ತದೋ ಆಗ ಕಾನೂನು ಅದನ್ನು ಶಾಸನಬದ್ಧಗೊಳಿಸುತ್ತದೆ. ಆಗ ಹಕ್ಕು ಗಳು ಸುರಕ್ಷಿತವಾಗಿರುತ್ತವೆ. ಆದರೆ ಯಾವಾಗ ಈ ಮೂಲಭೂತ ಹಕ್ಕುಗಳನ್ನು ಸಮುದಾಯ ವಿರೋಧಿ ಸುತ್ತದೋ ಆಗ ಯಾವುದೇ ಕಾನೂನು, ಯಾವುದೇ ಪಾರ್ಲಿಮೆಂಟ್, ಯಾವುದೇ ನ್ಯಾಯಾಂಗ ಅವುಗಳಿಗೆ ಗ್ಯಾರಂಟಿಯಾಗಿ ನಿಲ್ಲಲಾಗುವುದಿಲ್ಲ"

ಡಾ॥ ಅಂಬೇಡ್ಕರವರ ಈ ಹೇಳಿಕೆಯು ಇಂದು ಅವಮಾನಿತವಾಗಿದೆ. ಭಾರತ ತನ್ನ ಸುವರ್ಣ ಮಹೋತ್ಸ ವವನ್ನು ಆಚರಿಸುತ್ತಿರುವಾಗ ಎಸ್‌ಸಿ/ಎಸ್‌ಟಿಗಳ ರಾಷ್ಟ್ರೀಯ ಸಮಿತಿ ಪ್ರಕಟಪಡಿಸಿದ ವರದಿಯು ಸಮಾಜ ದಲ್ಲಿ ನಡೆಯುತ್ತಿರುವ ಇಡೀ ದುರಂತ ಕತೆಯನ್ನು ಹೇಳು ತ್ತದೆ–ಶೇ.೨೨.೫ರಷ್ಟಿರುವ ಕೋಟಾದಲ್ಲಿ ಇವತ್ತಿಗೂ ಎ ಗುಂಪಿನ ನೌಕರಿಯಲ್ಲಿ ಕೇವಲ ೧೩.೦೪% ಮಾತ್ರ ತುಂಬಲಾಗಿದೆ. ಬಿ ಗುಂಪಿನಲ್ಲೂ ಇನ್ನೂ ೭.೧೫% ಅಂತ ರವಿದೆ.

> **ಶೇ.೨೨.೫ ರಷ್ಟು ಮೀಸಲಾತಿಯ ಶಿಲ್ಪಿಯೆಂದರೆ ಬಾಬಾ ಸಾಹೇಬ್ ಅಂಬೇಡ್ಕರರೇ ಆಗಿದ್ದಾರೆ. ಅವರು ಮಹಾತತ್ತ್ವಜ್ಞಾನಿಯಾಗಿ ಭಾರತೀಯ ಸಮಾಜದ ಮೂಲ ಲಕ್ಷಣವನ್ನು ಅನಾವರಣಗೊಳಿಸಿದರು. ಶಾಸನಾತ್ಮಕ ಚೌಕಟ್ಟಿಲ್ಲದೆ ಸಮಾಜ ಮುಂದುವರೆಯಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದಲೇ ಅವರು ಈ ಮೀಸಲಾತಿ ನೀತಿಯನ್ನು ಜಾರಿಯಾಗಿ ಸಿದ್ದು. ಅದು ಕಾರ್ಯಪ್ರವೃತ್ತವಾಗಿ ಸಮುದಾಯದೊಳಗೆ ಒಂದು ಅದ್ಭುತವಾದ ಮಧ್ಯಮ ವರ್ಗದ ಉದಯಕ್ಕೆ ಕಾರಣವಾಯಿತು. ಮಹಾತತ್ತ್ವಜ್ಞಾನಿಯಾದ ಅಂಬೇಡ್ಕರವರು ಮಾಡಿದ ಮತ್ತೊಂದು ಕಾರ್ಯವೆಂದರೆ ಶಾಸನ ಮತ್ತು ಸಾಮಾಜಿಕ ಪ್ರಜ್ಞೆಯ ನಡುವಿದ್ದ ಸಂಘರ್ಷವನ್ನು ಅನಾವರಣಗೊಳಿಸಿದ್ದು. ತಮ್ಮ ಒಂದು ಲೇಖನದಲ್ಲಿ–ರಾನಡೆ, ಗಾಂಧಿ ಮತ್ತು ಜಿನ್ನಾ–ಅಂಬೇಡ್ಕರ್ ಹೀಗೆ ಬರೆಯುತ್ತಾರೆ, "ಅನುಭವ ಕಲಿಸಿರುವ ಪಾಠವೆಂದರೆ ಕಾನೂನಿಂದ ಹಕ್ಕುಗಳನ್ನು ಸಂರಕ್ಷಿಸಲಾಗದು, ಬದಲು ಸಾಮಾಜಿಕ ನೈತಿಕ ಪ್ರಜ್ಞೆಯಿಂದ ಮಾತ್ರ ಅದು ಸಾಧ್ಯವಾಗುತ್ತದೆ.**

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಈ ಪರಿಸ್ಥಿತಿ ಮತ್ತೂ ದುರಂತಮಯವಾಗಿದೆ–ಎ ಗುಂಪಿನಲ್ಲಿರುವ ಅಂತರ ಶೇ.೧೧.೮೨. ಹಾಗೆಯೇ ಸಾರ್ವಜನಿಕ ವಲಯದಲ್ಲಿ ಪರಿಸ್ಥಿತಿ ಸುಧಾರಿಸಿಲ್ಲ. ಎ ಗುಂಪಿನಲ್ಲಿರುವ ಅಂತರ ಶೆ.೭.೭೫. ಹೀಗಿರುವಲ್ಲಿ ಸರ್ಕಾರ ನಡೆಸುತ್ತಿರುವ ಪ್ರಾಥ ಮಿಕಶಾಲೆಗಳಲ್ಲಿ ಈ ಎಸ್‌ಸಿ/ಎಸ್‌ಟಿ ಕೋಟಾ ಇನ್ನೂ ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಿಲ್ಲ.

ಈ ವಿದ್ಯಮಾನವನ್ನು ಅರ್ಥೈಸುವುದಾದರೂ ಹೇಗೆ? ಸಂವಿಧಾನದಲ್ಲಿ ಈ ಮೀಸಲಾತಿಯನ್ನು ಸ್ಪಷ್ಟವಾಗಿ ಖಚಿತಪಡಿಸಿಯೂ ಸಹ ಹಾಗೂ ೧೨೧ ಎಸ್‌ಸಿ/ಎಸ್‌ಟಿ ಎಂಪಿಗಳು ಅದರ ಕಾವಲಿಗಿದ್ದರೂ ಈ ಎಸ್‌ಸಿ/ಎಸ್‌ಟಿ ಕೋಟಾ ಅರ್ಧ ಶತಮಾನವಾದರೂ ತುಂಬಿಲ್ಲ! ಅಂದರೆ ದಲಿತ/ಆದಿವಾಸಿಗಳ ಹಕ್ಕುಗಳಿಗಾಗಿ ರಾಜಕೀಯ ಸಹಮ ತವಿರುವುದಾದರೂ ಸಾಮಾಜಿಕವಾಗಿ ಆ ಹಕ್ಕುಗಳನ್ನು ಇನ್ನೂ ಒಪ್ಪಲಾಗಿಲ್ಲ. ಹೀಗೆ ಸಮಾಜದ ನೈತಿಕ ಮತ್ತು ಸಾಮಾಜಿಕ ಪ್ರಜ್ಞೆಯು ಸಂವಿಧಾನಾತ್ಮಕ ಸಮಿತಿ ತಂದ ಶಾಸನಾತ್ಮಕ ಕ್ರಮಗಳನ್ನು ಉಪಾಯವಾಗಿ ಪಲ್ಲಟಗೊಳಿಸ ಲಾಗಿದೆ. ಇದು ಅರ್ಧಶತಮಾನದ ನಮ್ಮ ಅನುಭವ!.

ಖಾಸಗಿ ವಲಯದ ಉದ್ಯೋಗದಲ್ಲಿ ಮೀಸಲಾತಿ ಆಗಬೇಕೆಂಬುದರ ಚರ್ಚೆಯ ಪರವಾಗಿ ಶಾಸನವಾಗ ಬೇಕೆಂಬ ದಲಿತಪರವಾದ ಲಾಬಿ ಇದೆ ನಿಜ. ಕೈಗಾರಿ ಕೋದ್ಯಮ ಸಂಸ್ಥೆಗಳು ಇದನ್ನು ವಿರೋಧಿಸುತ್ತಿವೆ. ಹೀಗಿ ದ್ದರೂ ಅವರು ತಮ್ಮ ಶ್ರಮಶಕ್ತಿಯ ಸಾಮಾಜಿಕ ಸಮ ತೋಲನವನ್ನು ಸರಿದೂಗಿಸಲು ತಮ್ಮದೇ ಆದ ಪ್ರಯತ್ನ ಗಳಲ್ಲಿ ತೊಡಗಿದ್ದಾರೆ. ಅದಕ್ಕಾಗಿ ಅವರು ಒಂದು ಕಾರ್ಯ ಯೋಜನೆಯನ್ನು ಹೊರತರುತ್ತಿದ್ದಾರೆ. ಸಾರ್ವಜನಿಕವಾಗಿ ಅವರು ಸಾಧಿಸುವ ಪ್ರಗತಿಯನ್ನು ಪ್ರತಿ ವರ್ಷವು ಪ್ರಕಟಿ ಸುವ ಭರವಸೆಯನ್ನು ನೀಡಿದ್ದಾರೆ.

ಹಾಗಾದರೆ ಸಿಐಐ ಮತ್ತು ಅಸೋಚಮ್‌ಗಳು ಈ ಅಕ್ಟೋಬರ್‌ನಿಂದಲೇ ಸಕಾರಾತ್ಮಕ ಕಾರ್ಯಯೋಜನೆಯನ್ನು ಜಾರಿಯಾಗಿಸುವುದಾಗಿ ಭರವಸೆ ಇತ್ತಿರುವಾಗ, ದಲಿತ ನಾಯಕತ್ವ ಖಾಸಗಿ ವಲಯದಲ್ಲಿ ನಿಗದಿ ಕೋಟಾಕ್ಕಾಗಿ ಒತ್ತಾಯ ಮಾಡುತ್ತಾ ಅವರನ್ನು ಶತ್ರುಗಳಂತೆ ನೋಡಬೇಕೆ?

ಶಾಸನಾತ್ಮಕವಾಗಿ ಒತ್ತಾಯ ಹೇರಿದಲ್ಲಿ ಖಾಸಗಿ ವಲಯ ಸಾವಿರಾರು ತಂತ್ರಗಳ ಮೂಲಕ ಕಾನೂನನ್ನು ಪಲ್ಲಟಗೊಳಿಸುತ್ತಾರೆ. ರಾಜ್ಯಾಂಗವೇ ತನ್ನ ಶಾಸನಾತ್ಮಕ ಕ್ರಮಗಳನ್ನು ಪೂರ್ಣಗೊಳಿಸದಿರುವಾಗ ಈ ರಾಜ್ಯಾಂಗ ಖಾಸಗಿ ವಲಯದಲ್ಲಿನ ಕಾರ್ಯವನ್ನು ಪೂರ್ಣಗೊಳಿಸ ಲಾದೀತೆ?

ಅಮೆರಿಕಾದಿಂದ ತಂದಿರುವ ಈ ಸಾಕಾರಾತ್ಮ ಕ್ರಿಯೆ ಪರಿಕಲ್ಪನೆಯು ಸಹ ಅಲ್ಲಿ ಕೋಟಾಕ್ಕಾಗಿ ನಡೆದ ತೀವ್ರವಾದ ಚರ್ಚೆಯಿಂದಾಗಿಯೇ ಹೊರಬಂದುದು. ಹೀಗೆ ಅಮೆರಿಕಾದಲ್ಲಿ ಸಕಾರಾತ್ಮಕ ಕ್ರಿಯೆ ಚಾಲು ಆಗಿದು ಸರ್ಕಾರಿ ಅನುಧಾನಿತ ನಿರ್ಮಾಣ ಯೋಜನೆಗಳಲ್ಲಿ ನಿ ದಿತ ಕೋಟಾವನ್ನು ಕಪ್ಪುಜನರಿಗೆ ನೀಡಿದಾಗಲಷ್ಟೆ

ಸಾಮಾಜಿಕವಾಗಿ ಬಿಳಿಯರು ಅದನ್ನು ಒಪ್ಪ

ಕಾರಣ ಆ ಕ್ರಿಯೆ ಬೇಗನೆ ಸೋತಿತು. ಅಂತಿಮವಾಗಿ ಅಮೆರಿಕಾವು ಪ್ರಮುಖ ಗುರಿ ಉದ್ದೇಶಗಳಿಗಷ್ಟೇ ಸೀಮಿತವಾಯಿತು. ಅಂದರೆ ಕಂಪನಿಗಳು ತಾವಾಗಿಯೇ ಅಧಿಕ ಅಧಿಕ ಕಪ್ಪುಜನರನ್ನು ತೆಗೆದುಕೊಳ್ಳುವ ಗುರಿ–ಉದ್ದೇಶಗಳನ್ನು ನಿಗದಿ ಪಡಿಸಿದವು.

ಹೀಗೆ ಪ್ರಮುಖ ಕಂಪನಿಗಳು ತಮ್ಮ ಮ್ಯಾನೇಜರ್‌ಗಳ ಭತ್ಯಗಳನ್ನು ಈ ಸಕಾರಾತ್ಮಕ ಕ್ರಿಯೆಗೆ ತಳಕುಹಾಕಿ ಅದು ಕ್ರಿಯಾಶೀಲವಾಗುವಂತೆ ಮಾಡಿದವು.

ಹೀಗಿರುವಾಗ ದಲಿತ ನಾಯಕತ್ವ ಸಿಐಐ ಮತ್ತು ಅಸೋಚಮ್‌ಗಳೊಡನೆ ಕೈ ಜೋಡಿಸಿ, ಅದರ ಪ್ರಸ್ತಾವನೆಯನ್ನು ಸ್ವಾಗತಿಸಿ, ಅವರು ತಮ್ಮ ಗುರಿ–ಉದ್ದೇಶಗಳನ್ನು ಪೂರೈಸುವಂತೆ ಮಾಡಬಾರದೇಕೆ?

ಬ್ರಿಟಿಷರೊಂದಿಗೆ ಭೂ ಕಂದಾಯಕ್ಕಾಗಿ ಚೌಕಾಸಿ ಮಾಡಿ, ಖುಷಿಯಿಂದ ಬದುಕಿ, ತಮ್ಮ ಮಕ್ಕಳನ್ನು ಇಂಗ್ಲೆಂಡಿನಲ್ಲಿ ಓದಲು ಕಳುಹಿಸಿದ ದಲಿತ ರಾಜದರ್ಬಾರಿನವರು, ಜಮೀನ್ದಾರರು ಮತ್ತು ತಾಲ್ಲೂಕುದಾರರು ಇದ್ದಾರೆಯೇ? ಬ್ರಿಟಿಷ್ ಅಧಿಕಾರಿಗಳಿಗೆ ವರದಿಯೊಪ್ಪಿಸುತ್ತಿದ್ದ ಹಾಗೂ ಅವರ ಮಕ್ಕಳಿಗೆ ಸೌಧಗಳನ್ನು ನಿರ್ಮಿಸಿಕೊಡುತ್ತಿದ್ದ ದಲಿತ/ಆದಿವಾಸಿ ಸಿವಿಲ್ ಸರ್ವಿಸ್ ಅಧಿಕಾರಿಗಳು, ನ್ಯಾಯದೀಶರು ಮತ್ತು ಕೊತ್ವಾಲರು ಇದ್ದಾರೆಯೇ? ಬಿಟಿಷ್ ಸೈನ್ಯಕ್ಕಾಗಿ ಕುದುರೆಗಳನ್ನು ಸಾಕುವುದು, ಬಟ್ಟೆಗಿರಣಿಗಳನ್ನು ನಡೆಸುವುದು ಹಾಗೂ ಉಪ್ಪನ್ನು ಮಾರುವುದನ್ನು ದಲಿತರು ಮಾಡುತ್ತಿದ್ದರೇ?

ದಲಿತ ಬ್ಯುಸಿನೆಸ್ ವ್ಯಕ್ತಿಗಳಿದ್ದಾರೆಯೇ? ಸಾರ್ವಜನಿಕವಾಗಿ ವಹಿವಾಟು ನಡೆಸುತ್ತಿದ್ದ ದಲಿತ/ಆದಿವಾಸಿಗಳ ಒಡೆತನದಲ್ಲಿದ್ದ ಕಂಪನಿಗಳು ಇದ್ದಾವೆಯೇ? ಸನ್ಸೆಕ್ಸ್ ಏರಿದಾಗ ಪ್ರಧಾನ ಮಂತ್ರಿಗಳನ್ನು ಅಭಿನಂದಿಸಲು ಕಾರ್ಪೋರೇಟ್ ದಲಿತರು ಇದ್ದಾರೆಯೇ? ಉತ್ತರವು ನಕಾರಾತ್ಮಕವಾಗಿದ್ದಲ್ಲಿ ದಲಿತ/ಆದಿವಾಸಿ ಕೆನೆಪದರಾದರೂ ಎಲ್ಲಿದೆ?

ಬ್ರಿಟಿಷರೊಂದಿಗೆ ಭೂ ಕಂದಾಯಕ್ಕಾಗಿ ಚೌಕಾಸಿ ಮಾಡಿ, ಖುಷಿಯಿಂದ ಬದುಕಿ, ತಮ್ಮ ಮಕ್ಕಳನ್ನು ಇಂಗ್ಲೆಂಡಿನಲ್ಲಿ ಓದಲು ಕಳುಹಿಸಿದ ದಲಿತ ರಾಜದರ್ಬಾರಿ ನವರು, ಜಮೀನ್ದಾರರು ಮತ್ತು ತಾಲ್ಲೂಕುದಾರರು ಇದ್ದಾರೆಯೇ? ಬ್ರಿಟಿಷ್ ಅಧಿಕಾರಿಗಳಿಗೆ ವರದಿಯೊಪ್ಪಿಸುತ್ತಿದ್ದ ಹಾಗೂ ಅವರ ಮಕ್ಕಳಿಗೆ ಸೌಧಗಳನ್ನು ನಿರ್ಮಿಸಿಕೊಡುತ್ತಿದ್ದ ದಲಿತ/ಆದಿವಾಸಿ ಸಿವಿಲ್ ಸರ್ವಿಸ್ ಅಧಿಕಾರಿ ಗಳು, ನ್ಯಾಯದೀಶರು ಮತ್ತು ಕೊತ್ವಾಲರು ಇದ್ದಾರೆಯೇ? ಬಿಟಿಷ್ ಸೈನ್ಯಕ್ಕಾಗಿ ಕುದುರೆಗಳನ್ನು ಸಾಕುವುದು, ಬಟ್ಟೆಗಿ ರಣಿಗಳನ್ನು ನಡೆಸುವುದು ಹಾಗೂ ಉಪ್ಪನ್ನು ಮಾರುವುದನ್ನು ದಲಿತರು ಮಾಡುತ್ತಿದ್ದರೇ? ದಲಿತ ಬ್ಯುಸಿನೆಸ್ ವ್ಯಕ್ತಿಗಳಿದ್ದಾರೆಯೇ? ಸಾರ್ವಜನಿಕವಾಗಿ ವಹಿವಾಟು ನಡೆಸುತ್ತಿದ್ದ ದಲಿತ/ಆದಿವಾಸಿಗಳ ಒಡೆ ತನದಲ್ಲಿದ್ದ ಕಂಪನಿಗಳು ಇದ್ದಾವೆಯೇ? ಸನ್ಸೆಕ್ಸ್ ಏರಿಕೆ ಯಾದಾಗ ಪ್ರಧಾನ ಮಂತ್ರಿಗಳನ್ನು ಅಭಿನಂದಿಸಲು ಕಾರ್ಪೋರೇಟ್ ದಲಿತರು ಇದ್ದಾರೆಯೇ? ಉತ್ತರವು ನಕಾರಾತ್ಮಕವಾಗಿದ್ದಲ್ಲಿ ದಲಿತ/ಆದಿವಾಸಿ ಕೆನೆಪದರಾದರೂ ಎಲ್ಲಿದೆ?

ಕೆನೆಪದರ ಎಲ್ಲಿದೆ?

ಹೀಗಿದ್ದರೂ ದಲಿತ/ಆದಿವಾಸಿಗಳಿಗಾಗಿ ಸಕಾರಾತ್ಮ ...ಾರ್ಯ ಯೋಜನೆಯನ್ನು ಜಾರಿಯಾಗಿಸಲು ರಚಿತವಾಗಿ ...ುವ ಸಿಐಐ ಮತ್ತು ಅಸೋಚಮ್‌ನ ಕಾರ್ಯ ಪಡೆಯು ...ಲಿತ ಸಮುದಾಯವನ್ನು ಊಹಾತ್ಮಕವಾಗಿ ಕಲ್ಪಿಸಿ ...ೊಂಡು, ಹೆದರಿಸುತ್ತಿದೆ, "ಈ ಪ್ರಸ್ತಾವಿತ ಕಾರ್ಯಕ್ರಮವು ...ರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿನ ಕೆನೆಪದರೆಂದು ...ರೆಯಲಾಗಿರುವವರಿಗೆ ಅನ್ವಯಿಸುವುದಿಲ್ಲ."

ಸಿಐಐ ಮತ್ತು ಅಸೋಚಮ್‌ನ ಕಾರ್ಯಯೋಜನೆ ...ಯನ್ನು ಒಂದು ಚಾರಿತ್ರಿಕ ತಿರುವಿನ ಸರಿಯಾದ ದಿಕ್ಕಿನತ್ತ ...ಾಂಡೊಯ್ಯುವಂಥದ್ದು ಎಂದು ನಾವು ಹೇಳುತ್ತಿರುವಾಗ ... ಒಂದು ಸಾಲು ಒಂದು ಬ್ಯಾರೆಲ್ ಹಾಲಿಗೆ ಹುಳಿ ...ಂಡಿದಂತಾಗಿದೆ.

ಹಾಗೇನಾದರೂ ದಲಿತ/ಆದಿವಾಸಿಗಳಲ್ಲಿ ಕೆನೆಪದರು ...ುವುದಾದರೆ ಅದು ಸರ್ಕಾರ ಸೇವೆಯಲ್ಲಿರುವ ಕ್ಲಾಸ್ ... ಉದ್ಯೋಗಸ್ಥರಷ್ಟೆ. ಆದರೆ ಅದು ಕೆನೆಪದರು ಎಂದಾಗು...ದೇ? ಈ ಕೆನೆಪದರಾಗಬೇಕಾದರೆ ಅಧಿಕ ಕೆನೆ ಎನ್ನು...ದು ಹಾಲಿನ ಮೇಲೆ ತೇಲುತ್ತಿರಬೇಕಷ್ಟೆ. ಅಂದರೆ ಆ ಕೆನೆ ಎನ್ನುವುದು ಎಷ್ಟು ದೊಡ್ಡದಾಗಿದೆ? ಎಸ್‌ಸಿ/ಎಸ್‌ಟಿಯ ರಾಷ್ಟ್ರೀಯ ಆಯೋಗವು(೧೯೯೭-೯೮) ವರದಿ ಮಾಡಿರುವಂತೆ ದಲಿತ/ಆದಿವಾಸಿಗಳಲ್ಲಿರುವ ಎ ಗುಂಪಿನಲ್ಲಿರುವ ಒಟ್ಟು ಉದ್ಯೋಗಸ್ಥರು ೬೭,೦೭೯. ಈ ಸಂಖ್ಯೆ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿರುವವರನ್ನು ಒಳಗೊಂಡಿದೆ. ದಲಿತ/ಆದಿವಾಸಿಗಳ ಒಟ್ಟು ಜನಸಂಖ್ಯೆ ೨೫೦ ಮಿಲಿಯನ್‌ಗಿಂತ ಹೆಚ್ಚಾಗಿದ್ದು ಅವರಲ್ಲಿ ೬೭.೦೭೯ ಮಂದಿ ಎ ಗುಂಪು ಸೇವೆಯಲ್ಲಿದ್ದಾರೆ. ಈ ಸಂಖ್ಯೆಯು ಕೆನೆಪದರಾಗಲು ಸಾಕಾಗಿದೆಯಾ? ಅಥವಾ ಅದು ಆ ಬೃಹತ್ ಜನಸಾಗರದಲ್ಲಿ ತೇಲುವುದೇ?

ದಲಿತ/ಆದಿವಾಸಿಗಳಲ್ಲಿರುವ ಮತ್ತೊಂದು ಕೆನೆಪದರೆಂದು ಗುರುತಿಸುವುದಾದರೆ ಸಮುದಾಯದಲ್ಲಿ ಇರುವ ಎಂಪಿಗಳು ಮತ್ತು ಎಂಎಲ್‌ಎಗಳು. ಅವರಲ್ಲಿ ಕೆಲವರು ನಿಜವಾಗಿಯೂ ತಮ್ಮ ಅದೃಷ್ಟ ವೃದ್ಧಿಸಿಕೊಂಡವರಾಗಿದ್ದಾರೆ ಹೌದು. ಆದರೆ ಆ ಸಂಖ್ಯೆ ಎಷ್ಟು ದೊಡ್ಡದಿದೆ – ೧೨೧ ಮಂದಿ ಎಂಪಿಗಳು ಮತ್ತು ಕೆಲವೇ ನೂರು ಎಂಎಲ್‌ಎಗಳು. ಇವರೆಲ್ಲಾ ಕೆನೆಪದರಾಗಲು ಸಾಧ್ಯವೇ? ಅನೇಕ ಸಮಾಜಗಳಲ್ಲಿ ಈ ರಾಜಕಾರಣಿಗಳನ್ನು ಸಮಾಜದ ಧೂಳಿಗೆ ಕಾಣುತ್ತಾರೆ. ಇದು ನಿಜವಾದರೆ ಇನ್ನು ದಲಿತ/ಆದಿವಾಸಿ ರಾಜಕಾರಣಿಗಳನ್ನು ಕೆನೆಪದರೆಂದು ಕಾಣಲು ಸಾಧ್ಯವೇ?

ಸಿಐಐ ಮತ್ತು ಅಸೋಚಮ್ ವರದಿಯಲ್ಲೊಂದು ದ್ವಂದ್ವವಿದೆ. ಈ ಯೋಜನೆಯ ಪ್ರಕಾರ ದಲಿತ/ಆದಿವಾಸಿಗಳಲ್ಲಿ ಎಕ್ಸಿಕ್ಯುಟಿವ್ ಸ್ಥಾನಗಳನ್ನು ನೇಮಕಾತಿ/ಮುಂಬಡ್ತಿಯ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿದೆ."

ಈಗ ಉದ್ಭವಿಸುವ ಪ್ರಶ್ನೆಯೆಂದರೆ–ದಲಿತ/ಆದಿವಾಸಿ ಎಕ್ಸಿಕ್ಯುಟಿವ್ ಸ್ಥಾನಗಳನ್ನು ಸಿಐಐ ಮತ್ತು ಅಸೋಚಮ್‌ಗಳು ಹೊರ ಗುತ್ತಿಗೆ ನೀಡುತ್ತಾರೆಯೇ? ಒಬ್ಬ ಅಭ್ಯರ್ಥಿ ಎಕ್ಸಿಕ್ಯುಟಿವ್ ಆಗಬೇಕೆಂದರೆ ಆ ವ್ಯಕ್ತಿ ಇಂಜಿನಿಯರಿಂಗ್ ಅಥವಾ ಮ್ಯಾನೇಜ್‌ಮೆಂಟ್ ಪದವಿಯನ್ನು ಪಡೆದಿದ್ದು, ಇಂಗ್ಲಿಷ್‌ನ್ನು ಸುಲಲಿತವಾಗಿ ಮಾತನಾಡಬೇಕಾಗುತ್ತದೆ. ಹಾಗಾದರೆ ಈ ಅಭ್ಯರ್ಥಿಗಳು ಮಧ್ಯಮ ವರ್ಗಕ್ಕೆ ಸೇರಿದವರಾಗಿ ಆಧುನಿಕ ಶಿಕ್ಷಣವನ್ನು ಪಡೆದವರಾಗಿರಬೇಕಲ್ಲವೇ?

ಸಿಐಐ ಮತ್ತು ಅಸೋಚಮ್‌ಗಳ ವರದಿ ದಲಿತ/ಆದಿವಾಸಿ ಸಮುದಾಯಗಳನ್ನು ತಪ್ಪಾಗಿ ಅರ್ಥಮಾಡಿದೆ. ಈಗಾಗಲೇ ಜ್ಞಾನೋದಯಗೊಂಡ ದಲಿತರು ತಮ್ಮೊಳಗೇ ದಲಿತ ಕೆನೆಪದರು ವಿಕಾಸಗೊಳ್ಳಬೇಕೆಂದು ಬಯಸುತ್ತಿದ್ದಾರೆ. ಆದ್ದರಿಂದಲೇ ದಲಿತ ಬಂಡವಾಳಶಾಹಿಯೆನ್ನುವ ಘೋಷಣೆ ಉದಯಿಸಿದ್ದು. ಇಂಥ ಕೆನೆಪದರು ದಲಿತ/ಆದಿವಾಸಿ ಸಮುದಾಯದಲ್ಲಿಲ್ಲದ ಕಾರಣ ಹೊರಗಿನ ಸಮಾಜದೊಡನೆ ವ್ಯವಹರಿಸಲಾಗುತ್ತಿಲ್ಲ. ಯಾವುದೇ ಸಮಾಜದಲ್ಲಿ ಈ ಕೆನೆಪದರು ಎನ್ನುವುದು ಬಹು ಮುಖ್ಯ ಮಧ್ಯವರ್ತಿಯ ಪಾತ್ರವನ್ನು ವಹಿಸುತ್ತದೆ. ಇಂಥ ವರ್ಗ ಇನ್ನು ಉದಯಿಸಿಲ್ಲವಾದ್ದರಿಂದಲೇ ಸಮಸ್ಯೆಗಳು ಅನೇಕವಾಗಿರುವುದು.

ಒಬ್ಬ ಆದಿವಾಸಿ/ದಲಿತ ತನ್ನ ಹುಟ್ಟು ಭಾಷೆಯಲ್ಲಿ ಮಾತನಾಡಿದಾಗಲೇ ಒಬ್ಬ ನಿಜವಾದ ಆದಿವಾಸಿ/ದಲಿತ ಎಂದು ಪರಿಗಣಿತವಾಗುವುದು. ಆದರೆ ಇದೇ ದಲಿತ/ಆದಿವಾಸಿ ಭಿನ್ನವಾದ ಉಚ್ಚಾರದಲ್ಲಿ ಮಾತನಾಡಿದಾಗ–"ಆ ವ್ಯಕ್ತಿ ಏನೋ ಹರಟುತ್ತಾನೆ.. ದಲಿತನಂತೆ ದಲಿತ" ಎಂದು ಅಪಹಾಸ್ಯಕ್ಕೂ ಒಳಗಾಗುತ್ತಾನೆ.

ಒಂದು ಸಾಮಾನ್ಯ ಸಂಗತಿಯೆಂದರೆ ಭಾರತೀಯ ಸಮಾಜದ ವಿವೇಕ ಹೇಗಿರುತ್ತದೆಯೆಂದರೆ ದಲಿತ/ಆದಿವಾಸಿಗಳು ತಕ್ಷಣವೇ ಗುರುತು ಸಿಗುವಂತಿರಬೇಕು ಎನ್ನುವುದು.

ಇದು ನಿಜವಾದ ಸಮಸ್ಯೆಯಾಗಿದೆ. ಈ ಸಮಸ್ಯೆ ಭಾರತೀಯ ಜಾತಿ ಪದ್ಧತಿಗೆ ಸೇರಿದ್ದಾಗಿದೆ. ಅಂದರೆ ಜಾತಿ ಸಮಾಜ ಆಧುನಿಕ ದಲಿತನನ್ನು ಮೊದಲು ಇಷ್ಟಪಡುವುದಿಲ್ಲ. ಹೀಗಿರುವಲ್ಲಿ ಸಿಐಐ ಮತ್ತು ಅಸೋಚಮ್‌ಗಳಂಥ ಕೈಗಾರಿಕೋದ್ಯಮವು ಬದಲಾವಣೆ ಹೊಂದುತ್ತಿದ್ದು, ಅವು ಯಾಕೆ ಈ ಯುಗಾಂತರಗಳ ಭಾರತೀಯ ಜಾತಿ ವಿವೇಕಕ್ಕೆ ಬಲಿಯಾಗಬೇಕು?

ಅಮೆರಿಕಾದ ಬಿಳಿ ಬೂರ್ಜ್ವಾಗಳು ಕಪ್ಪು ಬೂರ್ಜ್ವಾಗಳನ್ನು ರೂಪಿಸಿದಂತೆ ಸಿಐಐ ಮತ್ತು ಅಸೋಚಮ್‌ಗಳು ದಲಿತ/ಆದಿವಾಸ ಬೂರ್ಜ್ವಾಗಳನ್ನು ರೂಪಿಸುವತ್ತ ಯೋಚಿಸಬೇಕಾಗಿದೆ. □

ಬುದ್ಧಾಯಣ

೧೪

'ನಾನು ಕೊಲ್ಲಲಾರೆ ಎಂದನಾ ದೊರೆ!'

'ಎಲ್ಲೈ ಬ್ರಹ್ಮದತ್ತನೇ ಕೇಳು ನಿನಗೆ ಲಭಿಸಿರುವ ಅಪಾರ ಕೀರ್ತಿ ಮತ್ತು ಯಶಸ್ಸೆ ನನಗೆ ಮುಳುವಾಗಿರುವುದು. ನಿನ್ನ ಜನಪ್ರಿಯತೆ ಹೀಗೆ ವೃದ್ಧಿಸುತ್ತಿದ್ದರೆ. ಇಂದಲ್ಲ ನಾಳೆಯಾದರೂ ನೀನು ನನಗಿಂತ ಪ್ರಬಲವಾಗಿ ಬೆಳೆಯಬಲ್ಲೆ. ಆಗ ನನ್ನ ಮೇಲೆ ದಂಡೆತ್ತಿ ಬಂದು ನನ್ನ ಪದವಿಗೆ ಸಂಚುಕಾರ ತರಬಲ್ಲೆ ಅದನ್ನರಿತ ನಾನು ನಿನಗೆ ಈ ಸತ್ವ ಪರೀಕ್ಷೆಯನ್ನು ನೀಡಿರುವೆ. ನಿನ್ನ ಮಿತ್ರನ ಮೇಲೆ ನೀನು ಬಾಣ ಪ್ರಯೋಗಿಸಿದರೆ ನೀನು ಮಿತ್ರದ್ರೋಹಿಯಾಗುವೆ ಆ ಮೂಲಕ ನಿನ್ನ ಜನಪ್ರಿಯತೆ ಕುಂದುತ್ತದೆ.

ಸಿ. ಎಚ್. ರಾಜಶೇಖರ್

ಬಹಳ ಹಿಂದೆ ರಾಜಗೃಹದ ಆ ರಾಜನ ಬದುಕಿನಲ್ಲಿ ಒಂದು ದಾರುಣ ಪ್ರಸಂಗ ಹೀಗೆ ಎದುರಾಯಿತು. ನಾಲ್ಕು ದಿಕ್ಕುಗಳಿಗೂ ಏಕೈಕ ಚಕ್ರವರ್ತಿಯಾದ ದೇವೇಂದ್ರನೆಂಬ ಬಿರುದಾಂಕಿತ ಶುಕ್ರ ಚಕ್ರವರ್ತಿಯು ತನ್ನ ಸಾಮಂತ ರಾಜನನ್ನು ಉದ್ದೇಶಿಸಿ.

'ಎಲ್ಲೈ ಬ್ರಹ್ಮದತ್ತನೇ ನಿನ್ನ ಧನುಸ್ಸನ್ನು ಕೈಗೆತ್ತಿಕೋ ನಿನ್ನ ಗುರಿಯು ಆ ಸರಭನೆಂಬ ಜಿಂಕೆಯತ್ತ ಇರಲಿ. ಒಂದೇ ಬಾಣಕ್ಕೆ ಅದು ಛಿದ್ರಗೊಂಡು ನೆಲಕ್ಕೆ ಉರುಳಲಿ....!' ಎನ್ನಲು ಬ್ರಹ್ಮದತ್ತನು ಎತ್ತಿದ ತನ್ನ ಧನುಸ್ಸನ್ನು ಕೆಳಗಿಳಿಸುತ್ತಾ:

'ಎಲ್ಲೈ ಶುಕ್ರನೆಂಬ ಚಕ್ರವರ್ತಿಯೇ, ನನ್ನನ್ನು ಕ್ಷಮಿಸು....!'

'ಏಕೆ...?

'ಆ ಜಿಂಕೆಯು ನನ್ನ ಪರಮ ಮಿತ್ರ!'

'ಅದು ಹೇಗೆ...?!'

ಅದು ನನ್ನ ಗರ್ವವನ್ನು ಭಂಗ ಮಾಡಿದ ಮಹಾಜ್ಞಾನಿ. ಆಪತ್ತಿನಲ್ಲಿದ್ದಾಗ ನನಗೆ ಪ್ರಾಣಭಿಕ್ಷೆ ನೀಡಿದ ಕರುಣಾಮೂರ್ತಿ. ನನಗೆ ಪಂಚಶೀಲ ಬೋಧಿಸಿದ ಮಹಾಗುರು! ಆದ್ದರಿಂದ ನಾನು ಅದನ್ನು ಕೊಲ್ಲಲಾರೆ!'

'ಅದು ಹೇಗೆ..?!

'ನನಗೆ ಬೇಟೆಯ ಹುಚ್ಚು ಅತಿಯಾಗಿತ್ತು ಸಾಲದಕ್ಕೆ ರಾಜನೆಂಬ ಗರ್ವಬೇರೆ ಒಮ್ಮೆ ಬೇಟೆಗಾಗಿ ಕಾಡಿಗೆ ನನ್ನ ಸೇನೆಯೊಂದಿಗೆ ಹೋಗಿದ್ದೆ. ಆಗ ನಾನು ಹೀಗೆ ಆಜ್ಞೆ ಮಾಡಿದೆ, ಯಾರ ಬಳಿಯಿಂದ ಬೇಟೆಯು ತಪ್ಪಿ ಮುಂದೆ ಸಾಗುತ್ತದೋ ಅವರಿಗೆ ಶಿಕ್ಷೆಯು ಕಟ್ಟಿಟ್ಟಬುತ್ತಿ ಎಂದು! ಆಗ ಅವರೆಲ್ಲ ಒಂದಾಗಿ ನನಗೆ ಬುದ್ಧಿ ಕಲಿಸಲು ತೀರ್ಮಾನ ಮಾಡಿಕೊಂಡರು. ಅವರೆಲ್ಲ ಒಗ್ಗಟ್ಟಾಗಿ ನಿಂತು ಬೇಟೆಯು ನನ್ನ ಬಳಿಯಿಂದ ತಪ್ಪಿಸಿಕೊಂಡು ಹೋಗುವಂತೆ ಮಾಡಿದರು ಹಾಗೆ ತಪ್ಪಿಸಿಕೊಂಡ ಬೇಟೆಯೇ ಈ ಜಿಂಕೆ! ಆಗ ನನಗೆ ನಾನೇ ಶಿಕ್ಷೆಯನ್ನು ಪಡೆದುಕೊಳ್ಳುವುದು ಅವಮಾನವೆಂದು ಬಗೆದು ನನ್ನ ಕತ್ತಿಯನ್ನು ಕೈಗೆತ್ತಿಕೊಂಡೇ ಈ ಜಿಂಕೆಯನ್ನು ಹಿಂಬಾಲಿಸಿದೆ. ಅದು ಮುಂಚಿನಂತೆ ಚಿಮ್ಮಿ ಚಿಮ್ಮಿ ಹಾರುತ್ತಾ ಓಡುತ್ತಿತ್ತು. ಸೋತರೆ ಮತ್ತೂ ಅವಮಾನವಾಗುತ್ತದೆಂದು ಬಗೆದು ಅದರ ಹಿಂದೆ ಓಡಿಯೇ ಓಡುತ್ತಿದ್ದೆ. ಆಗ ನಾನೊಂದು ಆಳವಾದ ಕಂದಕಕ್ಕೆ ಬಿದ್ದೆ. ನನ್ನ ಕಾಲಿನ ಸಪ್ಪಳ ಕೇಳದಿದ್ದಾಗ ಈ ಜಿಂಕೆ ನಿಂತು ಹಿಂದೆ ನೋಡಿತು. ನನ್ನ ಸುಳಿವಿರಲಿಲ್ಲ. ನನ್ನ ನರಳಾಟ ಕಂದಕದಿಂದ ಕೇಳಿಬಂದಿತು. ಆ ಕಂದಕದ ಬಳಿ ನಿಂತು ನನ್ನನ್ನು ನೋಡಿದ ಅದು ನನ್ನ ಶತ್ರುತ್ವವನ್ನು ಮರೆತು ಆ ಕಂದಕದಿಂದ ಮೇಲೆತ್ತಿತ್ತು ತನ್ನ ಬೆನ್ನಿನ ಮೇಲೆ ನನ್ನನ್ನು ಕೂರಿಸಿಕೊಂಡು ನನ್ನ ಸೈನ್ಯವು ಬೀಡು ಬಿಟ್ಟ ಶಿಬಿರದ ತನಕ ಕರೆತಂದಿತು. ಅದರ ಸ್ನೇಹ ಮತ್ತು ಕರುಣೆಗೆ ಕೃತಜ್ಞನಾದ ನಾನು ಅದರೊಂದಿಗೆ ಸ್ನೇಹ ಬೆಳೆಸಿದೆ. ಅದನ್ನು ಅರಮನೆಗೆ ಕರೆತಂದು ಸನ್ಮಾನಿಸಿದೆ. ಆ ಸಂದರ್ಭದಲ್ಲಿ ಅದು ನನಗೆ 'ಪಂಚಶೀಲವನ್ನು ಮತ್ತು ಮೈತ್ರಿಯ' ಅಗತ್ಯವನ್ನು ಬೋಧಿಸಿತು. ಅದರ ಅರ್ಥವನ್ನು ಸರಿಯಾಗಿ ಅರಿತ ನಾನು ಅದನ್ನು ನನ್ನ ಬದುಕಿನಲ್ಲಿ ಆಚರಣೆಗೆ ತಂದೆ. ನನ್ನಿಂದ ಪ್ರಭಾವಿತರಾದ ನನ್ನ ಪ್ರಜೆಗಳು ಅದನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರು. ಅದರಿಂದಾಗಿ ನನ್ನ ರಾಜ್ಯದಲ್ಲಿ ನೆಮ್ಮದಿ ಶಾಂತಿ, ಸಂವೃದ್ಧಿ ನೆಲೆ ನಿಂತಿತು ಇದರಿಂದ ನನಗೆ ಅಪಾರ ಕೀರ್ತಿ ಮತ್ತು ಯಶಸ್ಸು ದೊರೆಯಿತು. ಆಗಿರುವಲ್ಲಿ ನನ್ನ ಶ್ರೇಯಸ್ಸಿಗೆ ಕಾರಣಕರ್ತನಾದ ನನ್ನ ಪರಮ ಮಿತ್ರನನ್ನು ನಾನು ಕೊಲ್ಲಲಾರೆ!'

'ಎಲ್ಲೈ ಬ್ರಹ್ಮದತ್ತನೇ ಕೇಳು ನಿನಗೆ ಲಭಿಸಿರುವ ಅಪಾರ ಕೀರ್ತಿ ಮತ್ತು ಯಶಸ್ಸೆ ನನಗೆ ಮುಳುವಾಗಿರುವುದು. ನಿನ್ನ ಜನಪ್ರಿಯತೆ ಹೀಗೆ ವೃದ್ಧಿಸುತ್ತಿದ್ದರೆ. ಇಂದಲ್ಲ ನಾಳೆಯಾದರೂ ನೀನು ನನಗಿಂತ ಪ್ರಬಲವಾಗಿ ಬೆಳೆಯಬಲ್ಲೆ. ಆಗ ನನ್ನ ಮೇಲೆ ದಂಡೆತ್ತಿ ಬಂದು ನನ್ನ ಪದವಿಗೆ ಸಂಚುಕಾರ ತರಬಲ್ಲೆ ಅದನ್ನರಿತ ನಾನು ನಿನಗೆ ಈ ಸತ್ವ ಪರೀಕ್ಷೆಯನ್ನು ನೀಡಿರುವೆ. ನಿನ್ನ ಮಿತ್ರನ ಮೇಲೆ ನೀನು ಬಾಣ ಪ್ರಯೋಗಿಸಿದರೆ ನೀನು ಮಿತ್ರದ್ರೋಹಿಯಾಗುವೆ ಆ ಮೂಲಕ ನಿನ್ನ ಜನಪ್ರಿಯತೆ ಕುಂದುತ್ತದೆ. ನಿನ್ನ ಮೈತ್ರಿ ಮತ್ತು ಪಂಚಶೀಲವು ನಿನ್ನಿಂದ ಮಣ್ಣು ಮುಕ್ಕಿದಾಗ ನಿನ್ನ ರಾಜ್ಯವು ಅವನತಿಯತ್ತ ಸಾಗುತ್ತದೆ. ಆಗ ಮಾತ್ರ ನಾನು ಸದಾ ಚಕ್ರವರ್ತಿಯಾಗಿ ಮೆರೆಯಬಲ್ಲೆ. ಆದ್ದರಿಂದ ಆ ಜಿಂಕೆಯತ್ತ ಬಾಣವನ್ನು ಪ್ರಯೋಗಿಸು...!'

'ಎಲ್ಲೈ ಚಕ್ರವರ್ತಿಯೇ. ನಾನು ಮಿತ್ರದ್ರೋಹಿಯಾಗಲಾರೆ ದಯವಿಟ್ಟು ಕ್ಷಮಿಸು...!'

'ಹಾಗಾದರೆ ನನ್ನ ಅಂತಿಮ ನಿರ್ಧಾರವನ್ನು ಕೇಳು. ಈ ನನ್ನ ಬಾಣದಿಂದ ನಿನ್ನ ರಾಣಿ ಮತ್ತು ಮಗನ ಹೃದಯವನ್ನು ಛಿದ್ರಗೊಳಿಸುವೆ...!'

'ನೀನು ನನ್ನ ಪರಮಪ್ರಿಯರಾದ ಹೆಂಡತಿ ಮಕ್ಕಳನ್ನು ಕೊಂದರೂ ಪರವಾಗಿಲ್ಲ ನಾನು ಮಾತ್ರ ಮಿತ್ರದ್ರೋಹಿಯಾಗಲಾರೆ!'

'ಭಲೇ ಮಿತ್ರ, ಭಲೆ..... ನಾನು ನಿನ್ನ ಸ್ನೇಹಶೀಲತೆಗೆ ಮೆಚ್ಚಿದೆ ನಿನ್ನಂತಹ ಮಿತ್ರನನ್ನು ಪಡೆದ ನಾನೇ ಧನ್ಯ. ನಾನು ನಿನ್ನನ್ನು ಹಿಡಿಯಲು ಬಂದೆ. ಪದಚ್ಯುತಿಗೈಯಲು ಬಂದೆ ನಿನಗೆ ಪ್ರಾಣಬೆದರಿಕೆಯ ಒಡ್ಡಲು ಮುಂದಾದೆ. ಆದರೂ ನೀನು ಧರ್ಮಭ್ರಷ್ಟನಾಗಲಿಲ್ಲ ನಿಷ್ಠುರನಾದ ನೀನೇ ದೊರೆಗಳ ದೊರೆ! ನಿನ್ನ ರಾಜ್ಯಭಾರ ಮುಂದುವರೆಯಲಿ ನಾನಿನ್ನು ಬರುವೆ. ನಿನಗೆ ಶುಭವಾಗಲಿ ಎಂದಾಗ, ಬ್ರಹ್ಮದತ್ತನು ಶುಕ್ರ ಚಕ್ರವರ್ತಿಗೆ ತಲೆಬಾಗಿ ವಂದಿಸುತ್ತಾ.

'ಇದು ಪಂಚಶೀಲ ಮತ್ತು ಮೈತ್ರಿಯ ಗೆಲುವು.....!' ಎಂದ.



'ನಿನ್ನ ದರ್ಶನವೇ ಪ್ರಿಯ!'

ಆ ಗೇಣಿಗದ್ದೆಯ ಕಾವಲುಗಾರ ರೈತನಾದ ...ನನ್ನು ತನ್ನ ಗದ್ದೆಯ ಒಡೆಯನಾದ ಸಾಲಂದ್ರಿಯ ...ಾಮದ ಕೋಸಿಯನೆಂಬ ಬ್ರಾಹ್ಮಣನ ಮನೆಯ ಮುಂದೆ ...ಲೆಬಾಗಿ ನಿಂತ. ಆತನನ್ನು ಉದ್ದೇಶಿಸಿದ ಕೋಸಿಯ.

'ಏನಯ್ಯ, ಈ ವರ್ಷದ ಭತ್ತದ ಬೆಳೆಯು ಸಂವೃದ್ಧ ...ಾಗಿದೆ ತಾನೆ?'

'ಒಡೆಯಾ, ಫಲವೇನೋ ಸಂವೃದ್ಧವಾಗಿದೆ. ಆದರೆ ...ಮ್ಮ ಗದ್ದೆಯ ಬಳಿ ಬೃಹದಾಕಾರದ ಬೂರುಗದ ವೃಕ್ಷ ...ಂದಿದೆ. ಅದರಲ್ಲಿ ನೂರಾರು ಗಿಳಿಗಳ ಹಿಂಡಿದೆ. ಆ ...ಳಿ ಹಿಂಡಿಗೊಬ್ಬ ನಾಯಕನಿದ್ದಾನೆ. ಆತ ದಷ್ಟಪುಷ್ಟನಾ ...ಯೂ ಬಲು ಸುಂದರನಾಗಿಯೂ ಅತಿ ಚುರುಕು ಪ್ರವೃ ...ಯನ್ನು ಹೊಂದಿರುವವನಾಗಿದ್ದಾನೆ. ಆತ ತನ್ನ ತಂಡ ...ದು ಉಣ್ಣುವ ತನಕ ಅವರುಗಳ ಕಾವಲು ಕಾಯು ...ನೆ. ಬಳಿಕ ತಾನೂ ತಿನ್ನುವಷ್ಟು ತಿಂದು ಹೋಗುವಾಗ ...ತ್ತದ ತೆನೆಗಳನ್ನು ಹೊತ್ತೂ ಹೋಗುತ್ತಾನೆ, ಆತನ ...ರಾಸೆಯ ಫಲವಾಗಿ ಬೆಳೆದು ನಿಂತ ಬೆಳೆಯು ದಿನ ...ದ ದಿನಕ್ಕೆ ಕಣ್ಮರೆಯಾಗುತ್ತಿದೆ!'

'ಹಾಗೇನು....? ಹಾಗಾದರೆ ಆ ದುಷ್ಟ ಗಿಳಿಗೆ ಬಲೆ ...ಸಿ ಅದರ ಕೈಕಾಲುಗಳನ್ನು ಕಟ್ಟಿ ನನ್ನ ಬಳಿ ಎಳೆದು ....!' ಎಂದ ಆ ಕಾವಲುಗಾರ ರೈತ ಮರುದಿನ ...ಗೆಯೇ ಮಾಡಿ ಆ ಗಿಳಿಯನ್ನು ಹಿಡಿದು ತಂದು ತನ್ನ ...ತೆಯನಿಗೆ ಒಪ್ಪಿಸಿ ಹೋದ ಕೋಸಿಯನು ಆ ಗಿಳಿ ...ನ್ನು ಉದ್ದೇಶಿಸಿ ಹೀಗೆ ಪ್ರಶ್ನಿಸಿದ.

'ಏನಯ್ಯ ಗಿಳಿಯೇ, ನೀನೇ ಏನು ನಿನ್ನ ತಂಡದ ...ಯಕ?'

'ಹೌದು ಪಂಡಿತರೆ...!'

'ನಿನ್ನ ಹೆಸರೇನು?'

'ಶುಕರಾಜನೆಂದು!'

'ಎಲ್ಲಾ ಗಿಳಿಗಳಿಗೆ ಇರುವುದು ಎಷ್ಟು ಹೊಟ್ಟೆ?'

'ಒಂದೇ ಹೊಟ್ಟೆ!'

'ಹೆಸರು ನೋಡಿದರೆ ಶುಕರಾಜು. ಆದರೆ ಮಾತಿ... ಸುಳ್ಳುರಾಜ. ಹಾಗಾದರೆ ನೀನು ತಿನ್ನುವಷ್ಟು ಭತ್ತದ ...ನ್ನು ತಿಂದು ಹೋಗುವಾಗ ಭತ್ತದ ತೆನೆಯನ್ನು ...ತ್ತು ಹೋಗುವುದು ಸುಳ್ಳೆ?'

'ಅದು ದಿಟವಾದ ಮಾತು!'

'ಹಾಗಾದರೆ ನೀನೇನು ಕಣಜವನ್ನು ಹೊಂದಿ ...ಯಾ?'

'ಖಂಡಿತಾ ಇಲ್ಲ ಪಂಡಿತರೆ!'

'ಹಾಗಾದರೆ ನಿನ್ನ ದುರಾಸೆಗೆ ಕಾರಣವೇನು?'

'ಋಣದಿಂದ ಬಿಡುಗಡೆ ಹೊಂದುವುದು ಮತ್ತು ...ವನ್ನು ಕೊಡುವುದು!'

'ನೀನು ಋಣದಿಂದ ಹೇಗೆ ಬಿಡುಗಡೆ ಹೊಂದುವೆ ...ರಿಗೆ ಋಣವನ್ನು ಕೊಡುವೆ?'

'ನಾನು ನನ್ನ ವಯೋವೃದ್ಧರಾದ ತಂದೆ ತಾಯಿ... ಭತ್ತದ ತೆನೆಯನ್ನು ಕೊಂಡೊಯ್ದು ಕೊಡುವ ...ಲಕ ಋಣದಿಂದ ಬಿಡುಗಡೆ ಹೊಂದುವೆ! ಇನ್ನೂ ...ಕ್ಕ ಮೂಡದ ಅನಾಥ ಮರಿ ಪಕ್ಷಿಗಳಿಗೆ ಭತ್ತದ ತೆನೆಯನ್ನು ಹಂಚುವ ಮೂಲಕ ಋಣವನ್ನು ಕೊಡುತ್ತೇನೆ...!!'

'ಹೌದು ನೀನು ಜ್ಞಾನಿಯೇ ಸರಿ ತಂಡದ ನಾಯಕನೇ ಸರಿ. ನಾನು ಪ್ರತಿಷ್ಠೆಗಷ್ಟೇ ಪಂಡಿತ. ನೀನು ಆಚರಣೆಯಿಂದ ಪಂಡಿತ. ನಿನ್ನಂತಹ ಸದಾಚಾರಿಯ ದರ್ಶನವೇ ನನಗೆ ಪ್ರಿಯವಾದುದ್ದು. ನಾನು ನಿನ್ನನ್ನು ದಂಡಿಸುವ ಸಲುವಾಗಿ ದ್ವೇಷದಿಂದ ಹಿಡಿದು ತರಿಸಿದೆ. ಆದರೆ ನೀನೋ ನನ್ನ ಕಣ್ಣು ತೆರೆಸಿದೆ. ಹಾಗಾದರೆ ನಾನು ಮುಂದೆ ಏನನ್ನು ತ್ಯಾಗ ಮಾಡಬೇಕು? ಏನನ್ನು ಆಚರಣೆಗೆ ತರಬೇಕು?'

'ಎಲೈ ಕೋಸಿಯನೇ, ದ್ವೇಷವನ್ನು ತ್ಯಾಗ ಮಾಡು. ದಂಡವನ್ನು ಶಸ್ತ್ರ ತ್ಯಾಗ ಮಾಡು. ಅಸಹಾಯಕರ ಪಾಲಿಗೆ ತಂದೆ ತಾಯಿ ಆಗು!'

'ಹೌದು ಸ್ವಾಮಿ, ನೀನು ನಿಜಕ್ಕೂ ರಾಜನೇ ಸರಿ. ನೀವಿನ್ನು ಹೋಗಿ ಬನ್ನಿ. ಅಳುತ್ತಿರುವ ನಿಮ್ಮ ತಂದೆ ತಾಯಿಯನ್ನು ಅನಾಥ ಮರಿ ಪಕ್ಷಿಗಳನ್ನು ಮತ್ತು ನಿಮ್ಮ ತಂಡವನ್ನು ಸಮಾಧಾನ ಪಡಿಸಿ. ನಿಮ್ಮಂತೆಯೇ ನಾನೂ ಕೂಡ ಋಣದಿಂದ ಬಿಡುಗಡೆ ಹೊಂದುವೆ ಮತ್ತು ಋಣವನ್ನು ಕೊಡುತ್ತೇನೆ.....! ಎನ್ನಲು ಆ ಶುಕರಾಜನು ಆ ಪಂಡಿತನನ್ನ ಉದ್ದೇಶಿಸಿ.

'ಹೌದು ಗೆಳೆಯಾ, ದೀಪದಿಂದ ಮಾತ್ರ ದೀಪ ಬೆಳಗಬಲ್ಲದು....!' ಎಂದಿತು. □

'ಯಜ್ಞದಲ್ಲಿ ಹುರುಳಿಲ್ಲ'

ಯಜ್ಞದ ಔಚಿತ್ಯದ ಬಗ್ಗೆ ಪಂಡಿತರಾದ ಕೂಟದಂತ ಮತ್ತು ಯಜ್ಞಯಾನ ಕೇಳಿದ ಪ್ರಶ್ನೆಗಳನ್ನೇ ಉದಯನು ಬುದ್ಧನನ್ನು ಉದ್ದೇಶಿಸಿ ಕೇಳಿದ. ಬುದ್ಧ ಹಿಂದಿನಂತೆಯೇ ಉತ್ತರಿಸಿದ. ಆಗ ಉದಯನನ್ನು ಹೀಗೆ ಪ್ರಶ್ನಿಸತೊಡಗಿದ:

'ಗೌತಮರೇ, ನಿಮ್ಮ ದೃಷ್ಟಿಯಲ್ಲಿ ಯಜ್ಞ ಎಂದರೆ ಏನು?'

'ಉದಯನನೇ, ಸಕಾಲದಲ್ಲಿ ಮಾಡಿದ ಯೋಗ್ಯ ಕರ್ತವ್ಯವೇ ಸೂಕ್ತವಾದ ಯಜ್ಞ'

'ಗೌತಮರೇ, ನಾವು ಯಾವುದರಿಂದ ಮುಕ್ತರಿರಬೇಕು?'

'ಉದಯನನೇ, ಹಿಂಸೆಯಿಂದ'

'ಗೌತಮರೇ, ನಾವು ಯಾವುದರಲ್ಲಿ ಚೆನ್ನಾಗಿ ತರಬೇತು ಹೊಂದಿರಬೇಕು?'

'ಉದಯನನೇ, ವಿವೇಕ ಮತ್ತು ವಿವೇಚನೆಯಿಂದ ಕೂಡಿದ ಧರ್ಮ ಜೀವನದ ಬಗ್ಗೆ'

'ಗೌತಮರೇ, ಜ್ಞಾನಿಗಳು ಯಾರನ್ನು ಶ್ಲಾಘಿಸುತ್ತಾರೆ?'

'ಉದಯನನೇ, ಭೂಮಿಯಲ್ಲಿಯೇ ಬದುಕಿ, ಸಕಲ ಜಂಜಾಟವನ್ನು ಸಮಚಿತ್ತದಿಂದ ಸ್ವೀಕರಿಸಿ, ಸಕಲ ಜೀವಿಗಳಲ್ಲಿಯೂ ದಯೆ ಉಳ್ಳವನನ್ನು'

'ಗೌತಮರೇ, ಯಾವುದರಿಂದ ನಮ್ಮ ಬದುಕು ಮತ್ತು ಕೀರ್ತಿ ವೃದ್ಧಿಸುತ್ತದೆ?'

'ಉದಯನನೇ, ಸಚ್ಚಾರಿತ್ರ್ಯದಿಂದ ಕೂಡಿದ ಬದುಕಿನಿಂದ, ಕರ್ತವ್ಯದಲ್ಲಿನ ಶ್ರದ್ಧೆಯಿಂದ, ಪ್ರತಿ ಹೆಜ್ಜೆಯಲ್ಲಿಯೂ ಋಜು ಮಾರ್ಗವನ್ನು ಆಯ್ದುಕೊಳ್ಳುವುದರಿಂದ'

ಗೌತಮರೇ, ದೇವರು ಯಾವುದರಿಂದ ಸುಪ್ರೀತನಾಗುವ?'

'ಉದಯನನೇ, ನಮ್ಮ ಪಾಲಿನ ಕರ್ತವ್ಯ ಮತ್ತು ಶೀಲವಂತಿಕೆಯಿಂದ'

'ಗೌತಮರೇ, ಆನಂದಲೋಕ ಪಡೆಯುವ ಬಗೆ ಹೇಗೆ?'

'ಉದಯನನೇ, ನೀನು ವಿವೇಕಿಯಾಗುವುದರಿಂದ ದುಃಖಮುಕ್ತನಾಗುವುದರಿಂದ'

'ಭಲೆ, ಗೌತಮರೇ....! ನೀವು ನಿಜಕ್ಕೂ ನನ್ನ ಕಣ್ಣು ತೆರೆಸಿದಿರಿ! ನನ್ನ ಅಹಂಕಾರ ಅಳಿಸಿದಿರಿ!! ನನ್ನ ಅಲ್ಪತನಕ್ಕೆ ಪೆಟ್ಟು ಕೊಟ್ಟಿರಿ. ನಿಮಗೆ ವಂದನೆ!!!' ಎಂದ. □

'SAMVADA' Kannada Monthly, Oct 2006 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ರಾಷ್ಟ್ರಪಿತನ ಸ್ಮರಣೆಯೇ..

ನಮ್ಮ ಧನ್ಯತೆಗೆ ಪ್ರೇರಣೆ.

ನಮ್ಮ
ತ್ಯಾಗ.
ಪರಿಶ್ರಮ,
ಪ್ರಾಮಾಣಿಕತೆ,
ಸತ್ಯ,
ಸಹಿಷ್ಣುತೆಗಳೊಂದಿಗೆ

ವಿಶ್ವಮಾನವ ಗಾಂಧೀಜಿಗೆ
ನಾವು ನಮಿಸೋಣ.

ಮೇಲಿನ ಅಮೂಲ್ಯ ಕೊಡುಗೆಗಳೇ

ವಿಶ್ವಭ್ರಾತೃತ್ವಕ್ಕೆ ನಾಂದಿಯಾಗಲಿ.

ಕರ್ನಾಟಕ ವಾರ್ತೆ
Karnataka Information